ಮಂಗಳವಾರ, ಡಿಸೆಂಬರ್ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 350 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ಫುಟ್‌ಬಾಲ್‌ನ 'ಬಂಗಾರದ ಮನುಷ್ಯ'
ಬೆಟ್ಟ ಕುರುಬರಿಗೆ ಎಸ್‌ಟಿ ಸ್ಥಾನಮಾನ: ಮಸೂದೆ ಅಂಗೀಕಾರ 11
ಕಲಾಪಕ್ಕೆ ಶಾಸಕ ಈಶ್ವರಪ್ಪ ಗೈರು 4
ಇಂದು
ಕ್ಷೇಮ ಕುಶಲ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,806	18,420	₹55,940 (ಬೆಂಗಳೂರು)	₹68,700 (ಬೆಂಗಳೂರು)	82.62

ಪೌಷ್ಟಿಕ ಆಹಾರ ಪೂರೈಕೆ: ಮೂರೇ ಸಂಘಕ್ಕೆ ₹ 2 ಸಾವಿರ ಕೋಟಿ ವಹಿವಾಟಿನ ಹೊಣೆ

ಕಪ್ಪುಪಟ್ಟಿ ಕಂಪನಿಗೆ ಕೆಂಪುಹಾಸು

• ಚಂದ್ರಹಾಸ ಹಿರೇಮಳಲಿ

> ಹೈಕೋರ್ಟ್ ಸೂಚನೆ, ಸರ್ಕಾರದ ನಿಯಮಗಳ ಅನ್ವಯ ಬಿಐಎಸ್ ಪ್ರಮಾಣಪತ್ರ ಇರುವ ಸಂಘಗಳಿಗೆ ಅವಕಾಶ ನೀಡಲಾಗಿದೆ. ನಿಷೇಧಿತ ಸಂಸ್ಥೆ ಕೈವಾಡ ಇರುವುದು ಗಮನಕ್ಕೆ ಬಂದಿಲ್ಲ.
> **ಹಾಲಪ್ಪ ಆಚಾರ್,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ

> ಸರ್ಕಾರದ ನಡೆ ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಇದು ಮತ್ತೆ ಕೇಂದ್ರೀಕೃತವಾಗಲಿದೆ. ಆಹಾರ ಗುಣಮಟ್ಟ ಪರೀಕ್ಷಾ ಕೇಂದ್ರದ ಮೂಲಕ ಪರೀಕ್ಷಿಸಿ, ಹಂಚಿಕೆ ಮಾಡಲು ಅವಕಾಶವಿತ್ತು.
> **ಎಸ್.ವರಲಕ್ಷ್ಮಿ,** ಅಧ್ಯಕ್ಷೆ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘ

ಬೆಂಗಳೂರು: ರಾಜ್ಯದ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಪದಾರ್ಥ ಪೂರೈಸಲು ಕೇವಲ ಮೂರು ಮಹಿಳಾ ಸಂಘಗಳಿಗೆ ಅನುಮತಿ ನೀಡಿರುವ ಸರ್ಕಾರ, ಹಿಂದೆ ಕಳಪೆ ಆಹಾರ ಪೂರೈಕೆ ಮಾಡಿ ಕಪ್ಪುಪಟ್ಟಿಗೆ ಸೇರಿದ್ದ ತಮಿಳುನಾಡು ಮೂಲದ ಸಂಸ್ಥೆಗೆ ಮತ್ತೆ ಕೆಂಪುಹಾಸು ಹಾಸಿದೆ.

ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳಿವೆ (ಎಂಎಸ್‌ಪಿಟಿಸಿ). ಅವುಗಳಲ್ಲಿ ಕೇವಲ ಮೂರು ಸಂಘಗಳಿಗೆ ಸರಾಸರಿ ₹ 2 ಸಾವಿರ ಕೋಟಿ ವಹಿವಾಟು ಇರುವ ಹೊಣೆಗಾರಿಕೆ ನಿಭಾಯಿಸಲು ಅನುಮತಿ ನೀಡಲಾಗಿದೆ. ಈ ಮೂರೂ ಕೇಂದ್ರಗಳು 2012ರಲ್ಲಿ ಅಂದಿನ ಸರ್ಕಾರ ನಿಷೇಧಿಸಿದ್ದ ತಮಿಳುನಾಡು ಮೂಲದ ಕಂಪನಿ ಪರೋಕ್ಷವಾಗಿ ರಚಿಸಿದ ಸಂಸ್ಥೆಗಳು ಎನ್ನುವುದಕ್ಕೆ ಸಂಘದ ಮಹಿಳೆಯರ ಖಾತೆಗೆ ಈ ಕಂಪನಿ ನಿಯಮಿತವಾಗಿ ಹಣ ಜಮೆ ಮಾಡಿದ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಮಕ್ಕಳಿಗೆ ಸ್ಥಳೀಯ ಆಹಾರ ದೊರಕಬೇಕು ಎನ್ನುವ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಮಹಿಳಾ ಸ್ವಸಹಾಯ ಗುಂಪುಗಳು, ಮಹಿಳಾ ಮಂಡಳಿಗಳು ಹಾಗೂ ಗ್ರಾಮ ಸಮುದಾಯಗಳಿಗೆ ಪೌಷ್ಟಿಕ ಆಹಾರ ತಯಾರಿಕೆ ಹಾಗೂ ಪೂರೈಕೆಯ ಹೊಣೆ ನೀಡಲು 2009ರಲ್ಲೇ ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶದ ಅನ್ವಯ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಸರಬರಾಜು ಮಾಡಲು ಮಹಿಳಾ ಸ್ವಸಹಾಯ ಗುಂಪುಗಳನ್ನು ಒಳಗೊಂಡ 137 ಎಂಎಸ್‌ಪಿಟಿಸಿಗಳನ್ನು ಸ್ಥಾಪಿಸಲಾಗಿತ್ತು. 2012ರಿಂದ ಈ ಗುಂಪುಗಳು ಆಹಾರ ಪೂರೈಕೆ ಮಾಡುತ್ತಿವೆ.

ಪ್ರಜಾವಾಣಿ ವಿಶೇಷ

ಪೂರಕ ಪೌಷ್ಟಿಕ ಆಹಾರ ನಿಯಮಗಳ ಅನ್ವಯ ಎಂಎಸ್‌ಪಿಟಿಸಿಗಳು ಗುಣಮಟ್ಟದ ಆಹಾರ ಪೂರೈಸುತ್ತಿಲ್ಲ. ಅವುಗಳ ಬಳಿ ಆಹಾರ ಪದಾರ್ಥಗಳಲ್ಲಿ ಇರುವ ಪ್ರೊಟೀನ್, ಕ್ಯಾಲೊರಿ ಅಳೆಯುವ ಮಾಪಕಗಳೂ ಇಲ್ಲ ಎಂದು ಆರೋಪಿಸಿ ಹಲವು ವರ್ಷಗಳಿಂದ ಅಂಗನವಾಡಿಗಳಿಗೆ ಆಹಾರ ಪೂರೈಸುತ್ತಿದ್ದ ಖಾಸಗಿ ಸಂಸ್ಥೆಗಳು ಕೋರ್ಟ್ ಮೊರೆ ಹೋಗಿದ್ದವು. ವಿಚಾರಣೆ ನಡೆಸಿದ್ದ ಹೈಕೋರ್ಟ್ ಈಚೆಗೆ ತೀರ್ಪು ನೀಡಿ, ಆಹಾರ ಪೂರೈಸುವ ಸಂಸ್ಥೆಗಳು ಕಡ್ಡಾಯವಾಗಿ ಬಿಐಎಸ್ ಪ್ರಮಾಣಪತ್ರ ಹೊಂದಿರಬೇಕು. ಅಲ್ಲಿಯವರೆಗೂ ಪ್ರಮಾಣಪತ್ರ ಹೊಂದಿರುವ ಗುಂಪುಗಳಿಂದ ತಾಂತ್ರಿಕ ನೆರವು ಪಡೆಯಬೇಕು ಎಂದು ಸೂಚಿಸಿತ್ತು.

ಅನುಮಾನ ಹುಟ್ಟಿಸಿದ ಸರ್ಕಾರದ ನಡೆ: ಕೋರ್ಟ್ ಸೂಚನೆ ಪ್ರಕಾರ ಕ್ರಮ ಕೈಗೊಂಡಿರುವುದಾಗಿ ಸರ್ಕಾರ ಆದೇಶದಲ್ಲಿ ವಿವರಿಸಿದ್ದರೂ, ಹಲವು ಅಂಶಗಳು ಸರ್ಕಾರದ ನಡೆಯ ಮೇಲೆ ಸಂಶಯ ಮೂಡಿಸಿವೆ. ರಾಜ್ಯದಲ್ಲಿ ಬಿಐಎಸ್ ಪರವಾನಗಿ ಪಡೆದ 10ಕ್ಕೂ ಹೆಚ್ಚು ಮಹಿಳಾ ಸ್ವಸಹಾಯ ಸಂಘಗಳು ಇದ್ದರೂ, ಶಿವಮೊಗ್ಗದ ಹರಿಹರೇಶ್ವರ ಮಹಿಳಾ ಉದ್ಯೋಗ ಮತ್ತು ಸೇವಾ ಸಂಘ, ಬೆಳಗಾವಿಯ ರೇಣುಕಾದೇವಿ ಪ್ರಗತಿಪರ ಮಹಿಳಾ ಸೇವಾ ಸಂಘ ಹಾಗೂ ಕಲಬುರಗಿಯ ಸಂಜೀವಿನಿ ಮಹಿಳಾ ವಿಕಾಸ ಸೇವಾ ಸಂಘಗಳಿಗೆ ಮಾತ್ರ ಅನುಮತಿ ನೀಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಇತರೆ ಸಂಘಗಳು ಬಿಐಎಸ್ ಪರವಾನಗಿ ಪಡೆದಿದ್ದರೂ, ದೊಡ್ಡ ಪ್ರಮಾಣದ ಆಹಾರ ಉತ್ಪಾದನಾ ಸಾಮರ್ಥ್ಯ, ಹಣಕಾಸಿನ ವಹಿವಾಟು ನಡೆಸಿದ ಅನುಭವ ಇಲ್ಲ ಎನ್ನುವ ಕಾರಣಕ್ಕೆ ತಿರಸ್ಕರಿಸಲಾಗಿದೆ.

ಬಿಎಸ್‌ಐ ಪ್ರಮಾಣಪತ್ರ ಪಡೆಯುವವರೆಗೆ ಪ್ರಮಾಣಪತ್ರ ಹೊಂದಿದ ಸಂಸ್ಥೆಗಳ ಜತೆ ತಾಂತ್ರಿಕ ನೆರವು ಪಡೆಯಲು ಒಪ್ಪಂದ ಮಾಡಿಕೊಳ್ಳುವಂತೆ ಸೂಚನೆ ಇದ್ದರೂ, ಮೂರು ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳುವಂತೆ ಹಾಗೂ ಆಹಾರ ತಯಾರಿಕೆಗೆ ಬೇಕಾದ ಪದಾರ್ಥಗಳ ಖರೀದಿಯ ಜವಾಬ್ದಾರಿಯನ್ನೂ ಈ ಮೂರು ಸಂಸ್ಥೆಗಳಿಗೆ ಸರ್ಕಾರ ನೀಡಿದೆ.

'ತಮಿಳುನಾಡು ಮೂಲದ ಸಂಸ್ಥೆ ಸ್ವಸಹಾಯ ಸಂಘಗಳ ಮೂಲಕ ಪರೋಕ್ಷವಾಗಿ ಕಾರ್ಯ ನಿರ್ವಹಿಸುತ್ತಿದೆ. ಎಲ್ಲ ಅಕ್ರಮಗಳಿಗೆ ಸರ್ಕಾರವೂ ಸಹಕರಿಸುತ್ತಿದೆ' ಎಂದು ಆರೋಪಿಸುತ್ತಾರೆ ಸಾಮಾಜಿಕ ಕಾರ್ಯಕರ್ತ ಎನ್.ಅನಂತ ನಾಯ್ಕ.

ಅಂಕಿ-ಅಂಶಗಳು

65,911 ಅಂಗನವಾಡಿ ಕೇಂದ್ರಗಳು

50 ಲಕ್ಷ ಪೌಷ್ಟಿಕ ಆಹಾರ ಫಲಾನುಭವಿಗಳು

137 ರಾಜ್ಯದಲ್ಲಿರುವ ಎಂಎಸ್‌ಪಿಟಿಸಿಗಳು

₹ 2,000 ಕೋಟಿ ಪೌಷ್ಟಿಕ ಆಹಾರ ಪೂರೈಕೆಯ ವಾರ್ಷಿಕ ವಹಿವಾಟು

ಮಹಾ ಮೇಳಾವ್‌ಗೆ ತಡೆ

ಬೆಳಗಾವಿ: 'ಮಹಾ' ಮುಖಂಡರ ಮೇಲೆ ಲಘು ಲಾಠಿಚಾರ್ಜ್

ಪ್ರಜಾವಾಣಿ ವಾರ್ತೆ

ಮಹಾ ಮೇಳಾವ್‌ಗೆ ಅನುಮತಿ ನಿರಾಕರಿಸಿದ್ದನ್ನು ಖಂಡಿಸಿ, ಬೆಳಗಾವಿ ಗಡಿಯೊಳಗೆ ನುಗ್ಗಲು ಮುಂದಾದ 'ಮಹಾ ವಿಕಾಸ್ ಅಘಾಡಿ' ನಾಯಕರನ್ನು ಸೋಮವಾರ ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ಚೆಕ್‌ಪೋಸ್ಟ್ ಬಳಿ, ದೂಧಗಂಗಾ ಸೇತುವೆ ಮೇಲೆ ಜಿಲ್ಲಾ ಪೊಲೀಸರು ತಡೆದರು

ಬೆಳಗಾವಿ: ನಗರದಲ್ಲಿ ಸೋಮವಾರ ಆಯೋಜಿಸಿದ್ದ 'ಮಹಾ ಮೇಳಾವ್'ಗೆ ಅನುಮತಿ ನಿರಾಕರಿಸಿದ ಜಿಲ್ಲಾಡಳಿತ, 30ಕ್ಕೂ ಹೆಚ್ಚು ಎಂಇಎಸ್ ನಾಯಕರನ್ನು ವಶಕ್ಕೆ ಪಡೆಯಿತು.

ಇಲ್ಲಿ ವಿಧಾನಮಂಡಲ ಅಧಿವೇಶನವನ್ನು (2006) ಆರಂಭಿಸಿದಾಗಿನಿಂದ ಇದಕ್ಕೆ ಅಡ್ಡಗಾಲು ಹಾಕಲು ಮಹಾ ಮೇಳಾವ್ ಆಯೋಜಿಸುತ್ತ ಬರಲಾಗಿದೆ. ಈಗ ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ತಾರಕಕ್ಕೇರಿದ ಹೊತ್ತಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಅನುಮತಿ ನಿರಾಕರಿಸಿತು.

ಎಡಿಜಿಪಿ ಅಲೋಕ್‌ಕುಮಾರ್ ಸ್ಥಳದಲ್ಲಿಯೇ ನಿಂತು, ಮರಾಠಿಗರು ಹಾಕಿದ್ದ ವೇದಿಕೆ ತೆರವುಗೊಳಿಸಿದರು. 'ನಿಷೇಧಾಜ್ಞೆ ಜಾರಿ ಇದ್ದು, ಸಮಾವೇಶ ನಡೆಸಲು ಅನುಮತಿ ಇಲ್ಲ' ಎಂದು ಎಂಇಎಸ್ ಮುಖಂಡರಿಗೆ ತಾಕೀತು ಮಾಡಿದರು.

ಎಂಇಎಸ್ ಮುಖಂಡರಾದ ರೇಣು ಕಿಲ್ಲೇಕರ್, ಸರಿತಾ ಪಾಟೀಲ, ಶಿವಾಜಿ ಸುಂಠಕರ, ರವಿ ಸಾಳುಂಕೆ ಸೇರಿ ಹಲವರು ಮೇಳಾವ್ ಆಯೋಜಿಸಿದ್ದ ವ್ಯಾಕ್ಸಿನ್ ಡಿಪೊ ಆವರಣಕ್ಕೆ ನುಗ್ಗಿದರು. 'ಬೆಳಗಾವಿ, ಖಾನಾಪುರ, ನಿಪ್ಪಾಣಿ, ಬೀದರ್, ಭಾಲ್ಕಿ, ಕಾರವಾರ ಸೇರಿ ಸಂಯುಕ್ತ ಮಹಾರಾಷ್ಟ್ರ ಝಾಲಾಚ್ ಪಾಹಿಜೆ' ಎಂದು ಘೋಷಣೆ ಕೂಗಿದರು. ಈ ವೇಳೆ ಪೊಲೀಸರು ಅವರನ್ನು ವಶಕ್ಕೆ ಪಡೆದರು.

ಗಡಿಯೊಳಗೆ ನುಗ್ಗಲು ಯತ್ನ, ಲಾಠಿಚಾರ್ಜ್: ಮಹಾ ಮೇಳಾವ್‌ಗೆ ಅನುಮತಿ ನಿರಾಕರಿಸಿದ್ದನ್ನು ಖಂಡಿಸಿ, ಬೆಳಗಾವಿ ಗಡಿಯೊಳಗೆ ನುಗ್ಗಲು ಮುಂದಾದ 'ಮಹಾ ವಿಕಾಸ್ ಅಘಾಡಿ' ನಾಯಕರನ್ನು ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ಚೆಕ್‌ಪೋಸ್ಟ್ ಬಳಿ ಜಿಲ್ಲಾ ಪೊಲೀಸರು ತಡೆದರು.

10ನೇ ಪುಟ ನೋಡಿ

ಹಾಸನ ಜಿಲ್ಲೆಯ ಕ್ಷೇತ್ರಗಳಿಗೆ ಘೋಷಣೆಯಾಗದ ಹೆಸರು

ಎಚ್‌ಡಿಕೆ, ಜಿಟಿಡಿ ಕುಟುಂಬಕ್ಕೆ 2, ಇಬ್ರಾಹಿಂ ಮಗನಿಗೆ ಟಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಸಿದ್ಧತೆ ತೀವ್ರಗೊಳಿಸಿರುವ ಜೆಡಿಎಸ್, ಎಲ್ಲ ಪಕ್ಷಗಳಿಗಿಂತ ಮುಂಚಿತವಾಗಿಯೇ, 224 ಕ್ಷೇತ್ರಗಳ ಪೈಕಿ 93 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಸೋಮವಾರ, ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದರು.

ಉಳಿದ ಕ್ಷೇತ್ರಗಳಿಗೂ ಅಭ್ಯರ್ಥಿಗಳ ಪಟ್ಟಿಯನ್ನು ಶೀಘ್ರ ಬಿಡುಗಡೆ ಮಾಡುವುದಾಗಿ ಅವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಬಹುತೇಕ ಹಾಲಿ ಶಾಸಕರಿಗೆ ಟಿಕೆಟ್ ನೀಡಲಾಗಿದೆ. ಆದರೆ, ಮೊದಲ ಪಟ್ಟಿಯಲ್ಲಿ ಜೆಡಿಎಸ್ ಪ್ರಾಬಲ್ಯ ಹೊಂದಿರುವ ಹಾಸನದ ಯಾವ ಕ್ಷೇತ್ರಕ್ಕೂ ಟಿಕೆಟ್ ಘೋಷಿಸಿಲ್ಲ. ಶ್ರವಣಬೆಳಗೊಳ, ಬೇಲೂರು, ಅರಸೀಕೆರೆ, ಹೊಳೆನರಸೀಪುರ, ಸಕಲೇಶಪುರ, ಅರಕಲಗೂಡು ಕ್ಷೇತ್ರಗಳ ಅಭ್ಯರ್ಥಿ ಹೆಸರುಗಳನ್ನು ಘೋಷಿಸಿಲ್ಲ.

ಹಾಸನ ಜಿಲ್ಲೆಯಿಂದ ಸ್ಪರ್ಧಿಸುವ ಆಕಾಂಕ್ಷಿಯಾಗಿರುವ ಭವಾನಿ ರೇವಣ್ಣ ಅವರಿಗೆ ಮೊದಲ ಪಟ್ಟಿಯಲ್ಲಿ ಟಿಕೆಟ್ ಘೋಷಿಸಿಲ್ಲ. ಭವಾನಿ ಅವರನ್ನು ಚುನಾವಣಾ ಕಣಕ್ಕಿಳಿಸುವ ಬಗ್ಗೆ ಪಕ್ಷವು ಇನ್ನೂ ಸ್ಪಷ್ಟ ನಿರ್ಧಾರ ಪ್ರಕಟಿಸಿಲ್ಲ.

7ನೇ ಪುಟ ನೋಡಿ

ಕೆನರಾ ಬ್ಯಾಂಕ್
Canara Bank
Government of India Undertaking
Together We Can
ಗೃಹ ಸಾಲ
ವರ್ಷಕ್ಕೆ 8.55*% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
ಸಂಸ್ಕರಣ ಮತ್ತು ಡಾಕ್ಯುಮೆಂಟೇಷನ್ ಶುಲ್ಕ 100% ಮನ್ನಾ.
* ಷರತ್ತುಗಳು ಅನ್ವಯಿಸುತ್ತವೆ
1800 425 0018

6 Layer PLASTO® GOLD
ಕುಡಿಯುವ ನೀರಿಗಾಗಿ ಸುರಕ್ಷಿತ
7767000180, 7420022293

ಸಾವರ್ಕರ್ ಚಿತ್ರ ವಿರೋಧಿಸದೇ ಕಾಂಗ್ರೆಸ್ ಪ್ರತಿತಂತ್ರ

ಭಾವಚಿತ್ರ ಅನಾವರಣ ರಾಜಕೀಯ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ವಿಧಾನಸಭೆಯ ಸಭಾಂಗಣದಲ್ಲಿ ಸೋಮವಾರ ಕಲಾಪದ ಆರಂಭಕ್ಕೂ ಮೊದಲೇ ವಿನಾಯಕ ದಾಮೋದರ ಸಾವರ್ಕರ್ ಅವರದ್ದೂ ಸೇರಿ ಏಳು ಮಹನೀಯರ ಭಾವಚಿತ್ರಗಳ ಅನಾವರಣವನ್ನು ವಿರೋಧಪಕ್ಷಗಳ ಗಮನಕ್ಕೂ ತರದೇ ಮಾಡಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ಇಡೀ ಸದನದ ಸ್ವತ್ತಾದ ಸಭಾಂಗಣದಲ್ಲಿ ಭಾವಚಿತ್ರ ಅಳವಡಿಸುವ ಮೊದಲು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಬೇಕಿತ್ತು. ಜತೆಗೆ, ಕಲಾಪದಲ್ಲಿ ವಿವರ ನೀಡುವ ಜತೆಗೆ ಎಲ್ಲರಿಗೂ ಅಧಿಕೃತ ಆಮಂತ್ರಣ ನೀಡಿ, ಸಂಭ್ರಮದ ಕಾರ್ಯಕ್ರಮವಾಗಿಸಬೇಕಿತ್ತು. ಅದರ ಬದಲು ಕದ್ದು ಮುಚ್ಚಿ ಮಾಡಿದ್ದು ಸರಿಯಲ್ಲ ಎಂದು ಕಾಂಗ್ರೆಸ್ ನಾಯಕರು ಆಪಾದಿಸಿದರು. ಕಲಾಪ ಮುಗಿದ ಬಳಿಕ ನಡೆದ ಕಲಾಪ ಸಲಹಾ ಸಮಿತಿ ಸಭೆಯನ್ನು ಕಾಂಗ್ರೆಸ್ ಸದಸ್ಯರು ಬಹಿಷ್ಕರಿಸಿದರು.

ಈ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನನಗೆ ಗೊತ್ತೇ ಇರಲಿಲ್ಲ' ಎಂದಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ, ಸಭಾಧ್ಯಕ್ಷರ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, ಸುವರ್ಣಸೌಧದ ಎದುರು ಧರಣಿ ನಡೆಸಿದರು.

ಕಾಂಗ್ರೆಸ್ ಆಕ್ಷೇಪವೇನು?

ವಿಧಾನಸಭೆಯ ಸಭಾಂಗಣದಲ್ಲಿ ಅನಾವರಣಗೊಳ್ಳುವ ಭಾವಚಿತ್ರಗಳು ಸದನದ ಆಸ್ತಿಯಾಗಿರುತ್ತದೆ. ಆಡಳಿತ ಮತ್ತು ವಿರೋಧಪಕ್ಷಗಳು ಸೇರಿ ಈ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಬೇಕು. ಇದಕ್ಕಾಗಿ ಸದನ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಬೇಕು. ಯಾವ– ಯಾವ ಭಾವಚಿತ್ರಗಳನ್ನು ಅಳವಡಿಸಲಾಗುತ್ತದೆ ಎಂಬುದನ್ನು ಮೊದಲೇ ತೀರ್ಮಾನಿಸಬೇಕು. ಕಾರ್ಯಕ್ರಮಕ್ಕೆ ದಿನಾಂಕವನ್ನು ಹಿರಿಯ ಸದಸ್ಯರು ಒಮ್ಮತದಿಂದ ನಿರ್ಧರಿಸಬೇಕು. ಆಹ್ವಾನ ಪತ್ರಿಕೆಯನ್ನು ಅಧಿಕೃತವಾಗಿ ವಿಧಾನಸಭೆ ಸಚಿವಾಲಯದಿಂದಲೇ ಹೊರಡಿಸಬೇಕು. ಸಭಾಧ್ಯಕ್ಷರು ಈ ಯಾವುದೇ ಪ್ರಕ್ರಿಯೆನ್ನು ಕೈಗೊಂಡಿಲ್ಲ. ಆದ್ದರಿಂದ ಕಲಾಪ ಸಲಹಾ ಸಮಿತಿ ಸಭೆಯನ್ನು ಬಹಿಷ್ಕರಿಸುತ್ತೇವೆ ಎಂದು ವಿಧಾನಸಭೆಯ ಉಪನಾಯಕ ಯು.ಟಿ. ಖಾದರ್ ಹೇಳಿದರು.

4ನೇ ಪುಟ ನೋಡಿ

ಬಸ್ ಹರಿದು 3 ವಿದ್ಯಾರ್ಥಿಗಳ ಸಾವು

ಬಳ್ಳಾರಿ: ಇಲ್ಲಿಗೆ ಸಮೀಪದ ಹಲಕುಂದಿ ಗ್ರಾಮದ ಪೆಟ್ರೋಲ್ ಬಂಕ್ ಬಳಿ ಭಾನುವಾರ ತಡರಾತ್ರಿ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಹರಿದು ಮೂವರು ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. 4

ನಾಳೆಯಿಂದ ಪದವಿ ಕಾಲೇಜು ಬೋಧಕರ ವರ್ಗ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆ ಡಿ.21ರಿಂದ ಸರ್ಕಾರಿ ಪದವಿ ಕಾಲೇಜುಗಳ ಬೋಧಕರ ವರ್ಗಾವಣೆ ಕೌನ್ಸೆಲಿಂಗ್ ಆರಂಭಿಸುತ್ತಿದೆ.

ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ವರ್ಗಾವಣೆಯಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ಅಡ್ಡಿಯಾಗುತ್ತದೆ ಎಂಬ ಬೋಧಕರು, ಪೋಷಕರ ವಿರೋಧ ಲೆಕ್ಕಿಸದೇ ಪ್ರಕ್ರಿಯೆಗಳಿಗೆ ಚಾಲನೆ ನೀಡಲಾಗಿದೆ.

ರಾಜ್ಯದಲ್ಲಿ 430 ಸರ್ಕಾರಿ ಪದವಿ ಕಾಲೇಜುಗಳಿದ್ದು, 9 ಸಾವಿರಕ್ಕೂ ಹೆಚ್ಚು ಕಾಯಂ ಬೋಧಕ ಸಿಬ್ಬಂದಿ ಇದ್ದಾರೆ. ದಂಪತಿ ಪ್ರಕರಣಗಳಲ್ಲಿ ಶೇ 3, ಏಕ ಪೋಷಕರು–ವಿಧವೆಯರು, ಅಂಗವಿಕಲರು, ತೀವ್ರತರ ಕಾಯಿಲೆಗಳಿಂದ ಬಳಲುತ್ತಿರುವ ವರ್ಗಗಳಿಗೆ ತಲಾ ಶೇ 1ರಷ್ಟು, ಸಾಮಾನ್ಯ ವರ್ಗಕ್ಕೆ ಶೇ 6ರಷ್ಟು ಸೇರಿ ಒಟ್ಟು ಸಂಖ್ಯೆಯ ಶೇ 15ರಷ್ಟು ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಡಿ.21ರಿಂದ 24ರವರೆಗೆ ವರ್ಗಾವಣೆ ಕೌನ್ಸೆಲಿಂಗ್ ನಡೆಯಲಿದೆ. ಮೊದಲ 21 ಹಾಗೂ 22 ವಿಶೇಷ ವರ್ಗಗಳಿಗೆ, 23 ಮತ್ತು 24ರಂದು ಸಾಮಾನ್ಯ ವರ್ಗದವರೆಗೆ ಕೌನ್ಸೆಲಿಂಗ್ ಇರುತ್ತದೆ.

ರಾಜ್ಯದ 102 ಪಾಲಿಟೆಕ್ನಿಕ್ ಕಾಲೇಜುಗಳ ಬೋಧಕ ಸಿಬ್ಬಂದಿ ವರ್ಗಾವಣೆ ಪ್ರಕ್ರಿಯೆ ಈಗಾಗಲೇ ಆರಂಭವಾಗಿವೆ.

ಡಿಕೆಶಿ ಒಡೆತನದ ಶಿಕ್ಷಣ ಸಂಸ್ಥೆಯಲ್ಲಿ ಸಿಬಿಐ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿರುವ ನ್ಯಾಷನಲ್ ಎಜುಕೇಷನ್ ಫೌಂಡೇಷನ್ ಶಿಕ್ಷಣ ಸಂಸ್ಥೆಗಳಲ್ಲಿ ಸಿಬಿಐ ಅಧಿಕಾರಿಗಳು ಸೋಮವಾರ ಶೋಧ ನಡೆಸಿದರು.

ಈ ಫೌಂಡೇಷನ್ ಅಡಿಯಲ್ಲಿ ನಡೆಯುತ್ತಿರುವ ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ, ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆಗಳ ಆಡಳಿತ ಮಂಡಳಿ ಕಚೇರಿಗಳಿಗೆ ಭೇಟಿ ಕೊಟ್ಟ ಅಧಿಕಾರಿಗಳ ತಂಡ ದಾಖಲೆಗಳನ್ನು ಪರಿಶೀಲಿಸಿತು. ಸಾರ್ವಜನಿಕ ಹಣ ದುರ್ಬಳಕೆ ಆರೋಪದಲ್ಲಿ ಸಿಬಿಐ, ಈ ದಾಳಿ ನಡೆಸಿದೆ. ಸಂಸ್ಥೆಯ ಅಧಿಕಾರಿ ಮತ್ತು ಸಿಬ್ಬಂದಿಯಿಂದಲೂ ದಾಖಲೆಗಳ ಕುರಿತು ಮಾಹಿತಿ ಪಡೆಯಿತು.

ರಾಜರಾಜೇಶ್ವರಿ ನಗರದಲ್ಲಿರುವ ಈ ಶಿಕ್ಷಣ ಸಂಸ್ಥೆ, 2000ನೇ ಇಸವಿಯಲ್ಲಿ ಆರಂಭವಾಗಿದೆ.

'ತಪ್ಪು ಮಾಡಿಲ್ಲ, ಕಿರುಕುಳಕ್ಕೆ ಹೆದರಲ್ಲ'

ಬೆಳಗಾವಿ: 'ಕಾಂಗ್ರೆಸ್ ಪಕ್ಷದವರನ್ನು ಹಣಿಯಲು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ವಿರೋಧಿಗಳನ್ನು ಮಟ್ಟಹಾಕಲು ಐಟಿ, ಇ.ಡಿ, ಸಿಬಿಐ ಮೂಲಕ ಕಿರುಕುಳ ನೀಡಲಾಗುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ದೂರಿದರು. ಸಿಬಿಐ ದಾಳಿ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಕುಟುಂಬಕ್ಕೆ ತನಿಖಾ ಸಂಸ್ಥೆಗಳ ಮೂಲಕ ಕಿರುಕುಳ ನೀಡಲಾಗುತ್ತಿದೆ. ನ್ಯಾಯಾಲಯ, ದೇವರ ಮೇಲೆ ಭಾರ ಹಾಕಿ ಮುನ್ನಡೆಯುತ್ತೇವೆ. ನಾನು ಯಾವುದೇ ತಪ್ಪು ಮಾಡಿಲ್ಲ. ಹೀಗಾಗಿ ಧೈರ್ಯವಾಗಿದ್ದೇನೆ' ಎಂದರು.

'ಈ ಹಿಂದೆ ಮೊಬೈಲ್ ಉಡುಗೊರೆಯಾಗಿ ನೀಡಿದ್ದಕ್ಕೆ ನೋಟಿಸ್ ನೀಡಿದ್ದರು. ನನ್ನ ಸಂಬಂಧಿಕರ ಜೊತೆಗಿನ ವ್ಯವಹಾರದ ಪಾಲುದಾರರಿಗೂ ನೋಟಿಸ್ ನೀಡಿ ಸಿಬಿಐ ಅಧಿಕಾರಿಗಳು ಮಾಹಿತಿ ಪಡೆದಿದ್ದಾರೆ. ವಕೀಲರಿಗೆ ₹5 ಲಕ್ಷ ಶುಲ್ಕ ನೀಡಿರುವುದಕ್ಕೂ ನೋಟಿಸ್ ನೀಡಿದ್ದರು. ನಮ್ಮ ಜಮೀನು ವ್ಯವಹಾರದ ಬಗ್ಗೆಯೂ ತನಿಖೆ ಮಾಡಿದ್ದಾರೆ. ಈಗ ಶಿಕ್ಷಣ ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದಾರೆ' ಎಂದರು.

7ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ನರಗುಂದ: ಬಾಲಕನ ತಾಯಿಯ ಸ್ಥಿತಿ ಗಂಭೀರ

ಶಿಕ್ಷಕನಿಂದ ಹಲ್ಲೆ: ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ನರಗುಂದ (ಗದಗ ಜಿಲ್ಲೆ): ತಾಲ್ಲೂಕಿನ ಹದ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕ ಮುತ್ತಪ್ಪ ಯಲ್ಲಪ್ಪ ಹಡಗಲಿ ಸೋಮವಾರ ನಡೆಸಿದ ಹಲ್ಲೆಯಿಂದ ನಾಲ್ಕನೇ ತರಗತಿ ವಿದ್ಯಾರ್ಥಿ ಭರತ್ (10) ಸಾವನ್ನಪ್ಪಿದ್ದಾನೆ.

ಬಾಲಕನ ತಾಯಿ ಗೀತಾ ಯಲ್ಲಪ್ಪ ಬಾರಕೇರ ಕೂಡ ಅದೇ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿದ್ದು, ಆರೋಪಿ ಅವರ ಮೇಲೂ ಕಬ್ಬಿಣದ ಸಲಿಕೆಯಿಂದ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಲಾಗಿದೆ. ಮುತ್ತಪ್ಪ ಹಡಗಲಿ (ಕುರಿ) ಪರಾರಿಯಾಗಿದ್ದು, ಪೊಲೀಸರು ಆರೋಪಿ ಪತ್ತೆಗೆ ಬಲೆ ಬೀಸಿದ್ದಾರೆ.

ಭರತ್

ಮುತ್ತಪ್ಪ ಹಡಗಲಿ

ಮುತ್ತಪ್ಪ ಹಡಗಲಿ ಸೋಮವಾರ ಬೆಳಿಗ್ಗೆ 11ರ ಸುಮಾರಿಗೆ ಗೀತಾ ಅವರ ಮಗ ಭರತ್ ಮೇಲೆ ಕಬ್ಬಿಣದ ಸಲಿಕೆಯಿಂದ ಮನಬಂದಂತೆ ಹಲ್ಲೆ ನಡೆಸಿದ್ದಾನೆ. ಬಳಿಕ ಶಾಲೆಯ ಮೊದಲನೇ ಮಹಡಿಯಿಂದ ಆತನನ್ನು ಎತ್ತಿ ಕೆಳಕ್ಕೆ ಎಸೆದಿದ್ದಾನೆ.

ಈ ವೇಳೆ ಮಗನನ್ನು ಬಿಡಿಸಲು ಬಂದ ತಾಯಿ ಗೀತಾ ಮೇಲೂ ಹಲ್ಲೆ ನಡೆಸಿದ್ದಾನೆ. ತಡೆಯಲು ಹೋದ ಮತ್ತೊಬ್ಬ ಶಿಕ್ಷಕ ಸಂಗನಗೌಡ ಪಾಟೀಲ ಅವರಿಗೂ ಹೊಡೆದಿದ್ದಾನೆ. ಅವರು ನರಗುಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಳಿಕ ಮುಖ್ಯ ಶಿಕ್ಷಕ ಬಿ.ಎಸ್. ಯಾವಗಲ್ ಅವರು ಅಂಬುಲೆನ್ಸ್‌ನಲ್ಲಿ ತಾಯಿ, ಮಗನನ್ನು ನರಗುಂದ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದು, ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ಸ್ಥಿತಿ ಚಿಂತಾಜನಕವಾಗಿದ್ದರಿಂದ ಇಬ್ಬರನ್ನೂ ಹುಬ್ಬಳ್ಳಿ ಕಿಮ್ಸ್‌ಗೆ ಕರೆದೊಯ್ಯುವಂತೆ ವೈದ್ಯರು ಸೂಚಿಸಿದ್ದರು. ಮಾರ್ಗಮಧ್ಯೆ ಬಾಲಕ ಸಾವನ್ನಪ್ಪಿದ್ದಾನೆ.

'ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಜೋರು ಸಪ್ಪಳವಾದಾಗ ಹೊರ ಬಂದು ನೋಡಿದೆ. ಆಗ ಆರೋಪಿ ನನ್ನ ಮೇಲೂ ಹಲ್ಲೆಗೆ ಮುಂದಾದ. ನಾನು ಹೇಗೋ ಪಾರಾದೆ. ಬಳಿಕ ಆತ ಓಡಿ ಹೋದನು' ಎಂದು ಶಾಲೆಯ ಮುಖ್ಯ ಶಿಕ್ಷಕ ಬಿ.ಎಸ್. ಯಾವಗಲ್ ತಿಳಿಸಿದ್ದಾರೆ.

ಘಟನೆಯಿಂದ ವಿದ್ಯಾರ್ಥಿಗಳು ಭಯಭೀತರಾಗಿದ್ದರು. ಶಾಲೆ ತುಂಬೆಲ್ಲಾ ರಕ್ತದ ಕಲೆಗಳಾಗಿದ್ದವು. ಶಿಕ್ಷಕನು ಹಲ್ಲೆ ಮಾಡಿದ್ದನ್ನು ಕಂಡು ಶಾಲೆಯಲ್ಲಿನ ವಿದ್ಯಾರ್ಥಿಗಳು ದಿಕ್ಕಾಪಾಲಾಗಿ ಓಡಿದ್ದಾರೆ. ಬಳಿಕ ಶಾಲೆಯತ್ತ ಬಂದ ಪೋಷಕರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

TATA POWER SOLAROOF | ಭಾರತದ ನಂ.1* ಸೋಲಾರ್ ರೂಫ್‌ಟಾಪ್ ಕಂಪೆನಿ
TATA

ಸೈಂಟ್ ಕ್ಸೇವಿಯರ್ಸ್ ಹೈ ಸ್ಕೂಲ್ ನೆರುಲ್, ನವಿ ಮುಂಬಯಿ, ರೂಫ್‌ಟಾಪ್ ಸೋಲಾರ್ ಪವರ್ ಪ್ಲಾಂಟ್‌ನ್ನು ಅಳವಡಿಸುವ ನಿರ್ಣಯ ಕೈಗೊಳ್ಳುವ ಮೂಲಕ ನಾಳಿನ ನಾಯಕರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿದೆ.

ತನ್ನ ಕೌಶಲಪೂರ್ಣ ಸಮಾಧಾನಗಳಿಂದ ಟಾಟಾ ಪವರ್ 110 kWp ಪವರ್ ಪ್ಲಾಂಟ್‌ನ್ನು ನಿರ್ಮಿಸಿದೆ.

ರೂಫ್ ಟಾಪ್ ಪವರ್ ಪ್ಲಾಂಟ್ ಪ್ರತಿ ವರ್ಷ 1.3 ಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತದೆ ಮತ್ತು ಅದರ ಬಾಳಿಕೆಯ ಕಾಲಾವಧಿಯಲ್ಲಿ 3,256 ಟನ್ CO_2 ಎಮಿಷನ್ಸ್ ಅನ್ನು ತಡೆಗಟ್ಟುತ್ತದೆ. ಈಗ ಇದು ಮಕ್ಕಳು ಹಾಗೂ ಪರಿಸರಕ್ಕೆ ಸಮಗ್ರತಾ ದೃಷ್ಟಿಯ ವಿಕಾಸವಾಗಿದೆ.

ಟಾಟಾ ಪವರ್‌ನಲ್ಲಿ, ನಾವು ಮನೆ, ಎಮ್‌ಎಸ್‌ಎಮ್‌ಇಗಳು ಮತ್ತು ದೊಡ್ಡ ಉದ್ಯಮಗಳಿಗೆ 5,000 MW ಗಿಂತಲೂ ಅಧಿಕ ಸೌರ ಶಕ್ತಿಯನ್ನು ಒದಗಿಸುತ್ತಿದ್ದೇವೆ. 107 ಕ್ಕೂ ಅಧಿಕ ವರ್ಷಗಳ ನಮ್ಮ ಪವರ್ ವ್ಯಾಪಾರವು ಭವಿಷ್ಯವು ಸೂರ್ಯ ಪ್ರಕಾಶದಷ್ಟೇ ಉಜ್ವಲವಾಗಿದೆ ಎಂದು ನಮಗೆ ಮನವರಿಕೆ ಮಾಡಿಕೊಡುತ್ತಿದೆ.

ಸೈಂಟ್ ಕ್ಸೇವಿಯರ್ಸ್ ಹೈ ಸ್ಕೂಲ್‌ನಲ್ಲಿ
ರೂಫ್ ಟಾಪ್ ಕೂಡಾ ಪಾಠ ಕಲಿಸುತ್ತಿದೆ.

ನಿಮ್ಮ ಮನೆ ಮತ್ತು ವ್ಯಾಪಾರದಲ್ಲಿ ಸೋಲಾರೂಫ್ ಅಳವಡಿಸಿರಿ.
30+ ವರ್ಷಗಳ ಅನುಭವ | 350+ ಜಿಲ್ಲೆಗಳಲ್ಲಿ ವಿಶೇಷ ಮಾರಾಟ ಮತ್ತು ಸೇವೆ | ಸುಲಭ ಫೈನಾನ್ಸಿಂಗ್ ವಿಕಲ್ಪಗಳು | ಮೊಡ್ಯೂಲ್ಸ್‌ನ ಮೇಲೆ 25 ವರ್ಷಗಳ ವಾರಂಟಿ
ಟೋಲ್-ಫ್ರೀ 1800 2577777 | solaroof.tatapower.com

Tata Power Authorized Channel Partner in or near your area: Bengaluru: Green Power Solutions: +91 98800 52205 | Krishi Power Solar Systems: +91 79754 56767 | Mypowerkart Online Solutions: +91 96209 66199 | Power Rays: +91 89708 20110 | Sidvin Enterprises: +91 99017 99287 | SNS Suntrix: +91 99017 40539 | Sted Volt Engineers: +91 93790 08100 | Sunesteem India: +91 78926 20714 | Surya Agencies: +91 74114 48526 | Yuktha Marketing: +91 94485 12521 | Tumkur: Pvsun Innovations: +91 88924 31790.
ಮೂಲ: ಬ್ರಿಡ್ಜ್ ಟು ಇಂಡಿಯಾ, ಜುಲೈ '21 - ಜೂನ್ '22

ಮಲ್ಲೇಪುರಂಗೆ ‘ಶ್ರೀ ಸಿದ್ಧಗಂಗಾ ಸಿರಿ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ನೀಡುವ ‘ಶ್ರೀ ಸಿದ್ಧಗಂಗಾ ಸಿರಿ ಪ್ರಶಸ್ತಿ’ ಗೆ ಸಾಹಿತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 15 ಸಾವಿರ ನಗದು, ಫಲಕವನ್ನು ಒಳಗೊಂಡಿದೆ. ಡಿ. 24ರಂದು ಬೆಂಗಳೂರಿನ ಉತ್ತರ ತಾಲ್ಲೂಕಿನ ಕನ್ನಲ್ಲಿ ಗ್ರಾಮದ ವೀರಭದ್ರ ಸ್ವಾಮಿ ಆವರಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಒಳ ಮೀಸಲಾತಿ: ಆದಿಜಾಂಬವ ಕೋಡಿಹಳ್ಳಿ ಬೃಹನ್ಮಠದ ಸ್ವಾಮೀಜಿ ಅಳಲು

‘ಮೂರು ದಶಕದಿಂದ ನ್ಯಾಯ ಸಿಕ್ಕಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಮೂರು ದಶಕಗಳಿಂದ ಹೋರಾಟ ನಡೆಸಿದರೂ ಮಾದಿಗ ಸಮುದಾಯಕ್ಕೆ ನ್ಯಾಯ ಸಿಕ್ಕಿಲ್ಲ’ ಎಂದು ಆದಿಜಾಂಬವ ಕೋಡಿಹಳ್ಳಿ ಬೃಹನ್ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ 8ನೇ ದಿನದ ಅನಿರ್ದಿಷ್ಟಾವಧಿ ಧರಣಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಪರಿಶಿಷ್ಟ ಜಾತಿಯಲ್ಲಿನ ಮಾದಿಗ ಸಮುದಾಯಕ್ಕೆ ಎಲ್ಲ ಕ್ಷೇತ್ರಗಳಲ್ಲೂ ಅನ್ಯಾಯವಾಗಿದೆ. ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಅನಿವಾರ್ಯವಾಗಿದೆ’ ಎಂದು ಪ್ರತಿಪಾದಿಸಿದರು.

‘ಒಳ ಮೀಸಲಾತಿ ಬೇಡಿಕೆ ಆಧರಿಸಿ ಕಾಂಗ್ರೆಸ್ ಸರ್ಕಾರ ಸದಾಶಿವ ಆಯೋಗ ರಚನೆ ಮಾಡಿತ್ತು. ಬಿಜೆಪಿ ಸರ್ಕಾರ ವರದಿ ಸ್ವೀಕರಿಸಿ ಸುಮ್ಮನಾಯಿತು. ಇನ್ನು ಜೆಡಿಎಸ್ ಪಕ್ಷ ನಮ್ಮ ಹಕ್ಕೊತ್ತಾಯದ ಬಗ್ಗೆ ಗಮನವನ್ನೇ ಹರಿಸಿಲ್ಲ’ ಎಂದು ಸ್ವಾಮೀಜಿ ಹೇಳಿದರು.

‘ಬೇರೆಯವರ ತಟ್ಟೆಗೆ ನಾವು ಕೈ ಹಾಕುವುದಿಲ್ಲ. ನಮಗೆ ಸಿಗಬೇಕಾದ ಅನ್ನವನ್ನು ಉಂಡ ಜನರೇ ಈಗಲಾದರೂ ಒಳ ಮೀಸಲಾತಿಗೆ ಅವಕಾಶ ಕೊಡಬೇಡಿ, ನಮ್ಮ ಹೋರಾಟ ಅನ್ಯ ಪರಿಶಿಷ್ಟರ ವಿರುದ್ಧ ಅಲ್ಲ, ಅನ್ಯಾಯದ ವಿರುದ್ಧ. ಸದಾಶಿವ ಆಯೋಗದ ವರದಿಯನ್ನು ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಸರ್ಕಾರ ಮಂಡಿಸಬೇಕು. ಚರ್ಚೆ ನಡೆಸಿ ಕೇಂದ್ರಕ್ಕೆ ಕಳುಹಿಸಬೇಕು’ ಎಂದು ಸ್ವಾಮೀಜಿ ಒತ್ತಾಯಿಸಿದರು.

ಮುಖ್ಯಾಂಶಗಳು

- ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಅನಿವಾರ್ಯ
- ಹೋರಾಟ ಪರಿಶಿಷ್ಟರ ವಿರುದ್ಧ ಅಲ್ಲ, ಅನ್ಯಾಯದ ವಿರುದ್ಧ
- ಸದಾಶಿವ ಆಯೋಗದ ವರದಿ ಅಧಿವೇಶನದಲ್ಲಿ ಮಂಡಿಸಲಿ

ಧರಣಿಯಲ್ಲಿ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು. ಹೋರಾಟಗಾರರಾದ ಎಸ್. ಮಾರೆಪ್ಪ, ಅಂಬಣ್ಣ ಆರೋಲಿಕರ್, ಕರಿಯಪ್ಪ ಗುಡಿಮನಿ, ಹೆಣ್ಣೂರು ಶ್ರೀನಿವಾಸ್, ನಾಗಮಣಿ, ಹನುಮೇಶ್ ಗುಂಡೂರ್, ಸುರೇಶ್, ಕೆ.ಎನ್. ನಾಗೇಶ್ ಇದ್ದರು.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್
ಪ್ರಾದೇಶಿಕ ಕಛೇರಿ, ಮೈಸೂರು
ನಂ. 2254, ಕೌಸಲ್ಯ ವಾಣಿಜ್ಯ ಸಂಕೀರ್ಣ, ಒಂದನೇ ಮಹಡಿ, ವಿನೋಬಾ ರೋಡ್, ದೇವರಾಜ ಮೊಹಲ್ಲಾ, ಮೈಸೂರು – 570005

ತಿದ್ದುಪಡಿ

ದಿನಾಂಕ 17.12.2022ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಪ್ರಾದೇಶಿಕ ಕಛೇರಿಗೆ ಸಂಬಂಧಪಟ್ಟ ಶಾಖೆಗಳ ಚಿನ್ನಾಭರಣ/ಒಡವೆಗಳ ಮಾರಾಟ ಅಥವಾ ಸಾರ್ವಜನಿಕ ಹರಾಜು ಪ್ರಕಟಣೆ ನೋಟೀಸಿನಲ್ಲಿ ತಿಳಿಸಲಾದ ಹರಾಜು ದಿನಾಂಕವು 21.12.2022 ಎಂದು ತಪ್ಪಾಗಿ ಪ್ರಕಟಗೊಂಡಿದ್ದು ಅದನ್ನು ದಿನಾಂಕ 27.12.2022 ಎಂದು ಓದಿಕೊಳ್ಳಬೇಕಾಗಿ ಈ ಮೂಲಕ ಸೂಚಿಸಲಾಗಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ದಿನಾಂಕ: 19.12.2022
ಸ್ಥಳ: ಮೈಸೂರು — ಸಹಿ/-, ಪ್ರಾದೇಶಿಕ ವ್ಯವಸ್ಥಾಪಕರು

ಮಯೂರ ಓದಿರಿ

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಕೆ

ರಸ್ತೆ ಗುಂಡಿ: ಎಂಜಿನಿಯರ್ ವೇತನ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ನಾಗರಿಕರು ಅಥವಾ ಯಾವುದೇ ಸಂಸ್ಥೆಯವರು ರಸ್ತೆ ಅಗೆದರೆ ಅದನ್ನು ಸರಿಪಡಿಸಬೇಕಾದ ಜವಾಬ್ದಾರಿ ವಾರ್ಡ್ ವ್ಯಾಪ್ತಿಯ ಎಂಜಿನಿಯರ್ ಅವರದ್ದು. ಆ ಕೆಲಸವನ್ನು ಮಾಡದಿದ್ದರೆ ಅವರ ವೇತನದಿಂದ ಕಡಿತ ಮಾಡಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಸಿದ್ದಾರೆ.

‘ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ ಸೇರಿ ಯಾವುದೇ ಏಜೆನ್ಸಿ ಮಾಡಿರುವ ಕೆಲಸದಿಂದ ರಸ್ತೆ ಹದಗೆಟ್ಟಿದ್ದರೆ ಅದನ್ನು ಅವರಿಂದ ಸರಿಪಡಿಸಬೇಕಾದ ಜವಾಬ್ದಾರಿ ವಾರ್ಡ್ ಎಂಜಿನಿಯರ್ ಅವರದ್ದು. ಕೆಲಸ ನಾವು ಮಾಡಿಲ್ಲ ಎಂದು ಸುಮ್ಮನಿರುವಂತಿಲ್ಲ. ವಾರ್ಡ್ ರಸ್ತೆ ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕಾದ ಜವಾಬ್ದಾರಿ ವಾರ್ಡ್ ಎಂಜಿನಿಯರ್ ಅವರದ್ದೇ’ ಎಂದು ತಿಳಿಸಿದರು.

ರಾಜಾಜಿನಗರ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ ಮನೆಮನೆ ಭೇಟಿ ಕಾರ್ಯದ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ವಾರ್ಡ್ ವ್ಯಾಪ್ತಿಯಲ್ಲಿ ಗುಂಡಿಗಳಿಲ್ಲದಂತೆ ನೋಡಿಕೊಳ್ಳುವುದು ವಾರ್ಡ್ ಎಂಜಿನಿಯರ್ ಅವರ ಜವಾಬ್ದಾರಿ. ಅದನ್ನು ನಿರ್ವಹಿಸದಿದ್ದರೆ ವೇತನ ಕಡಿತ ಹಾಗೂ ಇತರೆ ಶಿಸ್ತುಕ್ರಮ ಜರುಗಿಸಲಾಗುತ್ತದೆ ಎಂದರು.

ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲು ರಸ್ತೆ ಮೂಲಸೌಕರ್ಯದ ಎಂಜಿನಿಯರ್‌ಗಳಿಗೆ ಸೂಚಿಸಿದರು.

ರಾಜಾಜಿನಗರ ವಾರಿಯರ್ ಬೇಕರಿ ಬಳಿ ‘ಬ್ರಿಡ್ಜ್ ಸ್ಟೋನ್’ ಟೈರ್ ಮಾರಾಟ ಮಳಿಗೆಯಿಂದ ಪಾದಚಾರಿ ಮಾರ್ಗ ಒತ್ತುವರಿಯಾಗಿರುವುದನ್ನು ಗಮನಿಸಿ ಅದನ್ನು ತೆರವುಗೊಳಿಸಲು ಮಾಲೀಕರಿಗೆ ಸೂಚನೆ ನೀಡಿದರು.

53ನೇ ಬಿ ಅಡ್ಡರಸ್ತೆ, 3ನೇ ಬ್ಲಾಕ್ ರಸ್ತೆ, ಶಿವನಗರ ರಸ್ತೆ, ಮಾಗಡಿ ಮುಖ್ಯರಸ್ತೆಯಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಪಾದಚಾರಿ ಮಾರ್ಗದಲ್ಲಿ ಹಾಕಿದ್ದು, ಅದನ್ನು ಕೂಡಲೆ ತೆರವುಗೊಳಿಸಿ ಕಟ್ಟಡ ಮಾಲೀಕರಿಗೆ ದಂಡ ವಿಧಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೇರೋಹಳ್ಳಿ ವಾರ್ಡ್ ರಸ್ತೆಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದ್ದು, ಕೆಲ ರಸ್ತೆಗಳಿಗೆ ಈಗಾಗಲೇ ಜೆಲ್ಲಿಯನ್ನು ಹಾಕಲಾಗಿದೆ. ಈ ರಸ್ತೆಗಳನ್ನು ಉತ್ತಮ ಗುಣಮಟ್ಟದಲ್ಲಿ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಶ್ಚಿಮ ವಲಯ ಜಂಟಿ ಆಯುಕ್ತ ಯೋಗೇಶ್, ರಾಜರಾಜೇಶ್ವರಿ ನಗರ ವಲಯ ಜಂಟಿ ಆಯುಕ್ತ ನಾಗರಾಜ್, ಚುನಾವಣಾ ವಿಭಾಗದ ಸಹಾಯಕ ಆಯುಕ್ತರಾದ ಉಮೇಶ್ ಹಾಗೂ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–27.
ಸಂ: ಬೆಂಮಸಾ/ಕೇಕ/ಕಾಇ/ಕಾನಿಅ/1030/2022–23 ದಿನಾಂಕ: 17.12.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 19/2022–23

ಕರ್ನಾಟಕ ಸರ್ಕಾರದ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ನೊಂದಾಯಿತರಾಗಿರುವ ದರ್ಜೆ–1 ವಿದ್ಯುತ್ ಗುತ್ತಿಗೆದಾರರಿಂದ ಬೆಂ.ಮ.ಸಾ.ಸಂಸ್ಥೆಯ ಹೊಸಕೋಟೆ ಬಸ್ ನಿಲ್ದಾಣದಲ್ಲಿ ಇ.ವಿ. ಬಸ್‌ಗಳ ಚಾರ್ಜಿಂಗ್ ವ್ಯವಸ್ಥೆ ಕಲ್ಪಿಸಲು 11 ಕೆ.ವಿ. ಹೆಚ್.ಟಿ.750 ಕೆ.ವಿ.ಎ. ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದು. **ಟೆಂಡರ್ ಮೊತ್ತ 38.94 ಲಕ್ಷ ರೂ.ಗಳು, ಇ.ಎಂ.ಡಿ ಮೊತ್ತ ರೂ. 77,900/–**, ಈ ಕಾಮಗಾರಿಗಾಗಿ e-proc ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಕಾಮಗಾರಿಗಾಗಿ e-proc ಬಿಡುಗಡೆಯಾಗುವ ದಿನಾಂಕದಂದು ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು. (1) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸಲು ಕಡೆ ದಿನಾಂಕ: **07.01.2023.** (2) ಟೆಂಡರ್ ತೆರೆಯುವ ದಿನಾಂಕ: **09.01.2023.**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಬೆ.ಮ.ಸಾ.ಸಂಸ್ಥೆ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ: 08156–295427
ಫ್ಯಾಕ್ಸ್: 08156–295427 ಇಮೇಲ್ – eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ: ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 13/2022–23, ದಿನಾಂಕ : 19/12/2022
2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಅಡಿಯಲ್ಲಿ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಚಿಂತಾಮಣಿ ಮತ್ತು ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 1 & 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2 ಮತ್ತು 3 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 28/12/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 31/12/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–01
PH: 080-22867369 / FAX: 080 -22863962 e-mail: cgmksamb@gmail.com
ಸಂಖ್ಯೆ: ಕೃಮಾಮಂ/ಪ್ರೋ/43/2022–23 ದಿನಾಂಕ: 19.12.2022

ಅಲ್ಪಾವಧಿ – ಟೆಂಡರ್ ಪ್ರಕಟಣೆ

2022–23ನೇ ಸಾಲಿಗೆ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುವ ರಾಗಿ, ಭತ್ತ ಮತ್ತು ಬಿಳಿಜೋಳ ಹಸ್ತಾಂತರ ಹಾಗೂ ಸಾಗಾಣಿಕೆಗಾಗಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ವತಿಯಿಂದ ಪ್ರತಿಷ್ಠಿತ ಸಾಗಾಣಿಕೆ ಮತ್ತು ನಿರ್ವಹಣಾ ಗುತ್ತಿಗೆದಾರರಿಂದ ಮೈಸೂರು, ಕೊಡಗು, ಬಳ್ಳಾರಿ, ವಿಜಯನಗರ, ರಾಯಚೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಸರ್ಕಾರದ ವೆಬ್‌ಸೈಟ್ **https://www.eproc.karnataka.gov.in** ನಿಂದ ಪಡೆದುಕೊಂಡು ಸಲ್ಲಿಸಬಹುದಾಗಿದೆ.

ವಿಶೇಷ ಸೂಚನೆ: ಹೆಚ್ಚಿನ ವಿವರಗಳನ್ನು **https://www.eproc.karnataka.gov.in** ವೆಬ್‌ಸೈಟ್‌ನಲ್ಲಿ Indent No: KSAMB/PRO/43 ರಡಿಯಲ್ಲಿ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **26.12.2022.** ಸಹಿ/–

ಮುಖ್ಯ ಪ್ರಧಾನ ವ್ಯವಸ್ಥಾಪಕರು
ವಾ.ಸಾ.ಸಂ.ಇ/ವಾಪ್ರ/3605/ಶಿರಡಿಸಾಯಿ/2022–23 ಕ.ರಾ.ಕೃ.ಮಾ.ಮಂ., ಬೆಂಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ:ಕಾಅ/ರಮೂಸೌ/ಟಿಇಸಿ ವಿಭಾಗ/ಟೆಂಡರ್/22/2022–23 ದಿನಾಂಕ: 19–12–2022

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ), ಬಿಬಿಎಂಪಿ, ಇವರು ಈ ಕೆಳಕಂಡ ಸೇವೆಗಳಿಗಾಗಿ ಸುಪ್ರಸಿದ್ಧ ಸಮಾಲೋಚಕರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನಾ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಬೆಂಗಳೂರಿನ ಆಯ್ದ ಅಧಿಕ ಸಾಂದ್ರತೆ ಕಾರಿಡಾರ್‌ಗೆ ಚರಂಡಿ, ಪಾದಚಾರಿ ಮಾರ್ಗ ಸುಧಾರಣೆಗಳು ಮತ್ತು ಡಾಂಬರೀಕರಣದ ಕಾಮಗಾರಿಗೆ ಡಿಪಿಆರ್ ಸಿದ್ಧಪಡಿಸಲು ಸಮಾಲೋಚನೆ ಸೇವೆಗಳು. (ಪ್ಯಾಕೇಜ್–01)	8900.00	200000.00
2	ಬೆಂಗಳೂರಿನ ಆಯ್ದ ಅಧಿಕ ಸಾಂದ್ರತೆ ಕಾರಿಡಾರ್‌ಗೆ ಚರಂಡಿ, ಪಾದಚಾರಿ ಮಾರ್ಗ ಸುಧಾರಣೆಗಳು ಮತ್ತು ಡಾಂಬರೀಕರಣದ ಕಾಮಗಾರಿಗೆ ಡಿಪಿಆರ್ ಸಿದ್ಧಪಡಿಸಲು ಸಮಾಲೋಚನೆ ಸೇವೆಗಳು. (ಪ್ಯಾಕೇಜ್–02)	8800.00	200000.00
3	ಬೆಂಗಳೂರಿನ ಆಯ್ದ ಅಧಿಕ ಸಾಂದ್ರತೆ ಕಾರಿಡಾರ್‌ಗೆ ಚರಂಡಿ, ಪಾದಚಾರಿ ಮಾರ್ಗ ಸುಧಾರಣೆಗಳು ಮತ್ತು ಡಾಂಬರೀಕರಣದ ಕಾಮಗಾರಿಗೆ ಡಿಪಿಆರ್ ಸಿದ್ಧಪಡಿಸಲು ಸಮಾಲೋಚನೆ ಸೇವೆಗಳು. (ಪ್ಯಾಕೇಜ್–03)	9600.00	200000.00

ಟೆಂಡರ್ ವೇಳಾಪಟ್ಟಿ: 1) ಪ್ರಸ್ತಾವನೆಗೆ ಮನವಿ (ಆರ್‌ಎಫ್‌ಪಿ) ಡಾಕ್ಯೂಮೆಂಟ್‌ನ್ನು **ದಿನಾಂಕ: 20–12–2022** ರಿಂದ ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **23–12–2022ರಂದು 16.00 ಗಂಟೆಗೆ ಇಂಜಿನಿಯರ್ ಇನ್ ಚೀಫ್ ರವರ ಕಛೇರಿ, ರೂಮ್ ನಂ. 108, 1ನೇ ಮಹಡಿ, ಅನೆಕ್ಸ್ ಬಿಲ್ಡಿಂಗ್–2, ಎನ್.ಆರ್. ಚೌಕ, ಬೆಂಗಳೂರು – 560002** ಇಲ್ಲಿ ನಡೆಯುತ್ತದೆ. 3) ಭರ್ತಿ ಮಾಡಿದ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **27–12–2022ರಂದು 16.00 ಗಂಟೆಗೆ ಮುಂಚಿತವಾಗಿ.** 4) ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: **29–12–2022ರಂದು 10.00 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಮೂಸೌ–ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

ಸುದ್ದಿ 2 ನಿಮಿಷ

23ರಿಂದ ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನ

ಬೆಂಗಳೂರು: ವನ್ಯಜೀವಿ ಛಾಯಾಗ್ರಾಹಕ ಜಿ. ಶಾಂತಕುಮಾರ್ ಅವರ ‘ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನ’ ಡಿ.23ರಿಂದ 25 ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ 'ದೇವರಾಜ ಅರಸು ಗ್ಯಾಲರಿ'ಯಲ್ಲಿ ನಡೆಯಲಿದೆ.

ಈ ಪ್ರದರ್ಶನವನ್ನು ಡಿ. 23ರಂದು ವನ್ಯಜೀವಿ ಸಾಕ್ಷ್ಯಚಿತ್ರ ನಿರ್ಮಾಪಕ ಕೃಪಾಕರ ಸೇನಾನಿ ಉದ್ಘಾಟನೆ ಮಾಡಲಿದ್ದಾರೆ. ರುಕ್ಮಿಣಿ ವಿ., ಪತ್ರಕರ್ತ ಶಿವಸುಬ್ರಹ್ಮಣ್ಯ ಕೆ. ಭಾಗವಹಿಸಲಿದ್ದಾರೆ.

ಈ ಪ್ರದರ್ಶನದಲ್ಲಿ ಶಾಂತಕುಮಾರ್ ಅವರ ಪುತ್ರ ಅನಿರುದ್ಧ ಬಿ.ಎಸ್. ಅವರ ಆಯ್ದ ಛಾಯಾಚಿತ್ರಗಳು ಪ್ರದರ್ಶನಗೊಳ್ಳಲಿವೆ.

ವಿದ್ಯಾರ್ಥಿಗಳು, ಪರಿಸರ ಮತ್ತು ವನ್ಯಜೀವಿ ಪ್ರೇಮಿಗಳು ಪ್ರದರ್ಶನವನ್ನು ಕಣ್ತುಂಬಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಜನವರಿ 2ರ ವರೆಗೆ ಕ್ರಿಸ್‌ಮಸ್ ಕೇಕ್‌ನಲ್ಲಿ ಪ್ರದರ್ಶನ

ಬೆಂಗಳೂರು: ದಸರಾ ಅಂಬಾರಿಯನ್ನು ಹೊತ್ತಿದ್ದ ಗೋಪಾಲಸ್ವಾಮಿ ಆನೆ ಇತ್ತೀಚೆಗೆ ನಮ್ಮನ್ನು ಅಗಲಿದ್ದು, ಅದರ ಪ್ರತಿಕೃತಿ ಕೇಕ್‌ನಲ್ಲಿ ಅನಾವರಣಗೊಂಡಿದೆ. ಕ್ರಿಸ್‌ಮಸ್ ಅಂಗವಾಗಿ ಆಯೋಜಿಸಿರುವ 48ನೇ ಕೇಕ್ ಪ್ರದರ್ಶನದಲ್ಲಿ ಅದು ಕೇಕ್‌ಪ್ರಿಯರನ್ನು ಆಕರ್ಷಿಸುತ್ತಿದೆ.

ಇನ್‌ಸ್ಟಿಟ್ಯೂಟ್ ಆಫ್ ಬೇಕಿಂಗ್ ಅ್ಯಂಡ್ ಕೇಕ್ ಆರ್ಟ್ ಮತ್ತು ಮೈಬೇಕರ್ ಸ್ಮಾರ್ಟ್ ಸಹಯೋಗದಲ್ಲಿ ಯು.ಬಿ. ಸಿಟಿಯ ಸೇಂಟ್ ಜೋಸೆಫ್ ಸ್ಕೂಲ್ ಮೈದಾನದಲ್ಲಿ ಈ ಪ್ರದರ್ಶನ ನಡೆಯುತ್ತಿದೆ. ಈ ಬಾರಿ ‘ಒಳಿತು–ಕೆಡಕು, ಪ್ರಕೃತಿ–ಸಾಮರಸ್ಯ, ಇತಿಹಾಸ ಮತ್ತು ಸ್ಮರಣೆ’ ಎಂಬ ವಿಷಯಗಳ ಮೇಲೆ ವಿವಿಧ ಬಗೆಯ 28 ಕೇಕ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಜನವರಿ 2ರ ವರೆಗೆ ಈ ಪ್ರದರ್ಶನ ನಡೆಯಲಿದೆ.

ಚಕ್ರವರ್ತಿ ಅಶೋಕ ಸಾರಾನಾಥದಲ್ಲಿ ಸ್ಥಾಪಿಸಿರುವ ಅಶೋಕ ಸ್ತಂಭ, ನೇವಾರ್ಕ್‌ದ ಬೆಸಿಲಿಕಾ ಆಫ್ ದಿ ಸೇಕ್ರೆಡ್ ಹಾರ್ಟ್ ಚರ್ಚ್, ವಿದ್ಯುತ್ ಚಾಲಿತ ಕಾರು, ಬೇಲೂರಿನ ಶ್ರೀರಾಮ ಮತ್ತು ಶಿಷ್ಯರ ಶಿಲ್ಪಗಳು, ಭಾರತೀಯ ಶಸ್ತ್ರಚಿಕಿತ್ಸೆ ಪದ್ಧತಿ ಮತ್ತು ಔಷಧೀಯ ವಿಧಾನ, ಕ್ರಿಸ್‌ಮಸ್ ಟ್ರೀ, ಗೋಲ್ಡನ್ ಎಗ್, ಚೆಕ್ ಮೇಟ್, ಉಗಿಬಂಡಿಯ ಎಂಜಿನ್ ಸೇರಿ ವಿವಿಧ 28 ಬಗೆಯ ಆಕರ್ಷಣೆಯ ಕೇಕ್‌ಗಳ ಕಲಾಕೃತಿಗಳು ಪ್ರದರ್ಶನಗೊಳ್ಳುತ್ತಿವೆ. ‘ಆರು ತಿಂಗಳ ಮುಂಚಿತವಾಗಿ ಈ ಪ್ರದರ್ಶನಕ್ಕೆ ತಯಾರಿ ಮಾಡಿಕೊಂಡಿದ್ದೆವು. ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡವರಿಗೂ ಈ ಪ್ರದರ್ಶನ ಖುಷಿ ಕೊಡುವ ವಿಶ್ವಾಸವಿದೆ’ ಎಂದು ಇನ್‌ಸ್ಟಿಟ್ಯೂಟ್ ಆಫ್ ಬೇಕಿಂಗ್ ಅ್ಯಂಡ್ ಕೇಕ್ ಆರ್ಟ್‌ನ ನಿರ್ದೇಶಕ ಮನೀಷ್ ಗೌರ್ ಅವರು ಹೇಳಿದರು.

‘ದಶಪಥ ಹೆದ್ದಾರಿಯಲ್ಲಿ ಕರಕುಶಲ ಗ್ರಾಮ’

ಕೇಂದ್ರ ಸರ್ಕಾರಕ್ಕೆ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೊಯಾ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ದೆಹಲಿ ಹಾತ್’ ಮಾದರಿಯಲ್ಲಿ ಬೆಂಗಳೂರು-ಮೈಸೂರು ದಶಪಥ ಹೆದ್ದಾರಿಯಲ್ಲಿ ಕರಕುಶಲ ಗ್ರಾಮವನ್ನು ಅಭಿವೃದ್ಧಿಪಡಿಸಬೇಕು ಎಂದು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೊಯಾ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯಸಭೆಯಲ್ಲಿ ಸೋಮವಾರ ಈ ಬಗ್ಗೆ ಪ್ರಸ್ತಾಪಿಸಿದ ಅವರು, ‘ಈ ಕರಕುಶಲ ಗ್ರಾಮಗಳನ್ನು ಹೆದ್ದಾರಿಯ ಉದ್ದಕ್ಕೂ ಇರುವ ಖಾಲಿ ಜಮೀನುಗಳಲ್ಲಿ ಸ್ಥಾಪಿಸಬಹುದು. ಕರಕುಶಲ ಗ್ರಾಮದಲ್ಲಿ ಚನ್ನಪಟ್ಟಣದ ಕಲಾವಿದರು ತಮ್ಮ ಆಟಿಕೆಗಳು, ಕರಕುಶಲ ವಸ್ತುಗಳನ್ನು ಪ್ರದರ್ಶಿಸಲು, ಮಾರಾಟ ಮಾಡಲು ಮತ್ತು ಬಿಡದಿ ತಟ್ಟೆ ಇಡ್ಲಿ, ಮದ್ದೂರು ವಡೆ ಮೊದಲಾದ ಸ್ಥಳೀಯ ಖಾದ್ಯಗಳ ರೆಸ್ಟೋರೆಂಟ್‌ಗಳಿಗೆ ಸ್ಥಳಾವಕಾಶ ಒದಗಿಸಬೇಕು’ ಎಂದರು.

ಲೆಹರ್ ಸಿಂಗ್ ಸಿರೋಯ ಅವರು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿಪತ್ರ ಸಲ್ಲಿಸಿದರು

‘ಇನ್ನು 2-3 ತಿಂಗಳಲ್ಲಿ ಹೆದ್ದಾರಿ ಕಾಮಗಾರಿ ಪೂರ್ಣಗೊಂಡ ಬಳಿಕ, ಪ್ರಯಾಣಿಕರು ಬಿಡದಿ, ಚನ್ನಪಟ್ಟಣ, ರಾಮನಗರ, ಮದ್ದೂರು ಮತ್ತಿತರ ಸ್ಥಳಗಳನ್ನು ಬೈಪಾಸ್ ಮೂಲಕ ಹಾದು ಹೋಗಲಿದ್ದು, ಇದರಿಂದಾಗಿ ‘ಗೊಂಬೆಗಳ ನಾಡು’ ಎಂದು ಹೆಸರಾಗಿರುವ ಚನ್ನಪಟ್ಟಣದ ಕರಕುಶಲ ವಸ್ತುಗಳಿಗೆ, ಬಿಡದಿ ತಟ್ಟೆ ಇಡ್ಲಿ, ಮದ್ದೂರು ವಡೆ ತಿನಿಸುಗಳಿಗೆ ಗ್ರಾಹಕರ ಕೊರತೆ ಎದುರಾಗಲಿದೆ. ಇವುಗಳಿಂದ ಬದುಕು ಕಟ್ಟಿಕೊಂಡಿರುವ ಸಾವಿರಾರು ಜನರಿಗೆ ಇದರಿಂದ ತೊಂದರೆಯಾಗಲಿದೆ. ಜತೆಗೆ, ಸ್ಥಳೀಯ ಆಟಿಕೆಗಳ ವೈವಿಧ್ಯತೆಗಳು ನಶಿಸುವ ಅಪಾಯವಿದೆ’ ಎಂದು ಅವರು ತಿಳಿಸಿದರು.

ಬಳಿಕ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಈ ಕಾರ್ಯಕ್ಕಾಗಿ ಹೆದ್ದಾರಿ ಸಚಿವಾಲಯ, ಕರ್ನಾಟಕ ಸರ್ಕಾರ ಮತ್ತು ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮನ್ವಯ ಸಾಧಿಸುವ ಕೆಲಸ ಮಾಡುವುದಾಗಿ ತಿಳಿಸಿದರು.

ಕರ್ನಾಟಕ ಮಹಿಳಾ ಯಕ್ಷಗಾನದ ವತಿಯಿಂದ ‘ಮಹಿಳಾ ಯಕ್ಷೋತ್ಸವ’ದ ಅಂಗವಾಗಿ ಕೆ. ಗೌರಿ ನಿರ್ದೇಶನದ ‘ಶಿವ ಪಂಚಾಕ್ಷರಿ ಮಹಿಮೆ’ ಯಕ್ಷಗಾನ ಪ್ರಸಂಗವನ್ನು ಕೆಂಪೇಗೌಡನಗರದ ಉದಯಭಾನು ಕಲಾಸಂಘದಲ್ಲಿ ಭಾನುವಾರ ಪ್ರದರ್ಶಿಸಲಾಯಿತು.

ಭೂಮಿ ಹಸ್ತಾಂತರಕ್ಕೆ ಮೀನಮೇಷ: ಕಿಡಿ

ನವದೆಹಲಿ: ‘ಬೆಂಗಳೂರಿನಲ್ಲಿ ಮೂಲಸೌಕರ್ಯ ಯೋಜನೆಗಳಿಗೆ ರಕ್ಷಣಾ ಭೂಮಿಯನ್ನು ಹಸ್ತಾಂತರಿಸಲು ಇಲಾಖೆಯ ಅಧಿಕಾರಿಗಳು ಮೀನಮೇಷ ಎಣಿಸುತ್ತಿದ್ದಾರೆ’ ಎಂದು ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಸೋಮವಾರ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಬೆಂಗಳೂರು ನಗರ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಅದಕ್ಕೆ ತಕ್ಕಂತೆ ಮೂಲಸೌಕರ್ಯ ಒದಗಿಸುವ ಕೆಲಸ ಆಗಬೇಕಿದೆ ಎಂದರು.

‘ಕರ್ನಾಟಕ ಸರ್ಕಾರ ಹಾಗೂ ಬಿಬಿಎಂಪಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ. ಮೂಲಸೌಕರ್ಯ ಯೋಜನೆಗಳ ಜಾರಿಗೆ ರಕ್ಷಣಾ ಇಲಾಖೆಯ ಭೂಮಿ ಬೇಕಾಗಿದೆ. ಕೆಲವು ಅಧಿಕಾರಿಗಳ ಅಸಹಕಾರದಿಂದ ಈ ಭೂಮಿ ಹಸ್ತಾಂತರ ಆಗಿಲ್ಲ’ ಎಂದರು.

‘ಭೂಮಿಯನ್ನು ಪಾಲಿಕೆಗೆ ಹಸ್ತಾಂತರಿಸಲು ದಶಕಗಳ ಹಿಂದೆಯೇ ಪ್ರಸ್ತಾವ ಸಲ್ಲಿಸಲಾಗಿದೆ. ಹಲವು ಸುತ್ತಿನ ಮಾತುಕತೆಗಳಾಗಿವೆ. ಇಲಾಖೆಗಳ ನಡುವಿನ ಭೂ ಜಗಳದಿಂದಾಗಿ ಮೂಲಸೌಕರ್ಯ ಯೋಜನೆಗಳ ಮೇಲೆ ಪರಿಣಾಮ ಬೀರಿದೆ’ ಎಂದು ಅವರು ತಿಳಿಸಿದರು.

‘ಮೂಲಸೌಕರ್ಯ ಯೋಜನೆಗಳಿಗೆ 10 ಕಡೆ ರಕ್ಷಣಾ ಇಲಾಖೆಯ ಜಮೀನು ಬೇಕಾಗಿದೆ. 2018–19ರಲ್ಲಿ 10 ಜಾಗಗಳ ಹಸ್ತಾಂತರಕ್ಕೆ ರಕ್ಷಣಾ ಸಚಿವರು ಹಾಗೂ ಕರ್ನಾಟಕ ಸರ್ಕಾರದ ಮಧ್ಯೆ ಒಪ್ಪಂದ ಆಗಿತ್ತು. ಆ ಬಳಿಕ ಮೂರು ಕಡೆಗಳಲ್ಲಷ್ಟೇ ಜಾಗ ಹಸ್ತಾಂತರ ಆಗಿದೆ. ಉಳಿದ ಕಡೆಗಳಲ್ಲಿ ಕಾಮಗಾರಿ ನಡೆಸಲು ರಕ್ಷಣಾ ಇಲಾಖೆ ಅಧಿಕಾರಿಗಳು ಒಪ್ಪಿಗೆ ಸೂಚಿಸಿಲ್ಲ’ ಎಂದರು.

ರಕ್ಷಣಾ ಸಚಿವರು ನಿರ್ದೇಶನ ನೀಡಿದ ಬಳಿಕವೂ ಇಲಾಖೆಯ ಅಧಿಕಾರಿಗಳು ಜಾಗ ಹಸ್ತಾಂತರ ಮಾಡಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು, ಈ ಸಂಬಂಧ ರಕ್ಷಣಾ ಸಚಿವ ರಾಜನಾಥ ಸಿಂಗ್ ಸೂಕ್ತ ನಿರ್ದೇಶನ ನೀಡಬೇಕು’ ಎಂದು ಒತ್ತಾಯಿಸಿದರು.

ಮತ್ತೀಕೆರೆ: ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತೀಕೆರೆಯ ನೇತಾಜಿ ವೃತ್ತದಲ್ಲಿ ಸ್ಥಾಪಿಸಿರುವ ಅತ್ಯಾಧುನಿಕ ಸೌಲಭ್ಯಗಳ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೇಂದ್ರ ರೈಲ್ವೆ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ಉದ್ಘಾಟಿಸಿದರು.

ಸಚಿವ ಅಶ್ವತ್ಥನಾರಾಯಣ ಅವರು, ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ಇರಲಿದ್ದಾರೆ. ಒಟ್ಟು 220 ಲ್ಯಾಬ್ ಟೆಸ್ಟ್‌ಗಳನ್ನು ಉಚಿತವಾಗಿ ನಡೆಸಲಾಗುವುದು. ವೈದ್ಯಕೀಯ ಪರೀಕ್ಷೆಗೆ ಅತ್ಯಾಧುನಿಕ ಡಿಜಿಟಲ್ ಉಪಕರಣಗಳಿವೆ ಎಂದರು.

ಬೆಂಗಳೂರು ವಿಜ್ಞಾನ-ತಂತ್ರಜ್ಞಾನಗಳ ರಾಜಧಾನಿಯಾಗಿದೆ. ಇದರ ಲಾಭವು ಜನಸಾಮಾನ್ಯರಿಗೆ ಸಿಗಬೇಕೆಂಬ ಉದ್ದೇಶದಿಂದ ಈ ಆರೋಗ್ಯ ಕೇಂದ್ರ ಸ್ಥಾಪಿಸಲಾಗಿದೆ. ಇಲ್ಲಿ ಹೊರರೋಗಿಗಳ ವಿಭಾಗದಿಂದ ಹಿಡಿದು ವರ್ಚುಯಲ್ ಸ್ಮಾರ್ಟ್ ಕ್ಲಿನಿಕ್, ಕಣ್ಣಿನ ಪರೀಕ್ಷೆ, ಫಿಸಿಯೋಥೆರಪಿ, ದಂತ ತಪಾಸಣೆ, ಎಕ್ಸ್‌ರೇ, ಉಚಿತ ಔಷಧಾಲಯ, ಪ್ರಧಾನ ಮಂತ್ರಿ ಜನೌಷಧ ಕೇಂದ್ರ, ಇ-ಆಸ್ಪತ್ರೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ವ್ಯಾಪ್ತಿಯಲ್ಲಿರುವ ಸೇವೆ ಮುಂತಾದ ಸೌಲಭ್ಯಗಳಿವೆ ಎಂದು ಹೇಳಿದರು.

ಮಲ್ಲೇಶ್ವರಂನಲ್ಲಿರುವ ಆರೋಗ್ಯ ಕೇಂದ್ರಗಳು ಇಡೀ ದೇಶಕ್ಕೇ ಮಾದರಿಯಾಗಿವೆ. ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ತಾವು ರಾಜ್ಯಸಭೆಯಲ್ಲಿ ಪ್ರತಿನಿಧಿಸುವ ಒಡಿಶಾದಲ್ಲಿ ಕೂಡ ಇಂಥ ಉಪಕ್ರಮ ಆರಂಭಿಸಲು ಉತ್ಸುಕರಾಗಿದ್ದಾರೆ. ಜನವರಿಯಲ್ಲಿ ಮತ್ತೀಕೆರೆಯಲ್ಲಿ ನಮ್ಮ ಕ್ಲಿನಿಕ್‌ಗೆ ಚಾಲನೆ ನೀಡಲಾಗುವುದು. ಮಲ್ಲೇಶ್ವರಂನ ಸ್ಯಾಂಕಿ ಕೆರೆಯ ಆವರಣದಲ್ಲಿ ಕೂಡ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸದ್ಯದಲ್ಲೇ ಆರಂಭಿಸಲಾಗುವುದು ಎಂದರು.

ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಧುಮೇಹ, ರಕ್ತದ ಒತ್ತಡ, ಚರ್ಮದ ಕಾಯಿಲೆ, ಬೆನ್ನುನೋವು ಮುಂತಾದ ಕಾಯಿಲೆಗಳಿಗೆ ಸಮರ್ಪಕ ಚಿಕಿತ್ಸೆ ದೊರೆಯಲಿದೆ. ಇಲ್ಲಿ ಚಿಕಿತ್ಸೆ ದೊರೆಯದೆ ಇರುವಂತಹ ಕಾಯಿಲೆಗಳ ಮಾಹಿತಿಯನ್ನು ಕಮಾಂಡೋ ಸೆಂಟರ್ ಮೂಲಕ ನಮ್ಮೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಮಿಂಟೋ ಕಣ್ಣಿನ ಆಸ್ಪತ್ರೆ ಮುಂತಾದ ಕಡೆಗಳಿಗೆ ಕ್ಷಿಪ್ರ ಗತಿಯಲ್ಲಿ ರವಾನಿಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಡಾ.ಸುಚೇತಾ, ಸ್ಟಾರ್ಟಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್, ಡಾ.ಮಂಜುನಾಥ್, ಮುಖಂಡರಾದ ರಾಜು, ಸಮೀವುಲ್ಲಾ, ಜಯಪ್ರಕಾಶ್, ಜೈಪಾಲ್ ಉಪಸ್ಥಿತರಿದ್ದರು. ಹಂಪಿ ಕನ್ನಡ ವಿವಿಯ ನಾಡೋಜ ಗೌರವಕ್ಕೆ ಭಾಜನರಾದ ಮತ್ತೀಕೆರೆ ನಿವಾಸಿ ಡಾ.ಜಿ ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು.

ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೇಂದ್ರ ರೈಲ್ವೆ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಭಾನುವಾರ ಉದ್ಘಾಟಿಸಿದರು. ಸಚಿವ ಸಿಎನ್.ಅಶ್ವತ್ಥನಾರಾಯಣ, ಡಾ.ದೀಪಕ್, ಪ್ರಶಾಂತ್ ಪ್ರಕಾಶ್ ಉಪಸ್ಥಿತರಿದ್ದರು.

PUBLIC NOTICE

We are investigating the title of owners with respect to the land parcel situated at Amani Bellanduru khane Village,Varthur Hobli, Bangalore East Taluk, and Bangalore District, morefully described in the schedule hereunder and hereinafter referred to as the **“Schedule Property”.** Any person having any right, title, claim or interest in the Schedule Property must notify the undersigned with documentary proof thereof within fifteen (15) days of this publication. In case no such notice is received by us within fifteen (15) days from the date of publication of this notice, it shall be presumed that the title of the owners with respect to the Schedule Property is clear, marketable and free from encumbrance/s of any kind whatsoever and no person has any right, title or interest of any nature whatsoever in respect of the Schedule Property or any part thereof. Claims or alleged interest, if any, which are not received within fifteen (15) days from the date of publication of this notice shall be deemed to have been waived and disregarded for all intents and purposes and shall not be binding on our client.

SCHEDULE

All that piece and parcel of agriculture land situated at Amani Bellandur Khane Village,Varthur Hobli, Bangalore East Taluk, Bangalore District, and bounded on:

Sl. No.	Sy. Nos.	Extents		Boundaries: East By: E; West By: W; North By: N; South By: S	Owner/s
		Acres	Guntas		
1	57	01	0.2	**E:** Property bearing Sy. No. 58 **W:** Kariyammana Agrahara Boundary **N:** Property bearing Sy. No's. 61 and 62 **S:** Property bearing Sy. No's. 55 & 56	1. Ankappa Reddy, son of Late Muniswamy and others 2. A. Ramachandra Reddy and others 3. VenkateshaReddy and others 4. Suresh. L. and others All are residing at Halanayakanahalli Village, Varthur Hobli, Bangalore East Taluk.

Place: Bengaluru
Date: 20.12.2022

Archana Sindhe, Advocate,
No.45, I Floor, out house, NR Colony, Basavanagudi,
Bangalore-560 004. Mobile No-9844488872

ನಗರದಲ್ಲಿ ಇಂದು

ವಾರ್ಷಿಕ ದಿನಾಚರಣೆ: ಅತಿಥಿಗಳು: ಕೆ.ದಿನೇಶ, ರಘು ರಾಮಕೊಪ್ಪ, ಎಚ್.ಎಸ್.ವಾಣಿ, ಆಯೋಜನೆ ಮತ್ತು ಸ್ಥಳ: ಆರ್.ವಿ. ಹೈಸ್ಕೂಲ್, ಜಯನಗರ, 2ನೇ ಬ್ಲಾಕ್, ಬೆಳಿಗ್ಗೆ 9.30

ಗುರುರಾಜ ಪೋಶೆಟ್ಟಿಹಳ್ಳಿ ಅವರ ‘ದಾಸ ಪಂಥ’ ಒಂದು ಅವಲೋಕನ, ಆರ್. ವಾದಿರಾಜು ಅವರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಕೆ.ರಮಾನಂದ, ಕೃತಿ ಅವಲೋಕನ: ವಾದಿರಾಜ ಅಗ್ನಿಹೋತ್ರಿ, ಉಪಸ್ಥಿತಿ: ಆರ್.ವಾದಿರಾಜು, ಗುರುರಾಜ ಪೋಶೆಟ್ಟಿಹಳ್ಳಿ, ಆಯೋಜನೆ ಮತ್ತು ಸ್ಥಳ: ಬಾಲಾಜಿ ವಿದ್ಯಾನಿಕೇತನ, ಬಾಲಾಜಿ ಪದವಿ ಕಾಲೇಜು, ಹನುಮಂತನಗರ, ಬೆಳಿಗ್ಗೆ 10

ಎನ್‌ಇಪಿ- ಉತ್ತಮ ಆಡಳಿತದ ಕುರಿತು ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ: ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿಗಳು: ಸಮರ್ಥ ಮುನಿರಾಜು, ವೈ.ಜಿ.ಮುರಳೀಧರನ್, ಎ.ಲೋಕೇಶ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಸೆಂಟರ್ ಕಾಲೇಜು ಆವರಣ, ಬೆಳಿಗ್ಗೆ 10.30

ಜನಪದ ಭಾವಾಮೃತ: ಉದ್ಘಾಟನೆ: ಕೆ.ಎಸ್.ಶ್ರೀಧರ್ ಅಯ್ಯರ್, ಅತಿಥಿಗಳು: ಆರ್. ಚಂದ್ರಶೇಖರ್, ಎ.ಎಲ್.ಗುರುರಾಜ್, ಅಧ್ಯಕ್ಷತೆ: ಎಂ.ವಿ. ಗಿರಿಸ್ವಾಮಿ, ಆಯೋಜನೆ: ಗಾನಮಾಧುರ್ಯ ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಎಸ್.ವಿ.ಎಸ್. ಸಭಾಂಗಣ, ಮಾರುತಿನಗರ, 2ನೇ ಹಂತ, ಸೋನ್ನೆನಹಳ್ಳಿ, ಮಧ್ಯಾಹ್ನ 3

ಜೆ.ಸಿ. ರಸ್ತೆ ಮೇಲ್ಸೇತುವೆ • ಅನುಮೋದನೆ ಕುರಿತು ತಾಂತ್ರಿಕ ಸಲಹಾ ಸಮಿತಿ (ಟಿಎಸಿ) ಸಭೆಯಲ್ಲಿ ಇಂದು ಚರ್ಚೆ

₹270 ಕೋಟಿಗೆ ಏರಿದ ಮೇಲ್ಸೇತುವೆ ವೆಚ್ಚ

• ನವೀನ್ ಮಿನೇಜಸ್

ಬೆಂಗಳೂರು: ಜೆ.ಸಿ. ರಸ್ತೆ ಮೇಲ್ಸೇತುವೆ ಅಂದಾಜು ವೆಚ್ಚ ₹50 ಕೋಟಿಯಷ್ಟು ಹೆಚ್ಚಾಗಿದ್ದು, ₹220 ಕೋಟಿಯಿಂದ ₹270 ಕೋಟಿಗೆ ತಲುಪಿದೆ.

ತಾಂತ್ರಿಕ ಸಲಹಾ ಸಮಿತಿ (ಟಿಎಸಿ) ಸಭೆಯಲ್ಲಿ ಮಂಗಳವಾರ ಈ ಯೋಜನೆಯ ಅನುಮೋದನೆ ಬಗ್ಗೆ ಚರ್ಚೆ ನಡೆಯಲಿದೆ.

ಮಿನರ್ವ ವೃತ್ತದಿಂದ ಟೌನ್‌ಹಾಲ್ ಮೂಲಕ ಹಡ್ಸನ್ ವೃತ್ತದವರೆಗೆ ಏಳು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಮುಕ್ತ ಸಂಚಾರವನ್ನು ಈ ಮೇಲ್ಸೇತುವೆ ಒದಗಿಸಲಿದೆ. ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಲ್ಲಿ ರಾಜ್ಯ ಸರ್ಕಾರ ₹220 ಕೋಟಿಯನ್ನು ಜೆ.ಸಿ. ರಸ್ತೆ ಮೇಲ್ಸೇತುವೆ ನಿರ್ಮಿಸಲು ಅನುಮೋದನೆ ನೀಡಿದೆ. ಯೋಜನೆಯ ತಾಂತ್ರಿಕ ವಿವರಗಳನ್ನು ಟಿಎಸಿ ಅಂತಿಮಗೊಳಿಸುವುದು ವಿಳಂಬವಾದ್ದರಿಂದ ಯೋಜನೆ ವೆಚ್ಚ ಹೆಚ್ಚಾಗಲಿದೆ ಎಂದು ಬಿಬಿಎಂಪಿ ಆತಂಕ ವ್ಯಕ್ತಪಡಿಸಿದೆ.

ಮೊದಲು 2014ರಲ್ಲಿ ಈ ಮೇಲ್ಸೇತುವೆ ನಿರ್ಮಿಸಲು ಬಿಬಿಎಂಪಿ ಯೋಜಿಸಿತ್ತು. 2018ರಲ್ಲಿ ಯೋಜನೆಯನ್ನು ಕೈಬಿಟ್ಟಿತ್ತು. ಬಿಬಿಎಂಪಿಯು ಪ್ರಸ್ತುತ 1.8 ಕಿ.ಮೀ. ಉದ್ದದ ಮೇಲ್ಸೇತುವೆ ನಿರ್ಮಿಸಲು ಉದ್ದೇಶಿಸಿದ್ದು,

ಇದರಿಂದ ಸಂಚಾರ ದಟ್ಟಣೆ ಶೇ 46ಷ್ಟು ಕಡಿಮೆಯಾಗಲಿದೆ. ಮಿನರ್ವಾ ವೃತ್ತ ಮತ್ತು ಆರ್.ವಿ. ರಸ್ತೆಯಲ್ಲಿ ರ‍್ಯಾಂಪ್ ನಿರ್ಮಾಣವಾಗಲಿದೆ.

ಹಡ್ಸನ್ ವೃತ್ತದಲ್ಲಿ ಮೆಜೆಸ್ಟಿಕ್ ಹಾಗೂ ಕಸ್ತೂರಬಾ ರಸ್ತೆ ಕಡೆಗೆ ರ‍್ಯಾಂಪ್ ಇರಲಿದೆ. ನೃಪತುಂಗ ರಸ್ತೆ ಹಾಗೂ ರಾಜರಾಮ್‌ಮೋಹನ್ ರಾಯ್ ರಸ್ತೆ ಕಡೆಗೂ ರ‍್ಯಾಂಪ್ ನಿರ್ಮಿಸುವ ವಿಷಯವನ್ನು ಪ್ರಸ್ತಾಪಿಸಲಾಗಿದೆ.

‘ಈ ಯೋಜನೆ ದಕ್ಷಿಣ ಬೆಂಗಳೂರಿನ ನಿವಾಸಿಗಳಿಗೆ ಅನುಕೂಲ ಕಲ್ಪಿಸಲಿದೆ. ಮಿನರ್ವ ವೃತ್ತ, ಟೌನ್ ಹಾಲ್, ಹಡ್ಸನ್ ವೃತ್ತ, ಊರ್ವಶಿ ಚಿತ್ರಮಂದಿರ, ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ಕಡಿಮೆಯಾಗಲಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಈ ಮೇಲ್ಸೇತುವೆ ಮಾರ್ಗದಲ್ಲೇ ಬಿಎಂಆರ್‌ಸಿಎಲ್ ಕೂಡ ಸುರಂಗ ಮಾರ್ಗ ನಿರ್ಮಿಸಲು ಪ್ರಸ್ತಾಪಿಸಿದ್ದು, ಸರ್ಜಾಪುರ ಮತ್ತು ಹೆಬ್ಬಾಳವನ್ನು ಸಂಪರ್ಕಿಸಲಿದೆ. ಟೌನ್‌ಹಾಲ್‌ನಲ್ಲಿ ಮೆಟ್ರೊ ಸ್ಟೇಷನ್ ನಿರ್ಮಾಣವಾಗಲಿದ್ದು, ಜೆ.ಸಿ. ರಸ್ತೆ ಮತ್ತು ನೃಪತುಂಗ ರಸ್ತೆಯಡಿ ಮೆಟ್ರೊ ಸಾಗಲಿದೆ.

‘ಸಣ್ಣ ಯೋಜನೆಗಳಿಗೆ ಸಾಕಷ್ಟು ಅನುದಾನ ಬಳಕೆಯಾಗುತ್ತಿದ್ದು, ಇದರಿಂದ ನಗರದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ. ಜೆ.ಸಿ. ರಸ್ತೆಯ ಮೇಲ್ಸೇತುವೆ ನಿರ್ಮಾಣದಿಂದ ಪರಿಹಾರ ಸಿಗಲಿದೆ. ಈ ಯೋಜನೆ ಖಂಡಿತ ಆರಂಭವಾಗಲಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಗುಂಡಿ ತಪ್ಪಿಸಲು ಹೋಗಿ ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸಮೀಪದ ಮಾದಾವರದ ಬಳಿ ರಸ್ತೆಯಲ್ಲಿ ಬಿದ್ದಿದ್ದ ಗುಂಡಿ ತಪ್ಪಿಸಲು ಹೋಗಿ ಬೈಕ್ ಸವಾರರೊಬ್ಬರು ಸೋಮವಾರ ಮೃತಪಟ್ಟಿದ್ದಾರೆ. ದಾವಣಗೆರೆಯ ಹರ್ಷ (25) ಮೃತಪಟ್ಟ ಬೈಕ್ ಸವಾರ.

ಗುಂಡಿ ತಪ್ಪಿಸಲು ಹೋಗಿ ಆಯತಪ್ಪಿ ರಸ್ತೆಯ ಮಧ್ಯದಲ್ಲಿ ಬಿದ್ದಿದ್ದ ಸವಾರನ ಮೇಲೆ ಹಿಂಬದಿಯಿಂದ ಬಂದ ಲಾರಿ ಹರಿದ ಪರಿಣಾಮ ಅವರು ಸ್ಥಳದಲೇ ಮೃತಪಟ್ಟಿದ್ದಾರೆ.

ಲಾರಿ ಚಾಲಕ ಪರಾರಿಯಾಗಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ನೆಲಮಂಗಲದ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಧಾ ಓದಿರಿ

ಕಾಣೆಯಾಗಿದ್ದಾರೆ



ಹೆಸರು: ಪ್ರಭಾಕರ್ ಶೆಣೈ
ವಯಸ್ಸು: 68 ವರ್ಷ, ಎತ್ತರ: 5'.6"
ಕನ್ನಡ, ತುಳು, ಕೊಂಕಣಿ ಮಾತನಾಡುತ್ತಾರೆ. ಕಾಣೆಯಾದಾಗ ಕಪ್ಪು, ಬಿಳಿ ಹಾಗೂ ಬೂದು ಬಣ್ಣದ ಸ್ವೆಟರ್ ಮತ್ತು ಕೇಸರಿ ಪಂಚೆ (ಚಿತ್ರದಲ್ಲಿ ಕಾಣುವಂತೆ) ತೊಟ್ಟಿರುತ್ತಾರೆ. ಗುಂಡು ಮುಖ, ಕಪ್ಪು ಮತ್ತು ಬಿಳಿ ಕೂದಲು ಹಾಗೂ ಮೀಸೆ ಇರುವ ಇವರು ಓಎಂಬಿಆರ್ ಲೇಔಟ್, ಕಸ್ತೂರಿ ನಗರದಿಂದ ಬೆಳಿಗ್ಗೆ 8 ರಿಂದ 9 ರೊಳಗೆ ಕಾಣೆಯಾಗಿರುತ್ತಾರೆ.
ಯಾರಿಗಾದರೂ ಸಿಕ್ಕಲ್ಲಿ ಈ ನಂಬರಿಗೆ ಸಂಪರ್ಕಿಸಿ: 99020 84039

ಪ್ರೇಮ ವೈಫಲ್ಯ: ಕಾನೂನು ಪದವಿ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಇಲ್ಲಿನ ತಾಂತ್ರಿಕ ಮಹಾವಿದ್ಯಾಲಯದ ಕಟ್ಟಡದ 6ನೇ ಮಹಡಿಯಿಂದ ಜಿಗಿದು ಕಾನೂನು ಪದವಿ ವಿದ್ಯಾರ್ಥಿನಿ ವಾಣಿ (23) ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಶ್ವೇಶ್ವರಯ್ಯಪುರ ಕಾಲೇಜ್ ಆಫ್ ಲಾ ಸಂಸ್ಥೆಯಲ್ಲಿ ಕಾನೂನು ಪದವಿ ವ್ಯಾಸಂಗ ಮಾಡುತ್ತಿದ್ದರು.

ಬನಶಂಕರಿಯ ಮನೆಯಿಂದ ವಾಣಿ ಅವರು ಮಹಾವಿದ್ಯಾಲಯದ ಆವರಣಕ್ಕೆ ಬೆಳಿಗ್ಗೆ ಬಂದಿದ್ದರು. ಬಂದವರೇ ಏಕಾಏಕಿ ಕಟ್ಟಡ ಹತ್ತಿ ಜಿಗಿದರು. ರಕ್ತಸ್ರಾವದಿಂದ ಬಿದ್ದಿದ್ದ ಅವರನ್ನು ಆಸ್ಪತ್ರೆಗೆಂದು ಕರೆದೊಯ್ದರು. ಮಾರ್ಗಮಧ್ಯದಲ್ಲಿಯೇ ಅವರು ಮೃತಪಟ್ಟರು.

‘ಪ್ರೇಮ ವೈಫಲ್ಯದಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಕುಟುಂಬದವರಿಂದಲೂ ಮಾಹಿತಿ ಪಡೆಯಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ವಿದ್ಯಾರ್ಥಿನಿ ಬರೆದಿಟ್ಟ ಡೆತ್‌ನೋಟ್ ಸಹ ಸಿಕ್ಕಿದೆ’ ಎಂದು ಮೂಲಗಳು ತಿಳಿಸಿವೆ.

ಬದುಕು–ಬದುಕಿಸು ರಸ್ತೆ ಸುರಕ್ಷತೆ ಕಾರ್ಯಕ್ರಮದ ಅಂಗವಾಗಿ ‘ಬದುಕು- ಬದುಕಿಸು’ ಎಂಬ ಬೀದಿ ನಾಟಕವನ್ನು ಬಿಎಂಟಿಸಿ ಸಿಬ್ಬಂದಿ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

‘ಥ್ರೋ–ಬಾಲ್ ಪಂದ್ಯಾವಳಿ 27ಕ್ಕೆ

ಬೆಂಗಳೂರು: ಮಾತೃ ಮಿಲನ ಸಂಸ್ಥೆಯು ಡಿಸೆಂಬರ್ 27ರಂದು ರಾಜ್ಯಮಟ್ಟದ ಮಹಿಳಾ ಥ್ರೋ-ಬಾಲ್ ಪಂದ್ಯಾವಳಿ ಏರ್ಪಡಿಸಿದೆ ಎಂದು ಸಂಸ್ಥೆಯ ಅಧ್ಯಕ್ಷರಾದ ಭಾರತಿ ಶಂಕರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಹಾಲಕ್ಷ್ಮಿಪುರಂನ ಶಂಕರಮಠದ ‘ಸ್ವಾಮಿ ವಿವೇಕಾನಂದ’ ಆಟದ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದೆ. ಎರಡು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಸಂಪರ್ಕಕ್ಕೆ: 9886129730 ಅಥವಾ 9972914739

SBI ಭಾರತೀಯ ಸ್ಟೇಟ್ ಬ್ಯಾಂಕ್

ಪ್ರಾದೇಶಿಕ ವ್ಯವಹಾರ ಕಛೇರಿ–1, ಆಡಳಿತ ಕಛೇರಿ–3, 4ನೇ ಮಹಡಿ ಎಸ್‌ಬಿಐ ಕೆ.ಜಿ ರೋಡ್ ಕಾಂಪ್ಲೆಕ್ಸ್, ಬೆಂಗಳೂರು–9

ಕಛೇರಿಗಾಗಿ ಸ್ಥಳಾವಕಾಶ ಬಾಡಿಗೆಗೆ ಬೇಕಾಗಿದೆ

ಕ್ಷೇತ್ರೀಯ ಪ್ರಬಂಧಕರು, ಪ್ರಾದೇಶಿಕ ವ್ಯವಹಾರ ಕಛೇರಿ–1, ಆಡಳಿತ ಕಛೇರಿ–3 ಭಾರತೀಯ ಸ್ಟೇಟ್ ಬ್ಯಾಂಕ ಪರವಾಗಿ ಕಟ್ಟಡ ಮಾಲೀಕರಿಂದ ಅರ್ಜಿ ಕರೆದಿದ್ದಾರೆ. ನೆಲಮಹಡಿಯಲ್ಲಿರುವ 232 ಚ.ಮಿ. ಅಥವಾ 2500 ಚ.ಅಡಿ (+/-10%) ವಿಸ್ತೀರ್ಣವುಳ್ಳ ವಾಣಿಜ್ಯ ಉದ್ದೇಶಕ್ಕಾಗಿ ಕಟ್ಟಡವು ಬೇಕಾಗಿದೆ. ಎಸ್ ಬಿ ಐ ಜಯಮಹಲ್ ಎಕ್ಸ್‌ಟೆನ್‌ಷನ್ (01731) ಶಾಖೆಗಾಗಿ, ಈ ಶಾಖೆಯಿಂದ ಒಂದು ಕಿಮೀ ವ್ಯಾಪ್ತಿಯಲ್ಲಿರುವ ಕಟ್ಟಡ ಮಾಲೀಕರು / ಪವರ್ ಆಫ್ ಅಟಾರ್ನಿ ಹೊಂದಿದವರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ತಾಂತ್ರಿಕ ಬಿಡ್‌ನ್ನು ಸಲ್ಲಿಸಲು ಬೇಕಾದ ಅರ್ಹ ನಮೂನೆ, ವಿವರವಾದ ಮಾನದಂಡಗಳನ್ನು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಎಸ್‌ಬಿಐ ವೆಬ್ ಸೈಟ್ www.sbi.co.in /SBI in the news/ Procurement news ನಿಂದ 20–12–2022 ರಿಂದ 02–01–2023 ರೊಳಗಾಗಿ ಡೌನ್‌ಲೋಡ್ ಮಾಡಬಹುದು. ಅರ್ಜಿಗಳನ್ನು ದಿನಾಂಕ 02–01–2023 ರಂದು ಮಧ್ಯಾಹ್ನ 3.00 ಗಂಟೆಯೊಳಗೆ ಸಲ್ಲಿಸಬೇಕಾಗಿದೆ. ದಲ್ಲಾಳಿಗಳಿಗೆ ಅವಕಾಶ ಇರುವುದಿಲ್ಲ.

ಸಹಿ/– ಕ್ಷೇತ್ರೀಯ ಪ್ರಬಂಧಕರು ಪ್ರಾದೇಶಿಕ ಕಛೇರಿ–1 ಆಡಳಿತ ಕಛೇರಿ–3 ಎನ್, ಜಾಲ2

ಯುವಕನ ಅಪಹರಣ, ₹2 ಲಕ್ಷಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರದ ರೈಲು ನಿಲ್ದಾಣದಿಂದ ಬಿಹಾರದ ಯುವಕನನ್ನು ಅಪಹರಿಸಿ ₹ 2 ಲಕ್ಷಕ್ಕೆ ಬೇಡಿಕೆಯಿಟಿದ್ದ ಮೂವರನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಪಟ್ಟೇಗಾರಪಾಳ್ಯದ ನಿವಾಸಿ, ಡಿಪ್ಲೊಮಾ ವಿದ್ಯಾರ್ಥಿ ಎ.ಪ್ರಭಾತ್ (21), ಕುಣಿಗಲ್‌ನ ಸರ್ಕಾರಿ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿಎ ವಿದ್ಯಾರ್ಥಿ ರಂಗನಾಥ್ ಬಿ.ಕೆ. ರಂಗನಾಥ್ (19), ಕೃಷಿಕ ಕುಶಾಲ್ (19) ಬಂಧಿತ ಆರೋಪಿಗಳು.

‘ಕಾರ್ಯಾಚರಣೆಗೆ ಎರಡು ವಿಶೇಷ ತಂಡ ರಚಿಸಲಾಗಿತ್ತು. ಕೃತ್ಯ ನಡೆದ ಎರಡು ದಿನದಲ್ಲಿ ಆರೋಪಿಗಳ ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ವಡೋದರ ರೈಲು ನಿಲ್ದಾಣದಿಂದ ಯಶವಂತಪುರಕ್ಕೆ ಬಂದಿದ್ದ ಬಿಹಾರ ಮಧುಬನಿ ಜಿಲ್ಲೆ ಮನಮೋಹನ್ ಗ್ರಾಮದ ಅರುಣ್‌ಕುಮಾರ್ ಷಾ ಅವರ ಪುತ್ರ ಪ್ರವೀಣ್ ಕುಮಾರ (17) ಎಂಬುವನನ್ನು ಇವರು ಅಪಹರಿಸಿ ಕುಣಿಗಲ್ ಹೋಟೆಲ್‌ನ ಕೊಠಡಿಯಲ್ಲಿ ಕೂಡಿಹಾಕಿದ್ದರು’.

‘ಯುವಕನ ತಂದೆಗೆ ಕರೆ ಮಾಡಿ ₹2 ಲಕ್ಷ ಫೋನ್ ಪೇ ಮೂಲಕ ಸಂದಾಯ ಮಾಡಲು ಬೇಡಿಕೆಯಿಟ್ಟಿದ್ದರು. ಹೆದರಿದ್ದ ಅರುಣ್‌ಕುಮಾರ್ ಮೊದಲು ₹40 ಸಾವಿರ ವರ್ಗಾಯಿಸಿದ್ದರು. ಮತ್ತೆ ಕರೆ ಮಾಡಿ ₹ 60 ಸಾವಿರ ಹಾಕದಿದ್ದರೆ ಮಗನ ಕೈ ಕತ್ತರಿಸುವುದಾಗಿ ಎಚ್ಚರಿಸಿದ್ದರು. ಗಾಬರಿಗೊಂಡ ಅರುಣ್‌ಕುಮಾರ್ ಬೆಂಗಳೂರಿಗೆ ಬಂದು ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿ ಪೊಲಿಸರು ಕುಣಿಗಲ್‌ನಲ್ಲಿ ಹೋಟೆಲ್‌ನಲ್ಲಿ ಯುವಕ ರಕ್ಷಣೆ ಮಾಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫೇಸ್‌ಬುಕ್ ಮೂಲಕ ಪರಿಚಯ

‘ಪ್ರಭಾತ್ ಪೋಷಕರು ಬಿಹಾರ ಮೂಲದವರು. ಕಳೆದ 25 ವರ್ಷಗಳಿಂದ ನಗರದಲ್ಲಿ ನೆಲೆಸಿದ್ದಾರೆ. ಅಹಮದಾಬಾದ್‌ನ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಪ್ರವೀಣ್ ಹಾಗೂ ಪ್ರಭಾತ್ ಫೇಸ್‌ಬುಕ್ ಮೂಲಕ ಪರಿಚಯವಾಗಿದ್ದರು. ಇಬ್ಬರು ಮೊಬೈಲ್ ಸಂಖ್ಯೆ ಬದಲಾಯಿಸಿಕೊಂಡಿದ್ದರು. ಪ್ರವೀಣ್ ಹೋಟೆಲ್ ಕ್ಯಾಶಿಯರ್ ಆಗಿದ್ದರಿಂದ ಸುಲಿಗೆ ಮಾಡಲು ಪ್ರಭಾತ್ ಯೋಜನೆ ರೂಪಿಸಿದ್ದ. ಬೆಂಗಳೂರಿನಲ್ಲಿ ನಾನು ಹೋಟೆಲ್ ಹೊಸ ಆರಂಭಿಸುತ್ತಿದ್ದು ತಿಂಗಳಿಗೆ ₹ 13 ಸಾವಿರ ಸಂಬಳ ನೀಡುವುದಾಗಿ ಹೇಳಿ ನಗರಕ್ಕೆ ಕರೆಸಿಕೊಂಡಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಪಹರಣಕ್ಕೆ ಒಳಗಾದ ಯುವಕ ಡಿ.11ರಂದು ರಾತ್ರಿ 10ಕ್ಕೆ ನಗರಕ್ಕೆ ಬಂದಿದ್ದ. ಅಂದೇ ರಾತ್ರಿ ಆರೋಪಿ ಪ್ರಭಾತ್ ಕುಣಿಗಲ್‌ಗೆ ಕರೆದೊಯ್ದು ಅಲ್ಲಿಂದ ಮತ್ತಿಬ್ಬರು ಆರೋಪಿಗಳ ಸಹಾಯದಿಂದ ಅಪಹರಿಸಲಾಗಿತ್ತು. ಮೊದಲು ಯುವಕನ ಬಿಡುಗಡೆಗೆ ₹5 ಲಕ್ಷಕ್ಕೆ ಬೇಡಿಕೆ ಸಲ್ಲಿಸಿ ನಂತರ ₹ 2ಲಕ್ಷಕ್ಕೆ ಒಪ್ಪಿಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ನೈಜೀರಿಯಾ ಪ್ರಜೆ ಸಾವು: ಚಿಕ್ಕಬಾಣಾವರದ ದ್ವಾರಕಾನಗರದಲ್ಲಿ ವಾಸವಿದ್ದ ನೈಜೀರಿಯಾ ದೇಶದ ಪ್ರಜೆ ಅಲೋಶಿಯಸ್ ಓಬಿಸ್ (30) ಎಂಬಾತ ಕಟ್ಟಡದಿಂದ ಬಿದ್ದು ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ.

ನಗರದಲ್ಲಿ ಟೆಕ್ಸ್‌ಟೈಲ್ಸ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ಘಟನೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ.

ಮದ್ಯದ ಅಮಲಿನಲ್ಲಿ ಆಯತಪ್ಪಿ ಬಿದ್ದಿರಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಕೆಲಸಕ್ಕೆ ಬಂದ ಯುವತಿಯ ಅತ್ಯಾಚಾರ

ಬೆಂಗಳೂರು: ‘ಬುಕ್ ಮೈ ಬಾಯ್’ ಆ್ಯಪ್ ಮೂಲಕ ಮನೆಗೆಲಸಕ್ಕೆ ಯುವತಿಯನ್ನು ಕರೆಸಿಕೊಂಡು ಅತ್ಯಾಚಾರ ಎಸಗಿದ್ದ ಬಾಬು (47) ಎಂಬವನನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ. ನ.31ರಂದು ಕೂಡ್ಲು ಬಡಾವಣೆಯಲ್ಲಿ ಕೃತ್ಯ ನಡೆದಿತ್ತು.

‘ಮನೆಗೆಲಸಕ್ಕೆ ಆನ್‌ಲೈನ್ ಕಂಪನಿಯೊಂದು ಕಾರ್ಮಿಕರನ್ನು ಕಳುಹಿಸಿಕೊಡುತ್ತದೆ. ಆರೋಪಿ ಆ್ಯಪ್ ಮೂಲಕ ಸಂಪರ್ಕಿಸಿ 21 ವರ್ಷದ ಯುವತಿಯನ್ನು ಕೆಲಸಕ್ಕೆಂದು ಕರೆಸಿಕೊಂಡಿದ್ದ. ಬಾಬು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದ. ಒಡಿಶಾದ ಯುವತಿ ಮನೆ ಕೆಲಸಕ್ಕೆ ಬಂದಾಗ ಅತ್ಯಾಚಾರ ಎಸಗಿದ್ದ. ವಿಷಯ ಬಹಿರಂಗಗೊಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಕೊಠಡಿಯಲ್ಲಿ ಕೂಡಿಹಾಕಿದ್ದ. ಮೊಬೈಲ್ ಮೂಲಕ ಕಂಪನಿಯ ಪ್ರತಿನಿಧಿಗಳಿಗೆ ಸಂತ್ರಸ್ತ ಯುವತಿ ಸಂದೇಶ ಕಳುಹಿಸಿ ವಿಷಯ ತಿಳಿಸಿದ್ದರು’ ಎಂದು ಮೂಲಗಳು ಹೇಳಿವೆ.

‘ವಿಚಾರಣೆ ಮಾತ್ರ: ಬಂಧನ ಸುಳ್ಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯೊಬ್ಬರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದ ಪ್ರಕರಣ ಸುಳ್ಳು. ಅಣ್ಣನ ಮಗನ ಕುಟುಂಬದ ಜಗಳಕ್ಕೆ ಸಂಬಂಧಿಸಿ ಆಂಧ್ರಪ್ರದೇಶ ಪೊಲೀಸರು ವಿಚಾರಣೆಗೆ ಕರೆದಿದ್ದರು’ ಎಂದು ಅಟ್ಟಿಕಾ ಗೋಲ್ಡ್ ಕಂಪನಿ ಮಾಲೀಕ ಬಾಬು ಅಲಿಯಾಸ್ ಬೊಮ್ಮನಹಳ್ಳಿ ಬಾಬು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನನ್ನನ್ನು ಬಂಧಿಸಲಾಗಿತ್ತು ಎಂಬುದು ಸುಳ್ಳು. ಪ್ರಕರಣಕ್ಕೂ ಮತ್ತು ನನ್ನ ಕುಟುಂಬಕ್ಕೆ ಯಾವುದೇ ಸಂಬಂಧವಿಲ್ಲ. ಅದನ್ನು ಪೊಲೀಸರಿಗೂ ಹೇಳಿದ್ದೇನೆ. ಮಾಹಿತಿ ಪಡೆದು ವಾಪಸು ಬಿಟ್ಟು ಕಳುಹಿಸಿದ್ದಾರೆ’ ಎಂದು ಅವರು ಹೇಳಿದರು.

‘ಮಕ್ಕಳು ಹೊಸ ವಿಷಯಗಳಿಗೆ ತೆರೆದುಕೊಳ್ಳಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳಿಗೆ ಕಲಿಯುವ ಸಾಮರ್ಥ್ಯವಿದೆ. ಹೊಸ ವಿಷಯಗಳಿಗೆ ತೆರೆದುಕೊಂಡಲ್ಲಿ ಕಲಿಕೆ ಇನ್ನಷ್ಟು ಸುಧಾರಿಸಬಹುದು’ ಎಂದು ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಹೇಳಿದರು.

ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ (ಆರ್‌ಆರ್‌ಐ) ಅಮೃತ ಮಹೋತ್ಸವದ ಅಂಗವಾಗಿ ಭಾನುವಾರ ನಡೆದ ವಿಜ್ಞಾನ ಸ್ಪರ್ಧೆ ಮತ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿರುವ ಸಮಸ್ಯೆಗಳಿಗೆ ತಮ್ಮ ಬುದ್ಧಿ ಶಕ್ತಿಯನ್ನು ಬಳಸಿಕೊಂಡು ಪರಿಹಾರ ಕಲ್ಪಿಸಲು ಒತ್ತು ನೀಡಬೇಕು’ ಎಂದು ಕರೆ ನೀಡಿದರು.

ಸ್ಪರ್ಧೆಯಲ್ಲಿ ದೇಶದಾದ್ಯಂತ 3 ರಿಂದ 10ನೇ ತರಗತಿಯಲ್ಲಿ ಕಲಿಯುತ್ತಿರುವಸುಮಾರು 800 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅಂತಿಮ ಸುತ್ತಿಗೆ 87 ವಿದ್ಯಾರ್ಥಿಗಳು ಆಯ್ಕೆಯಾಗಿದ್ದರು.

ಕಿರಿಯರ ವಿಭಾಗದಲ್ಲಿ ವಿದ್ಯಾಶಿಲ್ಪ ಅಕಾಡೆಮಿ 4ನೇ ತರಗತಿಯ ವಿದ್ಯಾರ್ಥಿಗಳಾದ ಮಧುರಾ ಎಸ್.ಎಸ್., ರಿಡ್ಜ್ ವ್ಯಾಲಿ ಶಾಲೆಯ ಆದ್ಯಾ ಜಯೇಶ್, ಪಿತಾಂಪುರ ಬಾಲಭಾರತೀ ಪಬ್ಲಿಕ್ ಶಾಲೆಯ ಕಾರ್ತಿಕೇಯ ಜೈನ್‌ಗೆ ‘ರಾಮನ್ ಯಂಗ್ ಸೈನ್ಸ್ ಇನ್ನೋವೇಟರ್ ಅವಾರ್ಡ್’ ನೀಡಲಾಯಿತು.

ಮಧ್ಯಮ ವಿಭಾಗದಲ್ಲಿ ರಿಡ್ಜ್ ವ್ಯಾಲಿ ಶಾಲೆಯ ಸಾನ್ವಿ ಪಾಂಡೆ, ಮಂದರ್ ಮೋಹನ್ ಕೊಲ್ಹಟ್ಕರ್, ಪಿತಾಂಪುರ ಬಾಲಭಾರತೀ ಪಬ್ಲಿಕ್ ಶಾಲೆಯ ಮಾನಸಿಮಾರ್ ಸಿಂಗ್ ರಾವತ್, ಹಿರಿಯರ ವಿಭಾಗದಲ್ಲಿ ಐಐಎಸ್‌ಸಿ ಕೇಂದ್ರೀಯ ವಿದ್ಯಾಲಯದ 10ನೇ ತರಗತಿ ವಿದ್ಯಾರ್ಥಿನಿ ಮಾತಂಗಿ ಪಾರ್ಥಸಾರಥಿ, ಶ್ರೀವಿಜಯ ವಿದ್ಯಾಶ್ರಮ ಸಿನಿಯರ್ ಸೆಕೆಂಡರಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಸುರೇಂದ್ರ ಜಿ. ಮತ್ತು ಡಾ. ಕೆ.ಬಿ. ಹೆಡಗೇವಾರ್ ವಿದ್ಯಾಮಂದಿರದ 9ನೇ ತರಗತಿಯ ವಿದ್ಯಾರ್ಥಿ ವಿಘ್ನೇಶ್ ನವಸೊ ಶೆಟ್ಟಿಗೆ ಅವರಿಗೆ ಪ್ರಶಸ್ತಿ ನೀಡಲಾಯಿತು. ಆರ್‌ಆರ್‌ಐ ನಿರ್ದೇಶಕ ತರುಣ ಸೌರದೀಪ ಇದ್ದರು.

ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಭಾನುವಾರ ನಡೆದ ‘ವಿಜ್ಞಾನ ಸ್ಪರ್ಧೆ ಮತ್ತು ಪ್ರದರ್ಶನ’ದಲ್ಲಿ ರಾಮನ್ ಯಂಗ್ ಸೈನ್ಸ್ ಇನ್ನೋವೇಟರ್ ಅವಾರ್ಡ್ ಪಡೆದ ವಿದ್ಯಾರ್ಥಿಗಳು.



17 ಡಿವೈಎಸ್‌ಪಿ ವರ್ಗಾವಣೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಿವೈಎಸ್‌ಪಿಗಳನ್ನು ಕರ್ನಾಟಕ ಲೋಕಾಯುಕ್ತ ಸೇರಿದಂತೆ ಬೇರೆ ಬೇರೆ ಸ್ಥಳಗಳಿಗೆ ಸೋಮವಾರ ವರ್ಗಾವಣೆ ಮಾಡಲಾಗಿದೆ.

ಎ.ಆರ್.ಭರತ್‌ರೆಡ್ಡಿ, ಬಿ.ಉಮಾ ಶಂಕರ್, ಮಂಜುನಾಥ್ ಕೆ. ಗಂಗಲ್, ಎಂ.ಎಸ್.ಸುರೇಶ್ ರೆಡ್ಡಿ, ವಿಜಯ್ ಬಿರಾದಾರ್, ಸಿ.ಎಸ್.ಮಲ್ಲಿಕಾರ್ಜುನ್, ಹನುಮಂತರಾಯ್ ಶ್ರೀಮಂತ ರಾಯ, ಕೆ.ಟಿ.ಮ್ಯಾಥ್ಯೂ ಥಾಮಸ್, ಉಮೇಶ್ ಈಶ್ವರ್ ನಾಯಕ್, ಕೆ.ಸಿ.ಪ್ರಕಾಶ್, ಎಚ್.ಟಿ.ಸುನಿಲ್ ಕುಮಾರ್, ವಿ.ಸೂರ್ಯ ನಾರಾಯಣ್ ರಾವ್, ಬಿ.ಗಿರೀಶ್, ಎಸ್.ಸುಧೀರ್ ಹಾಗೂ ಪಿ. ವಿರೇಂದ್ರ ಕುಮಾರ್ ಅವರನ್ನು ಕರ್ನಾಟಕ ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲಾಗಿದೆ. ಮಲ್ಲೇಶ್ ದೊಡ್ಡಮನಿ ಅವರನ್ನು ಡಿಸಿಆರ್‌ಬಿಯಿಂದ ದಾವಣಗೆರೆ ನಗರ ಉಪ ವಿಭಾಗ ಹಾಗೂ ಬಿ.ಎಸ್.ಅಬ್ದುಲ್ ಖಾದರ್ ಅವರನ್ನು ಪ್ರೇಜರ್ ಟೌನ್‌ನಿಂದ (ಪುಲಿಕೇಶಿ ನಗರ) ಬೆಂಗಳೂರು ನಗರದ ಸಂಚಾರ ಮತ್ತು ರಸ್ತೆ ಸುರಕ್ಷತಾ ಕೋಶಕ್ಕೆ ವರ್ಗಾವಣೆ ಮಾಡಲಾಗಿದೆ.

₹ 15 ಕೋಟಿ ಹೇಳಿಕೆ; ಆಯೋಗಕ್ಕೆ ಎಎಪಿ ದೂರು

ಬೆಂಗಳೂರು: ಹುಣಸೂರು ಕ್ಷೇತ್ರದ ಉಪ ಚುನಾವಣೆಯಲ್ಲಿ ಎಚ್. ವಿಶ್ವನಾಥ್ ಅವರಿಗೆ ₹15 ಕೋಟಿ ನೀಡಿರುವುದಾಗಿ ಬಿಜೆಪಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ನೀಡಿದ ಹೇಳಿಕೆ ಕುರಿತು ತನಿಖೆ ನಡೆಸಲು ಆಮ್ ಆದ್ಮಿ ಪಕ್ಷ ಚುನಾವಣಾ ಆಯೋಗ, ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಿದೆ.

ಸುದ್ದಿಗಾರರ ಜತೆ ಮಾತನಾಡಿದ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ‘ಶ್ರೀನಿವಾಸ್ ಪ್ರಸಾದ್ ಸಹ ಚುನಾವಣೆಗೆ ಹಣ ಪಡೆದಿದ್ದಾರೆ ಎಂದು ಎಚ್. ವಿಶ್ವನಾಥ್ ತಿರುಗೇಟು ನೀಡಿದ್ದಾರೆ. ₹15 ಕೋಟಿ ಬಿಜೆಪಿ ಹೇಗೆ ಸಂಪಾದಿಸಿತು? ಅಭ್ಯರ್ಥಿ ಎಚ್. ವಿಶ್ವನಾಥ್ ಅವರಿಗೆ ಏಕೆ ವರ್ಗಾಯಿಸಲಾಯಿತು? ಖರ್ಚು ಮಾಡಿ ಉಳಿದ ₹10 ಕೋಟಿ ರೂಪಾಯಿ ಈಗ ಎಲ್ಲಿದೆ ಎನ್ನುವ ಕುರಿತು ಸೂಕ್ತ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

2019ರಲ್ಲಿದ್ದ ಚುನಾವಣಾ ಆಯೋಗದ ನೀತಿ ಸಂಹಿತೆ ಪ್ರಕಾರ ಅಭ್ಯರ್ಥಿ ₹ 28 ಲಕ್ಷ ಖರ್ಚು ಮಾಡಲು ಅವಕಾಶವಿತ್ತು. ಸಂಸದರೇ ಬಹಿರಂಗವಾಗಿ ತಿಳಿಸಿರುವಂತೆ ಬಿಜೆಪಿ ಅಭ್ಯರ್ಥಿ ವಿಶ್ವನಾಥ್ ₹5 ಕೋಟಿ ಖರ್ಚು ಮಾಡಿದ್ದಾರೆ. ಪ್ರಜಾಪ್ರಭುತ್ವಕ್ಕೆ ಮಾರಕವಾದ ಈ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಚುನಾವಣಾ ಆಯೋಗ ಕಠಿಣ ಕ್ರಮ ಕೈಗೊಳ್ಳಬೇಕು ಎಂದರು.

ಆಮ್ ಆದ್ಮಿ ಪಾ ರಾಜಕೀಯ ಚಟುವಟಿಕೆ ವಿಭಾಗದ ಅಧ್ಯಕ್ಷ ಚನ್ನಪ್ಪಗೌಡ ನೆಲ್ಲೂರು, ಬಿಜೆಪಿ ಅಭ್ಯರ್ಥಿಗೆ ₹15 ಕೋಟಿ ನೀಡಿದ್ದನ್ನು ಸಂಸದರೇ ಬಹಿರಂಗ ಪಡಿಸಿದ್ದಾರೆ. ದಾಳಿ ಯಾಕೆ ಮಾಡಿಲ್ಲ ಎಂದರು.

ಕಸ ಕಿಯೋಸ್ಕ್: ವಿಲೇವಾರಿಗೆ ಹೊಸ ದಾರಿ

ಬೆಳಿಗ್ಗೆ 6ರಿಂದ ರಾತ್ರಿ 8ರವರೆಗೆ ತ್ಯಾಜ್ಯ ಸಂಗ್ರಹ | **76 ಸ್ಥಳಗಳಲ್ಲಿ ಆರಂಭ** | **ಪ್ರತಿ ಕಿಯೋಸ್ಕ್‌ಗೆ ₹5 ಲಕ್ಷ ವೆಚ್ಚ** | **ಸರ್ಕಾರದ ಅನುಮೋದನೆ ಬಾಕಿ**

• ಆರ್. ಮಂಜುನಾಥ್

ಬಿಬಿಎಂಪಿ ಸ್ಥಾಪಿಸಲಿರುವ 'ಕಸ ಕಿಯೋಸ್ಕ್' ಮಾದರಿ

ಬಿಬಿಎಂಪಿ ಸ್ಥಾಪಿಸಲಿರುವ 'ಕಸ ಕಿಯೋಸ್ಕ್' ಒಳಾಂಗಣದ ಮಾದರಿ

ಬೆಂಗಳೂರು: ನಗರದ ರಸ್ತೆಗಳಲ್ಲಿ ಕಸ ಎಸೆಯುವುದು ಸಾಮಾನ್ಯವಾಗಿದೆ. ಮನೆಗೆ ಬಂದು ಕಸ ಸಂಗ್ರಹಿಸಿದರೂ ಜನರು ಅದಕ್ಕೆ ಸ್ಪಂದಿಸುತ್ತಿಲ್ಲ. ಬೆಳಿಗ್ಗೆ ಅಥವಾ ಸಂಜೆ ಮನೆಯ ಕಸವನ್ನು ಯಾವುದಾದರೂ ರಸ್ತೆ ಬದಿ, ಖಾಲಿ ನಿವೇಶನಗಳಲ್ಲಿ ಎಸೆದುಹೋಗುವವರು ಹಲವರು. ಇಂತಹ ತಾಣಗಳು ಇಲ್ಲದಂತೆ ಮಾಡಲು ನಗರದಲ್ಲಿ 'ಕಸ ಕಿಯೋಸ್ಕ್' ಆರಂಭವಾಗುತ್ತಿವೆ.

ಎಲ್ಲೆಂದರಲ್ಲಿ ತ್ಯಾಜ್ಯ ಹಾಕದಂತೆ ಮಾಡುವ ವ್ಯವಸ್ಥೆ 'ಕಸ ಕಿಯೋಸ್ಕ್'. ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುತಿಸಲಾದ ತ್ಯಾಜ್ಯದ 'ಬ್ಲ್ಯಾಕ್ ಸ್ಪಾಟ್'ಗಳ ನಿರ್ಮೂಲನೆಗೆ ದಿನದ ಯಾವುದೇ ಸಮಯದಲ್ಲಿ ಕಸ ನೀಡಲು ಜನರಿಗೆ ಅವಕಾಶ ಕಲ್ಪಿಸಲಿದೆ 'ಕಸ ಕಿಯೋಸ್ಕ್'.

ನಗರದ ಹಲವೆಡೆ ನಾಗರಿಕರು ರಸ್ತೆ ಬದಿಯೇ ಕಸ ಎಸೆಯುತ್ತಿದ್ದು, ಇಂತಹ ಸ್ಥಳಗಳನ್ನು 'ಬ್ಲ್ಯಾಕ್ ಸ್ಪಾಟ್' ಎಂದು ಗುರುತಿಸಲಾಗಿದೆ. ಹಲವೆಡೆ ಇಂಥ ಸ್ಥಳಗಳನ್ನು ಗುಡಿಸಿ, ಸಾರಿಸಿ, ರಂಗೋಲಿ ಬಿಡಿಸಿ, ಕಸ ಹಾಕಬೇಡಿ ಎಂದು ಪೌರಕಾರ್ಮಿಕರು ಕೋರುತ್ತಿದ್ದಾರೆ. ಇದು ಅಭಿಯಾನದಂತೆ ನಡೆಯುತ್ತಿದೆ. ಕೆಲವೆಡೆ ದೇವರ ಚಿತ್ರಗಳನ್ನೂ ಅಳವಡಿಸಲಾಗಿದೆ. ಆದರೆ ರಸ್ತೆಯಲ್ಲಿ ಕಸ ಎಸೆಯುವುದು ತಪ್ಪಿಲ್ಲ. ಇದನ್ನು ತಪ್ಪಿಸಲು ಪ್ರಮುಖ 76 ಸ್ಥಳಗಳಲ್ಲಿ 'ಕಸ ಕಿಯೋಸ್ಕ್' ಸ್ಥಾಪಿಸಲಾಗುತ್ತಿದೆ.

3x2 ಮೀಟರ್ ಅಳತೆ ಜಾಗದಲ್ಲಿ ಆಯತಾಕಾರದಲ್ಲಿ ಪೋಲ್‌ಗಳಿಂದ 'ಸೂಪರ್ ಸ್ಟ್ರಕ್ಚರ್'ನಲ್ಲಿ 'ಕಸ ಕಿಯೋಸ್ಕ್' ನಿರ್ಮಿಸಲಾಗುತ್ತದೆ. ತಲಾ 200 ಲೀಟರ್ ಸಾಮರ್ಥ್ಯದ ಭಿನ್ನ ಬಣ್ಣಗಳ ಆರು ಡಬ್ಬಗಳನ್ನು ಇರಿಸಲಾಗುತ್ತದೆ. ಒಣ, ಹಸಿ ಸೇರಿ ನಾಲ್ಕು ರೀತಿಯ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತದೆ. ಇದರ ನಿರ್ವಹಣೆಗೆ ಒಬ್ಬ ಸಿಬ್ಬಂದಿ ಇರುತ್ತಾರೆ. ಪ್ರತಿ ಘಟಕದ ವೆಚ್ಚ ತಲಾ ₹5 ಲಕ್ಷ.

'ಶುಭ್ರ ಬೆಂಗಳೂರು' ಅನುದಾನದಲ್ಲಿ 76 ಘಟಕಗಳ ಸ್ಥಾಪನೆಗೆ ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ಟೆಂಡರ್ ಕರೆದು, ಅಂತಿಮಗೊಳಿಸಿ ಎರಡು ತಿಂಗಳ ಹಿಂದೆಯೇ ಅನುಮೋದನೆಗೆ ಸರ್ಕಾರಕ್ಕೆ ಕಳುಹಿಸಲಾಗಿದೆ. ಇನ್ನು ಅನುಮೋದನೆ ಸಿಗಬೇಕಿದೆ.

'ಬಿಬಿಎಂಪಿ ಉದ್ಯಾನ, ಕಚೇರಿ, ವಾರ್ಡ್ ಕಚೇರಿ ಇತ್ಯಾದಿ ಪ್ರದೇಶ ಸೇರಿ ಎಲ್ಲೆಲ್ಲಿ ಸ್ಥಳಾವಕಾಶ ಇದೆಯೋ ಅಲ್ಲಿ 'ಕಸ ಕಿಯೋಸ್ಕ್' ಸ್ಥಾಪಿಸಲಾಗುತ್ತದೆ. ಇಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಆಟೊಗಳಲ್ಲಿ ಒಯ್ಯಲಾಗುತ್ತದೆ. 'ಕಸ ಕಿಯೋಸ್ಕ್' ಪ್ರತಿದಿನ ಬೆಳಿಗ್ಗೆ 6ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸಲಿದೆ. ಜನರು ರಸ್ತೆಯಲ್ಲಿ ಕಸ ಎಸೆಯಬಾರದು ಎಂಬ ಉದ್ದೇಶದಿಂದ 14 ತಾಸು 'ಕಸ ಕಿಯೋಸ್ಕ್' ತ್ಯಾಜ್ಯ ಸಂಗ್ರಹಿಸಲಿದೆ' ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ತಿಳಿಸಿದರು.

ಸಾಹಸ್ ಮಾದರಿ: ಸಾಹಸ್ ಎಂಬ ಎನ್‌ಜಿಒ ತನ್ನದೇ ವೆಚ್ಚದಲ್ಲಿ ನಗರದಲ್ಲಿ ಎರಡು ಪ್ರದೇಶಗಳಲ್ಲಿ ಕಸ ಸಂಗ್ರಹಿಸುವ ಕಿಯೋಸ್ಕ್‌ಗಳನ್ನು ಸ್ಥಾಪಿಸಿದೆ. ಈ ಕೇಂದ್ರಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇವೇ ಬಿಬಿಎಂಪಿಗೆ ಮಾದರಿಯಾಗಿವೆ. ಹೀಗಾಗಿ 'ಶುಭ್ರ ಬೆಂಗಳೂರು' ಅನುದಾನದಲ್ಲಿ 'ಕಸ ಕಿಯೋಸ್ಕ್' ಸ್ಥಾಪನೆಗೆ ಮುಂದಾಗಿದೆ.

ಬಿಸಾಡಬೇಡಿ, ಕಿಯೋಸ್ಕ್‌ಗೆ ಕೊಡಿ!

'ಬೆಳಿಗ್ಗೆಯೇ ಕೆಲಸಕ್ಕೆ ಹೋಗಿರುತ್ತೇವೆ. ಕಸ ಕೊಂಡೊಯ್ಯುವವರು ಬಂದಾಗ ನಾವು ಮನೆಯಲ್ಲಿ ಇರುವುದಿಲ್ಲ. ಹೊರಗೆ ಇಟ್ಟರೆ ನಾಯಿಗಳು ಗಲೀಜು ಮಾಡುತ್ತವೆ. ಮನೆಯಲ್ಲಿ ಇಟ್ಟರೆ ವಾಸನೆ. ಹೀಗಾಗಿ ಅನಿವಾರ್ಯವಾಗಿ ಆಗಾಗ ರಸ್ತೆಯಲ್ಲಿ, ಅಲ್ಲಲ್ಲಿ ಕಸ ಬಿಸಾಡುವುದಾಗಿ ಹಲವು ನಾಗರಿಕರು ಸಬೂಬು ಹೇಳುತ್ತಾರೆ. ಈಗ ಅದಕ್ಕೆ ಅವಕಾಶವಿಲ್ಲ. ಕಿಯೋಸ್ಕ್ ಬೆಳಿಗ್ಗೆ ಆರು ಗಂಟೆಗೇ ಪ್ರಾರಂಭವಾಗಲಿದೆ. ನಾಗರಿಕರು ಕಸ ಬಿಸಾಡುವ ಬದಲು, ಕಿಯೋಸ್ಕ್‌ಗೆ ನೀಡಲಿ' ಎಂದು ಘನತ್ಯಾಜ್ಯ ವಿಭಾಗದ ಜಂಟಿ ಆಯುಕ್ತ ಪರಶುರಾಮ್ ಹೇಳಿದರು.

ನಾಗರಿಕರಿಗೆ ವಿಶೇಷ ಸೌಲಭ್ಯ!

'ನಗರದಲ್ಲಿ ನಾಗರಿಕರು ಕಸವನ್ನು ಬಿಸಾಡುವ ಹಲವು 'ಬ್ಲ್ಯಾಕ್ ಸ್ಪಾಟ್'ಗಳಿವೆ. ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಈ ಸೌಲಭ್ಯ ಒದಗಿಸಲಾಗುತ್ತಿದ್ದು, ಸರ್ಕಾರದಿಂದ ಟೆಂಡರ್‌ಗೆ ಅನುಮೋದನೆ ಬಂದ ಕೂಡಲೇ ಪ್ರಾರಂಭಿಸಲಾಗುತ್ತದೆ. ನಾಗರಿಕರು ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ಎಲ್ಲೆಂದರಲ್ಲಿ ಕಸ ಬಿಸಾಡಬಾರದು ಎಂದು ಸಾಕಷ್ಟು ಅರಿವು ಮೂಡಿಸಲಾಗುತ್ತಿದೆ' ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ತಿಳಿಸಿದರು.

CONNECT ಕ್ಲಾಸಿಫೈಡ್ಸ್

Grand Flea Market in Collaboration with Chittara Presents
ದ ಸೌಕ್ (ಮಾರ್ಕೆಟ್)
THE SOUQ (MARKET)
16th, Fri to 25th, Sun December 2022
11 AM to 7 PM
10 Days Exhibition Entry Free
Christmas Shopping Carnival
Art, Craft, Handlooms & Lifestyle Exhibition
Karnataka Chitrakala Parishath
Kumara Krupa Road, Bengaluru
Open on All Sunday's | with Covid19 Safety Standards
For Details Contact : 6364685716 / 9036658774 | Direct from The Artisans
Visit and experience a rare contemporary form of Arts & Crafts, Clothing, Home Decor, Furniture, Handicrafts, Traditional Apparels, Women's Wear, Jewellery, Sarees, Men's Wear, Kids Wear, Toys, Organic Product, Fashion Accessories & plenty more products direct from the makers from all across India.

The Djembe Show Live
Date: 24th Dec 2022
5 PM to 6.30 PM

The Fire Show Live
Date: 25th Dec 2022
5:30 PM to 6:30 PM

100+ Shopping Stalls | Live Performance & Much More | Entry Free!

ಅಭಿನಂದನೆ

ಮೋನಿಷ .ಎ
(2 ಬಾರಿ ಚಿನ್ನದ ಪದಕ ಪಡೆದಿರುತ್ತಾರೆ)
ಇವರು ಆರ್ಕಿಡ್ ಇಂಟರ್‌ನ್ಯಾಷನಲ್ ಶಾಲೆ, ಸಹಕಾರನಗರ, ಬೆಂಗಳೂರು ಇಲ್ಲಿ 5ನೇ ತರಗತಿ ವ್ಯಾಸಾಂಗ ಮಾಡುತ್ತಿದ್ದು, ಇತ್ತೀಚೆಗೆ ಕರ್ನಾಟಕದ ಬೆಂಗಳೂರಿನಲ್ಲಿ ನಡೆದ 60ನೇ ರಾಷ್ಟೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ 2 ಚಿನ್ನ ಹಾಗೂ 1 ಕಂಚಿನ ಪದಕ ಪಡೆದಿರುತ್ತಾರೆ.
ಇವರು ಯಲಹಂಕದ ಬೃಂದಾವನ್ ರೋಲರ್ ಸ್ಕೇಟಿಂಗ್ ಕ್ಲಬ್ ಕೋಚರ್‌ಗಳಾದ ಮಿ. ನಾಗೇಶ್ (ಮುಖ್ಯ ತರಬೇತುದಾರರು) ಮತ್ತು ಮಧು ಸಿ.ಎಂ (ಅತ್ಯುತ್ತಮ ತರಬೇತುದಾರರು) ರವರ ಹತ್ತಿರ ತರಬೇತಿ ಪಡೆದಿರುತ್ತಾರೆ.

VOKKALIGARA SANGHA DENTAL COLLEGE & HOSPITAL
K.R. ROAD, V.V. PURAM, BANGALORE-560 004.
Email: vsdchbangalore@gmail.com
Website: www.vsdentalcollege.edu.in
Contact: 080-26618066 / 98452 82113
INSTITUTIONAL COUNSELLING FOR AVAILABLE BDS SEATS- 2022-23
Counselling commenses on : 20/12/2022
Last date of Application : 21/12/2022 upto 4.00pm
Venue: : Principal Chamber
Eligibility: As per the list published by KEA, eligible Candidates should submit the applications either by E-mail (vsdchbangalore@gmail.com)/ or in person to the Principal Office, V.S. DENTAL COLLEGE & HOSPITAL, K.R. ROAD, V.V. PURAM, BANGALORE-04.
CHAIRMAN GOVERNING COUNCIL VSDCH
PRINCIPAL VSDCH

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Honda

REQUIRED SALVAGE quote for Honda City S MT 2016 model, KA04MR 3254 without RC. Contact 9844036218

2 / 3 Wheelers Selling

Mobikes

ACCIDENT DAMAGED KL-58 AE-3649 Motorcycle Kawasaki Ninja 300, 2021 Sale. Vehicle at Rideventure, Jayanagar, Bangalore. Contact: 9845855022

JOB OPPORTUNITIES

General

WANTED: YOUNG experienced ELECTRICAL DIPLOMA with good 6-8 years Solar installation experience design estimation supervision for DRC CONGO on 2-year contract, Very attractive Salary and Perks. Send resume to- ssel3415@gmail.com

Marketing & Sales

REQUIRED MARKETING Executives (Female/ Male) for an Advertising Agency, Fluency in English, having 2 wheeler, Walk-in- Interview on December 21 & 22nd between 11:00 am- 02:00 pm, Adverto Advertising Pvt Ltd., No. 97, RV Road, Basavanagudi, Near Lalbagh Metro Stn, Ph: 26575020, email: advertoalert@gmail.com

PERSONAL

Change of Name

I, R. Prasanna Pandiyan S/o. Rajendran Pandian, Residing at Lowan Villa, 2nd cross, Gangotri road, near Govt. College, K.R.Puram, Bangalore North, Bangalore-560036 have changed my Daughter's name from IKSHA JULIET PRASANNA to IKSHA PRASANNA vide affidavit dated 28/11/2022 before notary K.P. Sumangala, Bengaluru.

I, DAKSHAYINI, resident of No. 370/1, Flat No. 401 Maitri Blossom Apartment 9th Main, BDA Link Road Dwarakanagar, Bengaluru-560098, have changed my name to DAKSHAYINI JATANGASETTY MUDDAPPASETTY vide affidavit dated 19.12.2022 sworn to before Advocate and Notary M.K. Devaki Bangalore.

I, SOSAMMA JOHN, W/o John George resident of No-108 Lemon Tree Apartments, St. Peters Road, Mariyanapalaya, Kempapura, Bengaluru-560024 have changed my name to SHEELA JOHN, vide affidavit dated:19-12-2022 before Notary SIVAKUMARA M N, Bengaluru.

I, LAKSHIMI W/o Venkataramaiah Agrd 68 years, residing at No 11/D, 4th Cross, Marappa Thota, J.C.Nagar,Bangalore-560006 have changed my nameto LAKSHMI.V, vide affidavit dated:17-12-2022 before Notary G.B.Turamari, Bangalore,

I, VENKATARAMAIAH S/o Thimmaiah Agrd 74 years residing at No 11/D, 4th Cross, Marappa Thota, J.C.Nagar, Bangalore-560006, havechanged my name to THIMMAIAH VENKATARAMAIAH vide affidavit dated: 17-12-2022 before Notary G.B.Turamari, Bangalore,

I, RAGHAVENDRA S/o. Lingappa Shetty B, Residing at #851, Ground Floor, 3rd Main,E Block,2nd Stage Rajajinagar, Bengaluru-560010 have changed my name to RAGHAVENDRA BHANDARI vide affidavit dated 01.09.2022 before notary: Aruna.V, Bengaluru

I,VINAYAKA MURTHY S R/@ #173, Pearless colony, near Garden city college, Virgonagar Post, Bhattarahalli, Bengaluru-560049 have changed my name to Vinayaga Murthy S. Vide affidavit dated: 19/12/2022 before notary J. Anand kumar Bangalore.

I, MEGHANA, residing at Bengaluru-64, has changed my name as MEGHANA SHIVARAJU, vide affidavit dated 19/12/2022 before Notary P.C.Ramaiah, Bengaluru

Lost

LOST
I, Karthi R. have lost my Mortgaged Property document Site No. 94, Assessment No. 35, situated at Laggere Grama, Yeshwanthpur Hobli, Bangalore North, while shifting the house. Lost Report No. 6401553/2022.
Finders please contact: 99866 69202.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Blr - 34. Ph. 080-25534194
TENDER NOTICE
Quotations are invited from reputed Agencies to Provide following :-
Conducting Value Added Courses for the year 2022-23 in RJS First Grade College
For more details visit: www.reddyjanasangha.org
Quotations should be addressed to "The General Secretary" at the above address within 7 days.
General Secretary

DH DECCAN HERALD | ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಡಿಜಿ ಯಾತ್ರಾದ ಅಸಮರ್ಪಕ ನಿರ್ವಹಣೆಗೆ ಆಕ್ರೋಶ

ವಿಮಾನ ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ವಿಮಾನ ನಿಲ್ದಾಣದ ನಿರ್ಗಮನ ದ್ವಾರ

ಮುಖ್ಯಾಂಶಗಳು
- ನಿಲ್ದಾಣದಲ್ಲಿ ಹೆಚ್ಚಿದ ಪ್ರಯಾಣಿಕರು
- ಭುಗಿಲೆದ್ದ ಪ್ರಯಾಣಿಕರ ಆಕ್ರೋಶ
- ಶೌಚಾಲಯದಲ್ಲೂ ಸ್ಥಳಾವಕಾಶ ಇಲ್ಲದ್ದಕ್ಕೆ ಬೇಸರ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆ ತ್ವರಿತಗೊಳಿಸಲು ಡಿಜಿ ಯಾತ್ರಾ (ಮುಖಚರ್ಯೆ ಗುರುತಿಸುವಿಕೆ) ವ್ಯವಸ್ಥೆಯನ್ನು ಹೊಸದಾಗಿ ಅಳವಡಿಸಲಾಗಿದ್ದು, ಅಸಮರ್ಪಕ ಕಾರ್ಯ ನಿರ್ವಹಣೆಯಿಂದಾಗಿ ಪ್ರಯಾಣಿಕರು ಸೋಮವಾರ ಪರದಾಡುವಂತಾಯಿತು.

ಉದ್ದದ ಸಾಲಿನಲ್ಲಿ ಭದ್ರತಾ ತಪಾಸಣೆಗೆ ನಿಂತಿದ್ದ ಪ್ರಯಾಣಿಕರು ಬೆಂಗಳೂರು ವಿಮಾನ ನಿಲ್ದಾಣದ ನಿರ್ವಹಣೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಹಲವು ಪ್ರಯಾಣಿಕರು ಸಾಮಾಜಿಕ ಜಾಲತಾಣದಲ್ಲಿ ಬೇಸರ ಹೊರಹಾಕಿದ್ದು, ಸಾಲು ಸಾಲು ಟ್ವೀಟ್ ಮಾಡಿ ವಿಮಾನ ನಿಲ್ದಾಣದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸೇವೆ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿಲ್ಲ. ಆದಾಗ್ಯೂ, ಡಿಜಿ ಯಾತ್ರಾ ಆ್ಯಪ್ ಬಗ್ಗೆ ಸುಳ್ಳು ಸುದ್ದಿ ನೀಡಲಾಗುತ್ತಿದೆ ಎಂದು ಪ್ರಯಾಣಿಕರು ಏರು ಧ್ವನಿಯಲ್ಲಿ ಪ್ರಶ್ನಿಸಿದರು.

ಬೆಂಗಳೂರಿನ ತೇಜಸ್ ಎಂಬುವರು ಟ್ವೀಟ್ ಮಾಡಿ, 'ಸೋಮವಾರ ಬೆಳಿಗ್ಗೆ ಇಷ್ಟು ಉದ್ದದ ಸಾಲು ನಿರ್ಮಾಣವಾಗಿದೆ. ಡಿಜಿ ಯಾತ್ರಾ ಆ್ಯಪ್ ಇನ್ನೂ ಜಾರಿಯಾಗದೆ ಅದರ ಅಬ್ಬರದ ಪ್ರಚಾರ ಏಕೆ' ಎಂದು ಕೇಳಿದ್ದಾರೆ.

'ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಇನ್ನೂ ಡಿಜಿ ಯಾತ್ರಾ ಆರಂಭವೇ ಆಗಿಲ್ಲ. ಆದರೂ ಕಾರ್ಯ ನಿರ್ವಹಿಸುತ್ತಿದೆ ಎಂದು ಏಕೆ ಸುದ್ದಿ ಹರಡಲಾಗುತ್ತಿದೆ' ಎಂದು ಪ್ರಯಾಣಿಕ ಇಶಾನ್ ಶರ್ಮಾ ಎಂಬುವರು ಪ್ರಶ್ನಿಸಿದ್ದಾರೆ.

'ಭದ್ರತಾ ತಪಾಸಣೆಯಲ್ಲಿ ಸರತಿ ಸಾಲು ಸೃಷ್ಟಿಯಾಗಿದೆ. ಶೌಚಾಲಯಗಳಲ್ಲೂ ಭಾರಿ ದಟ್ಟಣೆ ಇದ್ದು, ಬಳಕೆ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಜನಸಂದಣಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ರೋಷನ್ ಎಂಬುವರು ಮನವಿ ಮಾಡಿದ್ದಾರೆ.

ಪ್ರಯಾಣಿಕರ ಸಮಸ್ಯೆಗಳಿಗೆ ಉತ್ತರಿಸಿರುವ ಬೆಂಗಳೂರು ವಿಮಾನ ನಿಲ್ದಾಣ, 'ಶೀಘ್ರ ಸಮಸ್ಯೆಗಳನ್ನು ಪರಿಹರಿಸಲಾಗುವುದು. ಪ್ರಯಾಣಿಕರ ಸಹಾಯಕ್ಕೆ ಯತ್ನಿಸಲಾಗುತ್ತಿದೆ. ಡಿಜಿ ಯಾತ್ರಾ ಆ್ಯಪ್ ಬಳಕೆಯಾಗದೆ ಹಿಂದಿನಂತೆಯೇ ವ್ಯವಸ್ಥೆ ಇರಲಿದೆ' ಎಂದು ತಿಳಿಸಿದೆ.

ಜಿಎಸ್‌ಟಿ ಪರಿಹಾರ ವಿಸ್ತರಣೆ ಇಲ್ಲ: ಕೇಂದ್ರ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಕಾರಣದಿಂದ ಆಗುವ ವರಮಾನ ನಷ್ಟಕ್ಕೆ ಪರಿಹಾರ ನೀಡುವ ವ್ಯವಸ್ಥೆ ಮುಂದುವರಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಪುನರುಚ್ಚರಿಸಿದೆ.

ಲೋಕಸಭೆಯಲ್ಲಿ ಸೋಮವಾರ ಈ ಸಂಬಂಧ ಲಿಖಿತ ಉತ್ತರ ನೀಡಿರುವ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ, 'ಜಿಎಸ್‌ಟಿ ವ್ಯವಸ್ಥೆ ಜಾರಿಯಾದ ಬಳಿಕ 5 ವರ್ಷಗಳ ಅವಧಿಗಷ್ಟೇ ಪರಿಹಾರ ಕೊಡಲು ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಿತ್ತು' ಎಂದು ಸ್ಪಷ್ಟಪಡಿಸಿದ್ದಾರೆ.

'ಸಂವಿಧಾನ ಕಾಯ್ದೆ 2016 (101ನೇ ತಿದ್ದುಪಡಿ) ಸೆಕ್ಷನ್ 18 ಹಾಗೂ ಜಿಎಸ್‌ಟಿ ಮಂಡಳಿ ಶಿಫಾರಸಿನ ಪ್ರಕಾರ, ಕಾಯ್ದೆ ಜಾರಿಯಾದ ಬಳಿಕ ಐದು ವರ್ಷವಷ್ಟೇ ರಾಜ್ಯಗಳಿಗೆ ಪರಿಹಾರ ನೀಡಲು ಅವಕಾಶ ಇದೆ' ಎಂದು ಹೇಳಿದ್ದಾರೆ.

'ಬೆಡಗು ಬಿನ್ನಾಣ ಪ್ರದರ್ಶನಕ್ಕೆ ಸ್ಮೃತಿ ಅಮೇಠಿಗೆ ಬರುತ್ತಾರೆ'

ಸೋನ್‌ಭದ್ರಾ (ಪಿಟಿಐ): ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ತಮ್ಮ ಬೆಡಗು ಬಿನ್ನಾಣ ಪ್ರದರ್ಶಿಸಲು ಮಾತ್ರ ಅಮೇಠಿ ಕ್ಷೇತ್ರಕ್ಕೆ ಬರುತ್ತಾರೆ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ನಾಯಕ ಅಜಯ್ ರಾಯ್ ಅವರು ಸೋಮವಾರ ಹೇಳಿದರು.

2024ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರು ಅಮೇಠಿಯಿಂದ ಸ್ಪರ್ಧಿಸುತ್ತಾರೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಅಮೇಠಿ, ಗಾಂಧಿ ಕುಟುಂಬದ ಕ್ಷೇತ್ರ. ರಾಹುಲ್ ಗಾಂಧಿ ಇಲ್ಲಿಂದ ಸಂಸದರಾಗಿ ಆಯ್ಕೆಯಾಗಿದ್ದರು. ರಾಜೀವ್ ಗಾಂಧಿ ಮತ್ತು ಸಂಜಯ್ ಗಾಂಧಿ ಅವರು ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಅಮೇಠಿಯನ್ನು ಪ್ರತಿನಿಧಿಸುತ್ತಿದ್ದಾರೆ. ಆದರೆ ಇಲ್ಲಿನ ಬಹುತೇಕ ಕಾರ್ಖಾನೆಗಳು ಮುಚ್ಚುವ ಹಂತದಲ್ಲಿವೆ. ಸ್ಮೃತಿ ಇರಾನಿ ತಮ್ಮ ಬೆಡಗು ಬಿನ್ನಾಣವನ್ನು ಪ್ರದರ್ಶಿಸಲು ಮಾತ್ರ ಅಮೇಠಿಗೆ ಬಂದು ಹೋಗುತ್ತಾರೆ' ಎಂದು ಹೇಳಿದರು.

ಅಜಯ್ ರಾಯ್ ಅವರ ಹೇಳಿಕೆಯನ್ನು ಬಿಜೆಪಿ ತೀಕ್ಷ್ಣವಾಗಿ ಖಂಡಿಸಿದೆ. ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಸ್ಮೃತಿ ಇರಾನಿ, 'ನೀವು ಮತ್ತು ನಿಮ್ಮ ಅಮ್ಮ (ಸೋನಿಯಾ) ಹೊಸದಾಗಿ ಸ್ತ್ರೀದ್ವೇಷಿ ಗೂಂಡಾ ಭಾಷಣಕಾರನನ್ನು ಪಡೆಯುವ ಅಗತ್ಯವಿದೆ' ಎಂದು ರಾಹುಲ್ ಗಾಂಧಿಯನ್ನು ಟೀಕಿಸಿದ್ದಾರೆ.

ಬಿಹಾರ: ಉದ್ಘಾಟನೆಗೂ ಮುನ್ನ ಕುಸಿದ ಸೇತುವೆ

ಪಟ್ನಾ: ಬಿಹಾರದ ಬೆಗುಸರಾಯ್ ಜಿಲ್ಲೆಯ ಬುರ್ಹಿ ಗಂಡಕ್ ನದಿಗೆ ಅಡ್ಡಲಾಗಿ ₹13 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದ ಸೇತುವೆಯು ಭಾನುವಾರ ಭಾಗಶಃ ಕುಸಿದು ಬಿದ್ದಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ ಎಂದೂ ಅಧಿಕಾರಿಗಳು ತಿಳಿಸಿರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸೇತುವೆ ಭಾಗಶಃ ಕುಸಿದಿರುವುದು —ಪಿಟಿಐ ಚಿತ್ರ

ಸಂಪರ್ಕ ರಸ್ತೆ ಇಲ್ಲದ ಕಾರಣ ಐದು ವರ್ಷಗಳಷ್ಟು ಹಳೆಯದಾದ ಈ ಸೇತುವೆಯನ್ನು ಇನ್ನೂ ಜನರ ಬಳಕೆಗೆ ಮುಕ್ತಗೊಳಿಸಿರಲಿಲ್ಲ. ಶೀಘ್ರ ಇದು ಉದ್ಘಾಟನೆಗೊಳ್ಳುವುದರಲ್ಲಿತ್ತು ಎಂದು ಮೂಲಗಳು ತಿಳಿಸಿರುವುದಾಗಿ ಹೇಳಿದೆ. ಸೇತುವೆ ಕುಸಿದಿರುವುದರಿಂದ ಈ ಪ್ರದೇಶದ 20 ಸಾವಿರ ಮಂದಿಗೆ ತೊಂದರೆಯಾಗಲಿದೆ. 3 ದಿನಗಳ ಹಿಂದೆ 206 ಮೀ. ಉದ್ದದ ಈ ಸೇತುವೆಯಲ್ಲಿ ಬಿರುಕು ಕಾಣಿಸಿಕೊಂಡಿತ್ತು ಎಂದೂ ತಿಳಿಸಿದೆ.

ಲೋಕಸಭೆಯಲ್ಲಿ ಸಚಿವ ಅಶ್ವಿನ್ ಕುಮಾರ್ ಚೌಬೆ ಉತ್ತರ

'ರಾಜ್ಯದಲ್ಲಿ ವಿದ್ಯುತ್ ತಗುಲಿ 43 ಆನೆ ಸಾವು'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ ವಿದ್ಯುತ್ ತಗುಲಿ 43 ಆನೆಗಳು ಮೃತಪಟ್ಟಿವೆ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆಯ ರಾಜ್ಯ ಸಚಿವ ಅಶ್ವಿನ್ ಕುಮಾರ್ ಚೌಬೆ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಸೋಮವಾರ ಲಿಖಿತ ಉತ್ತರ ನೀಡಿರುವ ಸಚಿವರು, 'ಈ ಅವಧಿಯಲ್ಲಿ ರೈಲು ಡಿಕ್ಕಿ ಹೊಡೆದು 5 ಆನೆಗಳು ಮೃತಪಟ್ಟಿವೆ. ವಿಷ ಪ್ರಾಶನದಿಂದ ಒಂದು ಆನೆ ಸತ್ತಿದೆ' ಎಂದಿದ್ದಾರೆ.

'ಆನೆಗಳು ಹಾಗೂ ಅವುಗಳ ವಾಸಸ್ಥಾನ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರವು 'ಆನೆ ಯೋಜನೆ'ಯಡಿ ರಾಜ್ಯ ಸರ್ಕಾರಗಳಿಗೆ ಆರ್ಥಿಕ ಹಾಗೂ ತಾಂತ್ರಿಕ ನೆರವು ನೀಡುತ್ತಿದೆ. ವಿದ್ಯುತ್ ತಗುಲಿ ಆನೆಗಳು ಮೃತಪಡುವುದನ್ನು ತಪ್ಪಿಸಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳು ಹಾಗೂ ವಿದ್ಯುತ್ ಪ್ರಸರಣಾ ನಿಗಮಗಳಿಗೆ ಸೂಚಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

ವಿದ್ಯುತ್ ತಗುಲಿ ಆನೆಗಳ ಸಾವು

2017–18	10
2018–19	9
2019–20	8
2020–21	9
2021–22	7



ಕಾರ್ಯಪಡೆ ಸ್ಥಾಪನೆ: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಮಾನವ–ಪ್ರಾಣಿ ಸಂಘರ್ಷ ತಡೆಗಟ್ಟಲು ಕರ್ನಾಟಕ ಸರ್ಕಾರ ತಜ್ಞರ ನೇತೃತ್ವದ ಕಾರ್ಯಪಡೆ ರಚಿಸಿದೆ' ಎಂದು ತಿಳಿಸಿದ್ದಾರೆ.

'ಮಾನವ–ಪ್ರಾಣಿ ಸಂಘರ್ಷ ತಡೆಗಟ್ಟಲು ರಾಜ್ಯ ಮಟ್ಟದಲ್ಲಿ ಸಮನ್ವಯ ಸಮಿತಿ ರಚಿಸುವಂತೆ ಆಯಾ ರಾಜ್ಯ ಸರ್ಕಾರಗಳಿಗೆ ಈ ವರ್ಷದ ಜೂನ್‌ನಲ್ಲಿ ಸೂಚಿಸಲಾಗಿದೆ. ಸಂಘರ್ಷ ತಡೆಗಟ್ಟಲು ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಆನೆಗಳು ಸಾಗುವ ಹಾದಿಯ ಬಗ್ಗೆ ಸಮಗ್ರವಾಗಿ ತಿಳಿದುಕೊಳ್ಳಲು ವೈಜ್ಞಾನಿಕ ಅಧ್ಯಯನ ನಡೆಸಲು ಸೂಚಿಸಲಾಗಿದೆ' ಎಂದರು.

‘ಫ್ರೀಡಂ ಪಾರ್ಕ್’ನಲ್ಲಿ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಅನಿರ್ದಿಷ್ಟಾವಧಿ ಧರಣಿ

ಒಪಿಎಸ್ ಮರು ಜಾರಿ: ಪ್ರತಿಭಟನೆ ತೀವ್ರ

ಪ್ರಜಾವಾಣಿ ವಾರ್ತೆ

ಎನ್‌ಪಿಎಸ್ (ಹೊಸ ಪಿಂಚಣಿ ಯೋಜನೆ) ರದ್ದುಗೊಳಿಸಿ ಒಪಿಎಸ್ (ಹಳೆಯ ಪಿಂಚಣಿ ಯೋಜನೆ) ಜಾರಿಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸೋಮವಾರ ‘ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ’ದ ನೇತೃತ್ವದಲ್ಲಿ ಸಾವಿರಾರು ಸರ್ಕಾರಿ ನೌಕರರು ಪ್ರತಿಭಟನೆ ನಡೆಸಿದರು. – ಪ್ರಜಾವಾಣಿ ಚಿತ್ರ/ ರಂಜು ಪಿ.

ಬೆಂಗಳೂರು: ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಗೊಳಿಸುವಂತೆ ಒತ್ತಾಯಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಸೋಮವಾರ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ನೇತೃತ್ವದಲ್ಲಿ ಸಾವಿರಾರು ನೌಕರರು ಪ್ರತಿಭಟಿಸಿದರು.

ಎನ್‌ಪಿಎಸ್‌ನಿಂದ ನೌಕರರಿಗೆ ಸಾಕಷ್ಟು ತೊಂದರೆ ಆಗುತ್ತಿದೆ. 2006ರಿಂದ ಈಚೆಗೆ ಸರ್ಕಾರಿ ಸೇವೆಗೆ ಸೇರಿದ ನೌಕರರಿಗೆ ಅಭದ್ರತೆ ಕಾಡುತ್ತಿದೆ ಎಂದು ಅಳಲು ತೋಡಿಕೊಂಡರು.

ರಾಜಸ್ತಾನ, ಛತ್ತೀಸ್‌ಗಡ, ಪಂಜಾಬ್ ಹಾಗೂ ಜಾರ್ಖಂಡ್‌ನಲ್ಲಿ ಅಲ್ಲಿನ ಸರ್ಕಾರಗಳು ಎನ್‌ಪಿಎಸ್ ರದ್ದು ಪಡಿಸಿವೆ. ಕರ್ನಾಟಕದಲ್ಲೂ ಎನ್‌ಪಿಎಸ್ ರದ್ದು ಮಾಡುವಂತೆ ಆಗ್ರಹಿಸಿ, ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಸಂಘದ ಬೇಡಿಕೆ ಈಡೇರಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

‘ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದಿರುವ ಕಾರಣಕ್ಕೆ ‘ವೋಟ್ ಫಾರ್ ಒಪಿಎಸ್’ ಅಭಿಯಾನ ಆರಂಭಿಸಲಾಗಿದೆ. ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯಲಿದೆ. ಎನ್‌ಪಿಎಸ್ ರದ್ದು ಮಾಡಬೇಕು ಎಂಬುದು ಸಂಘದ ಏಕೈಕ ಬೇಡಿಕೆ’ ಎಂದು ರಾಜ್ಯ ಅಧ್ಯಕ್ಷ ಶಾಂತಾರಾಮ ತಿಳಿಸಿದರು.

‘ಈ ಹೋರಾಟ ಸಂವಿಧಾನಬದ್ಧವಾಗಿ ನಡೆಯುತ್ತಿದೆ. ಈಗಾಗಲೇ ಫ್ರೀಡಂ ಪಾರ್ಕ್ ಚಲೊ, ರಕ್ತ ಕೊಟ್ಟೇವು ಪಿಂಚಣಿ ಬಿಡುವುದಿಲ್ಲ, ಬೆಳಗಾವಿ ಚಲೋ ಸೇರಿದಂತೆ ನೂರಾರು ಧರಣಿ ನಡೆಸಲಾಗಿದೆ. ಆದರೂ ನೌಕರರು ನಿರಾಸೆಯಾಗಿದೆ’ ಎಂದು ಹೇಳಿದರು.

‘ಎನ್‌ಪಿಎಸ್ ಜಾರಿಯಾಗಿ 16 ವರ್ಷ ಕಳೆದಿದೆ. ದಿನ ಕಳೆದಂತೆಲ್ಲಾ ನೌಕರರು ನೋವು ಅನುಭವಿಸುವ ಸ್ಥಿತಿಯಿದೆ. ಹೆಸರಿಗಷ್ಟೇ ಸರ್ಕಾರಿ ನೌಕರರು ಎಂಬ ಸ್ಥಿತಿಯಿದ್ದು, ಸಂಧ್ಯಾಕಾಲದಲ್ಲಿ ಬದುಕು ಹೇಗೆ ಎಂಬ ಪ್ರಶ್ನೆ ನೌಕರರನ್ನು ಕಾಡುತ್ತಿದೆ’ ಎಂದು ಅಳಲು ತೋಡಿಕೊಂಡರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಒಪಿಎಸ್ ಮರು ಜಾರಿ ಮಾಡುತ್ತೇವೆಂದು ಪಕ್ಷಗಳು ಪ್ರಣಾಳಿಕೆಯಲ್ಲಿ ಘೋಷಣೆ ಮಾಡಲಿ’ ಎಂದರು.

ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಎ.ನಾಗನಗೌಡ, ರಾಜ್ಯ ಉಪಾಧ್ಯಕ್ಷ ಚಂದ್ರಕಾಂತ್ ತಳವಾರ, ಕೆ.ಜೆ. ಮಂಜುನಾಥ್, ಶಾರದಾ ನಾಗೇಶ್, ಜೆ,ರಂಗನಾಥ್, ಸಂತೋಷ್ ಲಿಂಬೆಕಾಯಿ ಹಾಜರಿದ್ದರು.

ವಿವಿಧ ಜಿಲ್ಲೆಗಳಿಂದ ಪ್ರತಿಭಟನಕಾರರು ಫ್ರೀಡಂ ಪಾರ್ಕ್‌ಗೆ ಬಂದ ಕಾರಣಕ್ಕೆ ಈ ಭಾಗದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಆನಂದ್ ರಾವ್ ವೃತ್ತ, ಶೇಷಾದ್ರಿ ರಸ್ತೆ, ಗಾಂಧಿನಗರ ಸೇರಿದಂತೆ ಹಲವು ಕಡೆಗಳಲ್ಲಿ ಸಮಸ್ಯೆಯಾಗಿ ವಾಹನ ಸವಾರರು ತೊಂದರೆ ಅನುಭವಿ ಸಿದರು.

ಮುಖ್ಯಾಂಶಗಳು

- ಎನ್‌ಪಿಎಸ್ ರದ್ದು ಮಾಡಲು ಆಗ್ರಹ
- 2006ರಿಂದ ಸೇವೆಗೆ ಸೇರಿದ ನೌಕರರಿಗೆ ಅಭದ್ರತೆ
- ಒಪಿಎಸ್ ಮರು ಜಾರಿ: ಪ್ರಣಾಳಿಕೆಯಲ್ಲಿ ಘೋಷಿಸಲಿ

‘ಮಾಧ್ಯಮ ದಾರಿ ತಪ್ಪಿದರೆ ಅಪಾಯ’

ಹಿಲಾಲ್ ಪ್ರೌಢಶಾಲೆಯಲ್ಲಿ ಮಾಧ್ಯಮ ಚರ್ಚಾಗೋಷ್ಠಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಧ್ಯಮಗಳು ದಾರಿ ತಪ್ಪಿದರೆ ಸಮಾಜ ಮತ್ತು ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕುತ್ತವೆ. ಮಾಧ್ಯಮ ಜವಾಬ್ದಾರಿಯುತವಾಗಿ ವರ್ತಿಸಿದಾಗ ಮಾತ್ರ ಸಮಾಜ ಸುಧಾರಣೆ ಸಾಧ್ಯ’ ಎಂದು ಮಾಧ್ಯಮ ತಜ್ಞ ಜಿ.ಎಂ.ಶಿರಹಟ್ಟಿ ಹೇಳಿದರು.

ಬೆಂಗಳೂರು ಉತ್ತರದ ವಿಜನಪುರದ ದರ್ಗಾ ಮೊಹಲ್ಲಾದ ಹಿಲಾಲ್ ಪ್ರೌಢಶಾಲೆಯಲ್ಲಿ ಈಚೆಗೆ ನಡೆದ ‘ಸಮೂಹ ಮಾಧ್ಯಮಗಳ ಹಿತಕಾರಿ ಉಪಯೋಗ’ ಅಂತರ್ ಶಾಲಾ ಚರ್ಚಾಸ್ಪರ್ಧೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮಾಧ್ಯಮಗಳಿಗೆ ಸಮಷ್ಟಿ ಪ್ರಜ್ಞೆ ಇರಬೇಕು. ಜವಾಬ್ದಾರಿ ಅರಿತು ಸಮಾಜಕ್ಕೆ ಹಿತಕಾರಿಯಾಗುವಂತೆ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು’ ಎಂದು ಸಲಹೆ ಮಾಡಿದರು.

ಚರ್ಚಾಸ್ಪರ್ಧೆಯಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಾಲೇಜ್‌ವುಡ್ ಪಬ್ಲಿಕ್ ಶಾಲೆ ಬದ್ರುದ್ದಿನ್ ಅಲಿ ಸ್ಮಾರಕ ಶೀಲ್ಡ್ ಪಡೆಯಿತು. ವಿದ್ಯಾರ್ಥಿಗಳಾದ ಉಮಾ ಪ್ರಥಮ, ಧನಲಕ್ಷ್ಮೀ ದ್ವಿತೀಯ, ಚರಣ್ ಗಾಯತ್ರಿ ಮೂರನೇ ಮತ್ತು ಖೂಜಿತುಲ್ ಕುಬ್ರಾ ಸಮಾಧಾನಕರ ಬಹುಮಾನ ಪಡೆದರು. ಸಮೂಹ ಮಾಧ್ಯಮದ ಸದುದ್ದೇಶ ಹಾಗೂ ಸದುಪಯೋಗವನ್ನು ವಿದ್ಯಾರ್ಥಿಗಳು ಪ್ರತಿಪಾದಿಸಿದರು.

ಬೆಂಗಳೂರು ಸೌತ್ ವೆಲ್‌ಫೇರ್ ಟ್ರಸ್ಟ್ ಈ ಚರ್ಚಾ ಸ್ಪರ್ಧೆ ಏರ್ಪಡಿಸಿತ್ತು. ವಿಜೇತ ಮಕ್ಕಳಿಗೆ ಸುನಿಲಾ ಟ್ರಸ್ಟ್, ಅಲ್-ಅಮೀನ್ ಕಂಬಲ್ ಪೋಷ್ ಶಾಲೆಯ ಹಾಶಮಾ ಅವರು ಪರಿತೋಷಕ ವಿತರಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಿ.ಎಂ. ಶಿರಹಟ್ಟಿ ಅವರನ್ನು ಶಾಲೆಯ ವತಿಯಿಂದ ಸತ್ಕರಿಸಲಾಯಿತು.

ಅಲ್ಪಸಂಖ್ಯಾತರ ಆಯೋಗದ ಮಾಜಿ ಮುಖ್ಯಸ್ಥ ಖುಸ್ರೋ ಖುರೇಶಿ ಅತಿಥಿಯಾಗಿದ್ದರು. ಮುನಿರಾಜು, ಬಹಾದ್ದೂರ ಸಾಬ್ ಹಾಗೂ ಮುನಿಸ್ವಾಮಿ ತೀರ್ಪುಗಾರರಾಗಿದ್ದರು. ಶಾಲೆಯ ಕಾರ್ಯದರ್ಶಿ ಸೈಫುಲ್ಲಾ ಹಾಗೂ ಶಿಕ್ಷಕರು ಇದ್ದರು.

ಬೆಂಗಳೂರು ಉತ್ತರ ವಿಜನಪುರದ ದರ್ಗಾ ಮೊಹಲ್ಲಾದ ಹಿಲಾಲ್ ಪ್ರೌಢಶಾಲೆಯಲ್ಲಿ ಈಚೆಗೆ ನಡೆದ ಅಂತರಶಾಲಾ ಚರ್ಚಾಸ್ಪರ್ಧೆಯ ವಿಜೇತ ಮಕ್ಕಳಿಗೆ ಜಿ.ಎಂ. ಶಿರಹಟ್ಟಿ ಮತ್ತು ಖುಸ್ರೋ ಖುರೇಶಿ ಪಾರಿತೋಷಕ ವಿತರಿಸಿದರು

ನಕಲಿ ಬಿಲ್ ದಂಧೆ: ಹಣ ದುರ್ಬಳಕೆ ಆರೋಪ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕ್ಷೇತ್ರದಲ್ಲಿ ಕಾಮಗಾರಿ ಹೆಸರಿನಲ್ಲಿ ನಕಲಿ ಬಿಲ್‌ಗಳು ಸೇರಿದಂತೆ ₹150 ಕೋಟಿಗೂ ಅಧಿಕ ಹಣ ಲೂಟಿಯಾಗಿದ್ದು, ತನಿಖೆಗೆ ಆಗ್ರಹಿಸಿ ಕಾಂಗ್ರೆಸ್ ಮುಖಂಡ ಧನಂಜಯ್ ನೇತೃತ್ವದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ದಾಸರಹಳ್ಳಿ ವಲಯ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

8ನೇ ಮೈಲಿ ಸರ್ಕಲ್‌ನಿಂದ ಹೆಸರಘಟ್ಟ ಮುಖ್ಯರಸ್ತೆ ಮೂಲಕ ದಾಸರಹಳ್ಳಿ ವಲಯ ಬಿಬಿಎಂಪಿ ಕಚೇರಿಯವರೆಗೆ ಸಾಗಿಬಂದ ಪ್ರತಿಭಟನಾಕಾರರು ಮುತ್ತಿಗೆ ಹಾಕಿ ಮುಷ್ಕರ ನಡೆಸಿದರು.

‘ಕಾಮಗಾರಿಗಳು ಕಳಪೆ ಮಟ್ಟದ್ದಾಗಿವೆ. ಅವ್ಯವಹಾರ ನಡೆದಿದೆ. ಜೊತೆಗೆ ಭ್ರಷ್ಟ ಅಧಿಕಾರಿಗಳನ್ನು ಶಾಮೀಲು ಮಾಡಿಕೊಂಡು ಕಾಮಗಾರಿಗಳನ್ನು ಮಾಡದೆಯೇ ನಕಲಿ ಬಿಲ್‌ಗಳನ್ನು ಸೃಷ್ಟಿಸಿಕೊಂಡು ಕೋಟ್ಯಂತರ ರೂ ವಂಚಿಸಲಾಗಿದೆ’ ಎಂದು ಆರೋಪಿಸಿದರು.

‘ಸ್ಥಳೀಯ ಶಾಸಕ ಆರ್ ಮಂಜುನಾಥ್ ಅವರೂ ಕಾಮಗಾರಿಗಳು ಕಳಪೆಯಾಗಲು ನೇರವಾಗಿ ಕಾರಣರಾಗಿದ್ದಾರೆ. ಶಾಸಕರು, ಅಧಿಕಾರಿಗಳಿಗೆ ಕಮಿಷನ್ ಕೊಟ್ಟರೆ ಗುಣಮಟ್ಟದ ಕಾಮಗಾರಿ ಹೇಗೆ ಸಾಧ್ಯ?’ ಎಂದು ಮುಖಂಡ ಧನಂಜಯ್ ಅವರು ಟೀಕಿಸಿದರು.

8ನೇ ಮೈಲಿ ಸರ್ಕಲ್‌ನಿಂದ ಹೆಸರಘಟ್ಟ ಮುಖ್ಯರಸ್ತೆ ಮೂಲಕ ದಾಸರಹಳ್ಳಿ ವಲಯ ಬಿಬಿಎಂಪಿ ಕಚೇರಿಯವರೆಗೆ ಕಾಂಗ್ರೆಸ್ ಮುಖಂಡ ಧನಂಜಯ್ ಅವರ ನೇತೃತ್ವದಲ್ಲಿ ಸಾಗಿಬಂದ ಪ್ರತಿಭಟನಕಾರರು ಮುತ್ತಿಗೆ ಹಾಕಿ ಮುಷ್ಕರ ನಡೆಸಿದರು.

ಅನುಚಿತ ವರ್ತನೆ ಶಿಕ್ಷಕ ಅಮಾನತು

ದೇವನಹಳ್ಳಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಸರ್ಕಾರಿ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ಜತೆ ಅನುಚಿತ ವರ್ತನೆ ಆರೋಪದಡಿ ಶಿಕ್ಷಕನನ್ನು ಶನಿವಾರ ಅಮಾನತುಗೊಳಿಸಲಾಗಿದೆ.

ಮದ್ಯಪಾನ ಮಾಡಿ ಶಾಲೆಗೆ ಬರುತ್ತಿದ್ದ ಶಿಕ್ಷಕ, ವಿದ್ಯಾರ್ಥಿಗಳಿಂದ ಮದ್ಯದ ಬಾಟಲಿ ತೆಗೆಸುತ್ತಿದ್ದು, ಅಸಭ್ಯವಾಗಿ ವರ್ತಿಸುತ್ತಿದ್ದ ಆರೋಪವಿತ್ತು. ಅಮಾನತು ಮಾಡಿ ಡಿಡಿಪಿಐ ಆದೇಶ ಹೊರಡಿಸಿದ್ದಾರೆ.

ದೂರು ಆಧರಿಸಿ ಇದೇ 6ರಂದು ಮಕ್ಕಳ ಸಹಾಯವಾಣಿ ತಂಡ ಹಾಗೂ ಆಪ್ತ ಸಮಾಲೋಚಕರು ಶಾಲೆಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದರು.

ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ರೈತರ ವಿರೋಧ

ಪ್ರಜಾವಾಣಿ ವಾರ್ತೆ

ಯಲಹಂಕ: ಕಾಳತಮ್ಮನಹಳ್ಳಿ ಗ್ರಾಮದಲ್ಲಿ ಡಾ.ಶಿವರಾಮ ಕಾರಂತ ಬಡಾವಣೆ ಯೋಜನೆ ರೂಪಿಸಲು ಬಿಡಿಎ ಅಧಿಕಾರಿಗಳು ಹೊರಟಿದ್ದು, 17 ಗ್ರಾಮಗಳ ಮೂಲ ರೈತರ ಗಮನಕ್ಕೆ ತಾರದೆ ಗುದ್ದಲಿ ಪೂಜೆ ನೆರವೇರಿಸಿದ್ದಾರೆ. ಡಾ.ಶಿವರಾಮ ಕಾರಂತ ಬಡಾವಣೆ ಯೋಜನೆ ವಿರೋಧಿ ಹೋರಾಟ ಸಮಿತಿಯ ಸದಸ್ಯರು ಇದು ಸರಿಯಲ್ಲ ಎಂದು ದೂರಿದರು.

ಈ ಕುರಿತ ಸಭೆಯಲ್ಲಿ ಮಾತನಾಡಿದ ಸಮಿತಿಯ ಸದಸ್ಯರು, ‘ಸರ್ಕಾರ ಮತ್ತು ಬಿಡಿಎ, ರೈತರ ಮನವಿಗಳಿಗೆ ಸ್ಪಂದಿಸದೆ, ಪರಿಸರ ಸಂಸ್ಥೆಗಳಿಂದ ಅನುಮೋದನೆ ಪಡೆಯದೆ ಏಕಾಏಕಿ ಯೋಜನೆ ಕಾಮಗಾರಿ ಆರಂಭಿಸಿರುವುದು ಖಂಡನೀಯ’ ಎಂದು ಟೀಕಿಸಿದರು.

ಸಮಿತಿಯ ಮುಖಂಡ ಎಂ.ರಮೇಶ್ ಮಾತನಾಡಿ, ಯೋಜನೆ ಪ್ರಾರಂಭವಾದ ಹಾಗೂ ನ್ಯಾಯಾಲಯಗಳಲ್ಲಿ ಅದು ಹಾದುಬಂದ ಹಾದಿಯನ್ನು ನೆನಪಿಸಿದರು.

‘ಬಿಡಿಎ 2021ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸುವ ಪ್ರಯತ್ನದಲ್ಲಿ 1894ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಪರಿಹಾರ ನೀಡುವುದಾಗಿ ಘೋಷಿಸಿತು. ಈ ಕ್ರಮವನ್ನು ಖಂಡಿಸಿ 17 ಗ್ರಾಮಗಳ ರೈತರು ನ್ಯಾಯಕ್ಕಾಗಿ ಧರಣಿ, ಸತ್ಯಾಗ್ರಹ, ರಸ್ತೆತಡೆ ಚಳವಳಿ ಸೇರಿ ಅನೇಕ ಹೋರಾಟಗಳನ್ನು ನಡೆಸಿದರು. ಬಿಡಿಎ ಮತ್ತು ಸರ್ಕಾರಕ್ಕೆ ನೂರಾರು ಮನವಿಗಳನ್ನು ಸಲ್ಲಿಸಿದ್ದರೂ ರೈತರ ಮನವಿಗೆ ಸ್ಪಂದಿಸದೆ ಯೋಜನೆ ರೂಪಿಸಲು ಕಾಮಗಾರಿ ಆರಂಭಿಸಲು ಗುದ್ದಲಿಪೂಜೆ ನೆರವೇರಿಸಲು ಮುಂದಾಗಿರುವುದು ಸರಿಯಲ್ಲ. ಇದರ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ’ ಎಂದು ಎಚ್ಚರಿಕೆ ನೀಡಿದರು.

ಸಮಿತಿಯ ಬೆಂಗಳೂರು ಜಿಲ್ಲಾ ಸಂಯೋಜಕ ಬಿ.ಆರ್. ನಂಜುಂಡಪ್ಪ ಅವರು, ‘ಶಿವರಾಮ ಕಾರಂತ ಬಡಾವಣೆಯ ಯೋಜನೆಯ ವ್ಯಾಪ್ತಿಗೆ ಒಳಪಡುವ 17 ಹಳ್ಳಿಗಳಲ್ಲಿ ರೈತರು ಇಂದಿಗೂ ವ್ಯವಸಾಯ, ಹೈನುಗಾರಿಕೆಯಿಂದಲೇ ಬದುಕು ಕಟ್ಟಿಕೊಂಡಿದ್ದಾರೆ. ಬಡಾವಣೆ ನಿರ್ಮಿಸಿದರೆ ಸಾವಿರಾರು ರೈತರ ಬದುಕು ದುಸ್ತರವಾಗಲಿದೆ. ತಕ್ಷಣ ಯೋಜನೆಯನ್ನು ಕೈಬಿಡಬೇಕು’ ಎಂದು ಆಗ್ರಹಿಸಿದರು.

ಸಮಿತಿಯ ಪದಾಧಿಕಾರಿಗಳಾದ ಮಾವಳಿಪುರ ಬಿ.ಶ್ರೀನಿವಾಸ್, ಮುನಿರಾಜು, ಬಸವರಾಜ ಪಾದಯಾತ್ರಿ, ಎಲ್.ಎ.ಕೃಷ್ಣಪ್ಪ, ಕಿಶೋರ್, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ಹಾಲು ಕರೆಯುವ ಸ್ಪರ್ಧೆ: ನಗರದ ರಾಸು ಪ್ರಥಮ

ಆನೇಕಲ್: ಪಟ್ಟಣದಲ್ಲಿ ಕರುನಾಡ ರೈತ ಗೋಪಾಲಕರ ಸಂಘ ಆಯೋಜಿಸಿದ್ದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರಿನ ನಾಗರಬಾವಿಯ ಸತೀಶ್ ನಾಗರಾಜು ಅವರಿಗೆ ಸೇರಿದ ಆಕಳು ಪ್ರಥಮ ಸ್ಥಾನ ಗಳಿಸಿದೆ.

49.7ಕೆಜಿ ಹಾಲು ಕರೆದು ಪ್ರಥಮ ಸ್ಥಾನ ಗಳಿಸಿತು. ಪ್ರಶಸ್ತಿ ಮೊತ್ತ ₹1 ಲಕ್ಷ ನಗದು ಮತ್ತು ಟ್ರೋಫಿ ತನ್ನದಾಗಿಸಿಕೊಂಡಿತು.

ಸಿ.ಜಗನ್ನಾಥ್ ಅವರಿಗೆ ಸೇರಿದ ರಾಸು 45.5 ಕೆ.ಜಿ ಕರೆದು, ದ್ವಿತೀಯ ಸ್ಥಾನ ಪಡೆದು ₹ 75 ಸಾವಿರ ಬಹುಮಾನ ಪಡೆದಿದೆ. ನೆಲಮಂಗಲದ ರಾವತ್ತನಹಳ್ಳಿಯ ವೆಂಕಟೇಶ್ ಅವರಿಗೆ ಸೇರಿದ ರಾಸು 44.14 ಕೆ.ಜಿ ಕಾಲು ಕರೆದಿದ್ದು, ತೃತೀಯ ಸ್ಥಾನ ಗಳಿಸಿ ₹ 50 ಸಾವಿರ ನಗದು, ಟ್ರೋಫಿ ಪಡೆಯಿತು.

‘ಭೂಗೋಳ: ಸಂಶೋಧನೆ ಹೆಚ್ಚಲಿ’

ಇಂಡಿಯನ್ ಜಿಯಾಗ್ರಫಿ ಕಾಂಗ್ರೆಸ್‌ನ ಸಮ್ಮೇಳನ ಉದ್ಘಾಟಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಪ್ರಕೃತಿ ವಿರೋಧಿ ಕೃತ್ಯಗಳ ಕಾರಣ ಹವಾಮಾನ ವೈಪರೀತ್ಯ ಉಂಟಾಗುತ್ತಿದೆ. ಇದರಿಂದ ನೈಸರ್ಗಿಕ ದುರಂತಗಳು ಸಂಭವಿಸುತ್ತಿವೆ. ಇದನ್ನು ತಡೆಯಲು ಒಂದಾಗಿ ಹೋರಾಡಬೇಕಾದ ಅಗತ್ಯವಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ರಾಷ್ಟ್ರೀಯ ಜಿಯಾಗ್ರಾಫರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ ಏರ್ಪಡಿಸಿದ 44ನೇ ಇಂಡಿಯನ್ ಜಿಯಾಗ್ರಫಿ ಕಾಂಗ್ರೆಸ್‌ನ ಮೂರು ದಿನಗಳ ಸಮ್ಮೇಳನವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಪ್ರಕೃತಿ ವಿಕೋಪ ತಡೆಯಲು ಸಾಧ್ಯವಿಲ್ಲ. ಆದರೆ, ಅವುಗಳ ಮುನ್ಸೂಚನೆ ಪಡೆದು ಹಾನಿ ತಡೆಯಬಹುದು. ಈ ದೃಷ್ಟಿಯಲ್ಲಿ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ವರ್ಷದಿಂದ ವರ್ಷಕ್ಕೆ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಭೂಮಿಯ ತಾಪಮಾನ ಹೆಚ್ಚುತ್ತಿದೆ. ಇವುಗಳನ್ನು ತಡೆಯಲು ವನ ಬೆಳೆಸುವಂಥ ಕೆಲಸಗಳನ್ನು ಸಾಮೂಹಿಕವಾಗಿ ಮಾಡಬೇಕಾಗಿದೆ’ ಎಂದೂ ಅವರು ಹೇಳಿದರು.

ಆರ್‌ಸಿಯು ಕುಲಪತಿ ಪ್ರೊ. ರಾಮಚಂದ್ರ ಗೌಡ ಮಾತನಾಡಿ, ‘ಭೂಗೋಳ ವಿಜ್ಞಾನ ವಿಷಯವು ರಾಜ್ಯದ ಕೆಲವೇ ಕಾಲೇಜುಗಳಲ್ಲಿ ಇದೆ. ಇದರ ಮಹತ್ವವನ್ನು ಇನ್ನಷ್ಟು ಸಾರಬೇಕಿದೆ. ಪ್ರತಿಯೊಂದು ಕಾಲೇಜಿನಲ್ಲಿಯೂ ಭೂಗೋಳ ವಿಜ್ಞಾನ ಓದಲು ಪ್ರೇರೇಪಣೆ ನೀಡುವ ಅಗತ್ಯವಿದೆ’ ಎಂದರು.

ಸಚಿವರಾದ ಸಿ.ಸಿ.ಪಾಟೀಲ, ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಶಾಸಕ ಬಿ.ಎಸ್. ಯಡಿಯೂರಪ್ಪ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ನ್ಯಾಷನಲ್ ರೇನ್‌ಫೆಡ್ ಏರಿಯಾ ಅಥಾರಿಟಿಯ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಅಶೋಕ ದಳವಾಯಿ ಹಾಗೂ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು ವೇದಿಕೆ ಮೇಲಿದ್ದರು.

ಬೆಳಗಾವಿಯಲ್ಲಿ ಸೋಮವಾರ ಆರಂಭವಾದ 44ನೇ ಇಂಡಿಯನ್ ಜಿಯಾಗ್ರಫಿ ಕಾಂಗ್ರೆಸ್‌ನ ಮೂರು ದಿನಗಳ ಸಮ್ಮೇಳನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು



ಆನೆ ಬಂತೊಂದಾನೆ...

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ನಡೆದ ಕಾರ್ಯಕ್ರಮಕ್ಕೆ ಬರುವ ಅತಿಥಿಗಳನ್ನು ಸ್ವಾಗತಿಸಲೆಂದು ಹಂಪಿ ಇಂದ ಬಂದ ಆನೆ ಜನರ ಗಮನ ಸೆಳೆಯಿತು

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಚಿತ್ರಾವಳಿ

1. ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನದ ದಶಮಾನೋತ್ಸವದ ಅಂಗವಾಗಿ ಸಾಹಿತ್ಯ–ಸಂಸ್ಕೃತಿ ಸಮಾಗಮ, ಕಾಕೋಳು ಶೈಲೇಶ್ ಅವರ ‘ಮುತ್ತಿನ ಮುಕುಟ ಮಣಿ’ ಕವನ ಸಂಕಲನ ಬಿಡುಗಡೆ ಮತ್ತು ಗೀತಗಾಯನ, ಪ್ರಶಸ್ತಿ ಪ್ರದಾನ ಸಮಾರಂಭ ಭಾನುವಾರ ಗಾಂಧಿಭವನದಲ್ಲಿ ನಡೆಯಿತು. ಎಸ್‌.ಪಿ. ವೇಮಗಲ್, ಡಿ. ನಾರಾಯಣಸ್ವಾಮಿ, ಮನು ಬಳಿಗಾರ್, ಕಾಡುಮಲ್ಲೇಶ್ವರ ಬಳದ ಅಧ್ಯಕ್ಷ ಬಿ.ಕೆ. ಶಿವರಾಂ, ಪ್ರತಿಷ್ಠಾನದ ಅಧ್ಯಕ್ಷ ಎಂ. ಪುಟ್ಟರಾಜು, ಸಬ್ ಇನ್‌ಸ್ಪೆಕ್ಟರ್ ಸವಿತ ಕೆ.ಎಂ., ಮಧುಮಾಲತಿ ಇದ್ದರು.
2. ಕೋರಮಂಗಲದ ರೆಡ್ಡಿಜನ ಸಂಘ ಪ್ರಥಮದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಭಾಗವಾಗಿ ಇತ್ತೀಚೆಗೆ ‘ಉನ್ನತ ಶಿಕ್ಷಣಕ್ಕೆ ಬಹುಶಿಸ್ತೀಯ ವಿಧಾನಗಳಲ್ಲಿ ಉದಯೋನ್ಮುಖ ಪ್ರವೃತ್ತಿಗಳ ಜಾಗತಿಕ ದೃಷ್ಟಿಕೋನ’ ವಿಷಯ ಕುರಿತು ಎರಡು ದಿನದ ಅಂತರರಾಷ್ಟ್ರೀಯ ಸಮ್ಮೇಳನ ನಡೆಯಿತು. (ಬಲದಿಂದ ಎಡಕ್ಕೆ) ಪಟ್ನಾ ಅಮಿಟಿ ವಿಶ್ವವಿದ್ಯಾಲಯದ ಕುಲಪತಿ ಟಿ.ಆರ್‌. ವೆಂಕಟೇಶ್, ರೆಡ್ಡಿಜನ ಸಂಘದ ಅಧ್ಯಕ್ಷ ಎಸ್‌.ಜಯರಾಮ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಕೆ.ಎನ್‌.ಕೃಷ್ಣ ರೆಡ್ಡಿ, ಸದಸ್ಯ ವೈ. ಗಂಗಾಧರ, ಪ್ರಾಂಶುಪಾಲರಾದ ಡಾ.ಪಿ. ನಾಗಭೂಷಣ ರೆಡ್ಡಿ ಇದ್ದರು.
3. ಬ್ರಿಗೇಡ್ ಗೇಟ್‌ವೇಯ ಒರಾಯನ್ ಮಾಲ್‌ನಲ್ಲಿ ಇಂಟರ್‌ನ್ಯಾಷನಲ್ ಕ್ಲೌನ್ ಫೆಸ್ಟಿವಲ್‌ನಲ್ಲಿ ಫ್ಲಬ್ಬರ್ ಮತ್ತು ತಂಡದವರು ಸರ್ಕಸ್ ಕೌಶಲ ಪ್ರದರ್ಶಿಸಿದರು.
4. ಡಾ. ಇಂಡಿಯಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬೆಂಗಳೂರಿನ ಗೋಶಾ ಆಸ್ಪತ್ರೆಯಲ್ಲಿರುವ ಬಡ ಮತ್ತು ಗರ್ಭಿಣಿಯರಿಗೆ ಇತ್ತೀಚೆಗೆ ಕಂಬಳಿ ವಿತರಣೆ ಮಾಡಲಾಯಿತು.

ಆನೇಕಲ್‌ನಲ್ಲಿ ಕಾಡಾನೆ ಹಿಂಡು, ಜನರಲ್ಲಿ ಆತಂಕ

ಆನೇಕಲ್: ತಾಲ್ಲೂಕಿನ ವಣಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 15ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಭಾನುವಾರ ರಾತ್ರಿ ಕಾಣಿಸಿಕೊಂಡಿದ್ದು, ನಿವಾಸಿಗಳಲ್ಲಿ ಆತಂಕ ಮೂಡಿಸಿದೆ.

ಸುಣವಾರ, ಲಕ್ಷ್ಮಿಪುರ, ಮುತ್ತೂರು, ಕಾಳನಾಯಕನಹಳ್ಳಿ, ಬಸವನಪುರ, ಸಿಂಗಸಂದ್ರ ಗ್ರಾಮಗಳಲ್ಲಿ ಕಾಡಾನೆಗಳ ಹಿಂಡು ಸಂಚರಿಸಿವೆ. ಜಮೀನುಗಳಿಗೆ ನುಗ್ಗಿ ರಾಗಿ, ಇತರ ಬೆಳೆಗಳನ್ನು ತಿಂದಿವೆ. ಬಾಳೆ ತೋಟಕ್ಕೆ ನುಗ್ಗಿ ನಾಶಪಡಿಸಿವೆ.

ಅರಣ್ಯ ಇಲಾಖೆ ಸಿಬ್ಬಂದಿ ಪಟಾಕಿ ಸಿಡಿಸಿ ಆನೆಗಳನ್ನು ಕಾಡಿನತ್ತ ಓಡಿಸಿದರು. ಸೋಮವಾರ ರಾತ್ರಿ ಮುತ್ಯಾಲಮಡುವು ಸಮೀಪದ ಬಿದರಕಾಡಹಳ್ಳಿಯಲ್ಲಿ ಒಂಟಿ ಸಲಗ ಓಡಾಟ ನಡೆಸಿದೆ ಎಂದು ಗ್ರಾಮಸ್ಥರು ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಬಿದರಕಾಡಹಳ್ಳಿಯ ಸಮೀಪ ಅರಣ್ಯ ಇಲಾಖೆ ಸಿಬ್ಬಂದಿ ಆನೆ ಓಡಿಸುವ ಕಾರ್ಯಾಚರಣೆ ಆರಂಭಿಸಿದ್ದಾರೆ.

ಬ್ಯಾಟರಾಯನಪುರ ಕ್ಷೇತ್ರದ ಥಣಿಸಂದ್ರದಲ್ಲಿ ಬಿಜೆಪಿ ಮುಖಂಡ ಕೆ.ಎ. ಮುನೀಂದ್ರಕುಮಾರ್ ನೇತೃತ್ವದಲ್ಲಿ ನಡೆದ ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ ಸಮಾರಂಭ ಉದ್ದೇಶಿಸಿ, ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿದರು

ಸಿಈಎಸ್ ಫ್ಯಾಷನ್ ಟೆಕ್ನಾಲಜಿ: ಪದವಿ ಪ್ರದಾನ ಸಮಾರಂಭ

ಸಿದ್ಧ ಉಡುಪು ಕ್ಷೇತ್ರದಲ್ಲಿ ಹೇರಳ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಜನತೆ ಯಾವುದೇ ಉದ್ಯೋಗಾವಕಾಶ ಕಳೆದುಕೊಳ್ಳಬಾರದು. ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಗಾರ್ಮೆಂಟ್ ಆಡಳಿತ ತಜ್ಞ ರಘುರಾಜ ಲಕ್ಷ್ಮೀಪತಿ ಸಲಹೆ ಮಾಡಿದರು.

ಯಲಹಂಕ ಉಪನಗರದ ಸಿ.ಈ.ಎಸ್. ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದ ಅವರು, ‘ಸಿದ್ಧ ಉಡುಪು ಕ್ಷೇತ್ರದಲ್ಲಿ ಜಾಗತಿಕಮಟ್ಟದಲ್ಲಿ ಯುವಕರಿಗೆ ಮತ್ತು ವಸ್ತ್ರ ವಿನ್ಯಾಸಕಾರರಿಗೆ ಹೇರಳ ಅವಕಾಶಗಳಿವೆ’ ಎಂದರು.

‘ಪದವಿ ಪಡೆದು ಹೊರ ಬರುತ್ತಿರುವ ವಿದ್ಯಾರ್ಥಿಗಳು ಉಡುಪುಗಳ ವಿನ್ಯಾಸ ಹಾಗೂ ಅವುಗಳ ಉತ್ಪಾದನೆಯತ್ತ ಗಮನ ಹರಿಸಬೇಕು’ ಎಂದು ಹಿರಿಯ ಆಡಳಿತಗಾರ ಯೋಗೀಶ್ ಸಲಹೆ ಮಾಡಿದರು. ತಾಂತ್ರಿಕ ತಜ್ಞ ಸಂಜಯ, ಸಂಸ್ಥೆಯ ಪ್ರಾಚಾರ್ಯ ಡಾ. ದೇವೇಂದ್ರ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಿ.ಎಂ. ಶಿರಹಟ್ಟಿ ಅವರನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ಟ್ರಸ್ಟಿಗಳಾದ ಮಹೇಶ ಮಾಲಿಪಾಟೀಲ, ದೀಪಾಲಿ ಮಹೇಶ, ರಫೀಕ್ ಜಿ. ಎಸ್., ಶಿಕ್ಷಕರಾದ ಹಬೀಬುಲ್ಲಾ, ತೆನ್‌ಸಿಂಗ್, ಸಿಂಧು ಜಾ, ರುಕ್ಸಾರ ರಹಮಾನ್, ಆಡಳಿತಾಧಿಕಾರಿ ಶಬಾನಾ ಉಪಸ್ಥಿತರಿದ್ದರು. ಫ್ರೆಶರ್ಸ್ ಡೇ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಬೆಂಗಳೂರಿನ ಯಲಹಂಕ ಉಪನಗರದ ಸಿ.ಈ.ಎಸ್‌. ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಯಲಹಂಕ: ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಥಣಿಸಂದ್ರದಲ್ಲಿ ಬಿಜೆಪಿ ಮುಖಂಡ ಕೆ.ಎ.ಮುನೀಂದ್ರಕುಮಾರ್ ನೇತೃತ್ವದಲ್ಲಿ ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ ಸಮಾರಂಭ ನಡೆಯಿತು. ಸಂಸದ ಡಿ.ವಿ.ಸದಾನಂದಗೌಡ ಮುಖ್ಯ ಅತಿಥಿಯಾಗಿದ್ದರು.

ಸಾವಿರಾರು ದಂಪತಿ ವ್ರತದಲ್ಲಿ ಪಾಲ್ಗೊಂಡಿದ್ದರು. ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಧರ್ಮಜಾಗರಣದ ಮಂಗಳೂರು ವಿಭಾಗದ ಸಂಚಾಲಕ ಪ್ರಕಾಶ್ ಮಲ್ಪೆ, ಬಿಜೆಪಿ ಮುಖಂಡರಾದ ಎ.ರವಿ, ಟಿ.ಎನ್.ಚಂದ್ರಶೇಖರಗೌಡ, ಕೆ. ವೆಂಕಟೇಶ್, ಎಂ.ರಾಮಚಂದ್ರ, ದೀಪು, ಜಗದೀಶ್ ಗೌಡ, ದಿಲೀಪ್ ಮತ್ತಿತರರು ಉಪಸ್ಥಿತರಿದ್ದರು.

ವಾಲ್ಮೀಕಿ, ನಾರಾಯಣಗುರು, ಕನಕದಾಸ, ಅಂಬೇಡ್ಕರ್, ನೆಹರೂ ಫೋಟೊ ಹಿಡಿದು ಕಾಂಗ್ರೆಸ್ ಆಗ್ರಹ

'ಮಹನೀಯರ ಭಾವಚಿತ್ರ ಅಳವಡಿಸಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ(ಸುವರ್ಣ ವಿಧಾನಸೌಧ): 'ಇಲ್ಲಿನ ಸುವರ್ಣ ವಿಧಾನಸೌಧದ ವಿಧಾನಸಭೆ ಸಭಾಂಗಣದಲ್ಲಿ ಸಾವರ್ಕರ್ ಭಾವಚಿತ್ರ ಅಳವಡಿಸುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ, ಅದರ ಜೊತೆ ಇತರ ಮಹನೀಯರ ಭಾವಚಿತ್ರಗಳನ್ನೂ ಅಳವಡಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ಮಹರ್ಷಿ ವಾಲ್ಮೀಕಿ, ಬಸವಣ್ಣ, ಸಂತ ಶಿಶುನಾಳ ಶರೀಫ, ಕನಕದಾಸ, ನಾರಾಯಣಗುರು, ಅಂಬೇಡ್ಕರ್, ನೆಹರೂ, ಜಗಜೀವನ ರಾಮ್, ಸರದಾರ ವಲ್ಲಭಬಾಯ್ ಪಟೇಲ್, ಕುವೆಂಪು ಮತ್ತಿತರ ಮಹನೀಯರ ಭಾವಚಿತ್ರವನ್ನು ಅಳವಡಿಸಬೇಕು ಎಂದು ಒತ್ತಾಯಿಸಿ ಸುವರ್ಣಸೌಧದ ಪ್ರವೇಶದ್ವಾರದಲ್ಲಿ ಧರಣಿ ನಡೆಸಿದ ಕಾಂಗ್ರೆಸ್ ನಾಯಕರು,ಈ ಮಹನೀಯರ ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಸತೀಶ ಜಾರಕಿಹೊಳಿ, ಶಾಸಕರಾದ ಎಚ್.ಕೆ. ಪಾಟೀಲ. ಕೆ.ಜೆ. ಜಾರ್ಜ್, ಆರ್.ವಿ. ದೇಶಪಾಂಡೆ, ಲಕ್ಷ್ಮೀ ಹೆಬ್ಬಾಳ್ಕರ್ ಮುಂತಾದವರು ಇದ್ದರು.

ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ ಮಹನೀಯರ ಭಾವಚಿತ್ರ ಅಳವಡಿಸುವಂತೆ ಆಗ್ರಹಿಸಿ ಕಾಂಗ್ರೆಸ್ ನಾಯಕರು ಭಾವಚಿತ್ರ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, 'ವಿಧಾನಸಭೆಯ ಸಭಾಂಗಣದಲ್ಲಿ ಭಾವಚಿತ್ರ ಅಳವಡಿಸಲು ಸಭಾಧ್ಯಕ್ಷರು ವಿಧಾನಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಚರ್ಚೆ ಮಾಡದೆ ಏಕಾಏಕಿ ಭಾವಚಿತ್ರ ಅಳವಡಿಸಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ನಾವೆಲ್ಲರೂ ಹುಟ್ಟುತ್ತಲೇ ಹಿಂದೂಗಳು, ಸಾಯುವಾಗಲೂ ಹಿಂದೂಗಳೇ, ಹಿಂದೂ ಆಚರಣೆಗಳನ್ನೇ ಪಾಲಿಸುತ್ತಾ ಬಂದಿದ್ದೇವೆ. ನಮ್ಮಲ್ಲಿ ಹಿಂದೂ ಭಾವ, ಭಕ್ತಿ, ಆಚಾರ, ವಿಚಾರ, ಅಡಗಿದೆ. ಆದರೆ, ಬಿಜೆಪಿಯವರಂತೆ ನಾಟಕೀಯ ಹಿಂದುತ್ವ ನಮ್ಮದಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಸಾವರ್ಕರ್ ಅವರಿಗೂ ರಾಜ್ಯಕ್ಕೂ ಯಾವುದೇ ಸಂಬಂಧವಿಲ್ಲ. ಇದು ವಿವಾದಾತ್ಮಕ ವಿಚಾರ' ಎಂದರು.

'ಭ್ರಷ್ಟಾಚಾರ, ಮತದಾರರ ಮಾಹಿತಿ ಕಳವು, ಶೇ 40 ಕಮಿಷನ್, ಈ ಭಾಗದ ಜನರಿಗೆ ಆಗುತ್ತಿರುವ ಅನ್ಯಾಯ, ದುರಾಡಳಿತದ ಬಗ್ಗೆ ಚರ್ಚೆ ಆಗಬಾರದು ಎಂಬ ಕಾರಣಕ್ಕೆ ಬಿಜೆಪಿಯವರು ಈ ವಿಚಾರ ಪ್ರಸ್ತಾಪಿಸುತ್ತಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಸುಳ್ಳಿನ ರಾಜ. ಸಾರ್ವಕರ್ ಭಾವಚಿತ್ರ ಹಾಕಿರುವುದು ನನಗೆ ಗೊತ್ತೇ ಇಲ್ಲ ಎಂದು ಅವರು ಸುಳ್ಳು ಹೇಳುತ್ತಿದ್ದಾರೆ. ಈ ರೀತಿ ಹೇಳಿ ಮುಖ್ಯಮಂತ್ರಿ ಸ್ಥಾನಕ್ಕೆ ಧಕ್ಕೆ ತರಬಾರದು' ಎಂದರು.

'ಕಾಂಗ್ರೆಸಿಗರು ಭಾವಚಿತ್ರ ಏಕೆ ಹಾಕಿಸಲಿಲ್ಲ?'

ಬೆಳಗಾವಿ(ಸುವರ್ಣವಿಧಾನಸೌಧ): ಕಾಂಗ್ರೆಸ್ ಸರ್ಕಾರ ಇದ್ದಾಗ ಇಲ್ಲಿ ಅಧಿವೇಶನಗಳನ್ನು ನಡೆಸಲಾಗಿತ್ತು. ಆಗ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ, ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಅವರು ಗಾಂಧಿ, ಅಂಬೇಡ್ಕರ್, ಬಸವಣ್ಣ ಅವರ ಭಾವಚಿತ್ರಗಳನ್ನು ಹಾಕಲು ಏಕೆ ಮರೆತಿದ್ದರು ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಪ್ರಶ್ನಿಸಿದ್ದಾರೆ.

ಭೂಗತ ಪಾತಕಿ ದಾವೂದ್ ಇಬ್ರಾಹಿಂ ಭಾವಚಿತ್ರವನ್ನು ವಿಧಾನಸೌಧದೊಳಗೆ ಹಾಕಬೇಕೆಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಯಸುತ್ತಿದ್ದಾರಾ.
ಪ್ರಲ್ಹಾದ ಜೋಶಿ ಕೇಂದ್ರ ಸಚಿವ

'ಸರ್ಕಾರ ಸಾವರ್ಕರ್ ಭಾವಚಿತ್ರ ಅಳವಡಿಸಿರುವುದಕ್ಕೆ ಪರೋಕ್ಷವಾಗಿ ವಿರೋಧ ವ್ಯಕ್ತಪಡಿಸುವ ಹುನ್ನಾರದ ಅಂಗವಾಗಿ ಕಾಂಗ್ರೆಸ್ ಪಕ್ಷವು ಮತ್ತಷ್ಟು ಮಹನೀಯರ ಭಾವಚಿತ್ರಗಳನ್ನು ಹಾಕಬೇಕೆಂದು ಒತ್ತಾಯಿಸಿದ್ದು ವಿಪರ್ಯಾಸ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಐದು ದನ ಕೊಂದಿದ್ದ ಹುಲಿ ಸೆರೆ

ಜೊಯಿಡಾ (ಉತ್ತರ ಕನ್ನಡ): ತಾಲ್ಲೂಕಿನಲ್ಲಿ ಐದು ಜಾನುವಾರುಗಳನ್ನು ಬಲಿ ಪಡೆದು ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದ ಹುಲಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ. ಕಳ್ನೆ ಎಂಬಲ್ಲಿ ದನದ ಕೊಟ್ಟಿಗೆಯಲ್ಲಿ ಇಡಲಾಗಿದ್ದ ಬೋನಿನಲ್ಲಿ ಭಾನುವಾರ ರಾತ್ರಿ ಸೆರೆಯಾಗಿದೆ.

ಏಳರಿಂದ ಒಂಬತ್ತು ವಯಸ್ಸಿನ ಹೆಣ್ಣು ಹುಲಿಯು, ವಾರದ ಅವಧಿಯಲ್ಲಿ ಉಳವಿ ಭಾಗದ ಕಾಳಸಾಯಿ ಸಮೀಪದ ಚಂದ್ರಾಳಿ ಹಾಗೂ ಹೆಣಕೊಳ ಸುತ್ತಮುತ್ತ ದಾಳಿ ಮಾಡಿತ್ತು.

'ಸೆರೆ ಸಿಕ್ಕಿದ ಹುಲಿಗೆ ವಯಸ್ಸಾಗಿದ್ದು, ತುಸು ಅನಾರೋಗ್ಯದಿಂದ ಬಳಲುತ್ತಿದೆ. ಹಂಪಿಯಲ್ಲಿ ಚಿಕಿತ್ಸೆ ನೀಡಿ ಅಲ್ಲಿನ ಅಭಯಾರಣ್ಯಕ್ಕೆ ಬಿಡಲಾಗುವುದು' ಎಂದು ಕಾಳಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಮರಿಯಾ ಡಿ.ಕ್ರಿಸ್ತರಾಜು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಗಂಡು ಹುಲಿ ಸಾವು (ಚಾಮರಾಜನಗರ ವರದಿ): ಬಿಳಿಗಿರಿರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ಕೊಳ್ಳೇಗಾಲ ವಲಯ ಕಣ್ಣೂರು ಬೀಟ್‌ನಲ್ಲಿ ಕುರುಬನ ಕೆರೆ ಬಳಿ ಗಂಡು ಹುಲಿಯ ಕಳೇಬರ ಪತ್ತೆಯಾಗಿರುವುದು ತಡವಾಗಿ ಗೊತ್ತಾಗಿದೆ.

ಹುಲಿಗೆ 5ರಿಂದ 7ವರ್ಷ ವಯಸ್ಸಾಗಿರಬಹುದು ಎಂದು ಅಂದಾಜಿಸಲಾಗಿದೆ.

'ಹುಲಿಯ ಉಗುರುಗಳು, ಹಲ್ಲುಗಳು ಎಲ್ಲವೂ ಇವೆ. ಮುಖಕ್ಕೂ ಗಾಯಗಳಾಗಿವೆ. ಒಂದು ಕಣ್ಣು ಹೊರಗಡೆ ಬಂದಿದೆ. ದೇಹದ ಅಂಗಾಂಗಳ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ, ಡಿಸಿಎಫ್ ದೀಪ್ ಜೆ. ಕಾಂಟ್ರಾಕ್ಟರ್ ತಿಳಿಸಿದ್ದಾರೆ.

ಈಶ್ವರಪ್ಪ– ರಮೇಶ ಚರ್ಚೆ

ಬೆಳಗಾವಿ: ಬಿಜೆಪಿ ಶಾಸಕರಾದ ಕೆ.ಎಸ್. ಈಶ್ವರಪ್ಪ ಮತ್ತು ರಮೇಶ ಜಾರಕಿಹೊಳಿ ಅವರು ಸೋಮವಾರ ಸಂಜೆ ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿ ಚರ್ಚಿಸಿದರು.

ಸಚಿವ ಸಂಪುಟದಲ್ಲಿ ಸ್ಥಾನ ದೊರೆಯದೆ ಅತೃಪ್ತಗೊಂಡಿರುವ ಈ ಇಬ್ಬರ ಭೇಟಿ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ. ನಂತರ, ಇಬ್ಬರು ಒಟ್ಟಿಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಇಬ್ಬರು ಸೋಮವಾರದ ಕಲಾಪದಲ್ಲಿ ಭಾಗಿಯಾಗಿರಲಿಲ್ಲ.

'ಬೆಳಗಾವಿಗೆ ಬರುತ್ತೇನೆ. ಆದರೆ, ಕಲಾಪದಲ್ಲಿ ಭಾಗವಹಿಸುವುದಿಲ್ಲ' ಎಂದು ಈಶ್ವರಪ್ಪ ಅವರು ಬಾಗಲಕೋಟೆಯಲ್ಲಿ ಹೇಳಿದ್ದರು.

ಮೊದಲ ವಾರವೇ ಪ್ರಮುಖ ಮಸೂದೆಗಳ ಮಂಡನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣವಿಧಾನಸೌಧ): ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಶೇ 6 ರಷ್ಟು ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಿರುವ ಮಸೂದೆಯೂ ಸೇರಿ ಒಟ್ಟು 5 ಪ್ರಮುಖ ಮಸೂದೆಗಳನ್ನು ವಿಧಾನಸಭೆಯಲ್ಲಿ ಮೊದಲ ವಾರವೇ ಮಂಡಿಸಲು ವಿಧಾನಸಭೆ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಈ ಸಭೆಗೆ ಕಾಂಗ್ರೆಸ್ ಸದಸ್ಯರು ಬಹಿಷ್ಕಾರ ಹಾಕಿದ್ದರು.

ಜೆಡಿಎಸ್‌ನ ಉಪನಾಯಕ ಬಂಡೆಪ್ಪ ಕಾಶೆಂಪೂರ, ಶಾಸಕ ಎಚ್.ಡಿ.ರೇವಣ್ಣ ಭಾಗವಹಿಸಿದ್ದರು.

'ಎಲ್ಲ ಮಸೂದೆಗಳ ಕುರಿತು ಸಮಗ್ರ ಚರ್ಚೆ ನಡೆಯಬೇಕು, ಎಲ್ಲ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು. ಸಾಮಾನ್ಯವಾಗಿ ಕೊನೆಯಲ್ಲಿ ಮಸೂದೆಗಳು ಮಂಡನೆ ಆಗುವುದರಿಂದ ಚರ್ಚೆಗೆ ಅವಕಾಶ ಸಿಗದೇ ತರಾತುರಿಯಲ್ಲಿ ಅಂಗೀಕಾರ ಮಾಡಲಾಗುತ್ತಿದೆ' ಎಂದು ವಿಧಾನ ಸಭಾಧ್ಯಕ್ಷ ಕಾಗೇರಿ ಅವರು ತಿಳಿಸಿದರು.

ಜೆಡಿಎಸ್‌ನ ಬಂಡೆಪ್ಪ ಕಾಶೆಂಪುರ ಅವರು ಮಾತನಾಡಿ, ಉತ್ತರ ಕರ್ನಾಟಕ ಸಮಸ್ಯೆಗಳ ಬಗ್ಗೆ ಸಮಗ್ರ ಚರ್ಚೆ ನಡೆಯಬೇಕು. ಪ್ರತಿ ಸಲ ಅಧಿವೇಶನ ನಡೆದಾಗಲೂ ಈ ಭಾಗದ ಸಮಸ್ಯೆಗಳ ಬಗ್ಗೆ ಆದ್ಯತೆ ಸಿಗುತ್ತಿಲ್ಲ ಎಂಬ ಭಾವನೆ ವ್ಯಕ್ತವಾಗುತ್ತಿದೆ ಎಂದು ಹೇಳಿದರು.

ಇದಕ್ಕೆ ಸಹಮತ ವ್ಯಕ್ತಪಡಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಮಸೂದೆಗಳಲ್ಲದೇ, ಉತ್ತರ ಕರ್ನಾಟಕ ಪ್ರದೇಶಗಳ ಸಮಸ್ಯೆಗಳ ಬಗ್ಗೆ ಚರ್ಚೆಗೆ ಹೆಚ್ಚಿನ ಸಮಯ ನೀಡೋಣ ಎಂದು ಹೇಳಿದರು.

ಮಂಡನೆ ಆಗಲಿರುವ ಮಸೂದೆಗಳು:

- 2022 ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು(ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಮಸೂದೆ
- 2022 ನೇ ಸಾಲಿನ ಕರ್ನಾಟಕ ಭೂ ಕಂದಾಯ(2 ನೇ ತಿದ್ದುಪಡಿ) ಮಸೂದೆ
- 2022 ನೇ ಸಾಲಿನ ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಮಸೂದೆ
- 2022 ನೇ ಸಾಲಿನ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ

ವಿಧಾನಸಭೆಯಲ್ಲಿ ಶಾಸಕರ ನಿರುತ್ಸಾಹ • ಅಧಿವೇಶನ ಭಣ ಭಣ

ಕಲಾಪಕ್ಕೆ ಶಾಸಕ ಈಶ್ವರಪ್ಪ ಗೈರು

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ಕಲಾಪದ ಮೊದಲದಿನವೇ ಶಾಸಕರ ನಿರಾಸಕ್ತಿ ಕಂಡು ಬಂದಿತು. ಕಲಾಪಕ್ಕೆ ಹಾಜರಾದ ಶಾಸಕರ ಸಂಖ್ಯೆ ಅತಿ ಕಡಿಮೆ. ಪುನಃ ಸಚಿವ ಸ್ಥಾನ ಸಿಗದೇ ಮುನಿಸಿಕೊಂಡಿರುವ ಬಿಜೆಪಿಯ ಕೆ.ಎಸ್. ಈಶ್ವರಪ್ಪ, ಬೆಳಗಾವಿ ಜಿಲ್ಲೆಯವರೇ ಆದ ರಮೇಶ ಜಾರಕಿಹೊಳಿ ಅವರು ವಿಧಾನಸೌಧದತ್ತ ಸುಳಿಯಲೇ ಇಲ್ಲ.

ಸಂತಾಪ ಸೂಚನೆ ಮುಗಿಯುವವರೆಗೂ ಕೋರಂಗೆ ಅಗತ್ಯವಿರುವಷ್ಟು ಶಾಸಕರು ಮಾತ್ರ ಹಾಜರಿದ್ದರು. ಬಹುಪಾಲು ಆಸನಗಳು ಖಾಲಿ ಉಳಿದಿದ್ದವು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಈ ಅಧಿವೇಶನದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದರಿಂದ ಜೆಡಿಎಸ್ ಶಾಸಕರ ಸಂಖ್ಯೆಯೂ ವಿರಳವಾಗಿತ್ತು.

ಈಶ್ವರಪ್ಪ ಅವರು ವಿಧಾನಸಭಾಧ್ಯಕ್ಷರಿಗೆ ಪತ್ರ ಬರೆದು ತುರ್ತು ಮತ್ತು ಅನಿವಾರ್ಯ ಕಾರಣಗಳಿಂದ ಅಧಿವೇಶನದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ.

ಸೌಜನ್ಯದ ಪ್ರತಿಭಟನೆ -ಈಶ್ವರಪ್ಪ: ಬಾಗಲಕೋಟೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಈಶ್ವರಪ್ಪ, 'ಸಚಿವ ಸಂಪುಟಕ್ಕೆ ನನ್ನನ್ನು ತೆಗೆದುಕೊಳ್ಳದ್ದಕ್ಕೆ ಅಭಿಮಾನಿಗಳಿಗೆ ನೋವಾಗಿದೆ. ಇದು ನನಗೂ ನೋವುಂಟು ಮಾಡಿದೆ. ಆದ್ದರಿಂದ ಬೆಳಗಾವಿ ವಿಧಾನಮಂಡಲ ಅಧಿವೇಶನದಿಂದ ದೂರ ಉಳಿಯುತ್ತೇನೆ' ಎಂದು ಹೇಳಿದರು.

'ಜನರು, ನಿಮ್ಮನ್ನೇಕೆ ಸಂಪುಟಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂದು ಪ್ರಶ್ನಿಸುತ್ತಿದ್ದಾರೆ. ಇದರಿಂದ ಅಪಮಾನ ಆಗ್ತಿದೆ. ಇದನ್ನು ಅರ್ಥ ಮಾಡಿಸಲು ಸೌಜನ್ಯದ ಪ್ರತಿಭಟನೆ ಮಾಡುತ್ತಿದ್ದೇನೆ' ಎಂದು ಅಸಮಾಧಾನ ಹೊರಹಾಕಿದರು.

'ಬೆಳಗಾವಿಗೆ ಹೋಗ್ತೀನಿ. ಅಧಿವೇಶನಕ್ಕೆ ಹೋಗಲ್ಲ. ಸಭಾಧ್ಯಕ್ಷ ರಿಂದ ಅನುಮತಿ ಪಡೆಯಲು ಹೋಗುತ್ತಿದ್ದೇನೆ ಎಂದರು. 'ಇವತ್ತು, ನಾಳೆ ನಿಮ್ಮನ್ನ ಸಚಿವರನ್ನ ಮಾಡ್ತೀವಿ ಎಂದು ಸಿಎಂ ಬೊಮ್ಮಾಯಿ ಹೇಳುತ್ತಲೇ ಇದ್ದಾರೆ. ಯಾವ ಕಾರಣಕ್ಕೆ ತೆಗೆದುಕೊಳ್ಳುತ್ತಿಲ್ಲ ಗೊತ್ತಿಲ್ಲ' ಎಂದರು.

ರಮೇಶ್ ಜಾರಕಿಹೊಳಿ ಅವರೂ ತಮ್ಮನ್ನು ಸಚಿವರನ್ನಾಗಿ ಮಾಡದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದು, ಅವರು ಈ ಬಾರಿ ಕಲಾಪಕ್ಕೆ ಹಾಜರಾಗುವ ಸಾಧ್ಯತೆ ಕಡಿಮೆ ಎಂದು ಮೂಲಗಳು ಹೇಳಿವೆ.

'ಸಾವನ್ನು ಕಣ್ಣಾರೆ ಕಂಡಿದ್ದು ಇದೇ ಮೊದಲು'

ಟಿಕೆಟ್ ಹಂಚಿಕೆ ಕುರಿತು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಸಭೆ ಕರೆಯಲಾಗಿತ್ತು. ಅಲ್ಲಿ ಟಿಕೆಟ್ ಆಕಾಂಕ್ಷಿ ಶ್ರೀಶೈಲಬಿದರೂರು ಅವರು ಇದ್ದರು. ಇದಕ್ಕಿದ್ದಂತೆ ಅವರಿಗೆ ಹೃದಯಾಘಾತವಾಯಿತು. ಅವರ ನೋವಿನ ಬಳಲಿಕೆ ನಮಗೆಲ್ಲ ಆಘಾತ ಉಂಟು ಮಾಡಿತು. ಸಾವನ್ನು ಕಣ್ಣಾರೆ ಕಂಡಿದ್ದು ಇದೇ ಮೊದಲು ಎಂದು ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಹೇಳಿದರು.

'ಶ್ರೀಶೈಲ ಅವರು ಗದಗ ಅಥವಾ ರೋಣದಿಂದ ಟಿಕೆಟ್ ಕೊಡಿಸಿ ಎಂದು ನನ್ನನ್ನು ಕೇಳಿದ್ದರು. ಅನಾರೋಗ್ಯದ ನಡುವೆಯೂ ಬೆಂಗಳೂರಿಗೆ ಬಂದಿದ್ದರು. ಗದಗ ಆಗಲ್ಲ, ಅಲ್ಲಿ ಎಚ್.ಕೆ.ಪಾಟೀಲ ಇದ್ದಾರೆ ರೋಣ ನೋಡೋಣ ಎಂದಿದ್ದೆ. ಮೀಟಿಂಗ್‌ಗೂ ಬಂದಿದ್ದರು. ಅಲ್ಲೇ ಹೃದಯಾಘಾತ ಆಯಿತು. ಅದೇನೋ ಹೇಳುತ್ತಾರಲ್ಲ... ರಾಜಕಾರಣವನ್ನು ನಾವು ಬಿಟ್ಟರೂ ರಾಜಕಾರಣ ನಮ್ಮನ್ನು ಬಿಡುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ದಮ್ ಬಿರಿಯಾನಿ ತಿನ್ನಿಸ್ತಾ ಇದ್ರು'

ರಾಜ್ಯಸಭೆಯ ಮಾಜಿ ಸದಸ್ಯ ಅಬ್ದುಲ್ ಸಮದ್ ಸಿದ್ದಿಕಿ ಅವರ ಮನೆ ಹೋದಾಗ ಅದೇನೊ ದಮ್... ಬಿರಿಯಾನಿ ಅಂತೆ, ಅದನ್ನ ತಿನ್ನಿಸ್ತಾ ಇದ್ರು ಎಂದು ಸಿದ್ದರಾಮಯ್ಯ ಅವರು ಉಪನಾಯಕ ಯು.ಟಿ.ಖಾದರ್ ಅವರನ್ನು ನೋಡಿದರು. 'ನಮ್ಮ ಕಡೆ ಅದೆಲ್ಲ ಇಲ್ಲಾ ಮಾರಾಯರೇ, ಅದನ್ನು ದಮ್ ಬಿರಿಯಾನಿ' ಎನ್ನುತ್ತಾರೆ ಎಂದು ಖಾದರ್ ರಾಗ ಎಳೆದರು. ಸಮದ್ ಅವರಿಗೆ ಸಂತಾಪ ಸೂಚಿಸುವಾಗ ಸ್ವಾರಸ್ಯಕರ ಮಾತಿನ ತುಣುಕು ಕೇಳಿ ಬಂದಿತು.

ಸಭಾಪತಿ ಆಯ್ಕೆ ನಾಳೆ: ಹೊರಟ್ಟಿಗೆ ಮತ್ತೆ ಪಟ್ಟ?

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ವಿಧಾನ ಪರಿಷತ್ ಸಭಾಪತಿ ಆಯ್ಕೆಗೆ ಇದೇ 21ರಂದು ಚುನಾವಣೆ ನಡೆಯಲಿದ್ದು, ಬಸವರಾಜ ಹೊರಟ್ಟಿ ಅವರೇ ಆಡಳಿತಾರೂಢ ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗುವುದು ನಿಶ್ಚಿತವಾಗಿದೆ.

ಪರಿಷತ್‌ನಲ್ಲಿ ಒಟ್ಟು 75 ಸ್ಥಾನಗಳ ಪೈಕಿ, ಆಡಳಿತಾರೂಢ ಬಿಜೆಪಿ 40 (ಹಂಗಾಮಿ ಸಭಾಪತಿ ಸೇರಿ), ವಿರೋಧ ಪಕ್ಷ ಕಾಂಗ್ರೆಸ್ 26 ಹಾಗೂ ಜೆಡಿಎಸ್ 8, ಪಕ್ಷೇತರ ಒಬ್ಬ ಸದಸ್ಯರು ಇದ್ದಾರೆ. ಸಭಾಪತಿಯಾಗಲು 38 ಮತಗಳ ಪಡೆಯಬೇಕು. ಬಿಜೆಪಿ ಸ್ಪಷ್ಟ ಬಹುಮತ ಹೊಂದಿರುವುದರಿಂದ ಹೊರಟ್ಟಿ ಆಯ್ಕೆ ಸುಗಮವಾಗಿದೆ.

ಜೆಡಿಎಸ್‌ನಿಂದ ಪರಿಷತ್ ಸದಸ್ಯರಾಗಿದ್ದ ವೇಳೆ ಬಿಜೆಪಿ ಬೆಂಬಲ ಪಡೆದಿದ್ದ ಹೊರಟ್ಟಿ ಸಭಾಪತಿ ಸ್ಥಾನ ಅಲಂಕರಿಸಿದ್ದರು. ಆ ಬಳಿಕ ಚುನಾವಣೆ ಎದುರಾದಾಗ ಬಿಜೆಪಿ ನಾಯಕರ ಆಹ್ವಾನದ ಮೇರೆ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರು. ಬಸವರಾಜ ಹೊರಟ್ಟಿ ರಾಜೀನಾಮೆ ನೀಡಿದ ಬಳಿಕ ರಘುನಾಥ್ ರಾವ್ ಮಲ್ಕಾಪುರೆ ಅವರನ್ನು ಹಂಗಾಮಿ ಸಭಾಪತಿಯಾಗಿ ನೇಮಕ ಮಾಡಲಾಗಿತ್ತು.

ಹೊರಟ್ಟಿ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳುವ ಸಂದರ್ಭದಲ್ಲಿ ಮುಂದೆ ಸಭಾಪತಿ ಸ್ಥಾನ ನೀಡುವುದಾಗಿ ಬಿಜೆಪಿ ನಾಯಕರು ಅವರಿಗೆ ಭರವಸೆಯನ್ನೂ ನೀಡಿದ್ದರು.

ಆದರೆ, ಚುನಾವಣೆಯಲ್ಲಿ ಬಿಜೆಪಿಯಿಂದ ಕಣಕ್ಕಿಳಿದು ಭಾರಿ ಬಹುಮತದಿಂದ ಗೆಲುವು ಸಾಧಿಸಿ ಹಲವು ತಿಂಗಳಾದರೂ ಅವರಿಗೆ ಸಭಾಪತಿ ಸ್ಥಾನ ನೀಡಿರಲಿಲ್ಲ. ಇದೀಗ ಚುನಾವಣೆ ನಿಗದಿಯಾಗಿದ್ದು, ಹೊರಟ್ಟಿ ಅವರಿಗೆ ಮತ್ತೆ ಅವಕಾಶ ಕೂಡಿಬರುವ ಸಾಧ್ಯತೆ ಹೆಚ್ಚಿದೆ.

ಬೆಳಗಾವಿಯ ಸುವರ್ಣ ಸೌಧದ ವಿಧಾನ ಪರಿಷತ್ ಕಲಾಪದಲ್ಲಿ ಸದಸ್ಯರಾದ ಆಯನೂರು ಮಂಜುನಾಥ್, ನಾರಾಯಣಸ್ವಾಮಿ ಮತ್ತು ಸಚಿವ ಬಿ.ಸಿ. ನಾಗೇಶ್ ಚರ್ಚೆಯಲ್ಲಿ ತೊಡಗಿದರು ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್.ಜಿ

ಬೇಡಿಕೆ ಈಡೇರಿಕೆಗೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರು, ಗ್ರಾಮ ಪಂಚಾಯಿತಿ ನೌಕರರು, ಸಾರಿಗೆ ಸಂಸ್ಥೆ ನೌಕರರು ಇಲ್ಲಿನ ಸುವರ್ಣ ವಿಧಾನಸೌಧದ ಮುಂದೆ ಇಡೀ ದಿನ ಪ್ರತಿಭಟನೆ ನಡೆಸಿದರು.

ಕಬ್ಬಿನ ಎಸ್‌ಎಪಿ ನೀಡಬೇಕು, ಧಾನ್ಯ ಖರೀದಿ ಕೇಂದ್ರಗಳನ್ನು ವರ್ಷವಿಡೀ ತೆರೆಯಬೇಕು ಹಾಗೂ ಭೂ ಸುಧಾರಣಾ ಕಾಯ್ದೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂಜೆ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದ ರೈತರನ್ನು ಪೊಲೀಸರು ತಡೆದರು. ಸ್ಥಳಕ್ಕೆ ಬಂದ ಗೃಹಸಚಿವ ಆರಗ ಜ್ಞಾನೇಂದ್ರ ಮನವಿ ಸ್ವೀಕರಿಸಿದರು.

ಇನ್ನೊಂದೆಡೆ, ಗ್ರಾಮ ಪಂಚಾಯಿತಿ ನೌಕರರನ್ನು ಸಿ ಮತ್ತು ಡಿ ದರ್ಜೆ ನೌಕರರಾಗಿ ನೇಮಕ ಮಾಡಿಕೊಳ್ಳಬೇಕು, ಸೇವಾಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಶ್ರೇಯೋಭಿವೃದ್ಧಿ ಸಂಘ ಹಾಗೂ ಆರ್‌ಡಿಪಿಆರ್ ವತಿಯಿಂದ ಅನಿರ್ದಿಷ್ಟ ಧರಣಿ ಆರಂಭಿಸಲಾಯಿತು.

ಸಂಘದ ಅಧ್ಯಕ್ಷ ದೇವಿಪ್ರಸಾದ ಬೊಲ್ಮ ನೇತೃತ್ವದಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಅಪಾರ ಸಂಖ್ಯೆಯ ನೌಕರರು ಬಿಸಿಲಲ್ಲೇ ದಿನ ಕಳೆದರು.

ಗ್ರ್ಯಾಚುಟಿ ನೀಡಬೇಕು ಎಂದು ಆಗ್ರಹಿಸಿ ಸಾರಿಗೆ ಸಂಸ್ಥೆ ನೌಕರರ ಮತ್ತು ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಮಹಾ ಮಂಡಳದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಮಹಾಮಂಡಳದ ಗೌರವಾಧ್ಯಕ್ಷ ಅಬ್ದುಲ್ ರಹಿಮಾನ ಬಿದರಕುಂದಿ, ಅಧ್ಯಕ್ಷ ಆರ್. ಪಿ.ಕೋಪರ್ಡೆ ನೇತೃತ್ವ ವಹಿಸಿದ್ದರು.

ಬಿಜೆಪಿ ಎಸ್‌ಸಿ ಕಾರ್ಯಕಾರಿಣಿ

ಮೈಸೂರು: 'ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿಯನ್ನು 2023ರ ಜ.7 ಮತ್ತು 8ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ತಿಳಿಸಿದರು.

'ಪರಿಶಿಷ್ಟ ಜಾತಿಯವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಕುರಿತು ಚರ್ಚಿಸಲಾಗುವುದು. ಮುಂದೇನು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಭಾವಚಿತ್ರ ಅನಾವರಣ ರಾಜಕೀಯ

ಒಂದನೇ ಪುಟದಿಂದ

ವಿವಾದಗಳ ಮಧ್ಯೆಯೇ ಸೋಮವಾರ ಬೆಳಿಗ್ಗೆ 10.40ರ ಸುಮಾರಿಗೆ ಸದಸ್ಯರು, ಪತ್ರಕರ್ತರನ್ನೂ ಹೊರಗಿಟ್ಟು ಭಾವಚಿತ್ರಗಳನ್ನು ಅನಾವರಣ ಮಾಡಲಾಯಿತು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನಾವರಣಗೊಳಿಸಿದರು. ಸಚಿವರಾದ ಜೆ.ಸಿ.ಮಾಧುಸ್ವಾಮಿ, ಗೋವಿಂದ ಕಾರಜೋಳ, ಸಿ.ಸಿ. ಪಾಟೀಲ್, ಕೋಟ ಶ್ರೀನಿವಾಸ ಪೂಜಾರಿ, ಕೆ.ಸಿ. ನಾರಾಯಣಗೌಡ, ಬೈರತಿ ಬಸವರಾಜ, ಪ್ರಭು ಚವ್ಹಾಣ ಇದ್ದರು.

ಪಟ್ಟು ಬದಲಿಸಿದ 'ಕೈ': ಸಾವರ್ಕರ್ ಭಾವಚಿತ್ರ ಅಳವಡಿಕೆಗೆ ಕಾಂಗ್ರೆಸ್, ಜೆಡಿಎಸ್ ಸಹಜವಾಗಿ ವಿರೋಧ ವ್ಯಕ್ತಪಡಿಸಲಿದ್ದು ರಾಜಕೀಯವಾಗಿ ಇದರ ಲಾಭ ಪಡೆಯಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರವಾಗಿತ್ತು. ಇದರ ಮರ್ಮ ಅರಿತ ಕಾಂಗ್ರೆಸ್ ಪಕ್ಷ ತನ್ನ ಪಟ್ಟನ್ನು ಬದಲಿಸಿತು. 'ಸಾವರ್ಕರ್ ಅವರ ಭಾವಚಿತ್ರಕ್ಕೆ ನಮ್ಮ ವಿರೋಧವಿಲ್ಲ. ಇನ್ನೂ ಹಲವು ಮಹಾನ್ ನಾಯಕರ ಚಿತ್ರ ಅಳವಡಿಸಬಹುದಿತ್ತು. ಆದರೆ, ಸರ್ಕಾರವು ವಿರೋಧ ಪಕ್ಷಗಳ ಗಮನಕ್ಕೂ ತರದೇ ಮತ್ತು ಕಲಾಪ ಸಲಹಾ ಸಮಿತಿ ಸಭೆಯಲ್ಲೂ ಚರ್ಚಿಸಿದೇ, ಕಡೇ ಪಕ್ಷ ಆಹ್ವಾನ ನೀಡದೇ ಗುಟ್ಟಾಗಿ ಅನಾವರಣಗೊಳಿಸಿದ್ದು ಸರಿಯಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿತು.

ಸಾವರ್ಕರ್ ಭಾವಚಿತ್ರ ಅಳವಡಿಕೆಯನ್ನು ನೇರವಾಗಿ ವಿರೋಧಿಸದ ಕಾಂಗ್ರೆಸ್ ನಾಯಕರು, ರಾಜ್ಯ ಮತ್ತು ರಾಷ್ಟ್ರದ ಇತರ ಮಹಾನ್ ನಾಯಕರ ಭಾವಚಿತ್ರಗಳನ್ನೂ ಅಳವಡಿಸಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟು ಧರಣಿ ನಡೆಸಿದರು. ಕಲಾಪದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವ ಗೋಜಿಗೆ ಹೋಗಲಿಲ್ಲ. 'ಕಾಂಗ್ರೆಸ್ ಈ ವಿಚಾರದಲ್ಲಿ ಕಲಾಪದಲ್ಲಿ ಗದ್ದಲ ಎಬ್ಬಿಸುತ್ತದೆ. ಆಗ ಕಲಾಪ ಬಲಿಯಾಗುತ್ತದೆ. ಉತ್ತರ ಕರ್ನಾಟಕದ ವಿಷಯಗಳ ಚರ್ಚೆಗೆ ಕಾಂಗ್ರೆಸ್‌ಗೆ ಆಸಕ್ತಿ ಇಲ್ಲ ಹಾಗೂ ಸಾವರ್ಕರ್ ವಿರೋಧಿಸುವ ಮೂಲಕ ಹಿಂದೂ ವಿರೋಧಿ ಎಂಬುದನ್ನು ಮತ್ತೆ ತೋರಿಸುತ್ತದೆ. ಕಾಂಗ್ರೆಸ್ ಅನ್ನು ಹಣಿಯಲು ಇದು ಅಸ್ತ್ರವಾಗಲಿದೆ. ಇಂತಹ ದಾಳಗಳನ್ನು ಪದೇ ಪದೇ ಉರುಳಿಸುತ್ತಲೇ ಇರುತ್ತೇವೆ' ಎಂದು ಸಚಿವರೊಬ್ಬರು ಹೇಳಿದ್ದರು. ಇದರ ಅರಿವಿದ್ದ ಕಾಂಗ್ರೆಸ್ ನಾಯಕರು, ಭಾವಚಿತ್ರದ ವಿಷಯವನ್ನು ಅಬ್ಬರಕ್ಕೆ ತೆಗೆದುಕೊಂಡ ಹೋಗದೇ, ಬಿಜೆಪಿ ಆಟಕ್ಕೆ ಪ್ರತಿಯಾಟ ಆಡಿದರು.

ಕಲಾಪ ಆರಂಭವಾಗುವುದಕ್ಕೂ ಮುನ್ನ ಸದನದೊಳಗೆ ಅನೌಪಚಾರಿಕವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್, ಸಚಿವ ಆರ್.ಅಶೋಕ ಈ ವಿಷಯದ ಬಗ್ಗೆ ಪ್ರಸ್ತಾಪಿಸಿದರು.

'ಭಾವಚಿತ್ರ ಅಳವಡಿಕೆ ವಿಚಾರ ತಮಗೆ ಗೊತ್ತೇ ಇಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರಿಗೆ ಗೊತ್ತಿಲ್ಲದೇ ಹಾಕುತ್ತಾರೆಯೇ' ಎಂದ ಡಿ.ಕೆ.ಶಿವಕುಮಾರ್, 'ಹಾಗಿದ್ದರೆ ಅವರಿಗೆ ಅತ್ಯಂತ ಮುಗ್ಧ ಎಂಬ ಪ್ರಶಸ್ತಿ ಕೊಡಬೇಕು' ಎಂದು ಛೇಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಅಶೋಕ, 'ಹಾಗಿದ್ದರೆ ನೀವು ಡೇಟ್ ಫಿಕ್ಸ್ ಮಾಡಿ ಕಾರ್ಯಕ್ರಮ ನಿಗದಿ ಮಾಡಿ' ಎಂದು ಡಿ.ಕೆ.ಶಿವಕುಮಾರ್ ಅವರ ಕಾಲೆಳೆದರು.

ಕಾಂಗ್ರೆಸ್‌ನ ಈಶ್ವರ ಖಂಡ್ರೆಯವರು, 'ಬಸವೇಶ್ವರ ಅವರ ಭಾವಚಿತ್ರ ಅಷ್ಟು ಸರಿಯಾಗಿ ಮೂಡಿ ಬಂದಿಲ್ಲ, ಬಸವಣ್ಣನವರ ಭಾವಕ್ಕೆ ಹತ್ತಿರವಿಲ್ಲ. ಬೇರೆಯದೇ ಅಳವಡಿಸಬೇಕು' ಎಂದರು.

'ನೀವೇ ಒಂದು ಮಾಡಿಸಿಕೊಡಿ, ಅದನ್ನೇ ಹಾಕಿಸೋಣ' ಎಂಬ ಪ್ರತಿಕ್ರಿಯೆ ಆಡಳಿತ ಪಕ್ಷದ ಕಡೆಯಿಂದ ಬಂದಿತು.

ಸಾವರ್ಕರ್ ಭಾವಚಿತ್ರ ಹಾಕುವ ವಿಚಾರ ಗೊತ್ತಿರಲಿಲ್ಲ: ಸಿ.ಎಂ ಬೊಮ್ಮಾಯಿ

'ಸುವರ್ಣ ವಿಧಾನಸೌಧದ ವಿಧಾನಸಭೆ ಸಭಾಂಗಣದಲ್ಲಿ ವೀರ ಸಾವರ್ಕರ್ ಸೇರಿ ಏಳು ಮಹನೀಯರ ಭಾವಚಿತ್ರ ಹಾಕುವ ವಿಚಾರ ಸ್ಪೀಕರ್‌ಗೆ ಬಿಟ್ಟಿದ್ದು, ಅದು ಅವರ ನಿರ್ಧಾರ. ನನಗೆ ಗೊತ್ತಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚಳಿಗಾಲದ ಅಧಿವೇಶನದಲ್ಲಿ ಪಾಲ್ಗೊಳ್ಳಲು ಸೋಮವಾರ ನಗರಕ್ಕೆ ಬಂದ ಅವರು, ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು.

'ಸಾವರ್ಕರ್ ಭಾವಚಿತ್ರ ಹಾಕಿದ ಬಗ್ಗೆ ಕಾಂಗ್ರೆಸ್ ಅಪಸ್ವರ ಹಾಗೂ ಇನ್ನೂ ಹಲವು ಮಹಾತ್ಮರ ಭಾವಚಿತ್ರ ಅಳವಡಿಸುವಂತೆ ಪತ್ರ ಬರೆದ ವಿಚಾರಗಳೂ ನನಗೆ ತಿಳಿದಿಲ್ಲ. ಈ ಬಗ್ಗೆ ಸ್ಪೀಕರ್ ಹಾಗೂ ವಿರೋಧ ಪಕ್ಷದವರೊಂದಿಗೆ ನಾನೇ ಮಾತನಾಡುತ್ತೇನೆ' ಎಂದರು.

'ಗಮನ ಬೇರೆಡೆ ಸೆಳೆಯಲು ಭಾವಚಿತ್ರ'

'ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ, ಭ್ರಷ್ಟಾಚಾರ ಮುಂತಾದ ವಿಷಯಗಳ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗಬೇಕಿದೆ. ಇದು ಚರ್ಚೆಗೇ ಬರದಂತೆ ಕಲಾಪದ ಗಮನವನ್ನು ಬೇರೆಡೆಗೆ ಸೆಳೆಯಲು ಭಾವಚಿತ್ರ ವಿವಾದವನ್ನು ಮುನ್ನಲೆಗೆ ತರಲಾಗಿದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

'ಭಾವಚಿತ್ರ ಅನಾವರಣ ಕಾರ್ಯಕ್ರಮಕ್ಕೆ ನಮಗೆ ಆಹ್ವಾನ ಇರಲಿಲ್ಲ. ಮಾಧ್ಯಮದ ಮೂಲಕ ಗೊತ್ತಾಯಿತು. ಯಾರದೇ ಭಾವಚಿತ್ರ ಇಡಲು ವಿರೋಧವಿಲ್ಲ. ಆದರೆ, ಚರ್ಚಿಸದೆ ಇಟ್ಟಿರುವುದಕ್ಕೆ ಮಾತ್ರ ನಮ್ಮ ವಿರೋಧ' ಎಂದರು.

ನೆಹರೂ ಭಾವಚಿತ್ರ ಇಲ್ಲ

ವಿಧಾನಸಭೆ ಸಭಾಂಗಣದೊಳಗೆ ದೇಶದ ಮೊದಲ ಪ್ರಧಾನಮಂತ್ರಿ ಪಂಡಿತ್ ಜವಾಹರ ಲಾಲ್ ನೆಹರೂ ಅವರ ಭಾವಚಿತ್ರವನ್ನು ಹಾಕಿಲ್ಲ.

ಸಭಾಧ್ಯಕ್ಷದ ಪೀಠದ ಹಿಂದೆ ಜಗಜ್ಯೋತಿ ಬಸವೇಶ್ವರ ಭಾವಚಿತ್ರ ಹಾಕಲಾಗಿದೆ. ಎಡ ಮತ್ತು ಬಲದಲ್ಲಿ ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರಬೋಸ್, ಸರ್ದಾರ್ ವಲ್ಲಭಭಾಯ್ ಪಟೇಲ್, ಡಾ.ಬಿ. ಆರ್.ಅಂಬೇಡ್ಕರ್ ಮತ್ತು ಸಾವರ್ಕರ್ ಭಾವಚಿತ್ರಗಳನ್ನು ಹಾಕಲಾಗಿದೆ.

ಡಿ. 30ರಿಂದ ಕಾಂಗ್ರೆಸ್ ಬಸ್ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಇದೇ 30ರಿಂದ ಕಾಂಗ್ರೆಸ್ ನಾಯಕರಿಂದ ಬಸ್ ಯಾತ್ರೆ ಆರಂಭವಾಗಲಿದ್ದು, ಮೊದಲ ದಿನ ವಿಜಯಪುರದಲ್ಲಿ ಕೃಷ್ಣ ನೀರು ಹಂಚಿಕೆ ವಿಚಾರವಾಗಿ ಸಮಾವೇಶ ನಡೆಯಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕಾಂಗ್ರೆಸ್ ಶಾಸಕಾಂಗ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹುಬ್ಬಳ್ಳಿಯಲ್ಲಿ ಜ.2ರಂದು ಮಹದಾಯಿ ವಿಚಾರವಾಗಿ ಹೋರಾಟ, ಜ. 8 ರಂದು ಚಿತ್ರದುರ್ಗದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ' ಎಂದರು.

'ಬಸ್ ಯಾತ್ರೆ ಜ.10 ರಂದು ಬೆಳಗಾವಿಗೆ ಬರಲಿದ್ದು, 11ರಂದು ಚಿಕ್ಕೋಡಿ ಹಾಗೂ ಬೆಳಗಾವಿಯಲ್ಲಿ ಸಭೆ ನಡೆಯಲಿದೆ. ನಂತರ ನಾಲ್ಕು ದಿನ ವಿಶ್ರಾಂತಿ ಪಡೆದು, 16ರಂದು ಹೊಸಪೇಟೆಗೆ ತೆರಳುತ್ತೇವೆ' ಎಂದು ವಿವರಿಸಿದರು.

ಹೊಸಪೇಟೆ ಮತ್ತು ಕೊಪ್ಪಳದಲ್ಲಿ ಜ. 17ರಂದು, 18 ರಂದು ಬಾಗಲಕೋಟೆ ಮತ್ತು ಗದಗ, 19ರಂದು ಹಾವೇರಿ ಮತ್ತು ದಾವಣಗೆರೆಯಲ್ಲಿ ಯಾತ್ರೆ ನಡೆಯಲಿದೆ. 21ರಂದು ಹಾಸನ ಮತ್ತು ಚಿಕ್ಕಮಗಳೂರು, 22ರಂದು ಉಡುಪಿ ಮತ್ತು ದಕ್ಷಿಣ ಕನ್ನಡ, 23ರಂದು ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಪ್ರವಾಸ ನಡೆಯಲಿದೆ ಎಂದು ಹೇಳಿದರು.

24 ರಂದು ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ, 26 ರಂದು ಮೈಸೂರು ಹಾಗೂ ಚಾಮರಾಜನಗರ, 27 ರಂದು ಮಂಡ್ಯ ಹಾಗೂ ರಾಮನಗರ, 28 ರಂದು ಯಾದಗಿರಿ ಹಾಗೂ ಬೀದರ್ ಯಾತ್ರೆ ನಡೆಯಲಿದೆ. ಉತ್ತರ ಕನ್ನಡ, ರಾಯಚೂರು, ಕೊಡಗು ಹಾಗೂ ಬಳ್ಳಾರಿ ಭಾಗದ ಪ್ರವಾಸದ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

'ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಯಾತ್ರೆ ನಡೆಸಲಿದ್ದೇವೆ. ಈ ಯಾತ್ರೆ ನಂತರ 2 ತಂಡ ಮಾಡಿಕೊಂಡು 224 ಕ್ಷೇತ್ರಗಳಿಗೆ ಪ್ರವಾಸ ಮಾಡುತ್ತೇವೆ. ನಾನು ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಹಾಗೂ ಸಿದ್ದರಾಮಯ್ಯ ಅವರು ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದ್ದಾರೆ. ನಂತರ ಕರಾವಳಿ ಹಾಗೂ ಬೆಂಗಳೂರು ಭಾಗದಲ್ಲಿ ಇಬ್ಬರೂ ಒಟ್ಟಿಗೆ ಪ್ರವಾಸ ಮಾಡುತ್ತೇವೆ' ಎಂದು ಅವರು ಮಾಹಿತಿ ನೀಡಿದರು.

ಅಕ್ಕಮಹಾದೇವಿ ಮಹಿಳಾ ವಿವಿ ಘಟಿಕೋತ್ಸವ

'ಮಹಿಳೆಯರ ಮೌನವೇ ತಾರತಮ್ಯಕ್ಕೆ ಕಾರಣ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಪ್ರಪಂಚದ ಅರ್ಧದಷ್ಟು ಜನಸಂಖ್ಯೆ ಇರುವ ಮಹಿಳೆಯರು ಮೌನವಾಗಿರುವುದರಿಂದಲೇ ಎಲ್ಲ ರಂಗಗಳಲ್ಲಿಯೂ ಅಂಚಿನಲ್ಲಿದ್ದಾರೆ, ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ, ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ' ಎಂದು ನವದೆಹಲಿಯ ಜೆಎನ್‌ಯು ಕುಲಪತಿ ಪ್ರೊ.ಶಾಂತಿಶ್ರೀ ಧೂಳಿಪುಡಿ ಪಂಡಿತ್ ಹೇಳಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ 13 ಮತ್ತು 14ನೇ ಘಟಿಕೋತ್ಸವದಲ್ಲಿ ಅವರು ಘಟಿಕೋತ್ಸವ ಭಾಷಣ ಮಾಡಿದರು.

'ಬದಲಾವಣೆಗಳು ಯಾವಾಗಲೂ ನಿಧಾನ. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾಗಿರುವ ನೆಹರು ವಿವಿ ತನ್ನ ಮೊದಲ ಮಹಿಳಾ ಕುಲಪತಿಯಾಗಿ ನನ್ನನ್ನು ನಾಮನಿರ್ದೇಶನ ಮಾಡಲು 5 ದಶಕಗಳಿಗಿಂತಲೂ ಹೆಚ್ಚು ಸಮಯ ತೆಗೆದುಕೊಂಡಿತು' ಎಂದರು.

ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಬೀದರ್‌ನ ರೇಷ್ಮಾ ಕೌರ್ ಮತ್ತು ಬೆಂಗಳೂರಿನ ಡಾ.ಎಸ್.ಜಿ.ಸುಶೀಲಮ್ಮ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಜೆಎನ್‌ಯು ಕುಲಪತಿ ಪ್ರೊ. ಶಾಂತಿಶ್ರೀ ಧೂಳಿಪುಡಿ ಪಂಡಿತ್ ಇದ್ದಾರೆ –ಪ್ರಜಾವಾಣಿ ಚಿತ್ರ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸಮಾಜ ಸೇವಕಿ ಡಾ.ಎಸ್.ಜಿ.ಸುಶೀಲಮ್ಮ ಮತ್ತು ರೇಷ್ಮಾ ಕೌರ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ, ಕುಲಸಚಿವ ಪ್ರೊ.ಬಿ.ಎಸ್.ನಾವಿ, ಮೌಲ್ಯಮಾಪನ ಕುಲಸಚಿವ ಪ್ರೊ.ರಮೇಶ ಕೆ. ಇದ್ದರು.

ಬಸ್ ಹರಿದು 3 ವಿದ್ಯಾರ್ಥಿಗಳ ಸಾವು

ಬಳ್ಳಾರಿ: ಇಲ್ಲಿಗೆ ಸಮೀಪದ ಹಲಕುಂದಿ ಗ್ರಾಮದ ಪೆಟ್ರೋಲ್ ಬಂಕ್ ಬಳಿ ಭಾನುವಾರ ತಡರಾತ್ರಿ ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಹರಿದು ಮೂವರು ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮುನ್ಸಿಪಲ್ ಪಿ.ಯು ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿ ಕನಕರಾಜು (19), ವಾಡ್ಲಾ ಕಾಲೇಜು ದ್ವಿತೀಯ ಪಿಯು ವಿದ್ಯಾರ್ಥಿ ಶಂಕರ್ (18) ಮತ್ತು ಪದವಿ ಓದುತ್ತಿದ್ದ ಹೊನ್ನೂರ (22) ಮೃತರು. 'ಕಂಪ್ಲಿ ತಾಲ್ಲೂಕಿನ ಎಮ್ಮಿಗನೂರು ನಿವಾಸಿ ಕುಮಾರಪ್ಪ ಅವರ ಪುತ್ರ ಕನಕರಾಜು, ಆಂಧ್ರದ ಅನಂತಪುರ ಜಿಲ್ಲೆಯ ಮುರಡಿ ಗ್ರಾಮದ ನಾಗರಾಜ್ ಅವರ ಮಗ ಶಂಕರ್, ಸಂಡೂರು ತಾಲ್ಲೂಕು ಗೊಲ್ಲಲಿಂಗಮ್ಮನಾಗೇನಹಳ್ಳಿಯ ಹುಲಿಯಪ್ಪ ಅವರ ಪುತ್ರ ಹೊನ್ನೂರ ಕೇಟರಿಂಗ್ ಕೆಲಸಕ್ಕೆ ಹೋಗಿ ತಡರಾತ್ರಿ 1.30ರ ಸುಮಾರಿಗೆ ಬಳ್ಳಾರಿಗೆ ವಾಪಸ್ ಬರುವಾಗ ಅಪಘಾತ ಸಂಭವಿಸಿದೆ.

ಕ್ಷೇಮ ಕುಶಲ

ಗಾಯಗಳನ್ನು ವಾಸಿ ಮಾಡಿಕೊಳ್ಳಿ

ಡಾ. ವಿನಯ ಶ್ರೀನಿವಾಸ್

ಗಾಯಗಳ ಆರೈಕೆ ವೈದ್ಯಕೀಯ ವಿಜ್ಞಾನಕ್ಕೆ ಒಂದು ಸವಾಲಿನ ಸಂಗತಿ. ಅವುಗಳ ಚಿಕಿತ್ಸೆಯಲ್ಲಿ ಸೋಂಕು ತಗುಲದಂತೆ ಎಚ್ಚರ ವಹಿಸುವುದು ಬಹಳ ಮುಖ್ಯ. ಕೆಲವು ಗಾಯಗಳಿಗೆ ಆಸ್ಪತ್ರೆಯಲ್ಲಿಯೇ ಆರೈಕೆ ಬೇಕಾಗುತ್ತದೆ. ಇನ್ನು ಕೆಲವನ್ನು ಮನೆಯಲ್ಲಿಯೇ ನಿರ್ವಹಿಸಬಹುದು. ಆದರೆ ಗಾಯಗಳನ್ನು ಕಾಳಜಿ ಮಾಡುವಾಗ ಯಾವ ಅಂಶಗಳು ಮುಖ್ಯ ಎಂಬುವುದನ್ನು ಪ್ರತಿಯೊಬ್ಬರೂ ತಿಳಿದಿರುವುದು ಸೂಕ್ತ. ಏಕೆಂದರೆ ಗಾಯಗಳನ್ನು ಸಮರ್ಪಕವಾಗಿ ನಿರ್ವಹಿಸದಿದ್ದರೆ ಅದು ವ್ಯಕ್ತಿಯ ಸರ್ವತೋಮುಖ ಆರೋಗ್ಯದ ಮೇಲೆಯೂ ಪರಿಣಾಮ ಬೀರಬಹುದು.

ಗಾಯಗಳಿಗೆ ಕಾರಣ ಹಲವಾರು. ಹಾಗೆ ನೋಡಿದರೆ, ವೈದ್ಯರು ಚರ್ಮದ ಮೇಲೆ ಗಾಯ ಮಾಡಿಯೇ ಶಸ್ತ್ರಚಿಕಿತ್ಸೆಯನ್ನು ಆರಂಭಿಸುವುದು. ಆದರೆ ಅದೊಂದು ಸ್ವಚ್ಛ, ನಂಜುರಹಿತ ವಾತಾವರಣದಲ್ಲಿ ಮಾಡಿದ ಸರಳರೇಖೆಯಂತಹ ಗಾಯ. ಆಸ್ಪತ್ರೆಯಲ್ಲಿ ವೈದ್ಯರ ಮಾರ್ಗದರ್ಶನದಲ್ಲಿ ಅದರ ಆರೈಕೆಯಾಗುವುದರಿಂದ ಅಲ್ಲಿ ಸೋಂಕಿಗೆ ಅವಕಾಶ ಬಹಳ ಕಡಿಮೆ. ಹಾಗಾಗಿಯೇ ಸಾಮಾನ್ಯವಾಗಿ ಶಸ್ತ್ರಚಿಕಿತ್ಸೆಯಲ್ಲಿ ಮಾಡಿದ ಗಾಯಗಳು ನಿಗದಿತ ಸಮಯದೊಳಗೆ ಗುಣವಾಗುತ್ತವೆ. ಆದರೆ, ಇತರೆ ಕಾರಣಗಳಿಂದ ಸಂಭವಿಸುವ ಗಾಯಗಳು ಗುಣವಾಗುವುದು ಅಷ್ಟು ಸರಳವಲ್ಲ; ಅಲ್ಲಿ ಹಲವಾರು ಅಂಶಗಳ ಪಾತ್ರವಿರುತ್ತದೆ.

ಮಧುಮೇಹಿಗಳಿಗೆ...

ಮಧುಮೇಹಿಗಳು ಪಾದಗಳಲ್ಲಿ ಗಾಯಗಳಾಗದಂತೆ ಎಚ್ಚರವಹಿಸಬೇಕು. ನಡೆಯುವಾಗ ಸೂಕ್ತವಾದ ಪಾದರಕ್ಷೆಗಳನ್ನು ಬಳಸಬೇಕು. ಬೆರಳುಗಳಲ್ಲಿ ಸಣ್ಣ ಗಾಯಗಳು ಕಂಡು ಬಂದರೂ ನಿರ್ಲಕ್ಷ್ಯ ಮಾಡದೆ ಕೂಡಲೇ ವೈದ್ಯರಲ್ಲಿ ಸಲಹೆ ಪಡೆಯಬೇಕು.

ಗಾಯ ಸಂಭವಿಸಲು ಇಂತಹದ್ದೇ ಕಾರಣ ಎಂದಿಲ್ಲ. ರಸ್ತೆ ಅಪಘಾತಗಳಾದಾಗ, ಸಮತೋಲನ ತಪ್ಪಿ ಬಿದ್ದಾಗ, ಮನೆ ಅಥವಾ ಕಾರ್ಖಾನೆಗಳಲ್ಲಿ ಬೆಂಕಿ ಅಪಘಾತಗಳಾದಾಗ, ಮೊನಚಾದ ಉಪಕರಣಗಳು ಚುಚ್ಚಿದಾಗ, ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಅವಘಡಗಳಾದಾಗ, ಮನೆಯ ಸ್ನಾನದ ಕೊಠಡಿ/ಶೌಚಾಲಯಗಳಲ್ಲಿ ಜಾರಿ ಬಿದ್ದಾಗ, ನಾಯಿ ಮತ್ತಿತರ ಪ್ರಾಣಿಗಳು ಕಚ್ಚಿದಾಗ - ಇಂತಹ ಸಂದರ್ಭಗಳಲ್ಲಿ ಗಾಯಗಳಾಗುವುದು ಸಾಮಾನ್ಯ.

ಗಾಯವಾದ ತಕ್ಷಣ ಏನು ಮಾಡಬೇಕು?

ಸಣ್ಣ ಪುಟ್ಟ ಗಾಯಗಳಿಗೆ ಮನೆಯಲ್ಲಿಯೇ ಚಿಕಿತ್ಸೆ ಮಾಡಬಹುದು. ಆದರೆ ದೊಡ್ಡ ಪ್ರಮಾಣದ ಆಳವಾದ, ತೀವ್ರವಾದ ರಕ್ತಸ್ರಾವವಿರುವ ಗಾಯಗಳಿಗೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಬೇಕಾಗುತ್ತದೆ. ಗಾಯವಾದ ತಕ್ಷಣ ಸ್ವಚ್ಛವಾದ ನೀರಿನಲ್ಲಿ ತೊಳೆಯಬೇಕು. ರಕ್ತಸ್ರಾವವಾಗುವ ಭಾಗವನ್ನು ಒತ್ತಿ ಹಿಡಿಯಬೇಕು. ಮಂಜುಗಡ್ಡೆಯ ತುಂಡುಗಳನ್ನು ರಕ್ತಸ್ರಾವವಾಗುವ ಭಾಗದಲ್ಲಿ ಒತ್ತಿ ಹಿಡಿದರೆ, ಸ್ರಾವವನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಬಹುದು. ಸ್ವಚ್ಛವಾದ ಬಟ್ಟೆಯನ್ನು ಬಿಗಿಯಾಗಿ ಬಿಗಿದೂ ರಕ್ತಸ್ರಾವವನ್ನು ನಿಯಂತ್ರಿಸಬಹುದು. ಹತ್ತು ನಿಮಿಷಗಳವರೆಗೂ ನಿಯಂತ್ರಣಕ್ಕೆ ಬರದಿದ್ದಲ್ಲಿ ಕೂಡಲೇ ಆಸ್ಪತ್ರೆಗೆ ಕರೆದೊಯ್ಯಬೇಕು. ಸುಟ್ಟ ಗಾಯಗಳ ಮೇಲೆ ತಕ್ಷಣ ಸ್ವಚ್ಛವಾದ ತಣ್ಣನೆಯ ನೀರನ್ನು ಸುರಿಯುವುದು ಅಂಗಾಂಶಗಳು ಸುಡುವ ಪ್ರಕ್ರಿಯೆಯನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸುತ್ತದೆ. ನಂಜುನಿವಾರಕ ಮುಲಾಮುಗಳು ಲಭ್ಯವಿದ್ದರೆ, ಅದನ್ನು ಗಾಯದ ಮೇಲೆ ಲೇಪಿಸಬೇಕು. ಯಾವುದೇ ಗಾಯ ಮತ್ತು ಅದರ ಆಸುಪಾಸು ಮಣ್ಣು ಮತ್ತು ಇತರ ದೂಳಿನ ಕಣಗಳ ಸಂಪರ್ಕಕ್ಕೇನಾದರೂ ಬಂದಿದ್ದಲ್ಲಿ ಧನುರ್ವಾಯು ಕಾಯಿಲೆಯ ವಿರುದ್ಧ ಲಸಿಕೆಯನ್ನು ಕಡ್ಡಾಯವಾಗಿ ಪಡೆಯಬೇಕು. ಗಾಯವು ಅಗಲವಾಗಿ, ಆಳವಾಗಿದ್ದಲ್ಲಿ ಅಂಚುಗಳನ್ನು ಸಮೀಪಕ್ಕೆ ತಂದು ಹೊಲಿಗೆ ಹಾಕುವುದು ಗಾಯ ಶೀಘ್ರವಾಗಿ ಗುಣವಾಗಲು ನೆರವಾಗುತ್ತದೆ.

> ಗಾಯಗಳ ಗುಣವಾಗುವಿಕೆ ಅದರ ಆಳ, ಅಗಲ, ಮತ್ತಿತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

ಕೆಲವು ಗಾಯಗಳಿಗೆ ನಿತ್ಯವೂ ಸ್ವಚ್ಛಗೊಳಿಸುವುದು (ಡ್ರೆಸ್ಸಿಂಗ್) ಅಗತ್ಯವೆನಿಸುತ್ತದೆ. ಆದರೆ ಆ ಪ್ರಕ್ರಿಯೆ ನಂಜುರಹಿತ ಸಲಕರಣೆಗಳಿಂದ ಆಗಬೇಕು. ನುರಿತ ವೈದ್ಯರು ಅಥವಾ ಶುಶ್ರೂಷಕ ಸಿಬ್ಬಂದಿ ಸೋಂಕು ತಗುಲದಂತೆ ಗಾಯವನ್ನು ಎಚ್ಚರಿಕೆಯಿಂದ ಸ್ವಚ್ಛಗೊಳಿಸುತ್ತಾರೆ. ಅಂತಹ ಸಂದರ್ಭದಲ್ಲಿ ದಿನವೂ ಹತ್ತಿರದ ಆಸ್ಪತ್ರೆಗೆ ತೆರಳಿ ಅಲ್ಲಿ ಸ್ವಚ್ಛಗೊಳಿಸಿಕೊಳ್ಳುವುದು ಸೂಕ್ತ. ಇನ್ನು ಕೆಲವು ಆಳವಿರದ ಗಾಯಗಳನ್ನು ಕೇವಲ ಮುಲಾಮು ಲೇಪಿಸಿ ಹಾಗೆಯೇ ತೆರೆದು ಬಿಡುವುದು ಉತ್ತಮ. ಗಾಯವು ಚಲನೆಯಿರುವ ಅಥವಾ ಘರ್ಷಣೆಗೆ ಒಳಗಾಗುವ ದೇಹದ ಭಾಗದಲ್ಲಿದ್ದರೆ ಅವುಗಳನ್ನು ಸ್ವಚ್ಛ ಬಟ್ಟೆಯಿಂದ (ಡ್ರೆಸ್ಸಿಂಗ್) ಮುಚ್ಚುವುದು ಉತ್ತಮ. ಆದರೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ.

ಗಾಯಗಳ ಗುಣವಾಗುವಿಕೆ ಅದರ ಆಳ, ಅಗಲ, ಮತ್ತಿತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ರೋಗಿಯ ದೇಹಸ್ಥಿತಿ, ಮುಖ್ಯವಾಗಿ ಆತನ ರಕ್ತದ ಸಕ್ಕರೆ ಅಂಶ, ಪೌಷ್ಟಿಕಾಂಶದ ಮಟ್ಟ, ರೋಗನಿರೋಧಕ ಶಕ್ತಿ ಮೊದಲಾದ ಅಂಶಗಳು ಗಾಯ ಗುಣವಾಗುವಿಕೆಯ ಮೇಲೆ ಪರಿಣಾಮ ಬೀರಬಲ್ಲವು.

ಗಾಯಗಳು ಗುಣವಾಗುವ ಪ್ರಕ್ರಿಯೆಯಲ್ಲಿ ತೊಡಕು ಉಂಟುಮಾಡುವ ಮುಖ್ಯ ಅಂಶವೆಂದರೆ ಸೋಂಕು. ವ್ಯಕ್ತಿ ಮಧುಮೇಹಿಯಾಗಿದ್ದರೆ ತಜ್ಞವೈದ್ಯರ ಮಾರ್ಗದರ್ಶನದಲ್ಲಿ ಸೂಕ್ತ ಔಷಧೋಪಚಾರದ ಮೂಲಕ ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿಡಬೇಕು. ಇಲ್ಲದಿದ್ದಲ್ಲಿ ಹೆಚ್ಚಾದ ರಕ್ತದ ಸಕ್ಕರೆ ಅಂಶವು ಸೂಕ್ಷ್ಮಾಣುಗಳ ಬೆಳವಣಿಗೆಗೆ ಪೂರಕವಾಗಿರುವುದರಿಂದ ಗಾಯಗಳು ಬಹುಬೇಗ ಸೋಂಕಿಗೆ ತುತ್ತಾಗುತ್ತವೆ. ಸ್ವಚ್ಛವಿಲ್ಲದ ಕೈಗಳಿಂದ ಅಥವಾ ಸಲಕರಣೆಗಳಿಂದ ಗಾಯಗಳನ್ನು ಸ್ಪರ್ಶಿಸುವುದೂ ಸೋಂಕಿಗೆ ಕಾರಣವಾಗಬಹುದು. ಹಾಗಾಗಿ ಆ ಬಗ್ಗೆ ಎಚ್ಚರವಹಿಸಬೇಕು.

ಗುಣವಾಗುತ್ತಿರುವ ಗಾಯಗಳಲ್ಲಿ ಊತ, ನೋವು, ಕೀವು, ದುರ್ನಾತ ಅಥವಾ ವ್ಯಕ್ತಿಗೆ ಜ್ವರ ಬರುವುದು ಮೊದಲಾದುವು ಗಾಯಕ್ಕೆ ಸೋಂಕು ತಗುಲಿರಬಹುದು ಎಂಬ ಸೂಚನೆಯನ್ನು ಕೊಡುತ್ತವೆ. ಇಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆ ಅತ್ಯಗತ್ಯ.

ಯಾವುದೇ ಗಾಯ ಗುಣವಾಗುವ ಪ್ರಕ್ರಿಯೆಯಲ್ಲಿ ಮೂರು ಹಂತಗಳಿರುತ್ತವೆ. ಮೊದಲು ಉರಿಯೂತ ಪ್ರಕ್ರಿಯೆ ಆರಂಭವಾಗಿ ಬಿಳಿಯ ರಕ್ತಕಣಗಳು ಅಲ್ಲಿರಬಹುದಾದ ಸೂಕ್ಷ್ಮಾಣುಗಳನ್ನು ಹೊಡೆದೋಡಿಸಿದರೆ, ಕಿರುಬಿಲ್ಲೆಗಳು ರಕ್ತಸ್ರಾವವನ್ನು ನಿಲ್ಲಿಸಲು ಅಣಿಯಾಗುತ್ತವೆ. ಒಂದೆರಡು ದಿನಗಳಲ್ಲಿ ಗಾಯವು ಗಾತ್ರದಲ್ಲಿ ಕುಗ್ಗುತ್ತದೆ. ನಂತರದ ಹಂತದಲ್ಲಿ ವಿವಿಧ ಪ್ರಕ್ರಿಯೆಗಳ ಪರಿಣಾಮವಾಗಿ ಮುರಿದು ತುಂಡಾದ ಸಂಯೋಜಕ ಅಂಗಾಂಶಗಳು ಪುನಃ ಹುಟ್ಟಿಕೊಳ್ಳುತ್ತವೆ. ಈ ಎಲ್ಲ ಅಂಗಾಂಶಗಳ ತಯಾರಿಗೆ ಮತ್ತು ಸದೃಢ ರೋಗನಿರೋಧಕ ವ್ಯವಸ್ಥೆಗೆ ಪ್ರೊಟೀನ್ ಅತ್ಯವಶ್ಯಕ. ಜೊತೆಗೆ ಕಬ್ಬಿಣಾಂಶ, ಕ್ಯಾಲ್ಸಿಯಂ, ಮೆಗ್ನಿಷಿಯಂ ಮೊದಲಾದ ಸೂಕ್ಷ್ಮ ಪೋಷಕಾಂಶಗಳ ಅಗತ್ಯತೆ ಇರುತ್ತದೆ. ಆದ್ದರಿಂದ ಗಾಯ ಗುಣವಾಗುವಲ್ಲಿ ಅಧಿಕ ಪ್ರೊಟೀನ್‌ಯುಕ್ತ ಪೌಷ್ಟಿಕ ಆಹಾರ ಸೇವನೆಯೂ ಪ್ರಮುಖವೆನಿಸುತ್ತದೆ. ಆ ಭಾಗಕ್ಕೆ ಸಾಕಷ್ಟು ಆಮ್ಲಜನಕದ ಪೂರೈಕೆಯೂ ಅತ್ಯಗತ್ಯ. ಹಾಗಾಗಿಯೇ ವ್ಯಕ್ತಿ ರಕ್ತಹೀನತೆಯಿಂದ ಬಳಲುತ್ತಿದ್ದರೆ ಅಥವಾ ಧೂಮಪಾನಿಯಾಗಿದ್ದರೆ ಗಾಯ ಗುಣವಾಗುವ ಪ್ರಕ್ರಿಯೆ ಕುಂಠಿತಗೊಳ್ಳುತ್ತದೆ. ದೇಹ ಮತ್ತು ಮನಸ್ಸಿಗೆ ಅವಿನಾಭಾವ ಸಂಬಂಧ ಇರುವುದರಿಂದ ವ್ಯಕ್ತಿಯ ಮಾನಸಿಕ ಸ್ಥಿತಿಯೂ ಬಹಳವೇ ಮುಖ್ಯ. ಚಿಂತೆ ಒತ್ತಡಗಳಿಲ್ಲದ, ಸಕಾರಾತ್ಮಕ ವಿಚಾರಗಳಿರುವ ಪ್ರಫುಲ್ಲ ಮನಸ್ಸೂ ಗಾಯದ ಶೀಘ್ರ ಗುಣವಾಗುವಿಕೆಗೆ ಪೂರಕವಾಗಬಲ್ಲದು.

> ಕಂಡದ್ದನ್ನೆಲ್ಲಾ ಪ್ರಶ್ನಿಸುವುದು ಅನುಮಾನದ ಲಕ್ಷಣ; ಬೇರೆಯವರನ್ನು ಹೀಗಳೆಯಲು ಪ್ರಶ್ನಿಸುವುದು ಕೀಳರಿಮೆಯ ಸಂಕೇತ.

ಅರಿವು ಅರಳಲಿ ವಿಸ್ತಾರದಲಿ

ಡಾ. ಕಿರಣ್ ವಿ. ಎಸ್.

‘ಜಗತ್ತು ಎಷ್ಟು ವೇಗವಾಗಿ ಮುಂದುವರೆಯುತ್ತೆಂದರೆ, ಇದ್ದ ಜಾಗದಲ್ಲೇ ಉಳಿಯಬೇಕೆಂದರೂ ಒಂದೇ ಸಮನೆ ಓಡುತ್ತಲೇ ಇರಬೇಕು’ ಎನ್ನುವ ಮಾತಿದೆ. ಬಹುತೇಕ ಕ್ಷೇತ್ರಗಳಲ್ಲಿ ಪರಮ ಸತ್ಯ ಎನ್ನುವುದು ಇರುವುದೇ ಇಲ್ಲ. ಇಂದಿನ ಗ್ರಹಿಕೆ ನಾಳೆ ಬದಲಾಗಬಹುದು. ಉನ್ನತ ವಿಜ್ಞಾನದಂತಹ ವಿಷಯದಲ್ಲಂತೂ ಹತ್ತು ವರ್ಷಗಳ ಹಿಂದಿನ ಪಠ್ಯಪುಸ್ತಕ ಇಂದಿಗೆ ಹೆಚ್ಚು ಕೆಲಸಕ್ಕೆ ಬಾರದು. ಅವಕಾಶಗಳಿದ್ದರೂ ಕೆಲವೊಮ್ಮೆ ಪೂರ್ವಗ್ರಹಗಳ ಹಿಡಿತದಲ್ಲಿ ಬಂಧಿಯಾಗಿ, ಚಿಂತನೆಯನ್ನು ಬೆಳೆಸಲು ಹಿಂಜರಿಯುತ್ತೇವೆ. ಆಧುನಿಕ ಯುಗದಲ್ಲಿ ಅರಿವಿನ ವಿಸ್ತಾರಕ್ಕೆ ನಮ್ಮ ಮನಸ್ಸನ್ನು ತೆರೆದಿಟ್ಟುಕೊಳ್ಳದ ಹೊರತು ವ್ಯವಹಾರದಲ್ಲಾಗಲೀ ವೃತ್ತಿಯಲ್ಲಾಗಲೀ ಪ್ರಗತಿ ಕಷ್ಟಸಾಧ್ಯ.

ಓದು-ಬರಹದ ಹವ್ಯಾಸಗಳು ಮನಸ್ಸನ್ನು, ಮನೋಭಾವಗಳನ್ನು ಹಿಗ್ಗಿಸುತ್ತವೆ. ಓದುವುದಕ್ಕೆ ವಸ್ತು, ಪಂಥಗಳ ಮಿತಿಗಳನ್ನು ಹೇರಿಕೊಳ್ಳಬಾರದು. ಕತೆ, ಕವನ, ಕಾದಂಬರಿ, ಆತ್ಮಕಥನ, ವೈಚಾರಿಕ ಸಾಹಿತ್ಯ, ವಿಜ್ಞಾನ ಲೇಖನ, ರಾಜಕೀಯ ಕಥಾನಕ, ಪ್ರವಾಸ ಕಥನ - ಹೀಗೆ ಪ್ರತಿಯೊಂದು ಪ್ರಕಾರಕ್ಕೂ ಅದರದ್ದೇ ಆದ ಸೊಗಸು, ಸೊಗಡುಗಳಿವೆ. ಓದುವಿಕೆ ಚಿಂತನೆಯ ಹರವನ್ನು ಬೆಳೆಸುತ್ತದೆ. ‘ದೇಶ ಸುತ್ತು; ಕೋಶ ಓದು’ ಎನ್ನುವ ಸಲಹೆ ಅರಿವಿನ ವಿಸ್ತಾರದಲ್ಲಿ ಸಾರ್ವಕಾಲಿಕ.

ಬರವಣಿಗೆ ನಮ್ಮ ಅರಿವಿನ ಸಾಂದ್ರತೆಯನ್ನು ವೃದ್ಧಿಸುತ್ತದೆ. ಬರವಣಿಗೆ ಯಾವುದೇ ಹಂತದ್ದಾಗಿರಬಹುದು - ದಿನನಿತ್ಯದ ಕೆಲಸಗಳ ಪಟ್ಟಿ, ಆಯಾ ದಿನದ ಅನುಭವಗಳ ಡೈರಿ, ಕಾಡುವ ಸಮಸ್ಯೆಗಳಿಗೆ ಅಕ್ಷರರೂಪವನ್ನು ನೀಡುವುದು, ಮೂಡುತ್ತಿರುವ ಆಲೋಚನೆ, ಅಕಸ್ಮಾತ್ತಾಗಿ ಮಿಂಚಿದ ಹೊಳಹು, ಅಮೂರ್ತವಾಗಿ ಎಂದೋ ನೆಲೆ ನಿಂತಿದ್ದ ಚಿಂತನೆ, ಮನದೊಳಗೆ ಹಿಂದೆಂದೋ ಸುಳಿದಿದ್ದ ಕತೆಯ ಕಲ್ಪನೆ - ಹೀಗೆ ಯಾವುದನ್ನಾದರೂ ಬರಹದ ನೆಲೆಗಟ್ಟಿಗೆ ಇಳಿಸುವುದು ತಿಳಿವಿಗೆ ಸ್ಪಷ್ಟತೆಯನ್ನು ನೀಡುವುದರ ಜೊತೆಗೆ ಆಲೋಚನೆಯ ತುಣುಕುಗಳ ನಡುವೆ ಇರಬಹುದಾದ ಖಾಲಿ ಜಾಗಗಳನ್ನು ತಗ್ಗಿಸುತ್ತದೆ; ಚಿಂತನೆಯ ವ್ಯಾಪ್ತಿಯನ್ನು ಹಿಗ್ಗಿಸಲು ನೆರವಾಗುತ್ತದೆ. ಪ್ರಶ್ನಿಸುವ ಪ್ರಕ್ರಿಯೆ ಅರಿವಿನ ವಿಸ್ತಾರಕ್ಕೆ ಒಳ್ಳೆಯ ವಿಧಾನ. ಕಂಡದ್ದನ್ನೆಲ್ಲಾ ಪ್ರಶ್ನಿಸುವುದು ಅನುಮಾನದ ಲಕ್ಷಣ; ಬೇರೆಯವರನ್ನು ಹೀಗಳೆಯಲು ಪ್ರಶ್ನಿಸುವುದು ಕೀಳರಿಮೆಯ ಸಂಕೇತ. ಯಾವುದೇ ವಿಷಯದ ಬಗ್ಗೆ ಆಸಕ್ತಿ ಮೂಡಿದಾಗ ಅದನ್ನು ಮತ್ತಷ್ಟು ಅರಿಯುವ ಸಲುವಾಗಿ ಪ್ರಶ್ನಿಸುವುದು ಸಮಂಜಸ ಮಾರ್ಗ. ನಮ್ಮ ಪ್ರಶ್ನೆಗೆ ಇತರರು ಮಾತ್ರ ಉತ್ತರಿಸಬೇಕೆಂದೇನೂ ಇಲ್ಲ. ಉತ್ತರ ಕೊಡುವವರು ಸೂಟಿಯಾಗಿ, ಆ ಅಂಶಕ್ಕೆ ಮಾತ್ರ ಸಮಾಧಾನ ಹೇಳಬಲ್ಲರು. ಪ್ರಶ್ನೆಯ ಸೆಲೆಯನ್ನು ಹಿಡಿದು, ಅದಕ್ಕೆ ನಾವೇ ಉತ್ತರ ಕಂಡುಕೊಳ್ಳುವುದು ಮಾಹಿತಿಯ ಮಹಾಪೂರವಾದ ಆಧುನಿಕ ಯುಗದಲ್ಲಿ ಕಷ್ಟವಲ್ಲ. ಹೀಗೆ ಮಾಡುವಾಗ ಅನೇಕ ಹೊಸ ವಿಷಯಗಳು, ಹೊಳಹುಗಳು ಗೋಚರಿಸುತ್ತವೆ. ಯಾವುದೇ ವಿಷಯವನ್ನು ಪ್ರಮಾಣಬದ್ಧವಾಗಿ ಅರಿಯುವುದು ನಮ್ಮ ಆಲೋಚನೆಗಳನ್ನು, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹಿಗ್ಗಿಸುತ್ತದೆ. ಮೆದುಳು ಅಗಾಧ ಸಾಮರ್ಥ್ಯದ ಗಣಿ. ಅದನ್ನು ಸಂಕುಚಿತವಾಗಿಟ್ಟರೆ ನಷ್ಟ ನಮಗೇ. ಮೆದುಳಿನ ತರ್ಕದ ಭಾಗವನ್ನು ಚೂಟಿಯಾಗಿ ಇರಿಸಿಕೊಂಡರೆ ಕಲಿಕೆಯ ಸಾಮರ್ಥ್ಯ ಹೆಚ್ಚುತ್ತದೆ ಎನ್ನಲಾಗಿದೆ. ಹೀಗಾಗಿ, ಮೆದುಳಿಗೆ ತರ್ಕದ ಕಸರತ್ತನ್ನು ನೀಡುವ ಆಟಗಳು ವಿಶ್ವದಾದ್ಯಂತ ಜನಪ್ರಿಯ. ಪದಬಂಧ, ಸುಡೊಕು, ಗಣಿತೀಯ ಸಮಸ್ಯೆಗಳು, ತಾರ್ಕಿಕ ಒಗಟುಗಳು ಆಲೋಚನಾ ಶಕ್ತಿಯನ್ನು ಹರಿತಗೊಳಿಸುತ್ತವೆ. ಇದೇ ಕಾರಣಕ್ಕಾಗಿ ಬಹುತೇಕ ದಿನಪತ್ರಿಕೆಗಳು ಇಂತಹ ಆಟಗಳಿಗೆಂದು ಪತ್ರಿಕೆಯ ಅರ್ಧ ಪುಟವನ್ನಾದರೂ ಮೀಸಲಿಡುತ್ತವೆ. ಅಂತರ್ಜಾಲದಲ್ಲಿ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಇಂತಹ ಲಕ್ಷಾಂತರ ತಾಣಗಳಿವೆ; ಮೊಬೈಲ್ ಆ್ಯಪ್‌ಗಳಿವೆ. ಚುರುಕುಗೊಂಡ ತಾರ್ಕಿಕ ಮೆದುಳು ಯಾವುದೇ ಸಂದರ್ಭವನ್ನೂ ಶೀಘ್ರವಾಗಿ ಗ್ರಹಿಸಬಲ್ಲದು. ಮಕ್ಕಳ ಜೊತೆಯಲ್ಲಿ ಕೂಡಿ ಸರಳ ವೈಜ್ಞಾನಿಕ ಪ್ರಯೋಗಗಳನ್ನು ಮಾಡಿ, ಅವುಗಳ ಹಿನ್ನೆಲೆಯನ್ನು ವಿವರಿಸುವುದು ಕೂಡ ಇಂತಹುದೇ ಪರಿಣಾಮವನ್ನು ಉಂಟುಮಾಡುತ್ತದೆ.

ನಮ್ಮ ಪೂರ್ವಗ್ರಹಗಳು ಮಾನಸಿಕ ಬೆಳವಣಿಗೆಯನ್ನು ಮೊಟಕುಗೊಳಿಸುತ್ತವೆ. ಅವನ್ನು ಮೀರುವುದು ಸುಲಭವಲ್ಲ. ಗೆದ್ದಾಗ ನಮ್ಮನ್ನು ಹೊಗಳಿಕೊಳ್ಳುವುದು, ಸೋತಾಗ ಇತರರನ್ನು ಜರಿಯುವುದು ನಮ್ಮನ್ನು ಒಳಗಿನಿಂದ ದುರ್ಬಲರನ್ನಾಗಿಸುತ್ತದೆ. ಸೋಲಿನ ಬಗ್ಗೆ ಪ್ರಾಮಾಣಿಕ ವಿಶ್ಲೇಷಣೆ ಮಾಡಿದಾಗ ದೌರ್ಬಲ್ಯಗಳು ಗೋಚರವಾಗುತ್ತವೆ. ಆಗ ಮಾತ್ರ ಸುಧಾರಣೆ ಸಾಧ್ಯ. ಇದನ್ನು ಮಾಡಿದ ಹೊರತು ಗೆಲುವಿನ ಸಾಧ್ಯತೆಗಳು ಹೆಚ್ಚುವುದಿಲ್ಲ. ಯಾವುದೇ ಕ್ಷೇತ್ರದಲ್ಲೂ ಎದುರಾಳಿಗಳ ಬಗ್ಗೆ ಆರೋಗ್ಯಕರ ಗೌರವ ಇರುವುದು ಒಳ್ಳೆಯದು. ನಮ್ಮ ಬಲ-ದೌರ್ಬಲ್ಯಗಳ ಪರಿಚಯ ಎಷ್ಟು ಮುಖ್ಯವೋ, ಎದುರಾಳಿಯ ಬಗ್ಗೆ ಅರಿವು ಇರುವುದೂ ಅಷ್ಟೇ ಮುಖ್ಯ. ಗೆಲುವೆಂಬುದು ಅದೃಷ್ಟದ ಆಟವಾಗಬಾರದು. ಅಂತೆಯೇ, ಅಂತಿಮ ಪರಿಣಾಮ ‘ನಾವು ಮಾಡಿದ್ದೆಲ್ಲವೂ ಸರಿ’ ಎನ್ನುವಂತೆಯೂ ಇರಬಾರದು. ಯಾವಾಗಲೋ ಒಮ್ಮೆ ಲಾಟರಿಯಲ್ಲಿ ಗೆಲ್ಲುವುದು ನಾವು ಹುಟ್ಟಾ ಅದೃಷ್ಟವಂತರು ಎನ್ನುವ ಭಾವ ಮೂಡಿಸಬಾರದು. ಈ ರೀತಿಯ ಸೀಮಿತ ಆಲೋಚನೆಗಳು ನಮ್ಮ ಚಿಂತನೆಯನ್ನು ಬಂಧಿಯಾಗಿಸುತ್ತವೆ.

ಜೀವನದಲ್ಲಿ ಬದಲಾವಣೆ ಬಹಳ ಮುಖ್ಯ. ಅದರಲ್ಲೂ ಪ್ರಸ್ತುತ ಪ್ರಪಂಚದಲ್ಲಿ ಸರಾಸರಿ ಹತ್ತು ವರ್ಷಗಳಿಗೊಮ್ಮೆ ವ್ಯಾವಹಾರಿಕ ಪ್ರಪಂಚದ ವಾಸ್ತವ ಬದಲಾಗುತ್ತಿದೆ. ದಶಕದ ಹಿಂದೆ ಊಹೆಗೂ ಸಿಗದಿದ್ದ ನೌಕರಿಗಳು ಇಂದು ಮಾರುಕಟ್ಟೆಯನ್ನು ಆಕ್ರಮಿಸಿವೆ. ಹೀಗಾಗಿ, ನಮ್ಮ ಅರಿವನ್ನು ಬೆಳೆಯಲು ಬಿಡದಿದ್ದರೆ ಅವಕಾಶವಂಚಿತರಾಗುತ್ತೇವೆ. ಬಹಳ ಬಾರಿ ‘ನನಗಿಷ್ಟು ಸಾಕು; ನಾನು ಬದಲಾಗುವುದು ಬೇಕಿಲ್ಲ’ ಎನಿಸಬಹುದು. ಆದರೆ, ನಾವು ಯಾವುದನ್ನು ಇಂದು ಸಂಪೂರ್ಣವಾಗಿ ಅವಲಂಬಿಸಿದ್ದೇವೋ ಅದು ನಾಳೆ ಇಲ್ಲವಾದರೆ ನಮ ಅಸ್ತಿತ್ವಕ್ಕೇ ಸಂಚಕಾರ ಮೂಡಿದಂತಾಯಿತು. ಒಂದು ಕಾಲದಲ್ಲಿ ರಾರಾಜಿಸುತ್ತಿದ್ದ ಟೈಪ್ ರೈಟರ್ ಯಂತ್ರಗಳು ಇಂದು ಸಂಗ್ರಹಾಲಯದ ವಸ್ತುಗಳಾಗಿವೆ. ಮೊಬೈಲ್ ಫೋನುಗಳು ಬಂದ ಮೇಲೆ ಪೇಜರ್ ಅಗತ್ಯ ಇಲ್ಲದೇ ಹೋಗಿದೆ. ಆದ್ದರಿಂದ ನಮ್ಮ ವೃತ್ತಿ ಇಂದು ಎಷ್ಟೇ ಸುರಕ್ಷಿತ ಎನಿಸಿದರೂ ಪರಿಸ್ಥಿತಿ ದಿಢೀರನೆ ಬದಲಾಗಬಹುದು. ಅರಿವನ್ನು ವಿಸ್ತರಿಸದೆ ಹೋದರೆ ನಮ್ಮ ಅಸ್ತಿತ್ವವೇ ಉಳಿಯದಿರಬಹುದು. ವ್ಯಾಯಾಮ, ಧ್ಯಾನ, ಧನಾತ್ಮಕ ಚಿಂತನೆಗಳು, ಹೊಸಬರೊಡನೆ ಬೆರೆಯುವ ಮನಃಸ್ಥಿತಿ, ಹೊಸದನ್ನು ಕಲಿಯುವ ಬಯಕೆ, ಪ್ರವಾಸ, ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿಕೆ, ಸೋಮಾರಿತನ ಬಿಟ್ಟು ಯಾವುದೋ ಉತ್ಪಾದಕ ಕೆಲಸದಲ್ಲಿ ತೊಡಗಿಕೊಳ್ಳುವಿಕೆ, ಆರೋಗ್ಯಕರ ಆಹಾರ, ಒಳ್ಳೆಯ ನಿದ್ರೆ, ಸಾಮಾಜಿಕ ಸಂಬಂಧಗಳು, ಮೊದಲಾದವು ನಮ್ಮ ಅರಿವನ್ನು ಬೆಳೆಸುತ್ತವೆ. ನಮ್ಮ ನಿಯಮಿತ ಜೀವನಾವಧಿಯನ್ನು ಉತ್ತಮ ರೀತಿಯಿಂದ ಕಳೆಯಲು ಮನಸ್ಸನ್ನು ಚಿಂತನೆಗಳ ವಿಸ್ತರಣೆಗೆ ಸಜ್ಜುಗೊಳಿಸುವುದು ಒಳ್ಳೆಯ ವಿಧಾನ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಮಾದರಿ ಪ್ರಶ್ನೋತ್ತರ–

26) **6m** ಮತ್ತು **11m** ಉದ್ದದ ಎರಡು ಕಂಬಗಳು ಸಮತಟ್ಟಾದ ನೆಲದ ಮೇಲೆ ನಿಂತಿವೆ. ಆ ಕಂಬಗಳ ಪಾದಗಳ ನಡುವಿನ ಅಂತರ **12m** ಆದರೆ ಅವುಗಳ ತುದಿಗಳ ನಡುವಿನ ಅಂತರವೇನು?

ಪರಿಹಾರ:– 6m ಮತ್ತು 11m ಉದ್ದದ ಎರಡು ಕಂಬಗಳು ಸಮತಟ್ಟಾದ ನೆಲದ ಮೇಲೆ ನಿಂತಿವೆ. ಆ ಕಂಬಗಳ ಪಾದಗಳ ನಡುವಿನ ಅಂತರ 12m (ದತ್ತ)



AB=6m ಮತ್ತು CD = 11 m ಕಂಬಗಳಾಗಿರಲಿ. ಆದ್ದರಿಂದ CP = 11 – 6 = 5m ಆಗಿದೆ ಚಿತ್ರದಲ್ಲಿರುವಂತೆ AP = 12m ಆದ್ದರಿಂದ ಪೈಥಾಗೋರಸ್ ಪ್ರಮೇಯದಂತೆ ,

$AP^2 + PC^2 = AC^2$

$(12m)^2 + (5m)^2 = (AC)^2$

$AC^2 = (144+25)\, m^2 = 169\, m^2$

$AC = 13m$

ಕಂಬಗಳ ತುದಿಗಳ ನಡುವಿನ ಅಂತರ= 13 m.

27) **ΔPQR**ನಲ್ಲಿ **∠P**ಯು ಲಂಬಕೋನವಾಗಿದೆ. PM ⊥QR ಆಗುವಂತೆ **QR** ಮೇಲೆ **M** ಒಂದು ಬಿಂದು. ಆದರೆ **$PM^2 = QM \times MR$** ಎಂದು ಸಾಧಿಸಿ

ಪರಿಹಾರ:– **ΔPQR** ನಲ್ಲಿ **P** ಯು ಲಂಬಕೋನವಾಗಿದೆ. PM ⊥QR ಆಗುವಂತೆ **QR** ಮೇಲೆ **M** ಒಂದು ಬಿಂದುವಾಗಿದೆ (ದತ್ತ)



ಸಾಧಿಸಿ:– $PM^2 = QM \times MR$

ΔPQMದಲ್ಲಿ ಪೈಥಾಗೋರಸ್ ಪ್ರಮೇಯದಂತೆ

$PQ^2 = PM^2 + QM^2$

ಅಥವಾ $PM^2 = PQ^2 – QM^2$ ....(i)

ΔPMR, ದಲ್ಲಿ ಪೈಥಾಗೋರಸ್ ಪ್ರಮೇಯದಂತೆ

$PR^2 = PM^2 + MR^2$

ಅಥವಾ $PM^2 = PR^2 – MR^2$ ....(ii)

ಸಮೀಕರಣ , (i) and (ii) ದಿಂದ

$,2PM^2 = (PQ^2 + PM^2) – (QM^2 + MR^2)$

$= QR^2 – QM^2 – MR^2$ $[\therefore QR^2 = PQ^2 + PR^2]$

$= (QM + MR)^2 – QM^2 – MR^2$

$= 2QM \times MR$

$\therefore PM^2 = QM \times MR$

28) ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ನಿರ್ದಿಷ್ಟ ಸಂಖ್ಯೆಯ ಮಡಿಕೆಗಳನ್ನು ತಯಾರಿಸುತ್ತದೆ. ಒಂದು ನಿರ್ದಿಷ್ಟ ದಿನದಲ್ಲಿ, ಪ್ರತಿ ಮಡಿಕೆಯ ಉತ್ಪಾದನಾ ವೆಚ್ಚವು (ರೂಪಾಯಿಗಳಲ್ಲಿ), ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯ ಎರಡರಷ್ಟಕ್ಕಿಂತ 3 ಹೆಚ್ಚಾಗಿರುವುದನ್ನು ಗಮನಿಸಲಾಯಿತು. ಆ ದಿನದ ಒಟ್ಟು ಉತ್ಪಾದನಾ ವೆಚ್ಚವು ರೂ. 90 ಆದರೆ ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯನ್ನು ಹಾಗೂ ಪ್ರತಿ ಮಡಿಕೆಯ ವೆಚ್ಚವನ್ನು ಕಂಡುಹಿಡಿಯಿರಿ.

ಪರಿಹಾರ: ಆ ದಿನ ಗುಡಿ ಕೈಗಾರಿಕೆಯು ತಯಾರಿಸಿದ ಮಡಿಕೆಗಳ ಸಂಖ್ಯೆ x ಆಗಿರಲಿ

ಆ ದಿನ ಗುಡಿ ಕೈಗಾರಿಕೆಯು ತಯಾರಿಸಿದ ಮಡಿಕೆಗಳ ಬೆಲೆ Rs $(2x+3)$ ಆಗಿರಲಿ ಒಂದು ನಿರ್ದಿಷ್ಟ ದಿನದಲ್ಲಿ, ಪ್ರತಿ ಮಡಿಕೆಯ ಉತ್ಪಾದನಾ

ವೆಚ್ಚ = $x(2x-3)$

ಸಮಸ್ಯೆಯ ಪ್ರಕಾರ

$$x(2x + 3) = 90$$
$$2x^2 + 3x - 90 = 0$$
$$2x^2 + 3x – 90 = 0$$
$$2x^2 + 15x - 12x - 90 = 0$$
$$x(2x+15) - 6(2x + 15) = 0$$
$$(2x + 15)(x - 6) = 0$$
$$2x + 15 = 0 \quad \text{ಅಥವಾ} \quad x - 6 = 0$$
$$x = -15/2 \quad \text{ಅಥವಾ} \quad x = 6$$
$$x = -15/2 ,\ 6$$

ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ಉತ್ಪಾದಿಸಿದ ಸಂಖ್ಯೆಯ ಮಡಿಕೆಗಳ 6 ಪ್ರತಿ ಮಡಿಕೆಯ ವೆಚ್ಚ = $2x + 3$

$= (2 \times 6) + 3$

$= 15$

ಎಸ್ಸೆಸ್ಸೆಲ್ಸಿ

ಮಾಹಿತಿ: ಜ್ಞಾನಭಾರತಿ ಸ್ಟಡೀಸ್ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರ ಪಡೆಯಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ ರಸಾಯನವಿಜ್ಞಾನ

24) ಬಹು ಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ

1) ಕೆಲವೊಮ್ಮೆ ಆಲ್ಕೈಲ್ ಕ್ಲೋರೈಡ್/ಬ್ರೋಮೈಡ್ ಅನ್ನು ಶುಷ್ಕ ಅಸಿಟೋನ್‌ನಲ್ಲಿ NaIನೊಂದಿಗೆ ಕ್ರಿಯೆ ನಡೆಸಿ ಆಲ್ಕೈಲ್ ಅಯೋಡೈಡ್‌ಗಳನ್ನು ತಯಾರಿಸುತ್ತದೆ. ಈ ಕ್ರಿಯೆಯನ್ನು .... ಎನ್ನುವರು.

ಎ) ಫಿಂಕಲ್‌ಸ್ಟೀನ್ ಕ್ರಿಯೆ ಬಿ) ಕೋರೋಕ್ವಿನ್
ಸಿ) ‘ಹ್ಯಾಲೋಥೇನ್’ ಡಿ) ವರ್ಜ್ಯನ ಕ್ರಿಯೆ

ಉತ್ತರ:- ಎ) ಫಿಂಕಲ್‌ಸ್ಟೀನ್ ಕ್ರಿಯೆ

2) ಬಣ್ಣವನ್ನು ತೆಗೆಯಲು ವ್ಯಾಪಕವಾಗಿ ....ನ್ನು ದ್ರಾವಕವಾಗಿ ಉಪಯೋಗಿಸುತ್ತಾರೆ.

ಎ) ಕೋರೋಕ್ವಿನ್’ ಬಿ)ಡೈಕ್ಲೋರೋ ಮಿಥೇನ್
ಸಿ) ಡಿ.ಡಿ.ಟಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಬಿ) ಡೈಕ್ಲೋರೋ ಮಿಥೇನ್

3) ರಸಾಯನಶಾಸ್ತ್ರದ ಮೊದಲ ನೊಬೆಲ್ ಪಾರಿತೋಷಕವನ್ನು 1901ರಲ್ಲಿ ....ಕುರಿತು ಮಾಡಿದ ಸಂಶೋಧನೆಗೆ ಜಕೋಬಸ್ ಹೆಂಡ್ರಿಯಸ್ ವಾಂಟ್ ಹಾಫ್

ಎ) ದ್ರಾವಣದ ಬಿ) ಕ್ಲೋರಿನ್
ಸಿ) ಜೆಮಿನಲ್ ಹ್ಯಾಲೈಡ್ ಡಿ) ವಿಕಿರಣ

ಉತ್ತರ:- ಎ) ದ್ರಾವಣದ

4) ಅಲ್ಕೈಲ್ ಹ್ಯಾಲೈಡ್‌ಗಳು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿ, ಹ್ಯಾಲೈಡ್‌ಗಳಲ್ಲಿರುವ .... ಸಂಖ್ಯೆಯ ಕಾರ್ಬನ್ ಪರಮಾಣುಗಳುಳ್ಳ ಹೈಡ್ರೋಕಾರ್ಬನ್‌ಗಳನ್ನು ಉಂಟುಮಾಡುತ್ತದೆ.

ಎ) ಎರಡರಷ್ಟು ಬಿ) ಮೂರರಷ್ಟು
ಸಿ) ನಾಲ್ಕರಷ್ಟು ಡಿ) ಐದರಷ್ಟು

ಉತ್ತರ:- ಎ) ಎರಡರಷ್ಟು

5) ಶುದ್ಧವಾದ ಆಲ್ಕೈಲ್ ಹಾಲೈಡ್‌ಗಳು ವರ್ಣರಹಿತವಾಗಿರುತ್ತವೆ ಆದರೆ ಬ್ರೋಮೈಡ್‌ಗಳು ಮತ್ತು ....ಗಳು ಬೆಳಕಿಗೆ ತೆರೆದಿಟ್ಟಾಗ ಬಣ್ಣವನ್ನು ಪಡೆಯುತ್ತವೆ.

ಎ) ಕ್ಲೋರೈಡ್ ಬಿ) ಜಿಯಾಯ್ಡ್
ಸಿ) ಅಯೋಡೈಡ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಸಿ) ಅಯೋಡೈಡ್

6) ಕೇಂದ್ರ ಚತುಮುಖೀಯ ಕಾರ್ಬನ್ ಪರಮಾಣುವಿನ ಸುತ್ತ ನಾಲ್ಕು ವಿಭಿನ್ನ ಗುಂಪುಗಳು (ವೆಲೆನ್ಸಿ) ಜೋಡಣೆಯಾಗಿದ್ದರೆ, ಅಂತಹ ಕಾರ್ಬನ್‌ನ್ನು ....ಎನ್ನುವರು.

ಎ) ಸಮ್ಮಿತಿ ಕಾರ್ಬನ್ ಬಿ) ಜೈವಿಕ ಕಾರ್ಬನ್
ಸಿ)ಜೈವಿಕ ಕಾರ್ಬನ್ ಡಿ) ಅಸಮ್ಮಿತಿ ಕಾರ್ಬನ್

ಉತ್ತರ:- (ಡಿ) ಅಸಮ್ಮಿತಿ ಕಾರ್ಬನ್

25) ಫೀನಾಲ್ ತಯಾರಿಕಾ ವಿಧಾನಗಳನ್ನು ಬರೆಯಿರಿ

ಉತ್ತರ:- ಫೀನಾಲ್ ಅನ್ನು ಕಾರ್ಬಾಲಿಕ್ ಆಮ್ಲ ಎಂದು ಸಹ ಕರೆಯುತ್ತಾರೆ. ಇದನ್ನು ಮೊದಲಿಗೆ 19ನೇ ಶತಮಾನದ ಪ್ರಾರಂಭದಲ್ಲಿ ಡಾಂಬರಿನಿಂದ ಬೇರ್ಪಡಿಸಲಾಯಿತು. ಇತ್ತೀಚಿನ ದಿನಗಳಲ್ಲಿ ಫೀನಾಲನ್ನು ವಾಣಿಜ್ಯಕವಾಗಿ ಕೃತಕವಾಗಿ ತಯಾರಿಸಲಾಗುತ್ತದೆ. ಪ್ರಯೋಗ ಶಾಲೆಯಲ್ಲಿ ಫೀನಾಲ್‌ಗಳನ್ನು ಬೆಂಜೀನ್ ಉತ್ಪನ್ನಗಳಿಂದ ಈ ಕೆಳಕಂಡ ವಿಧಾನಗಳಿಂದ ತಯಾರಿಸಬಹುದು

1) ಹ್ಯಾಲೋಆರೀನ್‌ಗಳಿಂದ : ಕ್ಲೋರೋಬೆಂಜೀನ್‌ಅನ್ನು ಸೋಡಿಯಮ್ ಹೈಡ್ರಾಕ್ಸೈಡ್‌ನೊಂದಿಗೆ 623k ತಾಪ ಮತ್ತು 320 ವಾತಾವರಣದಷ್ಟು ಒತ್ತಡದಲ್ಲಿ ಕರಗಿಸಿದಾಗ ಸೋಡಿಯಮ್ ಫೀನಾಡ್ ಉತ್ಪತ್ತಿಯಾಗುತ್ತದೆ. ಸೋಡಿಯಮ್ ಫೀನಾಕ್ಸೈಡ್‌ನ ಆಮ್ಲೀಕರಣದಿಂದ ಫೀನಾಲ್‌ನ್ನು ಪಡೆಯಬಹುದು.

ಪಿಯುಸಿ



2. ಬೆಂಜಿನ್ ಸಲ್ಫೋನಿಕ್ ಆಮ್ಲದಿಂದ : ಬೆಂಜೀನ್‌ಅನ್ನು ಓಲೀಯಮ್ ಸಲ್ಫೋನೀಕರಣಕ್ಕೆ ಒಳಪಡಿಸಿದಾಗ ಬೆಂಜೀನ್ ಸಲ್ಫೋನಿಕ್ ಆಮ್ಲ ಉಂಟಾಗುತ್ತದೆ. ಈ ಆಮ್ಲವನ್ನುಸೋಡಿಯಮ್ ಹೈಡ್ರಾಕ್ಸೈಡ್‌ನೊಂದಿಗೆ ಕಾಯಿಸಿದಾಗ ಸೋಡಿಯಮ್ ಫಿನಾಕ್ಸೈಡ್ ಆಗಿ ಬದಲಾಗುತ್ತದೆ. ಸೋಡಿಯಮ್ ಲವಣ ಆಮ್ಲೀಕರಿಸಿದಾಗ ಫೀನಾಲ್ ನೀಡುತ್ತದೆ.



3) ಡೈ ಆಜೋನಿಯಮ್ ಲವಣದಿಂದ : ಆರೋಮ್ಯಾಟಿಕ್ ಪ್ರಾಥಮಿಕ ಆಮೈನ್ ನೈಟ್ರಸ್ ಆಮ್ಲ ((NaNO2 + HCl)) ನ ಜೊತೆ 273-278K ಉಷ್ಣತೆಯಲ್ಲಿ ವರ್ತಿಸಿದಾಗ ಡೈ ಆಜೋನಿಯಮ್ ಲವಣ ಉತ್ಪತ್ತಿಯಾಗುತ್ತದೆ. ಲವಣವನ್ನು ನೀರಿನೊಂದಿಗೆ ಬಿಸಿ ಮಾಡಿದಾಗ ಅಥವಾ ಸಾರರಿಕ್ತ ಆಮ್ಲಗಳೊಂದಿಗೆ ಜಲವಿಭಜನೆ ಮಾಡಿದಾಗ ಫೀನಾಲ್ ಉತ್ಪತ್ತಿಯಾಗುತ್ತದೆ



4) ಕ್ಯೂಮೀನ್ ವಿಧಾನದಿಂದ: ಫೀನಾಲ್‌ನ್ನು ಕ್ಯುಮಿನ್ ಹೈಡ್ರೋಕಾರ್ಬನ್‌ನಿಂದ ಉತ್ಪಾದಿಸಲಾಗುತ್ತದೆ. ಕ್ಯುಮಿನ್ (ಐಸೋ ಪ್ರೋಪೈಲ್ ಬೆಂಜೀನ್) ಗಾಳಿಯ ಉಪಸ್ಥಿತಿಯಲ್ಲಿ ಕ್ಯುಮಿನ್ ಹೈಡ್ರೋಪೆರಾಕ್ಸೈಡ್ ಆಗಿ ಉತ್ಕರ್ಷಿಸಲ್ಪಡುತ್ತದೆ. ಇದನ್ನು ಸಾರರಿಕ್ತ ಆಮ್ಲದೊಂದಿಗೆ ವರ್ತಿಸಿದಾಗ ಫೀನಾಲ್ ಮತ್ತು ಆಸಿಟೋನ್‌ಗಳಾಗಿ ಪರಿವರ್ತನೆಯಾಗುತ್ತದೆ. ಆಸಿಟೋನ್ ಉತ್ಪನ್ನವನ್ನು ಈ ವಿಧಾನದಿಂದ ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು.



ಪ್ರಜಾವಾಣಿ ನೋಡಿಯೊ
ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರ ಪಡೆಯಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಎಚ್‌ಡಿಕೆ, ಜಿಟಿಡಿ ಕುಟುಂಬಕ್ಕೆ 2, ಇಬ್ರಾಹಿಂ ಮಗನಿಗೆ ಟಿಕೆಟ್

ಒಂದನೇ ಪುಟದಿಂದ...

ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ. ಶಿವಲಿಂಗೇಗೌಡ, ಅರಕಲಗೂಡು ಶಾಸಕ ಎ.ಟಿ. ರಾಮಸ್ವಾಮಿ ಅವರು ತಮ್ಮ ಮುಂದಿನ ನಡೆಯನ್ನು ಇನ್ನೂ ಸ್ಪಷ್ಟವಾಗಿ ಪ್ರಕಟಿಸಿಲ್ಲ. ಹೀಗಾಗಿ ಅವರ ಹೆಸರು ಸದ್ಯಕ್ಕೆ ಪಟ್ಟಿಯಲ್ಲಿ ಎನ್ನಲಾಗಿದೆ.

ಕಾಂಗ್ರೆಸ್ ಜತೆ ಗುರುತಿಸಿಕೊಂಡಿರುವ ಶಾಸಕರಾದ ಕೆ. ಶ್ರೀನಿವಾಸಗೌಡ (ಕೋಲಾರ) ಮತ್ತು ಎಸ್.ಆರ್. ಶ್ರೀನಿವಾಸ್ (ಗುಬ್ಬಿ) ಅವರನ್ನು ಕೈಬಿಡಲಾಗಿದೆ. ಚನ್ನಪಟ್ಟಣದಿಂದ ಎಚ್.ಡಿ. ಕುಮಾರಸ್ವಾಮಿ, ರಾಮನಗರದಿಂದ ನಿಖಿಲ್ ಕುಮಾರಸ್ವಾಮಿ, ಚಾಮುಂಡೇಶ್ವರಿಯಿಂದ ಜಿ.ಟಿ. ದೇವೇಗೌಡ, ಕೆ.ಆರ್. ನಗರದಿಂದ ಸಾ.ರಾ. ಮಹೇಶ್ ಸ್ಪರ್ಧಿಸಲಿದ್ದಾರೆ. ಹುಣಸೂರು ಕ್ಷೇತ್ರದಿಂದ ಜಿ.ಟಿ. ದೇವೇಗೌಡ ಅವರ ಪುತ್ರ ಹರೀಶ್ ಗೌಡ ಅವರಿಗೆ ಟಿಕೆಟ್ ನೀಡಲಾಗಿದೆ. ಸಿ.ಎಂ. ಇಬ್ರಾಹಿಂ ಅವರ ಪುತ್ರ ಸಿ.ಎಂ. ಫಯಾಜ್ ಅವರನ್ನು ಹುಮನಾ ಬಾದ್‌ದಿಂದ ಕಣಕ್ಕಿಳಿಸಲಾಗುತ್ತಿದೆ. ಮೊದಲ ಪಟ್ಟಿಯಲ್ಲಿ ಐವರು ಮುಸ್ಲಿಮರು, ನಾಲ್ವರು ಮಹಿಳೆಯರು ಮತ್ತು 22 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿದ್ದಾರೆ.

ಡಿಕೆಶಿ ಒಡೆತನದ ಶಿಕ್ಷಣ ಸಂಸ್ಥೆಯಲ್ಲಿ ಸಿಬಿಐ ಶೋಧ

ಒಂದನೇ ಪುಟದಿಂದ...

ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿದ್ದರೆ, ಅವರ ಪತ್ನಿ ಉಷಾ ಶಿವಕುಮಾರ್, ಸಹೋದರ ಡಿ.ಕೆ.ಸುರೇಶ್ ಟ್ರಸ್ಟಿಯಾಗಿದ್ದಾರೆ. ಮಗಳು ಡಿ.ಕೆ.ಎಸ್. ಐಶ್ವರ್ಯಾ ಅವರು ಟ್ರಸ್ಟಿ ಕಾರ್ಯದರ್ಶಿಯಾಗಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಡಿ.ಕೆ. ಶಿವಕುಮಾರ್ ಭಾಗವಹಿಸಿದ್ದಾರೆ. ಇದೇ ವೇಳೆ ರಾಜಧಾನಿಯಲ್ಲಿನ ಅವರ ಅಧ್ಯಕ್ಷತೆಯಲ್ಲಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಸಿಬಿಐ ಅಧಿಕಾರಿಗಳ ತಂಡ ದಾಳಿ ನಡೆಸಿ, ದಾಖಲೆಗಳನ್ನು ಪಡೆದು ವಾಪಸ್ ತೆರಳಿದೆ. ಈ ಹಿಂದೆ ಡಿಕೆಶಿ ಮತ್ತು ಅವರ ಆಪ್ತರ ಮನೆಗಳ ಮೇಲೆ ಆದಾಯ ತೆರಿಗೆ ಮತ್ತು ಜಾರಿ ನಿರ್ದೇಶನಾಲಯ ಕೂಡ ದಾಳಿ ನಡೆಸಿತ್ತು. ಈ ವಿಷಯದಲ್ಲಿ ಡಿ.ಕೆ. ಶಿವಕುಮಾರ್ ಕುಟುಂಬ ಸದ್ಯ ವಿಚಾರಣೆ ಎದುರಿಸುತ್ತಿದೆ.

ಜೆಡಿಎಸ್‌ನ 93 ಅಭ್ಯರ್ಥಿಗಳ ಮೊದಲ ಪಟ್ಟಿ

ಖಾನಾಪುರ: ನಾಸಿರ್ ಭಾಗವಾನ್; **ಬೈಲಹೊಂಗಲ:** ಶಂಕರ ಮಾಡಲಗಿ, **ಬಾದಾಮಿ:** ಹನುಮಂತಪ್ಪ ಬಿ. ಮಾವಿನಮರದ, **ಮುದ್ದೇಬಿಹಾಳ:** ಡಾ. ಚನ್ನಬಸಪ್ಪ ಸಂಗಪ್ಪ ಸೊಲ್ಲಾಪುರ; **ದೇವರಹಿಪ್ಪರಗಿ:** ರಾಜುಗೌಡ ಪಾಟೀಲ, **ಬಸವನಬಾಗೇವಾಡಿ:** ಪರಮಾನಂದ ಬಸಪ್ಪ ತನಿಖೆದಾರ, **ಬಬಲೇಶ್ವರ:** ಬಸವರಾಜ ಹೊನವಾಡ, **ನಾಗಠಾಣ (ಎಸ್‌ಸಿ):** ದೇವಾನಂದ ಎಫ್.ಚವ್ಹಾಣ, **ಇಂಡಿ:** ಬಿ.ಡಿ. ಪಾಟೀಲ್; **ಸಿಂದಗಿ:** ಶಿವಾನಂದ ಪಾಟೀಲ್; **ಅಫಜಲಪುರ:** ಶಿವಕುಮಾರ್ ನಾಟೀಕಾರ್; **ಜೇವರ್ಗಿ:** ದೊಡ್ಡಪ್ಪಗೌಡ ಪಾಟೀಲ್ ನರಿಬೋಳ; **ಚಿಂಚೋಳಿ (ಎಸ್.ಸಿ):** ಸಂಜೀವ ಯಾಕಾಪುರ, **ಆಳಂದ:** ಮಹೇಶ್ವರಿ ವಾಲೆ, **ಗುರುಮಿಠಕಲ್:** ನಾಗನಗೌಡ ಕಂದಕೂರು, **ಹುಮನಾಬಾದ್:** ಸಿ.ಎಂ. ಫಯಾಜ್; **ಬೀದರ್ ದಕ್ಷಿಣ:** ಬಂಡೆಪ್ಪ ಕಾಶೆಂಪೂರ, **ಬೀದರ್:** ರಮೇಶ್ ಪಾಟೀಲ್; **ಬಸವಕಲ್ಯಾಣ:** ಎಸ್‌ವೈ.ಖಾದ್ರಿ, **ರಾಯಚೂರು ಗ್ರಾಮೀಣ (ಎಸ್.ಟಿ):** ನರಸಿಂಹ ನಾಯಕ್; **ಮಾನ್ವಿ (ಎಸ್.ಟಿ):** ರಾಜಾವೆಂಕಟಪ್ಪ ನಾಯಕ್; **ದೇವದುರ್ಗ (ಎಸ್.ಟಿ):** ಕರೆಮ್ಮ ಜಿ. ನಾಯಕ್; **ಲಿಂಗಸುಗೂರು (ಎಸ್.ಸಿ):** ಸಿದ್ದು ಬಂಡಿ, **ಸಿಂಧನೂರು:** ವೆಂಕಟರಾವ್ ನಾಡಗೌಡ, **ಕುಷ್ಟಗಿ:** ತುಕಾರಾಮ್ ಸುರ್ವೆ, **ಕನಕಗಿರಿ (ಎಸ್.ಸಿ):** ಅಶೋಕ ಉಮಲೂಟಿ, **ಹಾವೇರಿ (ಎಸ್.ಸಿ):** ತುಕಾರಾಮ್ ಮಾಳಗಿ, **ಹಿರೇಕೆರೂರು:** ಜಯಾನಂದ ಜಾವಣ್ಣನವರ, **ರಾಣೆಬೆನ್ನೂರು:** ಮಂಜುನಾಥ್ ಗೌಡರ್; **ಹೂವಿನ ಹಡಗಲಿ (ಎಸ್.ಸಿ):** ಪುತ್ರೇಶ್; **ಸಂಡೂರು (ಎಸ್.ಟಿ):** ಸೋಮಪ್ಪ, **ಚಳ್ಳಕೆರೆ (ಎಸ್.ಟಿ):** ರವೀಶ್; **ಹೊಸದುರ್ಗ:** ಎಂ. ತಿಪ್ಪೇಸ್ವಾಮಿ, **ಹರಿಹರ:** ಎಚ್.ಎಸ್. ಶಿವಶಂಕರ್, **ದಾವಣಗೆರೆ ದಕ್ಷಿಣ:** ಅಮಾನುಲ್ಲಾ, **ಚನ್ನಗಿರಿ:** ಯೋಗೇಶ್; **ಹೊನ್ನಾಳಿ:** ಶಿವಮೂರ್ತಿಗೌಡ, **ಶಿವಮೊಗ್ಗ ಗ್ರಾಮೀಣ (ಎಸ್.ಸಿ):** ಶಾರದಾ ಪೂರ್‍ಯಾನಾಯಕ್; **ಭದ್ರಾವತಿ:** ಶಾರದಾ ಅಪ್ಪಾಜಿಗೌಡ, **ತೀರ್ಥಹಳ್ಳಿ:** ರಾಜಾರಾಮ್; **ಶೃಂಗೇರಿ:** ಸುಧಾಕರ್ ಶೆಟ್ಟಿ, **ಮೂಡಿಗೆರೆ (ಎಸ್.ಸಿ):** ಬಿ.ಬಿ. ನಿಂಗಯ್ಯ, **ಚಿಕ್ಕಮಗಳೂರು:** ತಿಮ್ಮಶೆಟ್ಟಿ, **ಚಿಕ್ಕನಾಯಕನಹಳ್ಳಿ:** ಸಿ.ಬಿ. ಸುರೇಶ್ ಬಾಬು, **ತುರುವೇಕೆರೆ:** ಎಂ.ಟಿ. ಕೃಷ್ಣಪ್ಪ, **ಕುಣಿಗಲ್:** ಡಿ. ನಾಗರಾಜಯ್ಯ, **ತುಮಕೂರು ನಗರ:** ಗೋವಿಂದರಾಜು, **ತುಮಕೂರು ಗ್ರಾಮೀಣ:** ಡಿ.ಸಿ. ಗೌರಿಶಂಕರ್; **ಕೊರಟಗೆರೆ (ಎಸ್.ಸಿ):** ಸುಧಾಕರ್ ಲಾಲ್; **ಗುಬ್ಬಿ:** ನಾಗರಾಜ, **ಪಾವಗಡ (ಎಸ್.ಸಿ):** ತಿಮ್ಮರಾಯಪ್ಪ, **ಮಧುಗಿರಿ:** ವೀರಭದ್ರಯ್ಯ, **ಗೌರಿಬಿದನೂರು:** ನರಸಿಂಹಮೂರ್ತಿ, **ಬಾಗೇಪಲ್ಲಿ:** ನಾಗರಾಜ ರೆಡ್ಡಿ, **ಚಿಕ್ಕಬಳ್ಳಾಪುರ:** ಕೆ.ಪಿ. ಬಚ್ಚೇಗೌಡ, **ಶಿಡ್ಲಘಟ್ಟ:** ರವಿಕುಮಾರ್; **ಚಿಂತಾಮಣಿ:** ಕೃಷ್ಣಾರೆಡ್ಡಿ, **ಶ್ರೀನಿವಾಸಪುರ:** ಜಿ.ಕೆ. ವೆಂಕಟಶಿವಾರೆಡ್ಡಿ, **ಮುಳಬಾಗಿಲು (ಎಸ್.ಸಿ):** ಸಮೃದ್ಧಿ ಮಂಜುನಾಥ್; **ಕೆ.ಜಿ.ಎಫ್ (ಎಸ್.ಸಿ):** ರಮೇಶ್ ಬಾಬು, **ಬಂಗಾರಪೇಟೆ (ಎಸ್.ಸಿ):** ಎಂ. ಮಲ್ಲೇಶ್ ಬಾಬು, **ಕೋಲಾರ:** ಸಿ.ಎಂ.ಆರ್. ಶ್ರೀನಾಥ್; **ಮಾಲೂರು:** ಜಿ.ಇ. ರಾಮೇಗೌಡ, **ಬ್ಯಾಟರಾಯನಪುರ:** ವೇಣುಗೋಪಾಲ್; **ದಾಸರಹಳ್ಳಿ:** ಆರ್. ಮಂಜುನಾಥ್; **ಹೆಬ್ಬಾಳ:** ಮೊಹಿದ್ ಅಲ್ತಾಫ್; **ಗಾಂಧಿನಗರ:** ವಿ. ನಾರಾಯಣಸ್ವಾಮಿ, **ರಾಜಾಜಿನಗರ:** ಆರ್. ಗಂಗಾಧರ ಮೂರ್ತಿ, **ಗೋವಿಂದರಾಜನಗರ:** ಆರ್. ಪ್ರಕಾಶ್; **ಬಸವನಗುಡಿ:** ಅರಮನೆ ಶಂಕರ್; **ಬೆಂಗಳೂರು ದಕ್ಷಿಣ:** ಪ್ರಭಾಕರ್ ರೆಡ್ಡಿ, **ಆನೇಕಲ್ (ಎಸ್.ಸಿ):** ಕೆ.ಪಿ.ರಾಜು, **ದೇವನಹಳ್ಳಿ (ಎಸ್.ಸಿ):** ನಿಸರ್ಗ ನಾರಾಯಣಸ್ವಾಮಿ, **ದೊಡ್ಡಬಳ್ಳಾಪುರ:** ಮುನೇಗೌಡ, **ನೆಲಮಂಗಲ (ಎಸ್.ಸಿ):** ಡಾ.ಶ್ರೀನಿವಾಸ ಮೂರ್ತಿ, **ಮಾಗಡಿ:** ಎ. ಮಂಜುನಾಥ್; **ರಾಮನಗರ:** ನಿಖಿಲ್ ಕುಮಾರಸ್ವಾಮಿ, **ಚನ್ನಪಟ್ಟಣ:** ಎಚ್. ಡಿ. ಕುಮಾರಸ್ವಾಮಿ, **ಮಳವಳ್ಳಿ (ಎಸ್.ಸಿ);** ಡಾ.ಕೆ.ಅನ್ನದಾನಿ, **ಮದ್ದೂರು;** ಡಿ.ಸಿ. ತಮ್ಮಣ್ಣ, **ಮೇಲುಕೋಟೆ;** ಸಿ.ಎಸ್. ಪುಟ್ಟರಾಜು, **ಮಂಡ್ಯ;** ಎಂ. ಶ್ರೀನಿವಾಸ್, **ಶ್ರೀರಂಗಪಟ್ಟಣ;** ಡಾ.ರವೀಂದ್ರ ಶ್ರೀಕಂಠಯ್ಯ, **ನಾಗಮಂಗಲ;** ಸುರೇಶ್ ಗೌಡ, **ಕೆ.ಆರ್. ಪೇಟೆ;** ಎಚ್‌.ಟಿ. ಮಂಜುನಾಥ್, **ಪಿರಿಯಾಪಟ್ಟಣ;** ಕೆ. ಮಹಾದೇವ್, **ಕೆ.ಆರ್. ನಗರ;** ಸಾ.ರಾ. ಮಹೇಶ್, **ಹುಣಸೂರು;** ಹರೀಶ್ ಗೌಡ, **ಚಾಮುಂಡೇಶ್ವರಿ;** ಜಿ.ಟಿ.ದೇವೇಗೌಡ, **ಟಿ.ನರಸೀಪುರ (ಎಸ್.ಸಿ);** ಅಶ್ವಿನ್‌ಕುಮಾರ್, **ವರುಣ;** ಅಭಿಶೇಕ್, **ಕೃಷ್ಣರಾಜ;** ಮಲ್ಲೇಶ್, **ಹನೂರು;** ಮಂಜುನಾಥ್.

‘ಕರ್ನಾಟಕಕ್ಕೆ ಸಂತೋಷ್ ಕೊಡುಗೆ ಏನು?’

ಬೆಂಗಳೂರು: ‘ಅವನ್ಯಾರೋ ಜೋಳಿಗೆ ಹಿಡಿದುಕೊಂಡು ಓಡಾಡೋನು ಏನೋ ಹೇಳಿದ್ದಾನೆ. ಕರ್ನಾಟಕಕ್ಕೂ ನಿನಗೂ ಏನ್ ಸಂಬಂಧ, ಕರ್ನಾಟಕಕ್ಕೆ ನಿನ್ನ ಕೊಡುಗೆ ಏನು?...’

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ ಪರಿ ಇದು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುಟುಂಬ, ಜೆಡಿಎಸ್ ಹಾಗೂ ಪಂಚರತ್ನ ಯೋಜನೆಗಳ ಬಗ್ಗೆ ಬಿ.ಎಲ್.ಸಂತೋಷ್ ನೀಡಿರುವ ಹೇಳಿಕೆಗೆ ಎಚ್‌.ಡಿ.ಕುಮಾರಸ್ವಾಮಿ ಖಾರವಾಗಿ ಆಕ್ರೋಶ ವ್ಯಕ್ತಪಡಿಸಿದರು.

‘ಮಿಸ್ಟರ್ ಸಂತೋಷ್, ಲೂಟಿ ದರೋಡೆ ಮಾಡಿ ಕರ್ನಾಟಕದ ಹಣವನ್ನು ಕೊಂಡೊಯ್ಯುತ್ತೀರಾ. ಸಂತೋಷವಾಗಿದ್ದೀರಂತೆ ಲೂಟಿ ಹೊಡೆದು. ರಾಜ್ಯದಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ಮಾಡುವವರು, ವಾಮಾಚಾರ ಮಾಡುವವರಿಂದ ಹಣ ತೆಗೆದುಕೊಂಡು ಆಪರೇಷನ್ ಕಮಲ ಮಾಡಿ ನಮ್ಮ ಸರ್ಕಾರ ಉರುಳಿಸಿದಿರಿ’ ಎಂದು ಕಿಡಿಕಾರಿದರು.

‘ಪ್ರಧಾನಿ ಅವರ ಬಳಿ ನಮ್ಮ ಕುಟುಂಬ ಬಗ್ಗೆ ಕೇಳಿ. ಲಘುವಾಗಿ ನಮ್ಮ ಪಕ್ಷದ ಬಗ್ಗೆ ಮಾತನಾಡಬೇಡಿ. 2023ಕ್ಕೆ ನಿಮ್ಮ ಪರಿಸ್ಥಿತಿ ಏನಾಗಿರುತ್ತದೆ ಎನ್ನುವುದನ್ನು ಒಮ್ಮೆ ಊಹೆ ಮಾಡಿಕೊಳ್ಳಿ’ ಎಂದರು.

‘ನಿಮ್ಮದು 40 ಪರ್ಸೆಂಟ್ ಸರ್ಕಾರ. ನಮ್ಮ ಬಗ್ಗೆ ಮಾತಾಡುವ ನೈತಿಕತೆ ಇಲ್ಲ. ಮೋದಿ ಹೆಸರಲ್ಲಿ ಹೊಟ್ಟೆಪಾಡು ನೋಡ್ಕೊಂಡಿರೋರು ನೀವು. ನಾನು ಸರ್ಕಾರ ಮಾಡೋಣ ಎಂದು ನಿಮ್ಮ ಮನೆ ಬಾಗಿಲಿಗೆ ಬಂದಿರಲಿಲ್ಲ. ಯಾರು ಯಾರ ಮನೆ ಬಾಗಿಲಿಗೆ ಬಂದಿದ್ದರು ಎನ್ನುವುದು ರಾಜ್ಯದ ಜನತೆಗೆ ಚೆನ್ನಾಗಿ ಗೊತ್ತು. ನಮ್ಮ ಪಕ್ಷದ ಬಗ್ಗೆ ಲಘುವಾಗಿ ಮಾತಾನಾಡಬೇಡಿ ಮಿಸ್ಟರ್ ಅಶೋಕ್, ಮಿಸ್ಟರ್ ಸಂತೋಷ್’ ಎಂದು ವಾಗ್ದಾಳಿ ನಡೆಸಿದರು.

‘ಬಿಜೆಪಿ ಅರ್ಜಿ ಸಲ್ಲಿಸಿದಾಗ ನೋಡೋಣ’

‘ಬಿಜೆಪಿಯವರು ದರೋಡೆಕೋರರು, ಲೂಟಿಕೋರರು. ಇಂಥ ಬಿಜೆಪಿಯವರ ಜತೆ ಸೇರಿ ನಾನು ಸರ್ಕಾರ ನಡೆಸುವುದಕ್ಕೆ ಆಗುತ್ತಾ? ಪಂಚರತ್ನ ಯೋಜನೆಗಳನ್ನು ಜಾರಿ ಮಾಡಲು ಸಾಧ್ಯವೇ’ ಎಂದು ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

‘2023ರ ಚುನಾವಣೆ ನಂತರ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರುತ್ತದೆ. ಆಗ ಬಿಜೆಪಿಯವರು ನಮ್ಮ ಮುಂದೆ ಅರ್ಜಿ ಹಿಡಿದು ಬರುತ್ತಾರೆ. ಆಗ ನೋಡೋಣ’ ಎಂದರು.

‘ಸಮಾಜವನ್ನು ಒಡೆಯುವ, ಜನರ ನಡುವೆ ದ್ವೇಷ ಬಿತ್ತುವ ಇಂಥವರ ಜತೆ ಸರ್ಕಾರ ರಚಿಸಲು ಸಾಧ್ಯವೇ?’ ಎಂದು ಕುಮಾರಸ್ವಾಮಿ ಕೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 10 ದಿನಾಂಕ: 19/12/2022

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು / ಮಾಡಲು / ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**https://eproc.karnataka.gov.in**) ಮೂಲಕ (ಪೂರ್ವ ಅರ್ಹತೆ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ. ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
ಜಿ–83/22–23	ಸಪ್ಲೈ & ಇನ್‌ಸ್ಟಾಲೇಷನ್ ಆಫ್ ಸಿಸಿಟಿವಿ ಸರ್ವೀಲೆನ್ಸ್ ಸಿಸ್ಟಂಗಳನ್ನು ಒದಗಿಸುವ ಬಗ್ಗೆ	8.00	12/01/2023
ಜಿ–84/22–23	ಎಂ.ಎಸ್. ವೆಲ್ಡಿಂಗ್ ಎಲೆಕ್ಟ್ರೋಡ್ಸ್‌ಗಳ ಖರೀದಿ	1.25	23/01/2023
ಜಿ–85/22–23	ವಿಂಡೋ ಫ್ಲಾಕ್ ಚಾನಲ್ ಖರೀದಿ	0.80	12/01/2023

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ:– ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ: **080–22230960/ 22234115,** ಕರೆಮಾಡಿ/ **eprocurementhelpdesk@gmail.com,** ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ. ಬಿಡ್ಡುದಾರರಿಗೆ ಕರಾರಸಾ ನಿಗಮದಿಂದ ಸಹಾಯದ ಅಗತ್ಯವಿದ್ದರೆ **cosp@ksrtc.org** ನಲ್ಲಿ ಸಂಪರ್ಕಿಸಬಹುದು. (ಸಂಪರ್ಕಿಸಿ **7760990225, 7760990224**).

ಸಹಿ/–, ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಎಲ್‌ಸಿ/3611/2022–23

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

ಜಿಲ್ಲಾಧಿಕಾರಿಗಳವರ ಕಛೇರಿ ಆವರಣ, ತುಮಕೂರು–572101
Phone : 0816 2278792 ಮೊ.ಸಂಖ್ಯೆ: 9448496034 e-mail: dmtumkurkfcsc@yahoo.com

ಅಲ್ಪಾವಧಿ ಇ– ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

ಸಂಖ್ಯೆ:ಕಆನಾಸನಿನಿ/ಆಡಳಿತ/ಸಿಬ್ಬಂದಿ/ಹೊರಗುತ್ತಿಗೆ/2022–23/ ದಿನಾಂಕ:–19.12.2022

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ತುಮಕೂರು ಜಿಲ್ಲೆ, ಈ ಕಛೇರಿಗೆ ಡಾಟಾ ಎಂಟ್ರಿ ಆಪರೇಟರ್‌ಗಳ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ 2022–23 ನೇ ಸಾಲಿಗೆ ಎರಡು ವರ್ಷದ ಅವಧಿಗೆ (ಜನವರಿ–2023 ರಿಂದ ಡಿಸೆಂಬರ್–2024) ಪಡೆಯುವ ಸಲುವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಅನ್ನು ದಿನಾಂಕ 19.12..2022 ರಿಂದ 26.12.2022 ರವರೆಗೆ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ www.eprockarnataka.gov.in. ವೆಬ್‌ಸೈಟ್ ಅನ್ನು ಪರಿಶೀಲಿಸುವುದು.

ಸಹಿ/–ಜಿಲ್ಲಾ ವ್ಯವಸ್ಥಾಪಕರು (ಪ್ರ), ಕಆನಾಸನಿನಿ., ತುಮಕೂರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: **kerc-ka@nic.in** ವೆಬ್‌ಸೈಟ್: **https://kerc.karnataka.gov.in**

ಸಂಖ್ಯೆ: ಎಸ್/03/01/2041 ದಿನಾಂಕ: 19–12–2022

ಸಾರ್ವಜನಿಕ ವಿಚಾರಣೆ ಬಗ್ಗೆ ಪ್ರಕಟಣೆ

ವಿಷಯ: ಎಲ್.ಟಿ. / ಹೆಚ್.ಟಿ. ವೋಲ್ಟೇಜ್‌ನಲ್ಲಿ ಸೌರವಿದ್ಯುತ್ ಘಟಕಗಳನ್ನು ಸ್ಥಾಪಿಸಿ / ಬಳಕೆ ಮಾಡಿ, ಗ್ರಾಹಕರ ಎಲ್.ಟಿ / ಹೆಚ್.ಟಿ. ವ್ಯವಸ್ಥೆಗೆ ಜೋಡಿಸಿಕೊಳ್ಳಬಹುದರ ಬಗ್ಗೆಯ ಸಾರ್ವಜನಿಕ ವಿಚಾರಣೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಒಂದು ಚರ್ಚಾಪತ್ರವನ್ನು ಹೊಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಶುಕ್ರವಾರ ದಿನಾಂಕ: 30–12–2022ರಂದು ಬೆಳಿಗ್ಗೆ 11.00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ ಒಂದನೆಯ ಮಹಡಿ, ನಂ. 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ನಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು.

ವಾಸಾಸಂಇ/ವಾ.ಪ್ರ/3617/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–39/ಎಇ–1/2022–23/2734 ದಿನಾಂಕ:– 19.12.2022

ಇ– ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–39/ 2022–23 ದಿನಾಂಕ: 19.12.2022

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ಮತ್ತು ಹೊನ್ನಾಳಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲೂ– 2 ಮತ್ತು 3 ರಂತೆ ಕರ್ನಾಟಕ ಸರ್ಕಾರದಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ದಾವಣಗೆರೆ ತಾಲ್ಲೂಕು ಮಲ್ಪೆ–ಮೊಳಕಾಲ್ಮೂರು ರಸ್ತೆ ರಾಜ್ಯ ಹೆದ್ದಾರಿ–65 (ಹದಡಿ ಗ್ರಾಮದ ಹತ್ತಿರ) ಕಿ.ಮೀ. 242.80ರಲ್ಲಿ ಕೆರೆ ಏರಿಯು ಕುಸಿದಿರುವ ಭಾಗಕ್ಕೆ ದುರಸ್ತಿ ರೂ. 30.00 ಲಕ್ಷಗಳು 2) ನ್ಯಾಮತಿ ತಾಲ್ಲೂಕು ಹಲಗೇರಿ–ಹುಲಿಕಲ್ ರಾಜ್ಯ ಹೆದ್ದಾರಿ (ರಾಹೆ–26) ರಸ್ತೆಯ 50.20ರಲ್ಲಿ ಸೇತುವೆ ದುರಸ್ತಿ (ದಾನಿಹಳ್ಳಿ ಕ್ರಾಸ್ ರೈಸ್ ಮಿಲ್ ಹತ್ತಿರ) ರೂ. 70.00 ಲಕ್ಷ 3) ನ್ಯಾಮತಿ ತಾಲ್ಲೂಕು ದೇವನಾಯಕನಹಳ್ಳಿ– ಮುಸ್ಸೇನಾಳ್ ರಸ್ತೆಯ ಕಿ.ಮೀ. 11.00ರಲ್ಲಿ ಎಲ್.ಎಲ್.ಸಿ ದುರಸ್ತಿ (ಗಂಗನಕೋಟೆ ಗ್ರಾಮದ ಹತ್ತಿರ) ರೂ. 30.00 ಲಕ್ಷ 4) ಹೊನ್ನಾಳಿ ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಯಾತ್ರಿ ನಿವಾಸದ ಮುಂದುವರೆದ ಕಾಮಗಾರಿ (2ನೇ ಮಹಡಿ) ರೂ. 100.00 ಲಕ್ಷ ಕ್ರ.ಸಂ 1 ರಿಂದ 3ರ ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 30.12.2022 ಸಂಜೆ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ 31.12.2022 ಸಂಜೆ 4.00 ಗಂಟೆಯವರೆಗೆ ಮತ್ತು ಕ್ರ.ಸಂ 4ರ ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ 06.01.2023 ಸಂಜೆ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ 07.01.2023 ಸಂಜೆ 4.00 ಗಂಟೆಯವರೆಗೆ

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ದಾವಣಗೆರೆ.

ವಾಸಾಇ/ಡಿವಿಜಿ/705/ ಎಂಸಿಎ/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ಫೋನ್ ನಂ : 08182-222942, ಇ–ಮೇಲ್: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ: 63/2022-23 ದಿನಾಂಕ : 15.12.2022

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ–3 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **3ನೇ ದರ್ಜೆ ಹಾಗೂ ಮೇಲ್ಪಟ್ಟ** ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ 4059-80-051-0-29-386 ಇಲಾಖಾ ಕಟ್ಟಡಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ **Renovation work of PWD Circuit House in Shivamogga City.(Indent No. 159566)** ಕಾಮಗಾರಿ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. **ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 80.55 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 1.61 ಲಕ್ಷ. ಸದರಿ ಕಾಮಗಾರಿಯ ಟೆಂಡರ್ ಅವಧಿ 06 ತಿಂಗಳು ಮಳೆಗಾಲ ಸೇರಿ.**

ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 15-12-2022** ರಿಂದ **31-12-2022** ರ **17.30 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 31-12-2022 ರ ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 02-01-2023 ರಂದು ಬೆಳಿಗ್ಗೆ 11.00ಕ್ಕೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 03-01-2023 ರ ನಂತರ** ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾಸಾಸಂಇ/ಶಿ/ನಂ.118-12 ಝೆಂಕಾರ್/2022-23

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ

ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ ಸಂ.4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ–584111.

ಸಂಖ್ಯೆ: ಕೃಭಾಜನಿನಿ/ನಾಬದಂ/ವಿ–4/ಪಿಬಿ/ಟೆಂಡರ್/2022–23/739 ದಿನಾಂಕ:12/12/2022

ಅಲ್ಪಾವಧಿಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

(ದ್ವಿ–ಲಕೋಟೆ ಪದ್ದತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ (ನಿ.)ಬೆಂಗಳೂರು/ಆಲಮಟ್ಟಿ ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ, ಕೆಳಗಿನ ಕಾಮಗಾರಿಗೆ ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಕರೆಯಲಾಗಿದ್ದು, ಕಾಮಗಾರಿಗಳನ್ನು ಶೇಕಡಾವಾರು ಆಧಾರದಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಅಪ್ಲೋಡ್ ಮಾಡುವುದು.

Name of work : Construction of Box culverts at Ch.22.357 km and Ch.22.900 Km under Distry 23 under NRBC Extension. (INDENT NO. 21972) 2) Amount put to tender: Rs.71.36 Lakhs. 3)EMD: Rs.1.68 Lakhs. (Transaction fee as E-procurement Portal). 4) Period : 9 Month (Includig mansoon).

ಟೆಂಡರ್‌ಅಧಿಸೂಚನೆ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.

1) ಟೆಂಡರ್ ದಸ್ತಾವೇಜುಗಳನ್ನು ದಿ:19/12/2022 ರಿಂದ ದಿ:02/01/2023 ರವರೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:02/01/2023ರ ಸಂಜೆ: 5.00 ಗಂಟೆಯವರೆಗೆ. 3) ಕವರ್–1 (ತಾಂತ್ರಿಕ ಬಿಡ್) ಮತ್ತು ಕವರ್–2 (ಆರ್ಥಿಕ ಬಿಡ್)ನ್ನು ವಿಧ್ಯುನ್ಮಾನದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ ಸಂ.4, ಚಿಕ್ಕಹೊನ್ನಕುಣಿ– 584111 ತಾ:ದೇವದುರ್ಗ, ಜಿ:ರಾಯಚೂರು ಕಾರ್ಯಾಲಯದಲ್ಲಿ ಅನುಕ್ರಮವಾಗಿ ದಿ:04/01/2023 ಮತ್ತು ದಿ:06/01/2023ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ www.eproc.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಾರ್ಯಾಲಯದಿಂದ ಕಛೇರಿಯ ದಿನಗಳಂದು, ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು
ಕೃಭಾಜನಿನಿ, ನಾಬದಂಕಾ, ವಿಭಾಗ ಸಂ–04
ಚಿಕ್ಕಹೊನ್ನಕುಣಿ

ವಾ.ಸಾ.ಸಂ.ಇ/ರಾಯಚೂರು/489/ಎಂ.ಸಿ&ಎ/2022–23

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ : ಕಲಬುರಗಿ
(ಸಂಚಾರ (ವಾಣಿಜ್ಯ) ಇಲಾಖೆ)

ಕಕರಸಾ:ಕೇಕ:ಸಂಚಾರ:ವಾಣಿಜ್ಯ: 4518 :22–23 ದಿನಾಂಕ: 19/12/2022

ಟೆಂಡರ್ ಪ್ರಕಟಣೆ ಸಂಖ್ಯೆ: 02 /2022 (ಇ–ಪೋರ್ಟಲ್ ಮೂಲಕ)

ಕ.ಕ.ರ.ಸಾ. ನಿಗಮವು ಪ್ರಯಾಣಿಕರ ಸೌಲಭ್ಯಗಳನ್ನು ಉತ್ತಮಗೊಳಿಸಲು ಹಾಗೂ ನಿಗಮದ ಆಸ್ತಿಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿರುವುದನ್ನು ಮುಂದುವರೆಸಿ ಹೆಚ್ಚಿನ ಆದಾಯವನ್ನು ಗಳಿಸಲು ಉದ್ದೇಶವನ್ನು ಹೊಂದಿದೆ. ಈ ಸಂಬಂಧ ಕಕರಸಾ ನಿಗಮದ 09 ಸ್ಥಳಗಳಲ್ಲಿ ಮಾಸಿಕ ಬಾಡಿಗೆ ದರ ಹಾಗೂ ಶೇಕಡಾವಾರು ಕಮೀಷನ್‌ನ ಪಾವತಿ ಆಧಾರದ ಮೇಲೆ ತೈಲ್ ಬಂಕ್‌ಗಳನ್ನು ನಿರ್ಮಿಸಿ ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡಲು ಆಸಕ್ತ ಭಾರತದ ಸಾರ್ವಜನಿಕ ವಲಯದ ತೈಲ್ ಮಾರುಕಟ್ಟೆ ಕಂಪನಿಗಳಿಂದ ಇ–ಪೋರ್ಟಲ್ ಮೂಲಕ ದ್ವಿಹಂತ ಪದ್ಧತಿಯಲ್ಲಿ ಬಿಡ್ಡಗಳನ್ನು ಆಹ್ವಾನಿಸಿದ್ದು, ಲೀಸ್ ಅವಧಿ 15 ವರ್ಷಗಳಿಗೆ ನಿಗದಿಪಡಿಸಲಾಗಿದೆ. ತೃಪ್ತಿದಾಯಕ ಲೀಸ್ ನಿರ್ವಹಣೆ ಆಧಾರದ ಮೇಲೆ 05 ವರ್ಷಗಳ ಅವಧಿಗೆ ವಿಸ್ತರಿಸಲು ಅವಕಾಶವಿರುತ್ತದೆ.

ದಿನಾಂಕ: **10.01.2023** ರಂದು 12.00 ಗಂಟೆಗೆ ಆಸಕ್ತ ಬಿಡ್ಡ್‌ದಾರರ ಸ್ಪಷ್ಟೀಕರಣಕ್ಕಾಗಿ ಬಿಡ್ ಪೂರ್ವಭಾವಿ ಸಭೆಯನ್ನು ನಿಗದಿಪಡಿಸಲಾಗಿದೆ.

1) ಸ್ಪಷ್ಟೀಕರಣ ಕೋರಿ ಸಲ್ಲಿಸಲು ಕೊನೆಯ ದಿನಾಂಕ & ಸಮಯ : **05.01.2023 at 17:00 hrs,**
2) ನಿಗಮದಿಂದ ಸ್ಪಷ್ಟೀಕರಣ ನೀಡಲು ಕೊನೆಯ ದಿನಾಂಕ & ಸಮಯ : **16.01.2023 at 17:00 hrs**
3) ಅರ್ಹತಾ & ಆರ್ಥಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : **25.01.2023 at 17:00 hrs,**
4) ಅರ್ಹತಾ ಬಿಡ್ ತೆರೆಯುವ ದಿನಾಂಕ & ಸಮಯ : **31.01.2023 at 11:30 hrs**, 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ : **09.02.2023 at 11:30 hrs**

ಯಾವುದೇ ಕಾರಣ ನೀಡದೆ ಎಲ್ಲಾ ಟೆಂಡರ್‌ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಸಹಾಯಕ ಸಂಚಾರ ಅಧೀಕ್ಷಕರು–9108000707 ವಿಭಾಗೀಯ ಸಂಚಾರ ಅಧಿಕಾರಿಗಳು–7760992047, ಇ–ಮೇಲ್ ವಿಳಾಸ: ctmnekrtcglb@gmail.com

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾ.ಸಾ.ಸಂ.ಇ/ಕಲಬುರಗಿ/983/ಎಂ.ಸಿ.&ಎ/2022–23

दिनांक 20.12.2022 का विज्ञापन सं. इसरो:आइ.सी.आर.बी.:02(स.-क.वै.स.):2022
Advt No. ISRO:ICRB:02(A-JPA):2022 dated 20.12.2022

भारत सरकार, अंतरिक्ष विभाग
Government of India, Department of Space
भारतीय अंतरिक्ष अनुसंधान संगठन (इसरो)
INDIAN SPACE RESEARCH ORGANISATION [ISRO]
इसरो केंद्रीकृत भर्ती बोर्ड (आइ.सी.आर.बी.)
ISRO CENTRALISED RECRUITMENT BOARD [ICRB]

सहायक, कनिष्ठ वैयक्तिक सहायक, प्रवर श्रेणी लिपिक एवं आशुलिपिकों की भर्ती
RECRUITMENT OF ASSISTANTS, JUNIOR PERSONAL ASSISTANTS, UPPER DIVISION CLERK AND STENOGRAPHERS

भारतीय अंतरिक्ष अनुसंधान संगठन/अंतरिक्ष विभाग के केंद्र/यूनिट बृहत रूप से सामाजिक लाभ हेतु और आत्म-निर्भरता प्राप्त करते हुए देश की सेवा करने एवं प्रमोचक रॉकेटों तथा संचार/सुदूर संवेदन उपग्रहों की डिजाइन तथा निर्माण की क्षमता का विकास करने एवं उसके बाद उन्हें प्रमोचित करने हेतु अंतरिक्ष अनुप्रयोग, अंतरिक्ष विज्ञान तथा प्रौद्योगिकी के विकास में अनुसंधान विकास गतिविधियों से जुड़े हैं।

Indian Space Research Organization/Department of Space Centres/Units are engaged in Research and Development activities in development of Space Application, Space Science and Technology for the benefit of society at large and for serving the nation by achieving self-reliance and developing capacity to design and build Launch Vehicles and Communication/Remote Sensing Satellites and thereafter launch them.

निम्नांकित विवरण के अनुसार इसरो के संघटक केंद्रों और **स्वायत्त निकायों** में वेतन मैट्रिक्स के स्तर ४ में निम्नलिखित रिक्तियों के लिए प्रतिभावान **अभ्यर्थियों** से ऑनलाइन आवेदन आमंत्रित किए जाते हैं:

Online applications are invited from meritorious **candidates** for the following vacancies in Level 4 of Pay Matrix at constituent ISRO Centres and in **Autonomous Bodies**, as detailed below:

Zone/क्षेत्र	पद सं. Post No.1	पद सं. Post No.2	पद सं. Post No.3	पद सं. Post No.4	पद सं. Post No.5	पद सं. Post No.6
Ahmedabad/अहमदाबाद	26	05				
Bengaluru / बेंगलूरु	125	60	16	14		
Hassan /हासन	16	01				
Hyderabad/हैदराबाद	35	16			02	01
New Delhi / नई दिल्ली		02				
Sriharikota/श्रीहरिकोटा	54	24				
Thiruvananthapuram /तिरुवनंतपुरम	83	45			01	
Total/कुल	**339**	**153**	**16**	**14**	**03**	**01**

2. **विस्तृत चयन प्रक्रिया एवं आवेदन भरने हेतु, इसरो के वेबसाइट www.isro.gov.in देखें। ऑनलाइन आवेदन प्राप्त करने की अंतिम तिथि 09.01.2023 है।**
For detailed Selection Procedure and for applying, please visit ISRO website at www.isro.gov.in. Last date for receipt of on-line application is 09.01.2023.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
ದೂರವಾಣಿ ಸಂಖ್ಯೆ:080–22868870, 22867097, 22865192 ಫ್ಯಾಕ್ಸ್–080–22860396 e-mail:mdadcl2011@gmail.com

ಸಂಖ್ಯೆ: ಡಾಬಿಆರ್‌ಅಂಅನಿ/ಕೈ–ತ/ಅ.ಆ–03/2022–23 ದಿನಾಂಕ:19.12.2022

ಪ್ರಕಟಣೆ

2022–23ನೇ ಸಾಲಿನ ಪರಿಶಿಷ್ಟ ಜಾತಿಯ ಜನರ ಆರ್ಥಿಕ ಅಭಿವೃದ್ಧಿಗಾಗಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಈ ಕೆಳಕಂಡ ಯೋಜನೆಗಳಿಗೆ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯೋಜನೆಗಳ ವಿವರ:

1. **ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ದ್ವಿ–ಚಕ್ರ/ತ್ರಿ–ಚಕ್ರ ಸರಕು ಸಾಗಾಣಿಕೆ ವಾಹನ)**
2. **ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ (ಮಹಿಳಾ ಸ್ವ ಸಹಾಯ ಗುಂಪುಗಳಿಗೆ)**

ಅರ್ಜಿಗಳನ್ನು ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in ನ ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರದಲ್ಲಿ ಆನ್‌ಲೈನ್ ಮುಖಾಂತರ ಆಸಕ್ತರು ಮೇಲಿನ ಯೋಜನೆಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸದುಪಯೋಗ ಪಡಿಸಿಕೊಳ್ಳಲು ಈ ಮೂಲಕ ಕೋರಲಾಗಿದೆ.

ಸೇವಾ ಸಿಂಧುವಿನಲ್ಲಿ ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ: 31.12.2022ಕ್ಕೆ** ನಿಗದಿಪಡಿಸಿದೆ.

ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು ಮತ್ತು ಷರತ್ತುಗಳು:

1. ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ಹಾಗೂ ಕರ್ನಾಟಕ ರಾಜ್ಯದ ವಾಸಿಯಾಗಿರಬೇಕು.
2. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ ರೂ.1.50,000/– ಮತ್ತು ನಗರ ಪ್ರದೇಶದಲ್ಲಿ ರೂ.2,00,000/–ಗಳ ಮಿತಿಯಲ್ಲಿರಬೇಕು
3. ಅರ್ಜಿದಾರರು ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ ಕನಿಷ್ಠ 21 ವರ್ಷಗಳಿಂದ ಗರಿಷ್ಠ 50 ವರ್ಷದೊಳಗಿರಬೇಕು ಹಾಗೂ ಮೈಕ್ರೋಕ್ರೆಡಿಟ್ (ಪ್ರೇರಣಾ) ಯೋಜನೆಯಡಿ ಕನಿಷ್ಠ 21 ವರ್ಷಗಳಿಂದ ಗರಿಷ್ಠ 60 ವರ್ಷದೊಳಗಿರಬೇಕು.
4. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು ಮತ್ತು ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.
5. ಉದ್ಯಮ ಶೀಲತಾ ಅಬಿವೃದ್ಧಿ ಯೋಜನೆಯಡಿ ನಿಗಮದಿಂದ ಸ್ವಯಂ ಉದ್ಯೋಗಕ್ಕಾಗಿ ದ್ವಿ–ಚಕ್ರ/ತ್ರಿ–ಚಕ್ರ ಸರಕು ಸಾಗಾಣಿಕೆ ವಾಹನ ಉದ್ದೇಶಗಳಿಗೆ ಘಟಕ ವೆಚ್ಚದಲ್ಲಿ ರೂ.50,000/– ಗಳ ಸಹಾಯಧನ ಹಾಗೂ ರೂ.20,000/– ಸಾಲ ಮಂಜೂರು ಮಾಡಲಾಗುವುದು ಹಾಗೂ ಉಳಿದ ಮೊತ್ತ ಬ್ಯಾಂಕ್ ಸಾಲವನ್ನಾಗಿ ಅರ್ಜಿದಾರರ ಸೇವಾ ವ್ಯಾಪ್ತಿಯ ಬ್ಯಾಂಕ್‌ಗಳಿಂದ ಮಂಜೂರಾತಿ ಪಡೆಯುವ ಷರತ್ತಿಗೆ ಒಳಪಟ್ಟು ಸಹಾಯಧನ ಮತ್ತು ಸಾಲ ಮಂಜೂರು ಮಾಡಲಾಗುತ್ತದೆ.
6. ವಾಹನಗಳ ಸೌಲಭ್ಯ ಪಡೆಯಲು ಫಲಾಪೇಕ್ಷಿಗಳು ಡ್ರೈವಿಂಗ್ ಲೈಸೆನ್ಸ್ ಹೊಂದಿರಬೇಕು.
7. ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆಯಡಿ ಕನಿಷ್ಠ 10 ಮಹಿಳೆಯರು ಸ್ವ–ಸಹಾಯ ಗುಂಪಿನಲ್ಲಿ ಸದಸ್ಯರಿರತಕ್ಕದ್ದು, ಸಂಘದ ಸದಸ್ಯರು ಬಿಪಿಎಲ್ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಹೊಂದಿರಬೇಕು.
8. ನೊಂದಾಯಿತ ಮಹಿಳಾ ಸ್ವ ಸಹಾಯ ಸಂಘಗಳನ್ನು ಮಾತ್ರ ಪರಿಗಣಿಸಲಾಗುವುದು ಹಾಗೂ ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು.
9. ಸಂಘದ ಒಬ್ಬ ಸದಸ್ಯರಿಗೆ ರೂ.25,000/– ರಂತೆ (ರೂ.15,000/–ಸಹಾಯಧನ ಹಾಗೂ ರೂ.10.,000/– ಸಾಲ) ಒಟ್ಟು 10 ಸದಸ್ಯರಿಗೆ ಒಟ್ಟು ರೂ.2.50ಲಕ್ಷ ನಿಗಮದಿಂದ ನೇರವಾಗಿ ಮಂಜೂರು ಮಾಡಲಾಗುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/3614/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ:08354– 235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354–235043

ಸಂ: ಕಾನಿಇಂ/ಪಂರಾಇವಿ/ಬಿಜಿಕೆ/ಪಿಬಿ–3/ಟೆಂಡರ್/2022–23/4176 ದಿನಾಂಕ:16.12.2022

–: ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ದ್ವಿ–ಲಕೋಟೆ ಮರುಟೆಂಡರ್ ಪ್ರಕಟಣೆ :– :: ಕೆ.ಡಬ್ಲ್ಯೂ–3 ಬಿಡ್ ಡಾಕ್ಯೂಮೆಂಟ್ ::

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿನ 2022–23 ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋದನಾ ಕೊಠಡಿಗಳ ನಿರ್ಮಾಣದ ಅನುದಾನ ಅಡಿಯಲ್ಲಿ ಆಯ್ಕೆಯಾದ ಬೀಳಗಿ ವಿಧಾನಸಭಾ ಮತಕ್ಷೇತ್ರದ ಕ್ಷೇತ್ರ ವ್ಯಾಪ್ತಿಯ ಬೀಳಗಿ ತಾಲೂಕಿನ ಅಡಿಯಲ್ಲಿ ಆಯ್ಕೆಯಾದ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗಳ ಈ ಕೆಳಕಂಡ ಕಾಮಗಾರಿಗಳಿಗೆ Standard Tender Document KW-3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ದತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳ ಇಂಡೆಂಟ್ ನಂ:: 96170/Call-2, ಕಾಮಗಾರಿ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ ಟೆಂಡರ್ ಮೊತ್ತ (ರೂ.83.40 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:27.12.2022 ರ ಸಾಯಂಕಾಲ 17.30 ಗಂಟೆವರೆಗೆ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ:29.12.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

DIPR/BGK/RO-NO-699/MCA/2022-23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಶ್ರದ್ಧೆಯ ಅರ್ಥ ಮೂಢನಂಬಿಕೆಯಲ್ಲ.
-ಸ್ವಾಮಿ ವಿವೇಕಾನಂದ

ಫಿಫಾ ವಿಶ್ವಕಪ್: ಕತಾರ್ ಕಣದಲ್ಲಿ ಗೆದ್ದ ಫುಟ್‌ಬಾಲ್

ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡವು ಚಾಂಪಿಯನ್ ಆಗುವುದರೊಂದಿಗೆ ಈ ಬಾರಿಯ ಫಿಫಾ ವಿಶ್ವಕಪ್ ಟೂರ್ನಿಗೆ ಭವ್ಯ ತೆರೆ ಬಿದ್ದಿತು. ಶ್ರೀಮಂತಿಕೆ ಎದ್ದು ಕಾಣುವಂತಹ ಆಯೋಜನೆಯ ಮೂಲಕ ಪುಟ್ಟ ರಾಷ್ಟ್ರ ಕತಾರ್ ಜಗತ್ತಿನ ಗಮನ ಸೆಳೆಯಿತು. ಅದರಲ್ಲೂ ಅರ್ಜೆಂಟೀನಾ ಮತ್ತು ಫ್ರಾನ್ಸ್ ತಂಡಗಳ ನಡುವಣ ರೋಚಕ ಫೈನಲ್ ಪಂದ್ಯವು ಈ ಟೂರ್ನಿಗೆ ಕಿರೀಟಪ್ರಾಯವಾಯಿತು. 36 ವರ್ಷಗಳ ನಂತರ ಅರ್ಜೆಂಟೀನಾ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ತಮ್ಮ ವೃತ್ತಿಜೀವನದ ಐದನೇ ವಿಶ್ವಕಪ್ ಟೂರ್ನಿ ಆಡಿದ ಮೆಸ್ಸಿ ಚಿನ್ನದ ಟ್ರೋಫಿಗೆ ಮುತ್ತಿಟ್ಟು ಭಾವುಕರಾದರು. ಅತ್ಯಂತ ಕಠಿಣ ಪೈಪೋಟಿಯೊಡ್ಡಿದ ಫ್ರಾನ್ಸ್, ಪಂದ್ಯ ಸೋತರೂ ಕೋಟ್ಯಂತರ ಕ್ರೀಡಾಪ್ರೇಮಿಗಳ ಹೃದಯ ಗೆದ್ದಿತು. ಅದರಲ್ಲೂ ನವಯುಗದ ತಾರೆ ಕಿಲಿಯನ್ ಎಂಬಾಪೆ ಆಟ ಮನದಲ್ಲಿ ಅಚ್ಚಳಿಯದೇ ಉಳಿಯಿತು. ಅರ್ಜೆಂಟೀನಾ ತಂಡವು ಈ ಟೂರ್ನಿಯ ತನ್ನ ಮೊದಲನೇ ಪಂದ್ಯದಲ್ಲಿಯೇ 'ದುರ್ಬಲ' ತಂಡ ಸೌದಿ ಅರೇಬಿಯಾ ಎದುರು ಪರಾಭವಗೊಂಡಿತ್ತು. ಸೋಲನ್ನೇ ಗೆಲುವಿನ ಸೋಪಾನವಾಗಿಸಿಕೊಂಡ ಅರ್ಜೆಂಟೀನಾ ವಿಜಯಿಯಾಯಿತು.

ಈ ಸಲದ ಟೂರ್ನಿಯು ಹತ್ತಾರು ಅಚ್ಚರಿಗಳು ಮತ್ತು ಛಲ ಬಿಡದ ಹೋರಾಟಗಳಿಗೆ ಸಾಕ್ಷಿಯಾಯಿತು

ಈ ಸಲದ ಟೂರ್ನಿಯು ಇಂತಹ ಹತ್ತಾರು ಅಚ್ಚರಿಗಳು ಮತ್ತು ಛಲ ಬಿಡದ ಹೋರಾಟಗಳಿಗೆ ಸಾಕ್ಷಿಯಾಯಿತು. ಫುಟ್‌ಬಾಲ್‌ನಲ್ಲಿ ಪಳಗಿರುವ ದಕ್ಷಿಣ ಅಮೆರಿಕ ಮತ್ತು ಐರೋಪ್ಯ ದೇಶಗಳ ತಂಡಗಳಿಗೆ ಏಷ್ಯಾ ಖಂಡದ ತಂಡಗಳು ಒಡ್ಡಿದ ಪೈಪೋಟಿ ಅಸಾಧಾರಣವಾದುದು. ಸ್ಪೇನ್ ಮತ್ತು ನಾಲ್ಕು ಸಲ ವಿಶ್ವಕಪ್ ಗೆದ್ದಿರುವ ಜರ್ಮನಿ ತಂಡಗಳ ಎದುರು ಜಪಾನ್, ವೇಲ್ಸ್ ಎದುರು ಇರಾನ್, ಪೋರ್ಚುಗಲ್ ವಿರುದ್ಧ ದಕ್ಷಿಣ ಕೊರಿಯಾದ ವಿಜಯಗಳು ಅವಿಸ್ಮರಣೀಯ. ಆಫ್ರಿಕಾ ಖಂಡದ ಮೊರೊಕ್ಕೊ ತಂಡವು ಬೆಲ್ಜಿಯಂ, ಸ್ಪೇನ್ ಹಾಗೂ ಪೋರ್ಚುಗಲ್ ತಂಡಗಳನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದ್ದು ಬಹುದೊಡ್ಡ ಸಾಧನೆಯೇ ಸರಿ. ದಿಗ್ಗಜರಾದ ಕ್ರಿಸ್ಟಿಯಾನೊ ರೊನಾಲ್ಡೊ, ಲೂಕಾ ಮಾಡ್ರಿಚ್, ಪೋಲೆಂಡ್‌ನ ರಾಬರ್ಟ್ ಲೆವಾಂಡೊವಸ್ಕಿ, ಫ್ರಾನ್ಸ್ ಗೋಲ್‌ಕೀಪರ್ ಹ್ಯುಗೊ ಲಾರಿಸ್ ಮತ್ತು ಉರುಗ್ವೆಯ ಲೂಯಿಸ್ ಸೊರೇಜ್ ಅವರು ಕೊನೆ ಬಾರಿ ವಿಶ್ವಕಪ್ ಅಂಗಳದಲ್ಲಿ ತಮ್ಮ ಕಾಲ್ಚಳಕ ಮೆರೆದರಾದರೂ ಟ್ರೋಫಿ ಜಯಿಸುವ ಕನಸು ನನಸಾಗಲಿಲ್ಲ. ಇದೇ ಹೊತ್ತಿನಲ್ಲಿ ಪೋರ್ಚುಗಲ್‌ನ ಗೊನ್ಸಾಲೊ ರಾಮೋಸ್, ಫ್ರಾನ್ಸ್‌ನ ಆರ್ಲೆನ್ ಚುವಮೆನಿ, ಸ್ಪೇನ್‌ನ ಗಾವಿ, ಕ್ರೊವೇಷ್ಯಾದ ಗವಾರೆಡೊಲ್, ಅರ್ಜೆಂಟೀನಾದ ಎಂಜೊ ಫರ್ನಾಂಡಿಜ್, ಬ್ರೆಜಿಲ್‌ನ ವಿನೀಸಿಯಸ್ ಜೂನಿಯರ್, ಸೌದಿ ಅರೇಬಿಯಾದ ಸಲೇಹ ಅಲ್‌ಶೆಹರಿ ಮತ್ತು ಮೊರೊಕ್ಕೊದ ಅಶ್ರಫ್ ಹಕೀಮಿ ಅವರು ಭವಿಷ್ಯದ ಭರವಸೆಯ ತಾರೆಗಳಾಗಿ ಹೊರಹೊಮ್ಮಿದರು. ಇವರೆಲ್ಲರಿಂದಾಗಿ ಟೂರ್ನಿಯು ಕೊನೆಯ ಕ್ಷಣದವರೆಗೂ ಕುತೂಹಲ ಉಳಿಸಿಕೊಂಡಿತು. ಕ್ರೀಡಾಂಗಣದಲ್ಲಿ ಪ್ರತಿನಿತ್ಯ ಸೇರುತ್ತಿದ್ದ ಸಾವಿರಾರು ಪ್ರೇಕ್ಷಕರು ಅಲ್ಲದೆ, ಟಿ.ವಿ, ಆ್ಯಪ್‌ಗಳ ಮೂಲಕ ಕೋಟ್ಯಂತರ ಜನ ಪಂದ್ಯಗಳನ್ನು ವೀಕ್ಷಿಸಿದರು. ಅದರಲ್ಲಿ ಭಾರತದ ಅಭಿಮಾನಿಗಳ ಸಂಖ್ಯೆಯೂ ಗಮನಾರ್ಹವಾಗಿತ್ತು. ವಿಶ್ವ ಭೂಪಟದಲ್ಲಿ ಪುಟ್ಟ ಚುಕ್ಕೆಗಳಂತೆ ಕಾಣುವ ದೇಶಗಳ ಆಟವನ್ನು ನೋಡಿದಾಗಲೆಲ್ಲ ಭಾರತ ತಂಡ ಯಾಕಿಲ್ಲವೆಂಬ ಚರ್ಚೆಗಳೂ ನಡೆದವು. ಮುಂದಿನ ಬಾರಿ ಅಮೆರಿಕದಲ್ಲಿ ನಡೆಯಲಿರುವ ಟೂರ್ನಿಯಲ್ಲಿ 48 ತಂಡಗಳಿಗೆ ಅವಕಾಶ ದೊರೆಯಲಿದೆ. ಅದರಲ್ಲಿ ಸ್ಥಾನ ಪಡೆಯುವತ್ತ ಭಾರತ ತಂಡ ಪ್ರಯತ್ನಿಸಬೇಕು. ಅದಕ್ಕಾಗಿ ಜಪಾನ್, ಕೊರಿಯಾ ಮತ್ತು ಇರಾನ್ ತಂಡಗಳಂತೆ ಭಾರತವೂ ಶ್ರಮಿಸಬೇಕಷ್ಟೇ.

ಆದರೆ, ಸುಮಾರು ₹ 16 ಲಕ್ಷ ಕೋಟಿ ಖರ್ಚು ಮಾಡಿ ಆಯೋಜಿಸಲಾದ ಈ ಬಾರಿಯ ಟೂರ್ನಿಯಲ್ಲಿಯೂ ಕೆಲವು ವಿವಾದಗಳಾದವು. ಕತಾರ್ ದೇಶವನ್ನು ಚೆಂದಗಾಣಿಸಿದ ವಲಸೆ ಕಾರ್ಮಿಕರ ಸಾವು–ನೋವು, ವಸ್ತ್ರಸಂಹಿತೆ, ಬಿಯರ್ ನಿರ್ಬಂಧದಂಥ ನಿಯಮಗಳೂ ದೊಡ್ಡ ಸುದ್ದಿಗಳಾದವು. ಕ್ರೀಡಾಂಗಣದೊಳಗೂ ಕೆಲವು ವಿಷಯಗಳು ಚರ್ಚೆಗೆ ಗ್ರಾಸವಾದವು. ಪೋರ್ಚುಗಲ್ ತಾರೆ ರೊನಾಲ್ಡೊ ಅವರನ್ನು ಸ್ವಿಟ್ಜರ್‌ಲೆಂಡ್ ವಿರುದ್ಧದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಬೆಂಚ್‌ನಲ್ಲಿ ಕೂರಿಸಿದ ತಂಡದ ಮ್ಯಾನೇಜರ್ ಫರ್ನಾಂಡೊ ಸ್ಯಾಂಟೋಸ್ ನಿರ್ಧಾರದ ಪರ, ವಿರುದ್ಧದ ಚರ್ಚೆಗಳು ಇನ್ನೂ ಮುಗಿದಿಲ್ಲ. ಕೆಲವು ಪಂದ್ಯಗಳಲ್ಲಿ ನೀಡಿದ ತೀರ್ಪುಗಳಿಗಾಗಿ ರೆಫರಿಗಳೂ ಟೀಕೆಗೆ ಗುರಿಯಾದರು. ಇವೆಲ್ಲದರಾಚೆ 28 ದಿನಗಳ ಈ ಮಹಾಮೇಳದಲ್ಲಿ 32 ರಾಷ್ಟ್ರಗಳು ತಮ್ಮ ಸಾಮರ್ಥ್ಯ ಪಣಕ್ಕೊಡ್ಡಿ ಫುಟ್‌ಬಾಲ್ ಕ್ರೀಡೆಯನ್ನು ಗೆಲ್ಲಿಸಿದವು. ಫೈನಲ್ ಪಂದ್ಯದ ನಂತರ ಮೆಸ್ಸಿ ಮತ್ತು ಎಂಬಾಪೆ ಆಲಿಂಗಿಸಿಕೊಂಡು ಕೈಕೈ ಹಿಡಿದು ಹೆಜ್ಜೆ ಹಾಕಿದಾಗ ಕ್ರೀಡಾಸ್ಫೂರ್ತಿಯೂ ವಿಜೃಂಭಿಸಿತು.

ದಿನದ ಟ್ವೀಟ್

ಚಿತ್ರಮಂದಿರಗಳಲ್ಲಿ ಕುರುಕಲು

ಚಿತ್ರಮಂದಿರಗಳಲ್ಲಿ ಟನ್‌ಗಟ್ಟಲೆ ಪಾಪ್‌ಕಾರ್ನ್ ಮಾರಾಟವಾಗುವ ಬಗ್ಗೆ ಓದಿದೆ. ಅಲ್ಲಿ ಸಾಂಪ್ರದಾಯಿಕ ಕುರುಕಲು ಕೂಡ ಸಿಗುವಂತಾದರೆ ಒಳ್ಳೆಯದಲ್ಲವೇ? ನಿಪ್ಪಟ್ಟು, ಬೆಣ್ಣೆ ಮುರುಕು, ಶಕರ್ಪರ... ಮುಂತಾದವು. ಈ ಪಟ್ಟಿಗೆ ನೀವೂ ಏನನ್ನಾದರೂ ಸೇರಿಸಲು ಬಯಸುವಿರಾ?

ಕೃಪಾಲ್ ಅಮಣ್ಣ, ವ್ಲಾಗರ್

ಕಿಡಿನುಡಿ

ಎಲ್ಲಾ ಅಭಿಮಾನಿ ಸಂಘಗಳು ಘನತೆಯನ್ನು ಕಾಯ್ದುಕೊಳ್ಳಬೇಕು. ಇತರ ನಟರು ಅಥವಾ ಯಾವುದೇ ವ್ಯಕ್ತಿಯನ್ನು ಟ್ರೋಲ್ ಮಾಡದಂತೆ ಎಲ್ಲಾ ನಟರು ತಮ್ಮ ಅಭಿಮಾನಿ ಸಂಘಗಳಿಗೆ ಎಚ್ಚರಿಕೆ ನೀಡಬೇಕು. ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಅವಹೇಳನಕಾರಿ ಕಮೆಂಟ್‌ಗಳನ್ನು ಪೋಸ್ಟ್ ಮಾಡಬೇಡಿ. ಎಲ್ಲಾ ಬಗೆಯ ನಿಂದನೆಗಳು ಹಾಗೂ ಆಕ್ಷೇಪಗಳು ಮಹಿಳೆಯರನ್ನೇ ಗುರಿಯಾಗಿಸಿಕೊಂಡಿರುತ್ತವೆ. ಇಂತಹವರ ಖಾತೆಗಳನ್ನು ಟ್ವಿಟರ್ ನಿರ್ಬಂಧಿಸಲಿ.

ರಮ್ಯಾ, ನಟಿ

25 ವರ್ಷಗಳ ಹಿಂದೆ
ಶನಿವಾರ, 20-12-1997

• **ಮೈಸೂರು ಅರಮನೆ ಹಸ್ತಾಂತರಕ್ಕೆ ತಡೆ**

ನವದೆಹಲಿ, ಡಿ. 19 (ಪಿಟಿಐ)– ಮೈಸೂರು ಅರಮನೆಯನ್ನು ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರಿಗೆ ರಾಜ್ಯ ಸರ್ಕಾರ ಹಸ್ತಾಂತರ ಮಾಡಬೇಕೆಂದು ಕರ್ನಾಟಕದ ಹೈಕೋರ್ಟ್ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದೆ.

ನ್ಯಾಯಮೂರ್ತಿಗಳಾದ ಸುಜಾತಾ ವಿ. ಮನೋಹರ್ ಮತ್ತು ಡಿ.ಪಿ. ವಾದ್ವಾ ಅವರನ್ನೊಳಗೊಂಡಿದ್ದ ವಿಭಾಗೀಯ ಪೀಠವು ಎರಡೂ ಕಡೆಯವರು ಸಂಧಾನ ಮಾತುಕತೆಯನ್ನು ಆರಂಭಿಸಿ ಮುಂದಿನ ಜನವರಿಯೊಳಗೆ ಸಂಪೂರ್ಣವಾಗಿ ಇತ್ಯರ್ಥಪಡಿಸಿಕೊಳ್ಳಲು ಪ್ರಯತ್ನಿಸಬೇಕೆಂದು ನಿರ್ದೇಶನ ನೀಡಿತು.

ಕರ್ನಾಟಕ ಸರ್ಕಾರ 1976ರ ಫೆಬ್ರುವರಿ 26ರಂದು ಆಜ್ಞೆಯೊಂದನ್ನು ಹೊರಡಿಸುವ ಮೂಲಕ ಅರಮನೆ ಮತ್ತು ಅದಕ್ಕೆ ಸೇರಿದ ಪ್ರದೇಶಗಳ ನಿರ್ವಹಣೆಯ ಅಧಿಕಾರವನ್ನು ಪಡೆದುಕೊಂಡಿತು. ಹೈಕೋರ್ಟ್‌ನ ವಿಭಾಗೀಯ ಪೀಠ ಕಳೆದ ನವೆಂಬರ್ 6ರಂದು ತೀರ್ಪನ್ನು ನೀಡಿ ಸರ್ಕಾರದ ಈ ಆಜ್ಞೆಯನ್ನು ವಜಾ ಮಾಡಿತು.

• **ಸಿಂಗಪೂರ್ ವಿಮಾನ ಅಪಘಾತ 106 ಮಂದಿ ಸಾವು**

ಸಿಂಗಪೂರ್, ಡಿ. 19 (ಪಿಟಿಐ)– ಜಕಾರ್ತದಿಂದ ಸಿಂಗಪೂರ್‌ಗೆ ಹೊರಟಿದ್ದ ವಿಮಾನವೊಂದು ಇಂದು ಸಂಜೆ ಇಂಡೊನೇಷ್ಯಾ ದ್ವೀಪದ ಬಳಿ ಅಪಘಾತಕ್ಕೀಡಾಗಿದ್ದರಿಂದ ಒಬ್ಬ ಭಾರತೀಯ ಪ್ರಯಾಣಿಕ ಸೇರಿದಂತೆ 106 ಜನರು ಸತ್ತಿದ್ದಾರೆ ಎಂದು ಸಿಂಗಪೂರ್ ಏರ್‌ಲೈನ್ಸ್ ಇಂದು ಹೇಳಿದೆ.

50 ವರ್ಷಗಳ ಹಿಂದೆ
ಬುಧವಾರ, 20-12-1972

• **ಬರದಿಂದ ಚಡಪಡಿಸುತ್ತಿರುವ ಜಿಲ್ಲೆಗಳಿಗೆ 50 ಕೋಟಿ ರೂಪಾಯಿ ಹೆಚ್ಚಿನ ಪರಿಹಾರ ಯೋಜನೆ: ಆರ್ಮುಗಂ ಶಿಫಾರಸು**

ಬೆಂಗಳೂರು, ಡಿ. 19– ಅನ್ನ, ನೀರಿನ ಬರದಿಂದಾಗಿ ಚಡಪಡಿಸುತ್ತಿರುವ ಬೀದರ್, ಕಲ್ಬುರ್ಗಿ, ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳ ಜನತೆಯನ್ನು ಮುಂದಿನ ಮಳೆಗಾಲದವರೆಗೆ ರಕ್ಷಿಸಲು, ಐವತ್ತು ಕೋಟಿ ರೂಪಾಯಿಗಳ ಹೆಚ್ಚಿನ ಪರಿಹಾರ ಕಾಮಗಾರಿಗಳನ್ನು ಯೋಜಿಸಿ ತತ್‌ಕ್ಷಣ ಜಾರಿಗೆ ತರಬೇಕು ಎಂದು ವಿಧಾನಸಭೆಯ ಏಕಸದಸ್ಯ ಆಯೋಗಿ ಶ್ರೀ ಸಿ.ಎಂ. ಆರ್ಮುಗಂ ಅವರು ಶಿಫಾರಸು ಮಾಡಿದ್ದಾರೆ.

ಈಗ ಜಿಲ್ಲೆಗಳಲ್ಲಿ ನಡೆಯುತ್ತಿರುವ ಪರಿಹಾರ ಕಾಮಗಾರಿಗಳು, ಶೇಕಡ ಐದರಷ್ಟು ಮಂದಿ ಸಂಕಷ್ಟಪೀಡಿತರಿಗೆ ಮಾತ್ರ ಕೆಲಸ ಒದಗಿಸುತ್ತಿವೆ ಎಂದು ತಿಳಿಸಿದ ಶ್ರೀ ಆರ್ಮುಗಂ ಅವರು, ಈ ಪ್ರಮಾಣವು ಕೆಲಸಕ್ಕಾಗಿ ಸಾಲುಗಟ್ಟುತ್ತಿರುವ ಶೇಕಡ 20ರಷ್ಟು ಮಂದಿಗೆ ವಿಸ್ತಾರಗೊಳ್ಳಬೇಕು ಎಂದು ಸಲಹೆ ಮಾಡಿದ್ದಾರೆ.

• **ದಿನದ ಗ್ರಾಸ ಎರಡೇ ಎರಡು ಒಣ ರೊಟ್ಟಿ**

ಬೆಂಗಳೂರು, ಡಿ. 19– ಅಭಾವ ಪರಿಹಾರ ಕಾಮಗಾರಿಯಲ್ಲಿರುವ ಕಾರ್ಮಿಕರ ದಿನದ ಊಟವೇನು? ಇಡೀ ದಿನದ ಶ್ರಮ. ಎರಡು ಗೋಧಿ ಅಥವಾ ಜೋಳದ ರೊಟ್ಟಿ, ತುಸು ಉಪ್ಪು ಮತ್ತು ಮೆಣಸು. ಕೆಲವೆಡೆ ಎರಡು ಬರೀ ಒಣಗಿದ ಜೋಳದ ರೊಟ್ಟಿಗಳೇ ಗತಿ.

'ಇವರ ಪರಿಸ್ಥಿತಿ ಕರುಣಾಜನಕ'. 'ಒಬ್ಬ ವ್ಯಕ್ತಿಗೆ ದಿನಕ್ಕೆ 250 ಗ್ರಾಂಗಳ ಪೌಷ್ಟಿಕ ಆಹಾರ ಬೇಕು. ಆದರೆ, ಅದೆಲ್ಲಿಯೂ ಇಲ್ಲ' ಎಂದು ಸಿ.ಎಂ. ಆರ್ಮುಗಂ ಹೇಳಿದ್ದಾರೆ.

ವಿರೋಧಿಗಳನ್ನು ವಿವಾದದ ಅಲೆಗಳಲ್ಲಿ ತೇಲಿಸುತ್ತದೆ ಆಡಳಿತ ಪಕ್ಷದ ತಂತ್ರ!

ಇನ್ನಾದರೂ ಬುದ್ಧಿ 'ಭೆಟ್ಟಿ' ಆಗಬಹುದೇ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಮಾಡಿದ ತಪ್ಪುಗಳನ್ನೇ ಪುನರಾವರ್ತಿಸುವ ವ್ಯಕ್ತಿಯನ್ನು ಕುರಿತು ಉತ್ತರ ಕರ್ನಾಟಕದಲ್ಲಿ, 'ಇಷ್ಟೆಲ್ಲಾ ಆದ್ರೂ ಅಂವಗ ಇನ್ನಾ ಬುದ್ಧಿ ಭೆಟ್ಟಿ ಆಗಿಲ್ಲ ನೋಡು...' ಅಂತ ಮೂದಲಿಕೆಯ ಮಾತು ಆಡುವುದುಂಟು. ರಾಜ್ಯದಲ್ಲಿನ ವಿರೋಧಿ ಪಾಳಯದಲ್ಲಿರುವ ರಾಜಕಾರಣಿಗಳ ಪಾಡು ಹೆಚ್ಚುಕಡಿಮೆ ಹಾಗೆಯೇ ಆಗಿದೆ.

ಸರ್ಕಾರ ನಡೆಸುವ ಪಕ್ಷಕ್ಕೆ ತನ್ನ ಆಡಳಿತದ ಬಗೆಗಿನ ವಸ್ತುನಿಷ್ಠ ಅವಲೋಕನ ಸದಾಕಾಲ ಬೇಡವೆನಿಸುವ ಇರಿಸುಮುರಿಸಿನ ವಿಚಾರ. ಆಡಳಿತದಲ್ಲಿ ಇರುವವರ ನಡೆನುಡಿಯನ್ನು ತಮ್ಮ ಟೀಕೆಟಿಪ್ಪಣಿ ಮೂಲಕ ವಿಮರ್ಶೆಗೆ ಗುರಿಪಡಿಸುವ ನಿಷ್ಠುರ ಧೋರಣೆಯ ಪತ್ರಿಕೆಗಳು, ರಾಜಕಾರಣಿಗಳು, ಸಂಘಟನೆಗಳನ್ನು ಕಂಡರೆ ಸರ್ಕಾರಗಳಿಗೆ ಸಹಜವಾಗಿ ಆಗಿಬರುವುದಿಲ್ಲ. ಜನಪರ ಕಾಳಜಿ ತ್ಯಜಿಸಿ ಆದ್ಯತೆಗಳನ್ನು ತಿರುವುಮುರುವುಗೊಳಿಸಿದ ಸರ್ಕಾರಗಳಂತೂ ವಿಮರ್ಶಕರನ್ನು ಫಲಾನುಭವಿಗಳನ್ನಾಗಿ, ಫಲಾಕಾಂಕ್ಷಿಗಳನ್ನಾಗಿ ಪರಿವರ್ತಿಸಲು, ಸಾಧ್ಯವಾಗದಿದ್ದರೆ ದಿಕ್ಕು ತಪ್ಪಿಸಲು ತರಹೇವಾರಿ ತಂತ್ರಗಳನ್ನು ಬಳಸಲು ತುದಿಗಾಲ ಮೇಲೆ ನಿಂತಿರುತ್ತವೆ. ಸಾರ್ವಜನಿಕವಾಗಿ ಚರ್ಚೆಗೆ ಒಡ್ಡಿಕೊಳ್ಳಬೇಕಾದ ಆಡಳಿತದ ವೈಫಲ್ಯ, ಭ್ರಷ್ಟಾಚಾರ, ಜನರ ಬವಣೆ, ದುಸ್ತರ ಬದುಕಿನಂತಹ ಕೇಂದ್ರ ವಿಷಯಗಳನ್ನು ಮರೆಮಾಚಲು ಭಾಷೆ, ಧರ್ಮ, ಜಾತಿಯಂತಹ ಭಾವನಾತ್ಮಕ ಸಂಗತಿಗಳನ್ನು ತೇಲಿಬಿಡುವುದು ಇಂತಹ ತಂತ್ರಗಾರಿಕೆಯ ಭಾಗವೇ ಆಗಿರುತ್ತದೆ.

ಆಡಳಿತ ಪಕ್ಷಗಳು ಹೀಗೆ ತಮ್ಮ ತೊಗಲು ಉಳಿಸಿಕೊಳ್ಳಲು ಹೆಣೆಯುವ ತಂತ್ರಗಾರಿಕೆ ಹೊಸದಂತೂ ಅಲ್ಲ, ಅದು ಅರ್ಥವಾಗದಷ್ಟು ಸಂಕೀರ್ಣವೂ ಇಲ್ಲ. ಆದರೆ ವಿರೋಧ ಪಕ್ಷದಲ್ಲಿ ಇರುವವರು ಈ ಬಲೆಯಲ್ಲಿ ಮತ್ತೆ ಮತ್ತೆ ಸಿಲುಕಿಬೀಳುವುದು, ತೊಳಲಾಡುವುದು ಮಾತ್ರ ಸೋಜಿಗ ಹುಟ್ಟಿಸುವ ಸಂಗತಿ.

ಈವರೆಗೆ ಉದ್ದೇಶಪೂರ್ವಕವಾಗಿ ಹುಟ್ಟುಹಾಕಿದ ಹಿಜಾಬ್, ಆಜಾನ್, ಹಲಾಲ್, ಜಾತ್ರೆಯಂಗಡಿ, ಟಿಪ್ಪು ವಿವಾದದ ಸಂದರ್ಭಗಳನ್ನು ವಿರೋಧ ಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್ ಪಕ್ಷ ನಿರ್ವಹಿಸಿದ ರೀತಿಯಲ್ಲಿಯೇ ಅದರ ಸಾಮರ್ಥ್ಯದ ಮಿತಿ ಮತ್ತು ಗೊಂದಲದ ಅತಿ ವ್ಯಕ್ತವಾಗಿದೆ. ಪಠ್ಯಪುಸ್ತಕಗಳು, ಜನಪದ ಹಾಡುಗಳು ಮತ್ತು ಐತಿಹಾಸಿಕ ಕುರುಹುಗಳ ಮೂಲಕ ಜನಮಾನಸದಲ್ಲಿ ಒಂದು ಗಣ್ಯಸ್ಥಾನ ಪಡೆದಿದ್ದ ಟಿಪ್ಪು ಸುಲ್ತಾನನನ್ನು ಕಾಂಗ್ರೆಸ್ ಪಕ್ಷ ಸಮಕಾಲೀನ ರಾಜಕೀಯದ ಅಂಗಳಕ್ಕೆ ಕರೆತರುವ ಮೂಲಕ ಬಲಪಂಥೀಯ ಚಟುವಟಿಕೆಗಳಿಗೆ ಪರೋಕ್ಷ ಕುಮ್ಮಕ್ಕು ನೀಡಿದಂತಾಗಿದೆ. ಇದರಿಂದ ಅಲ್ಪಸಂಖ್ಯಾತರ ಮತಗಳ ಕ್ರೋಡೀಕರಣದ ಉದ್ದೇಶಕ್ಕಿಂತ ಬಹುಸಂಖ್ಯಾತ ಮತದಾರರನ್ನು ಧ್ರುವೀಕರಿಸುವ ಬಿಜೆಪಿ ಆಕಾಂಕ್ಷೆ ಈಡೇರಿರುವುದು ಕಣ್ಣೆದುರಿಗಿನ ಸತ್ಯ. ಇಂತಹ ಅನಾಯಾಸ ಫಲದ ರುಚಿ ಕಂಡ ಬಿಜೆಪಿ ಸಹಜವಾಗಿಯೇ ತನಗೆ ಅನುಕೂಲಕರ ಅನ್ನಿಸುವ ಇತಿಹಾಸದ ಪುಟಗಳನ್ನು ತೆರೆಯತೊಡಗಿದೆ.

ಈ ವಿಷಯದಲ್ಲಿ ಆಡಳಿತ ಪಕ್ಷಕ್ಕೆ ತನ್ನ ಕಾರ್ಯಸೂಚಿ ಬಗ್ಗೆ ಸ್ಪಷ್ಟತೆ ಮತ್ತು ನಿಖರತೆ ಇದೆ. ಅವರಿಗೆ ತಮ್ಮ ತತ್ಕಾಲೀನ ಮತ್ತು ದೀರ್ಘಾವಧಿ ಗುರಿಗಳು ಕಣ್ಣಿಗೆ ಕಟ್ಟಿದಂತಿವೆ. ಯಾವ ದಾರಿಯಾದರೂ ಸರಿ, ಗುರಿ ತಲುಪುವುದಷ್ಟೇ ಮುಖ್ಯ ಎಂದು ಪರಿಭಾವಿಸಿ ಮುನ್ನಡೆಯುತ್ತಿರುವ ಪಕ್ಷವಿದು. ಪೂರ್ವನಿಗದಿತ ಪರಿಕಲ್ಪನೆಯ ಅಂಗವಾಗಿ ಕಾಲಕಾಲಕ್ಕೆ ಒಂದೊಂದೇ ಭಾವನಾತ್ಮಕ ವಿಷಯಗಳನ್ನು ಹರಿಯಬಿಟ್ಟು ಮರೆಯಲ್ಲಿ ವಿರಮಿಸುವುದು 'ಇವರ' ಕಾರ್ಯತಂತ್ರ. ಸಾರ್ವಜನಿಕ ಅಖಾಡಕ್ಕೆ ಬಂದಿಳಿಯುವ ಇಂತಹ ವಿವಾದಾತ್ಮಕ ವಿಷಯಗಳನ್ನು ವಿವೇಕರಹಿತವಾಗಿ ನಿರ್ವಹಿಸುವ ಮೂಲಕ 'ಗುರಿ' ತಲುಪಿಸುವ ಪರೋಕ್ಷ ಕಾರ್ಯದಲ್ಲಿ ವಿರೋಧ ಪಕ್ಷಗಳು, ಅವರ ಸಮರ್ಥಕರು ಮತ್ತು ವಕ್ತಾರರು ನಿರತರಾಗಿರುವುದು ವಿಪರ್ಯಾಸಕರ.

ಇತ್ತೀಚೆಗೆ ಈ ದಿಸೆಯಲ್ಲಿ ಎಚ್ಚೆತ್ತಿರುವ ಕಾಂಗ್ರೆಸ್ ಪಕ್ಷದ ಹೈಕಮಾಂಡ್, ಜಾತಿ–ಧರ್ಮಗಳಂತಹ ಸೂಕ್ಷ್ಮ ವಿಚಾರದಲ್ಲಿ ಮೂಗುತೂರಿಸದಂತೆ ಸ್ಥಳೀಯ ನಾಯಕರಿಗೆ ಸೂಚನೆ ನೀಡಿದಂತಿದೆ. ಕೇವಲ ಕ್ರಿಯೆಗೆ ಪ್ರತಿಕ್ರಿಯೆ ರೂಪದಲ್ಲಿ ದಾಖಲಿಸುವ ತಾತ್ಕಾಲಿಕ ಕಾರ್ಯಕ್ರಮಗಳು, ಗಂಭೀರ ಸ್ವರೂಪದ ಭಾವನಾತ್ಮಕ ವಿಷಯಗಳನ್ನು ಸಾಮಾಜಿಕ ಮಾಧ್ಯಮದ ಟ್ರೋಲುಗಳ ಮಟ್ಟಕ್ಕಿಳಿಸುವ ಚಟುವಟಿಕೆಗಳು, ಬಾಯಿಚಪಲದ ಚಮತ್ಕಾರದ ಭಾಷಣಗಳು ಶಾಶ್ವತ ಪರಿಹಾರದತ್ತ ಕರೆದೊಯ್ಯಲಾರವು. ಬಹುಸಂಖ್ಯಾತರ ಧಾರ್ಮಿಕ ಭಾವನೆಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿರುವ ಬಲಪಂಥೀಯ ಚಿಂತನೆಯ ಆಳ-ಅಗಲವನ್ನು ಪರ್ಯಾಯ ಚಿಂತನೆಯ ಪಕ್ಷಗಳು ಮೊದಲು ಅರ್ಥ ಮಾಡಿಕೊಳ್ಳಬೇಕಿದೆ. ಅದಕ್ಕೆ ತಕ್ಕ ಬಹುಕಾಲೀನ ಕಾರ್ಯಯೋಜನೆ ಹೆಣೆಯುವುದು ಮುಂದಿನ ಹಂತ. ಆರೋಗ್ಯಕರ ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ಸಶಕ್ತ ಪ್ರತಿಪಕ್ಷದ ಅಗತ್ಯ ಮತ್ತು ಮಹತ್ವವನ್ನು ಬಲ್ಲ ಪ್ರತಿಯೊಬ್ಬರೂ ಬಯಸುವುದು ಇದನ್ನೇ.

ಇದೀಗ ಬೆಳಗಾವಿಯಲ್ಲಿ ವಿಧಾನಸಭೆಯ ಚಳಿಗಾಲದ ಅಧಿವೇಶನ ಆರಂಭವಾಗಿದೆ. ಅಲ್ಲಿ ನ್ಯಾಯವಾಗಿ ಚರ್ಚೆಗೆ, ತೀರ್ಮಾನಗಳಿಗೆ ಈಡಾಗಬೇಕಾದ ಮಹದಾಯಿ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತ, ಅತಿವೃಷ್ಟಿ, ಅಭಿವೃದ್ಧಿ ತಾರತಮ್ಯ, ನಿರುದ್ಯೋಗ ಬವಣೆಯಂತಹ ಉತ್ತರ ಕರ್ನಾಟಕ ಭಾಗದ ವಿಶಿಷ್ಟ ಸಮಸ್ಯೆಗಳ ಗುಡ್ಡವೇ 'ಕಾಯು'ತ್ತಾ ಕುಳಿತಿದೆ. ಆದರೆ ಇವ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳಲು ಒಲ್ಲದ ಆಡಳಿತ ಪಕ್ಷ ಎಂದಿನಂತೆ ವಿರೋಧ ಪಕ್ಷದವರನ್ನು ಹಾದಿ ತಪ್ಪಿಸಲು, ಹೊಣೆಗಾರಿಕೆಯ ಹೆಣಭಾರ ಇಳಿಸಿಕೊಳ್ಳಲು ವಿವಾದಗಳ ಮೊರೆ ಹೋಗುವಂತೆ ಕಾಣಿಸುತ್ತದೆ.

ವರ್ಷವಿಡೀ ಒಂದಲ್ಲಾ ಒಂದು ಭಾವನಾತ್ಮಕ ವಿಚಾರಗಳ ಅಲೆಯಲ್ಲಿ ವಿರೋಧಿಗಳು ತೇಲುವಂತೆ ಮಾಡಿ ನಿಗಿನಿಗಿ ನಗುತ್ತಿದ್ದ ಆಡಳಿತಪಕ್ಷ, ಈ ಬಾರಿ ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ ಸಾವರ್ಕರ್ ಭಾವಚಿತ್ರ ಅಳವಡಿಕೆಯ ಅಸ್ತ್ರ ಪ್ರಯೋಗಿಸಿದೆ. ಸದನದಲ್ಲಿ ಸಾವರ್ಕರ್ ಆಗಮನದಿಂದ ರಚನಾತ್ಮಕ ಸಂವಾದದ ನಿರ್ಗಮನ ಮತ್ತು ವಿರೋಧ ಪಕ್ಷಗಳ ಸಹಗಮನವೂ ಘಟಿಸಿದರೆ ಅಚ್ಚರಿಯಿಲ್ಲ.

ವಿರೋಧ ಪಕ್ಷಗಳು ಸಾವರ್ಕರ್ ಚಿತ್ರಪಟ ಮುಂದಿಟ್ಟುಕೊಂಡು ಸದನದಲ್ಲಿ ಹುಯಿಲೆಬ್ಬಿಸುವುದು ನಿರೀಕ್ಷಿತ. ಹಾಗೆಯೇ ಆಡಳಿತ ನಡೆಸುವವರು ಗಲಾಟೆ-ಸಭಾತ್ಯಾಗಗಳ ನಡುವೆ ಏಕರೂಪ ನಾಗರಿಕ ಸಂಹಿತೆ ಸೇರಿದಂತೆ ತಮಗೆ ಬೇಕಾದ ಮಸೂದೆಗಳನ್ನು ಚರ್ಚೆಯಿಲ್ಲದೆಯೇ ಅಂಗೀಕರಿಸುವುದೂ ಪರಂಪರೆಯ ಮುಂದುವರಿಕೆಯಂತೆಯೇ ಕಾಣಿಸುತ್ತದೆ.

ಹಾಗೆಂದು ವಿರೋಧ ಪಕ್ಷಗಳು ಸರ್ಕಾರದ ಜನವಿರೋಧಿ ನಿಲುವು, ಸೌಹಾರ್ದ ಕದಡುವ ನಡೆಗಳನ್ನು ಸಹಿಸಿಕೊಂಡು ಮೌನ ವಹಿಸಬೇಕಿಲ್ಲ. ಆದರೆ ಅವರ ಪ್ರತಿಭಟನೆ, ಪ್ರತಿರೋಧದ ಪರಿ ಆಡಳಿತಾರೂಢರ ಅಜೆಂಡಾ ಪ್ರಕಾರವೇ ಧರ್ಮಗಳ ಧ್ರುವೀಕರಣಕ್ಕೆ ಕಾರಣವಾಗಬಾರದಲ್ಲವೇ? ಅವರ ನಿಲುವುಗಳು, ಹೇಳಿಕೆಗಳು ಪ್ರತಿಭಟನೆಯ ಮೂಲ ಆಶಯಕ್ಕೆ ತದ್ವಿರುದ್ಧ ಪರಿಣಾಮ, ಪ್ರಭಾವ ಉಂಟು ಮಾಡುವ ವಿಪರ್ಯಾಸಕ್ಕೆ ಏನೆನ್ನಬೇಕು? ಹೊಸ ಬಗೆಯ ರಾಜಕೀಯ ಮತ್ತು ಸಾಮಾಜಿಕ ಸಂದರ್ಭದಲ್ಲಿ ಎದುರಾಳಿಯನ್ನು ಹಣಿಯಲು ಅವೇ ಸಾಂಪ್ರದಾಯಿಕ ವಿಫಲ ಸಲಕರಣೆಗಳನ್ನು ಅವಲಂಬಿಸಿದರೆ ಹೇಗೆ? ಹೊಸ ರೀತಿಯ, ಹೊಸ ನುಡಿಗಟ್ಟಿನ ಪ್ರತಿತಂತ್ರದ ಅನ್ವೇಷಣೆ-ಅಳವಡಿಕೆ ಆಗಬೇಡವೇ?

ಮೊದಲೇ ಬೆಳಗಾವಿ ಅಧಿವೇಶನವೆಂದರೆ, ಬೆಂಗಳೂರಿನಲ್ಲಿ ತಳ ಊರಿರುವ ಶಾಸಕರು ಮತ್ತು ಅಧಿಕಾರಿಗಳಿಗೆ ಅನಾಸಕ್ತಿ. ಅಧಿವೇಶನ ಯಾವುದಾದರೂ ಕಾರಣಕ್ಕೆ ಆದಷ್ಟು ಬೇಗ ಮೊಟಕುಗೊಂಡು ರಾಜಧಾನಿಗೆ ಹಿಂದಿರುಗಿದರೆ ಸಾಕೆಂದು ಕಾತರಿಸುವವರೇ ಎಲ್ಲಾ. ಪಂಚರತ್ನ ಯಾತ್ರೆಯಲ್ಲಿ ತಲ್ಲೀನರಾಗಿರುವ ಎಚ್‌.ಡಿ. ಕುಮಾರಸ್ವಾಮಿ ಅವರಂತೂ ಅಧಿವೇಶನದಲ್ಲಿ ಭಾಗವಹಿಸುವುದೇ ಅನುಮಾನ.

ಕೊನೆಗೆ ಅಧಿವೇಶನ ಹಾಗೋ ಹೀಗೋ ಮುಗಿಯುತ್ತದೆ. ಆದರೆ ವಿರೋಧ ಪಕ್ಷಗಳಿಗೆ ಬೆಳಗಾವಿಯಲ್ಲಾದರೂ ಬುದ್ಧಿ 'ಭೆಟ್ಟಿ' ಆಗಬಹುದೇ ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ!



ಚುರುಮುರಿ



ಕಾಗೆ ಹಾರಿಸೋರು

• ಲಿಂಗರಾಜು ಡಿ.ಎಸ್.

'ಅಸೆಂಬ್ಲಿ ಸುರುವಾತಲ್ಲ ಸೀಎಂ ನಾಕು ದಿನದಿಂದ ಅಂತ ಕಣ್ಣಿಗೆ ನೀರಾಕ್ತಾವ್ರಂತೆ. ನೀವು ರಾಜೀನಾಮೆ ಮಾತ್ರ ಕೊಡಕ್ಕೇ ಕೂಡ್ದು, ನಮ್ಮ ಜೊತೆ ಗಟ್ಟಿಯಾಗಿ ನಿಂತ್ಕಬಕು ಅಂತ ಜುಲುಮೆ ಮಾಡ್ತಾವ್ರಂತೆ' ಅಂತು ಯಂಟಪ್ಪಣ್ಣ.

'ಕಣ್ಣಿಗೆ ನೀರಾಕದು ಒಂದು ವಿದ್ಯೆ ಕನಣ್ಣೈ' ತುರೇಮಣೆ ಉವಾಚ.

'ಸಾ, ಅರವತ್ತನಾಲ್ಕು ವಿದ್ಯೆಗಳು ಅಂದ್ರೇನು?' ತುರೇಮಣೆಗೆ ಕೇಳಿದೆ.

'ಅದ ತಗಂಡು ನೀನೇನು ಮಾಡೀಲಾ?' ಅಂತ ಕೇಳಿದರು.

'ಸಾ, ಶಿಲ್ಪಿ ಕೆತ್ತನೆ ಮಾಡ್ತನೆ, ಶಿಕ್ಷಕ ವಿದ್ಯೆ ಕಲಿಸ್ತನೆ, ನೌಕರ ಸೇವೆ ಮಾಡ್ತನೆ, ಕೃಷಿಕ ಬೆಳೆ ತೆಗಿತನೆ, ಕಲಾವಿದ ಅಭಿನಯಿಸ್ತನೆ, ವಕೀಲ ವಾದ ಮಾಡ್ತನೆ, ವೈದ್ಯ ಔಷಧಿ ಕೊಡ್ತನೆ. ಇದು ಅವರ ವೃತ್ತಿಧರ್ಮ. ರಾಜಕೀಯದೋರಿಗೆ ಇಂಥಾ ವೃತ್ತಿಧರ್ಮ ಇದೆಯಾ?' ಅಂತಂದೆ.

'ಜೀವನ ನಿರ್ವಹಣೆಗೋಸ್ಕರ ಮಾಡೋ ಕ್ಯಾಮೆಯನ್ನ ವೃತ್ತಿ ಅಂತರೆ ಕಪ್ಪಾ. ರಾಜಕೀಯವ ಜೀವನ ನಿರ್ವಹಣೆಗೆ ಅಂತ ಮಾಡಲ್ಲ, ಅದೊಂದು ಕಸುಬು ಕಯ್ಯಾ, ಅದಕ್ಕೆ ಯಾವ ಧರ್ಮವೂ ಇಲ್ಲ' ಅಂದ್ರು.

'ನನಗೆ ಅರ್ಥಾಗಲಿಲ್ಲ ಸಾ' ಅಂತಂದೆ.

'ತತ್ವಗಳ ನಡುವಿನ ಕಲಹವನ್ನ ವಯಕ್ತಿಕ ಲಾಭಕ್ಕ ಬಳಸಿಕೊಳ್ಳೊ ಬುದ್ಧಿವಂತ ನಡವಳಿಕೆನೇ ರಾಜಕೀಯ ಕನಾ ಮಗಾ' ಅಂದ್ರು.

'ರಾಜಕೀಯದೇಲಿ ಶತ್ರುಗಳನ್ನ ಕ್ಷಮಿಸಬೇಕು. ಆದರೆ ಅವರ ಹೆಸರು ಮಾತ್ರ ಯಾವತ್ತಿಗೂ ಮರಿಬ್ಯಾಡ್ದು ಅನ್ನೋದು ತಿಳಿದೋನೆ ರಾಜಕಾರಣಿ' ಅಂತು ಯಂಟಪ್ಪಣ್ಣ.

'ಸರಿಯಾಗಿ ಬುಡಸೇಳಿ, ರಾಜಕೀಯ ಅಂದ್ರೇನು?' ಅಂದೆ.

'ರಾಜಕಾರಣಿ ನುಡಿಮುದ್ದು ಹಾರಿಸ್ತನೆ, ದುಡ್ಡಿನ ಬೆಳೆ ತೆಗಿತನೆ, ವತ್ತರಿಂದ ಸಂದೆಗಂಟಾ ಅಭಿನಯಿಸ್ತನೆ, ತಾರಾಮಾರ ವಾದ ಮಾಡ್ತನೆ, ಸಮಸ್ಯೆಗಳಿಗೆ ತಪ್ಪು ತಪ್ಪಾಗಿ ಪರಿಹಾರ ಸೂಚಿಸ್ತನೆ, ಕಂಡ ಕಂಡೋರಿಗೆಲ್ಲಾ ಬೈತನೆ, ಪಸಂದಾಗಿ ಸುಳ್ಳೇಳ್ತಾ ಕಾಗೆ ಹಾರಿಸ್ತನೆ' ಅಂತಂದ್ರು.

'ಅಂದ್ರೆ ಅರವತ್ತನಾಲ್ಕು ವಿದ್ಯೆಗಳನ್ನೂ ಕರತಲಾಮಲಕ ಮಾಡಿಕ್ಯಂಡು ಅವಕಾಶವಾದಿ ರಾಜಕೀಯ ಮಾಡೋನೇ ರಾಜಕಾರಣಿ ಅಂತ್ಲೋ?' ಅಂತಂದೆ. ಯಾರೂ ಉತ್ತರ ಕೊಡಲಿಲ್ಲ!

ಸಂಗತ

ಪೋಕ್ಸೊ: ಸಮಗ್ರ ಚರ್ಚೆಗೆ ಸಕಾಲ

2012ರಲ್ಲಿ ಜಾರಿಗೆ ತರಲಾದ ಪೋಕ್ಸೊ ಕಾಯ್ದೆಯ ಸಾಧಕ–ಬಾಧಕ ಕುರಿತು ಕೂಲಂಕಷವಾಗಿ ಚರ್ಚಿಸುವ ಅಗತ್ಯ ಇದೆ

• ಕೆ.ಬಿ.ಕೆ. ಸ್ವಾಮಿ

ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಯ ಜೊತೆಗಿನ 'ಒಪ್ಪಿತ' ಲೈಂಗಿಕ ಚಟುವಟಿಕೆಯನ್ನೂ 'ಪೋಕ್ಸೊ' (The Protection of Children from Sexual Offences Act) ಕಾಯ್ದೆಯಡಿ ಅಪರಾಧ ಎಂದು ಪರಿಗಣಿಸಲಾಗಿದೆ. 1940ರಿಂದಲೂ ಹದಿನಾರರ ನಂತರದ ವಯೋಮಾನದವರ ಒಪ್ಪಿತ ಲೈಂಗಿಕ ಕ್ರಿಯೆಯನ್ನು ಕಾನೂನು ಮಾನ್ಯಗೊಳಿಸಿತ್ತು. ಆದರೆ, 2012ರ ನಿರ್ಭಯಾ ಪ್ರಕರಣದ ನಂತರದಲ್ಲಿ ಈ ವಯೋಮಿತಿಯನ್ನು ಹದಿನೆಂಟು ವರ್ಷಕ್ಕೆ ಏರಿಸಲಾಯಿತು.

ಪೋಕ್ಸೊ ಪ್ರಕರಣಗಳ ಪೈಕಿ ನಾಲ್ಕರಲ್ಲಿ ಒಂದು 'ಪರಸ್ಪರ ಪ್ರೇಮ' ಪ್ರಕರಣವಾಗಿರುತ್ತದೆ ಎಂಬುದನ್ನು ಬೆಂಗಳೂರು ಮೂಲದ ಎನ್‌ಫೋಲ್ಡ್ ಪ್ರೊಆ್ಯಕ್ಟಿವ್ ಹೆಲ್ತ್ ಟ್ರಸ್ಟ್ ನಡೆಸಿದ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಅಲ್ಲದೆ ಇಂತಹ ಪ್ರಕರಣಗಳ ವಿಲೇವಾರಿಗೆ ಸರಾಸರಿ 1.4 ವರ್ಷದಿಂದ 2.3 ವರ್ಷ ಹಿಡಿಯುತ್ತದೆ ಎಂಬುದು ಕಳವಳಕಾರಿ ಅಂಶ! ಈ ಕಾಯ್ದೆಯು ಹದಿಹರೆಯದವರು ಮತ್ತು ಅವರ ಕುಟುಂಬದವರ ಮೇಲೆ ಉಂಟು ಮಾಡುವ ಶಾಶ್ವತ ಪರಿಣಾಮಗಳ ಕುರಿತಾಗಿ ವಿವಿಧ ಹೈಕೋರ್ಟ್‌ಗಳ ತೀರ್ಪಿನಲ್ಲಿ ಆತಂಕ ವ್ಯಕ್ತವಾಗಿದೆ.

ಮೂಲತಃ ಪೋಕ್ಸೊ ಕಾಯ್ದೆ 'ಜೆಂಡರ್ ನ್ಯೂಟ್ರಲ್'. ಇದನ್ನು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಜಾರಿಗೆ ತರಲಾಗಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಬಾಲಕನನ್ನೂ ಇಲ್ಲಿ ಬಾಧಿತ ಎಂದು ಪರಿಗಣಿಸಲಾಗುತ್ತದೆ. ಲೈಂಗಿಕ ಹಲ್ಲೆಯನ್ನು ಹೆಣ್ಣೊಬ್ಬಳು ಮಾಡಿದ್ದರೆ ಆಕೆಯನ್ನೂ ಈ ಕಾಯ್ದೆ ವ್ಯಾಪ್ತಿಗೆ ತರಲಾಗುತ್ತದೆ.

ಆದರೆ ಪೋಕ್ಸೊ ಪ್ರಕರಣದಲ್ಲಿನ ಗಂಡು ಮತ್ತು ಹೆಣ್ಣು ಇಬ್ಬರೂ ಚಿಕ್ಕವರಾಗಿದ್ದು (18 ವರ್ಷ ತುಂಬದವರು) ಪರಸ್ಪರ ಆಕರ್ಷಣೆಗೆ ಒಳಗಾಗಿ ಮಿಲನವಾದರೆ ಯಾರನ್ನು ತಪ್ಪಿತಸ್ಥರೆಂದು ತೀರ್ಮಾನಿಸುವುದು?! ಇಂತಹ ಶಾಸನಾತ್ಮಕ ಗೊಂದಲ ಮತ್ತು ಗೋಜಲುಗಳು ಅಪರಾಧ ನ್ಯಾಯ ವ್ಯವಸ್ಥೆಯನ್ನು ಕಾಡುತ್ತವೆ. ವಾಸ್ತವವಾಗಿ ಪ್ರಾಸಿಕ್ಯೂಷನ್ ವ್ಯವಸ್ಥೆಯು ಬಾಲಕನನ್ನು ಆರೋಪಿಯನ್ನಾಗಿಸಿ (ಕಾನೂನಿನ ಜೊತೆ ಸಂಘರ್ಷಕ್ಕೆ ಒಳಗಾದವ), ಬಾಲಕಿಯನ್ನು ಸಂತ್ರಸ್ತೆಯನ್ನಾಗಿಸುತ್ತದೆ. ಇದು ಪೋಕ್ಸೊ ಕಾಯ್ದೆಯ ಲಿಂಗ ನಿರಪೇಕ್ಷ ನಿಲುವನ್ನು ತಾರ್ಕಿಕವಾಗಿ ಪ್ರಶ್ನಿಸುತ್ತದೆ.

...ಜೈನ್ ಮತ್ತು ಸ್ಟೇಟ್ ಆಫ್ ಕರ್ನಾಟಕ ನಡುವಿನ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ನಾಗಪ್ರಸನ್ನ ಅವರು ನೀಡಿರುವ ತೀರ್ಪು ಇಂತಹ ಪ್ರಕರಣದಲ್ಲಿ ವ್ಯವಸ್ಥೆ ತುಳಿಯಬೇಕಾದ ಹಾದಿಯನ್ನು ತೋರಿಸಿಕೊಟ್ಟಿದೆ. ಬಾಲಕ, ಬಾಲಕಿ ಹದಿನಾರರ ಅಸುಪಾಸಿನಲ್ಲಿದ್ದು, ತಮ್ಮ ನಿರ್ಧಾರ ಮತ್ತು ನಿಲುವುಗಳು ಉಂಟುಮಾಡಬಹುದಾದ ತೀವ್ರ ಪರಿಣಾಮಗಳ ಅರಿವು ಇರದೇ ಕೈಗೊಂಡ ಕ್ರಮಗಳನ್ನು ಅಪರಾಧವೆಂದು ಪರಿಗಣಿಸಿ, ಪೋಕ್ಸೊ ಕಾಯ್ದೆಯಡಿ ವಿಚಾರಣೆ ನಡೆಸುವುದು ಸರಿಯಲ್ಲ ಎಂದು ಈ ತೀರ್ಪಿನಲ್ಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಹೈಕೋರ್ಟ್‌ನ ವಿಭಾಗೀಯ ಪೀಠವು ಸ್ಟೇಟ್ ಆಫ್ ಕರ್ನಾಟಕ ಮತ್ತು ಬಸವರಾಜ ನಡುವಣ ಪ್ರಕರಣದಲ್ಲಿ ನೀಡಿರುವ ತೀರ್ಪು ಕೂಡಾ ಈ ದಿಸೆಯಲ್ಲಿ ಮಹತ್ವ ಪಡೆದಿದೆ. ಸಂಗಾತಿಯೊಂದಿಗೆ ಕಣ್ಮರೆಯಾಗಿ ಮದುವೆಯಾಗುವ ಹದಿನಾರಕ್ಕಿಂತ ಹೆಚ್ಚಿನ ವಯೋಮಾನದ ಬಾಲಕಿಯರ ಪ್ರಕರಣಗಳು ತೀವ್ರವಾಗಿ ಹೆಚ್ಚಳವಾಗುತ್ತಿರುವುದನ್ನು ಮನಗಂಡ ವಿಭಾಗೀಯ ಪೀಠವು ವಾಸ್ತವವನ್ನು ಅರಿತು ಒಪ್ಪಿತ ಲೈಂಗಿಕ ಕ್ರಿಯೆಯ ವಯೋಮಿತಿಯನ್ನು ಪುನರ್ ಪರಿಶೀಲಿಸುವಂತೆ ಭಾರತ ಕಾನೂನು ಆಯೋಗಕ್ಕೆ ಸಲಹೆ ನೀಡಿದೆ. ಅಲ್ಲದೆ ಒಂಬತ್ತನೇ ತರಗತಿಯ ನಂತರ ಮಕ್ಕಳಿಗೆ ಶಾಲೆಯಲ್ಲಿ ಲೈಂಗಿಕ ಶಿಕ್ಷಣ ಮತ್ತು ಪೋಕ್ಸೊ ಕಾಯ್ದೆ ಕುರಿತು ಪಠ್ಯವನ್ನು ಅಳವಡಿಸುವ ದಿಸೆಯಲ್ಲಿ ರಾಜ್ಯವು ಕ್ರಮ ಕೈಗೊಳ್ಳುವಂತೆ ಆದೇಶಿಸಿರುವುದು ಗಮನಾರ್ಹ.



ಯುರೋಪಿನ ಬಹುತೇಕ ದೇಶಗಳು ಒಪ್ಪಿತ ಲೈಂಗಿಕ ಕ್ರಿಯೆಯ ವಯೋಮಿತಿಯನ್ನು 14ರಿಂದ 16 ವರ್ಷಗಳಿಗೆ ನಿಗದಿಗೊಳಿಸಿವೆ. ಪಕ್ಕದ ಶ್ರೀಲಂಕಾ ಕೂಡ 16 ವರ್ಷವನ್ನು 'ಏಜ್ ಆಫ್ ಕನ್ಸೆಂಟ್' ಎಂದು ನಿಗದಿಪಡಿಸಿದ್ದು, ಅಳಿವಿನ ಅಂಚಿನಲ್ಲಿರುವ ಮೂರ್ ಮತ್ತು ಮಲಯ್ಮೈ ಬುಡಕಟ್ಟು ಜನಾಂಗಗಳ ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯೋಮಿತಿಯನ್ನು 12ಕ್ಕೆ ನಿಗದಿಗೊಳಿಸಿದೆ.

ಬಾಲ್ಯವಿವಾಹ ನಿಯಂತ್ರಣ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ ನೆಪದಲ್ಲಿ ಸರ್ಕಾರದ ವಿವಿಧ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು ಕೂಡಾ ಪೋಕ್ಸೊ ಕಾಯ್ದೆಯ ಅಡಿಯಲ್ಲಿ ವ್ಯಾಪಕವಾಗಿ ಪ್ರಕರಣಗಳನ್ನು ಹೂಡುತ್ತಿವೆ. ಸೂಕ್ತ ಕಾನೂನಿನ ಅರಿವು ಲಭಿಸದ ಹಳ್ಳಿಗಾಡಿನ ಮುಗ್ಧ ಜನರು ಇದರಿಂದ ಸುದೀರ್ಘ ಕಾಲವನ್ನು ಮತ್ತು ಆರ್ಥಿಕ ಸಂಪನ್ಮೂಲವನ್ನು ನ್ಯಾಯಾಲಯದ ವ್ಯಾಜ್ಯಗಳಿಗೆ ಕಳೆಯಬೇಕಾಗಿದೆ.

ಕಾನೂನು ಎಂದಿಗೂ ನಿಂತ ನೀರಲ್ಲ. ಪ್ರತೀ ಕಾಲಘಟ್ಟದ ವಾಸ್ತವವನ್ನು ಮತ್ತು ನೆಲ ಮೂಲದ ಸ್ವಾಭಾವಿಕ ಅಂಶಗಳನ್ನು ಗಮನದಲ್ಲಿಟ್ಟು ಕಾನೂನು ಸುಧಾರಣೆಯಾಗಬೇಕು. 2012ರಲ್ಲಿ ಜಾರಿಗೆ ತರಲಾದ ಪೋಕ್ಸೊ ಕಾಯ್ದೆಯ ಆಶಯಗಳು ಎಷ್ಟರಮಟ್ಟಿಗೆ ಫಲಪ್ರದವಾಗಿವೆ ಎಂಬುದರ ಕುರಿತು ಸಮಗ್ರವಾಗಿ ಚರ್ಚಿಸಲು ಇದು ಸಕಾಲ.

ಲೇಖಕ: ಹೈಕೋರ್ಟ್ ವಕೀಲ

ವಾಚಕರ ವಾಣಿ

ಸುಳಿವುದಾರರ ಗೋಪ್ಯತೆಗೆ ಇರಲಿ ಆದ್ಯತೆ

ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಲ್ಲಿ ತಲೆಮರೆಸಿಕೊಂಡ ಆರೋಪಿಗಳ ಬಗ್ಗೆ ಸುಳಿವು ನೀಡುವ ಮಾಹಿತಿದಾರರಿಗೆ ನೀಡುವ ಬಹುಮಾನದ ಮೊತ್ತವನ್ನು ₹ 20 ಸಾವಿರದಿಂದ ₹ 5 ಲಕ್ಷಕ್ಕೆ ಹೆಚ್ಚಿಸುವ ಗೃಹ ಇಲಾಖೆಯ ಕ್ರಮ ಸರಿಯಾಗಿದೆ. ಇದರಿಂದ ಪೊಲೀಸ್ ಹಾಗೂ ತನಿಖಾ ಸಂಸ್ಥೆಗಳು ಪ್ರಕರಣಕ್ಕೆ ಸಂಬಂಧಿಸಿ ಶೀಘ್ರ ಕ್ರಮ ಕೈಗೊಳ್ಳಲು ಅನುಕೂಲವಾಗಲಿದೆ. ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವವರಿಗೆ ಭಯ ಹುಟ್ಟಿಸಲು ನೆರವಾಗಲಿದೆ. ಆದರೆ ಇದರ ಜೊತೆಗೆ ಆರೋಪಿಗಳ ಬಗ್ಗೆ ಸುಳಿವು ನೀಡಿದವರ ಸುರಕ್ಷತೆ ಹಾಗೂ ಗೋಪ್ಯತೆ ಬಗ್ಗೆಯೂ ಗೃಹ ಇಲಾಖೆ ಸ್ಪಷ್ಟ ನಿಯಮಾವಳಿ ರೂಪಿಸಬೇಕು. ಇದರಿಂದ ಮಾಹಿತಿದಾರರ ಮನೋಸ್ಥೈರ್ಯ ಹೆಚ್ಚಾಗಿ ಅವರು ಧೈರ್ಯದಿಂದ ಮಾಹಿತಿ ನೀಡಲು ಮುಂದೆ ಬರಬಹುದು.

ಆರೋಪಿಗಳ ಸುಳಿವಿಗಾಗಿ ಬಹುಮಾನದ ಮೊತ್ತ ಹೆಚ್ಚಿಸಿದ ಹಾಗೂ ಮಾಹಿತಿದಾರರ ಸುರಕ್ಷತೆಯ ಬಗ್ಗೆ ವಿವರ ಹೊಂದಿರುವ ಫಲಕಗಳನ್ನು ಎಲ್ಲಾ ಪೊಲೀಸ್ ಠಾಣೆಗಳ ಮುಂದೆ ಹಾಗೂ ಸಾರ್ವಜನಿಕರು ಹೆಚ್ಚಾಗಿ ತಿರುಗಾಡುವ ಪ್ರದೇಶದಲ್ಲಿ ಸ್ಪಷ್ಟವಾಗಿ ಕಾಣುವಂತೆ ಹಾಕಬೇಕು.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಹಿರಿಯರಿಗೆ ರಿಯಾಯಿತಿ ಪುನರಾರಂಭವಾಗಲಿ

ರೈಲ್ವೆಯಲ್ಲಿ ವೆಚ್ಚ ಹೆಚ್ಚಾಗಿದೆ ಎಂಬ ನೆಪವೊಡ್ಡಿ, ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ಈವರೆಗೆ ದೊರೆಯುತ್ತಿದ್ದ ರಿಯಾಯಿತಿ ಸೌಲಭ್ಯವನ್ನು ಸ್ಥಗಿತಗೊಳಿಸಿರುವುದು ಸರಿಯಲ್ಲ. ಸರ್ಕಾರದ ಅಂಕಿ ಅಂಶಗಳ ಪ್ರಕಾರ, ಈ ರಿಯಾಯಿತಿಯಿಂದ ರೈಲ್ವೆ ಇಲಾಖೆಗೆ ವಾರ್ಷಿಕ ಸುಮಾರು ₹ 1,500 ಕೋಟಿ ವೆಚ್ಚವಾಗುತ್ತದೆ. ಬದುಕಿನ ಸಂಜೆಯಲ್ಲಿರುವ ಕೋಟ್ಯಂತರ ಹಿರಿಯ ನಾಗರಿಕರಿಗೆ ಈ ಸೌಲಭ್ಯದಿಂದ ಸಹಾಯವಾಗುತ್ತಿತ್ತು.

ನಮ್ಮ ಬ್ಯಾಂಕ್‌ಗಳು ಐದು ವರ್ಷಗಳಲ್ಲಿ ಹತ್ತು ಲಕ್ಷ ಕೋಟಿ ರೂಪಾಯಿ ಮೊತ್ತದ ಸಾಲವನ್ನು ರೈಟ್ ಆಫ್ ಮಾಡಿವೆ ಎಂದು ಸರ್ಕಾರವೇ ಹೇಳಿದೆ. ಇದಲ್ಲದೇ ಸರ್ಕಾರವು ಉಳ್ಳವರಿಗೊಂದು ನೀತಿ, ಇಲ್ಲದವರಿಗೊಂದು ನೀತಿ ಅನುಸರಿಸುತ್ತಿರುವುದು ಢಾಳಾಗಿ ಕಾಣುತ್ತದೆ. ತಾರತಮ್ಯದ ಇಂತಹ ನೀತಿಗಳು ಕೊನೆಗೊಳ್ಳಬೇಕು. ರೈಲುಗಳಲ್ಲಿ ಹಿರಿಯ ಪ್ರಯಾಣಿಕರಿಗೆ ನೀಡುತ್ತಿದ್ದ ರಿಯಾಯಿತಿಯನ್ನು ಮುಂದುವರಿಸಬೇಕು.

ಟಿ.ಸುರೇಂದ್ರ ರಾವ್, ಬೆಂಗಳೂರು

ಯಾತ್ರೆಗಳ ಜಾತ್ರೆಯಲ್ಲಿ...

ಅಬ್ಬಬ್ಬಾ... ಕರ್ನಾಟಕದಲ್ಲೀಗ
ಎಲ್ಲೆಲ್ಲಿ ನೋಡಿದರೂ ಯಾತ್ರೆಗಳೇ!
ರಥದ ಮೇಲೆ ಸಾಗುತ್ತಿರುವ ರತ್ನಯಾತ್ರೆ
ಜನರ ಸಂಪರ್ಕಿಸುತ್ತಿರುವ ಪಾದಯಾತ್ರೆ
ಜನರಿಗಾಗಿ ಮಾಡಿದ ಸಂಕಲ್ಪಯಾತ್ರೆ
ಯಾತ್ರೆಯ ಬಾವುಟಗಳ ಬಣ್ಣ
ಬೇರೆಯಾದರೂ ಜಾತ್ರೆಯ ಬಣ್ಣವೊಂದೇ
ವೇದಿಕೆ ಮೇಲಣ ನಾಯಕರು ಬೇರೆಯಾದರೂ
ಚಪ್ಪರದಡಿಯ ಪ್ರೇಕ್ಷಕರು ಮಾತ್ರ ಅವರವರೇ!

ಜೆ.ಬಿ.ಮಂಜುನಾಥ, ಪಾಂಡವಪುರ

ದಸರಾ ಆನೆಗಳ ನಿರ್ವಹಣೆ ಲೋಪ?

ಮೈಸೂರು ದಸರಾ ಹಬ್ಬದ ಕಣ್ಮಣಿಗಳಾದ ಆನೆಗಳ ಬಗ್ಗೆ ನಾಡಿನ ಎಲ್ಲರಿಗೂ ಪ್ರೀತಿ ಇರುವುದು ಗೊತ್ತಿರುವ ಸಂಗತಿ. ಭವಿಷ್ಯದ ಅಂಬಾರಿ ಆನೆಯಾಗುವ ಅರ್ಹತೆಯಿದ್ದ ಗೋಪಾಲಸ್ವಾಮಿ ಎಂಬ ಆನೆಯು ಇತ್ತೀಚೆಗೆ ಕಾಡಾನೆ ದಾಳಿಗೆ ಸಿಲುಕಿ ಅಕಾಲಿಕವಾಗಿ ಸಾವನ್ನಪ್ಪಿದ ಸುದ್ದಿ ಎಲ್ಲರ ಮನಸ್ಸನ್ನು ಕಲಕಿತ್ತು. ಈಗ, ಪಟ್ಟದ ಆನೆ ಆಗಿರುವ ಬಲರಾಮನಿಗೆ ಗುಂಡೇಟು ಬಿದ್ದಿರುವ ಸುದ್ದಿ ಓದಿ ದುಃಖವಾಯಿತು. ಇಂತಹ ಪರಿಸ್ಥಿತಿ ದಸರಾ ಆನೆಗಳಿಗೆ ಬರಲು ಕಾರಣವೇನು? ದಸರಾ ಆನೆಗಳ ನಿರ್ವಹಣೆಯಲ್ಲಿ ಎಲ್ಲಿ ಲೋಪವಾಗುತ್ತಿದೆ ಎಂದು ಸರ್ಕಾರ ಗುರುತಿಸಿ ಸರಿಪಡಿಸಿದರೆ, ನಮ್ಮ ಆನೆಗಳ ಬೆಲೆ ಕಟ್ಟಲಾಗದ ಸ್ಥಾನಮಾನ ಮತ್ತು ಜೀವಕ್ಕೆ ಗೌರವ ಕೊಟ್ಟಂತೆ ಆಗುತ್ತದೆ.

ಶ್ರೀಕಂಠ, ಬೆಂಗಳೂರು

ಸಾರ್ಥಕವಾಗಲಿ ಅಧಿವೇಶನ

ಬೆಳಗಾವಿಯಲ್ಲಿ ಸೋಮವಾರದಿಂದ ಆರಂಭವಾಗಿರುವ ವಿಧಾನಮಂಡಲ ಚಳಿಗಾಲದ ಅಧಿವೇಶನ ಜನಪರವಾದ ಚರ್ಚೆಗಳಿಗೆ ವೇದಿಕೆಯಾಗಲಿ. ರಾಜ್ಯದ ಜನರನ್ನು ಹಲವಾರು ಸಮಸ್ಯೆಗಳು ಕಾಡುತ್ತಿವೆ. ಕಬ್ಬು ಬೆಳೆಗಾರರ ಸಂಕಷ್ಟ, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವಲ್ಲಿ ಆಗಿರುವ ವಿಳಂಬ, ಕೃಷ್ಣಾ, ಕಾವೇರಿ ನದಿಗಳ ನೀರಿನ ಹಂಚಿಕೆ ವಿವಾದ... ಹೀಗೆ ಹಲವು ವಿಷಯಗಳ ಕುರಿತು ಚರ್ಚೆ ಆಗಿ, ಪರಿಹಾರದ ಮಾರ್ಗೋಪಾಯ ಕಂಡುಕೊಳ್ಳಬೇಕಿದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಇವುಗಳ ಬಗ್ಗೆ ಅರ್ಥಪೂರ್ಣ ಚರ್ಚೆ ಆಗುವಂತೆ ನೋಡಿಕೊಳ್ಳಲಿ. ಅದನ್ನು ಬಿಟ್ಟು ಬೇಡವಾದ ಗದ್ದಲ, ಗೊಂದಲಗಳೊಂದಿಗೆ ಸದನವನ್ನು ಪದೇಪದೇ ಮುಂದೂಡುತ್ತ ಸದನದ ಸಮಯ ಮತ್ತು ಜನರ ತೆರಿಗೆ ಹಣವನ್ನು ಹಾಳು ಮಾಡುವಂತೆ ಆಗಬಾರದು.

ವಿಶ್ವನಾಥ್ ಎಂ., ಚಗಟೂರು

ವೃದ್ಧರಿಗೂ ಬಿಸಿಯೂಟ ಕೊಡಿ

ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ವಯೋವೃದ್ಧರಿಗೂ ಆಯಾ ಗ್ರಾಮದ ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಬಿಸಿಯೂಟ ಯೋಜನೆಯನ್ನು ವಿಸ್ತರಿಸುವ ಮೂಲಕ ಹಿರಿಯ ನಾಗರಿಕರ ನೆರವಿಗೆ ಸರ್ಕಾರ ಬರಲಿ. ಉದ್ಯೋಗ ನಿಮಿತ್ತ ಅಥವಾ ಮತ್ಯಾವುದೋ ಕಾರಣಗಳಿಂದ ಅವರ ಮಕ್ಕಳು ವಲಸೆ ಹೋಗಿ ನಗರಗಳಲ್ಲಿ ನೆಲೆಸಿರುವ ಅಥವಾ ಮಕ್ಕಳು ತಂದೆ-ತಾಯಿಯನ್ನು ಕಡೆಗಣಿಸಿರುವ ಉದಾಹರಣೆಗಳು ಬಹಳಷ್ಟಿವೆ.

ವಯೋಸಹಜತೆಯಿಂದ ಒಂದು ಹೊತ್ತಿನ ಊಟ ತಯಾರಿಸಿಕೊಳ್ಳಲೂ ದೇಹ ಸ್ಪಂದಿಸದ, ಕಣ್ಣು ಕಾಣದ ಹಾಗೂ ಅನಾರೋಗ್ಯಪೀಡಿತರಾದ ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಬಿಸಿಯೂಟ ಅಮೃತಸಮಾನ ಆಗಬಹುದು. ಈ ಬಗ್ಗೆ ಸರ್ಕಾರ ಅವಶ್ಯವಾಗಿ ಚಿಂತನೆ ನಡೆಸಲಿ.

ವಿಜಯ್ ರಾಂಪುರ, ಚನ್ನಪಟ್ಟಣ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಗತ್ತನ್ನು ಮಂತ್ರಮುಗ್ಧಗೊಳಿಸಿದ ಫುಟ್‌ಬಾಲ್ ವಿಶ್ವಕಪ್ ಪಂದ್ಯಗಳು ಮುಗಿದಿವೆ. ಫುಟ್‌ಬಾಲ್ ಪ್ರೇಮಿಗಳು ಆಟದ ಪೌರುಷ, ಲಯ, ಮೋಡಿಗಳೆಲ್ಲವನ್ನೂ ಮನದೊಳಗೆ ಇಳಿಸಿಕೊಂಡಿದ್ದಾರೆ. ಅರ್ಜೆಂಟೀನಾ ಮತ್ತು ಫ್ರಾನ್ಸ್ ನಡುವಣ ಫೈನಲ್ ಪಂದ್ಯದ ರೋಚಕತೆಗೆ ಸಾಟಿಯೇ ಇಲ್ಲವೇನೋ. ಮೆಸ್ಸಿ ಎಂಬ ಫುಟ್‌ಬಾಲ್ ಮಾಂತ್ರಿಕ ಅತಿಶ್ರೇಷ್ಠ ಆಟಗಾರರ ಸಾಲಲ್ಲಿ ಅಗ್ರಗಣ್ಯನೇ ಎಂಬ ಚರ್ಚೆಗೆ ಪಂದ್ಯವು ಅಂತ್ಯ ಹಾಡಿದೆ. ಇನ್ನು ಆ ಪ್ರಶ್ನೆಯನ್ನು ಯಾರೂ ಕೇಳಲಿಕ್ಕಿಲ್ಲ. ಹಾಗೆಯೇ ಫ್ರಾನ್ಸ್‌ನ ಎಂಬಾಪೆ ಎಂಬ ಆಟಗಾರ ಮಾಡಿದ ಮೋಡಿಯು ಇನ್ನೂ 23ರ ಹರೆಯದ ಅವರು ಫುಟ್‌ಬಾಲ್ ಅಂಗಣದಲ್ಲಿ ಏನೇನೆಲ್ಲ ಮಾಡಬಹುದು ಎಂಬ ನಿರೀಕ್ಷೆಯು ಮಡುಗಟ್ಟುವಂತೆ ಮಾಡಿದೆ. ಈ ಇಬ್ಬರ ಆಟ ಮತ್ತು ಬದುಕಿನತ್ತ ಒಂದು ಇಣುಕುನೋಟ ಇಲ್ಲಿದೆ:

ಅನ್‌ಸ್ಟಾಪೆಬಲ್ ಎಂಬಾಪೆ!

• ಪ್ರವೀಣ ಕುಲಕರ್ಣಿ

‘ಉಸೇನ್ ಬೋಲ್ಟ್ ಅವರಿಗಿಂತಲೂ ಕಿಲಿಯನ್ ಎಂಬಾಪೆ ವೇಗವಾಗಿ ಓಡಬಲ್ಲರೇ?’

ಫುಟ್‌ಬಾಲ್ ಜ್ವರ ಟೈಫಾಯ್ಡ್‌ನಂತೆ ಏರಿದ್ದ ಈ ಅವಧಿಯಲ್ಲಿ ಅತೀ ಹೆಚ್ಚು ಗೂಗಲ್ ಆದ ಪ್ರಶ್ನೆಗಳಲ್ಲಿ ಇದೂ ಒಂದು. ಬೋಲ್ಟ್ ಅವರ ವಿಶ್ವ ದಾಖಲೆಯ ಓಟದ ವೇಗದಿಂದ ಎಂಬಾಪೆ ಇನ್ನೂ ತುಸುದೂರ ಇದ್ದರಾದರೂ ಫುಟ್‌ಬಾಲ್ ಅಂಗಳದಲ್ಲಿ ಮಾತ್ರ ಅವರು ‘ಅನ್‌ಸ್ಟಾಪೆಬಲ್’. ಕಾಲ್ಚೆಂಡಿನ ಜಗತ್ತನ್ನು ಆಳುವುದಕ್ಕಾಗಿಯೇ ಉದಯಿಸಿರುವ ಫ್ರಾನ್ಸ್‌ನ ಈ ನವತಾರೆ ಚೆಂಡನ್ನು ಡ್ರಿಬ್ಲಿಂಗ್ ಮಾಡುತ್ತಾ ಗಂಟೆಗೆ 38 ಕಿ.ಮೀ. ವೇಗದಲ್ಲಿ ಓಡುವುದನ್ನು ನೋಡಿ, ಅಭಿಮಾನಿಗಳು ಅವರಿಗೆ ‘ಚೀತಾ’ ಎಂದೂ ಕರೆಯುವರು. ಎಂಬಾಪೆ ಚೆಂಡಿನೊಡನೆ ಮುನ್ನುಗ್ಗಿ ಬರುತ್ತಿದ್ದಾರೆ ಎಂದರೆ, ಎದುರಾಳಿ ತಂಡದ ಗೋಲ್ ಕೀಪರ್‌ನ ಎದೆಯಲ್ಲಿ ಅಕ್ಷರಶಃ ನಡುಕ ಹುಟ್ಟಬೇಕು. ಚೆಂಡು ತಡೆದರೆ ಎಲ್ಲಿ ಕೈ ಮುರಿಯುವುದೋ ಎನ್ನುವಂತಹ ಭಯ ಅದು. ಹೌದು, ಎಂಬಾಪೆ ಅವರ ಹಿಟ್‌ಗಳ ಮಹಿಮೆಯೇ ಹಾಗಿರುತ್ತದೆ.

ಈಗಷ್ಟೇ 23ರ ಹರೆಯದ ಎಂಬಾಪೆ, ಅದಾಗಲೇ ಜಗತ್ತಿನ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾಗಿ ಮಿನುಗುತ್ತಿದ್ದಾರೆ. ಕಳೆದ ಬಾರಿ ಫ್ರಾನ್ಸ್ ತಂಡ ಪ್ರಶಸ್ತಿ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಅವರು, ಸತತ ಎರಡನೇ ಬಾರಿಗೆ ವಿಶ್ವಕಪ್ ಕಿರೀಟ ತೊಡುವ ಅವಕಾಶದಿಂದ ಕೂದಲೆಳೆಯ ಅಂತರದಿಂದ ವಂಚಿತರಾದರು. ಫೈನಲ್‌ನಲ್ಲಿ ಎಂಬಾಪೆ ಅವರೇನೋ ಪಂದ್ಯ ಸೋತರು. ಆದರೆ, ಹ್ಯಾಟ್ರಿಕ್ ಗೋಲುಗಳ ಮೂಲಕ ಫುಟ್‌ಬಾಲ್ ಪ್ರಿಯರ ಹೃದಯವನ್ನು ಗೆದ್ದರು. ಪ್ರಶಸ್ತಿ ಗೆದ್ದ ಅರ್ಜೆಂಟೀನಾದ ಆಟಗಾರರು, ಫ್ರಾನ್ಸ್ ತಂಡದ ಡ್ರೆಸ್ಸಿಂಗ್ ರೂಮ್ ಬಳಿ ‘ಎ ಮಿನ್ಯೂಟ್ ಸೈಲೆನ್ಸ್ ಫಾರ್ ಎಂಬಾಪೆ’ ಎಂದು ಹಾಡಿದ್ದನ್ನು ಅವರು ಅಷ್ಟು ಸುಲಭವಾಗಿ ಮರೆಯಲಾರರು.

ಸ್ಫೋಟಕ ವೇಗವರ್ಧನೆ, ಚುರುಕಿನ ಪಾದಚಲನೆ, ಎದುರಾಳಿಯ ರಕ್ಷಣೆಯನ್ನು ಶಿಥಿಲಗೊಳಿಸುವ ತಂತ್ರಗಾರಿಕೆ, ಚೆಂಡಿನ ಚಲನೆಯ ದಿಕ್ಕಿನಲ್ಲಿ ಹಠಾತ್ ಬದಲಾವಣೆಯಂತಹ ಸಾಮರ್ಥ್ಯಗಳಿಂದ ಅಂಗಳದಲ್ಲೊಂದು ದೃಶ್ಯಕಾವ್ಯವನ್ನೇ ಸೃಷ್ಟಿಸುವ ಮಾಂತ್ರಿಕ ಆಟಗಾರ ಅವರು. ರೆಪ್ಪೆ ಮಿಟುಕಿಸುವಷ್ಟರಲ್ಲಿ ಚೆಂಡನ್ನು ಗೋಲು ಪೆಟ್ಟಿಗೆಗೆ ಕಳುಹಿಸುವ ಮೂಲಕ ಮಾಡುವ ‘ಮ್ಯಾಜಿಕ್’ ಏನು ಸುಮ್ಮನೆಯೇ ಮತ್ತೆ? ಎಂಬಾಪೆ ಅವರ ಸಪೂರವಾದ ದೇಹ ಮತ್ತು ಅವರ ದೈಹಿಕ ಸಾಮರ್ಥ್ಯ ಫುಟ್‌ಬಾಲ್ ಆಟಕ್ಕೇ ಹೇಳಿ ಮಾಡಿಸಿದಂತಿವೆ. ಸಂದೇಹವೇ ಇಲ್ಲ, ಫುಟ್‌ಬಾಲ್‌ಗಾಗಿಯೇ ಹುಟ್ಟಿದ ಆಟಗಾರ ಅವರಾಗಿದ್ದಾರೆ.

ಪ್ಯಾರಿಸ್‌ನ ಹೊರವಲಯದ ಬಾಂಡಿ ಎಂಬಲ್ಲಿ ಹುಟ್ಟಿ ಬೆಳೆದ ಈ ಹುಡುಗ (ತಂದೆ-ತಾಯಿ ಇಬ್ಬರೂ ಆಫ್ರಿಕಾ ಮೂಲದವರು), ಕ್ಯಾಥೊಲಿಕ್ ಸ್ಕೂಲ್‌ನಲ್ಲಿ ಓದುವಾಗಲೇ ಫುಟ್‌ಬಾಲ್‌ನ ದೀಕ್ಷೆ ಪಡೆದರು. ತಂದೆ ವಿಲ್‌ಫ್ರೆಡ್ ಅವರೇ ಮೊದಲ ಗುರು. ಜಿನೆದಿನ್ ಜಿದಾನೆ, ಕ್ರಿಸ್ಟಿಯಾನೊ ರೊನಾಲ್ಡೊ ಅವರಂತಹ ಘಟಾನುಘಟಿ ಆಟಗಾರರನ್ನು ಆದರ್ಶವಾಗಿ ಕಂಡವರು ಎಂಬಾಪೆ. ಎ.ಸಿ. ಮಿಲನ್ ತಂಡದ ಅಭಿಮಾನಿಯಾಗಿದ್ದ ಅವರು, ರೊಬಿನೊ ಅವರ ಜರ್ಸಿ ಸಂಖ್ಯೆಯಾದ ‘70’ ಎಂದು ದಪ್ಪಕ್ಷರದಲ್ಲಿ ಬರೆದಿದ್ದ ಟಿ-ಶರ್ಟ್‌ಅನ್ನೂ ಕಾಣಿಕೆಯಾಗಿ ಪಡೆದಿದ್ದರು. ‘ಫುಟ್‌ಬಾಲ್‌ನ ಹುಚ್ಚು ನನ್ನನ್ನು ಹೇಗೆ ಆವರಿಸಿತ್ತೆಂದರೆ ಜಗತ್ತಿನ ಇತರ ಎಲ್ಲ ವಿಷಯಗಳಿಂದಲೂ ನಾನು ಸಂಪರ್ಕ ಕಡಿದುಕೊಂಡಿದ್ದೆ’ ಎಂದು ಸಂದರ್ಶನವೊಂದರಲ್ಲಿ ಅವರು ಹೇಳಿದ್ದರು. ಈ ಹುಡುಗನ ಆಟ ಕಂಡವರು ಅವರನ್ನು ಪಿಲೆ ಅವರೊಂದಿಗೆ ಹೋಲಿಕೆ ಮಾಡಿದ್ದುಂಟು. ಅಂದಹಾಗೆ, ಗಳಿಕೆಯಲ್ಲೂ ಘಟಾನುಘಟಿ ಆಟಗಾರರನ್ನು ಹಿಂದಿಕ್ಕಿದ್ದಾರೆ ಈ ಆಟಗಾರ.

ಕ್ಲಬ್ ಲೀಗ್‌ಗಳಲ್ಲಿ ಎಂಬಾಪೆ ಪ್ಯಾರಿಸ್ - ಸೇಂಟ್ ಜರ್ಮನ್ ಕ್ಲಬ್ ಪರವಾಗಿ ಆಡುವರು. ಆ ತಂಡದಲ್ಲಿಯೇ ಎಂಬಾಪೆ ಅವರನ್ನು ಉಳಿಸಿಕೊಳ್ಳಲು ಫ್ರಾನ್ಸ್ ಅಧ್ಯಕ್ಷರೇ ಮಧ್ಯ ಪ್ರವೇಶಿಸಿದ್ದರು ಎಂದರೆ ಈ ಆಟಗಾರನ ಮಹತ್ವ ಎಂತಹದ್ದು ಎನ್ನುವುದು ನಮಗೆ ಅರ್ಥವಾದೀತು. ಫೈನಲ್‌ನಲ್ಲಿ ಎದುರಾಳಿಯಾಗಿದ್ದ ಲಯೊನೆಲ್ ಮೆಸ್ಸಿ ಸಹ ಪ್ಯಾರಿಸ್ - ಸೇಂಟ್ ಜರ್ಮನ್ ಕ್ಲಬ್‌ಗಾಗಿಯೇ ಆಡುವರು. ‘ವರ್ಷದ ಆಟಗಾರ’ನ ಗೌರವವನ್ನು ಸತತವಾಗಿ ಸಂಪಾದಿಸುತ್ತಲೇ ಬಂದಿರುವ ಎಂಬಾಪೆ, ಭವಿಷ್ಯದಲ್ಲಿ ಹಲವು ದಾಖಲೆಗಳನ್ನು ಪುಡಿಗಟ್ಟುವ ಸಾಮರ್ಥ್ಯವನ್ನೂ ಹೊಂದಿದವರು. ಕತಾರ್ ವಿಶ್ವಕಪ್ ಟೂರ್ನಿಯಲ್ಲಿ ಒಟ್ಟಾರೆ ಎಂಟು ಗೋಲುಗಳೊಂದಿಗೆ ‘ಚಿನ್ನದ ಬೂಟ’ನ್ನೂ ಪಡೆದ ಎಂಬಾಪೆ, ಫುಟ್‌ಬಾಲ್ ಅಂಗಳದ ಸಾಮ್ರಾಟರಾಗಿ ಆಳಲು ಬರುತ್ತಿದ್ದಾರೆ ಎಂದು ಫ್ರಾನ್ಸ್ ಮಾತ್ರವಲ್ಲ, ಜಗತ್ತೇ ಈಗ ಬಹುಪರಾಕ್ ಹೇಳುತ್ತಿದೆ. ಟ್ರೋಫಿ ಗೆದ್ದ ಮೆಸ್ಸಿ ನೇಪಥ್ಯಕ್ಕೆ ಸರಿದು, ರಂಗದ ಮುಖ್ಯಭೂಮಿಕೆಯಲ್ಲಿ ಎಂಬಾಪೆ ಬಂದಿದ್ದಾರೆ ಎಂದೂ ಉಲಿಯುತ್ತಿದೆ.

ಫುಟ್‌ಬಾಲ್‌ನ ‘ಬಂಗಾರದ ಮನುಷ್ಯ’

• ವಿಶಾಖ ಎನ್.

‘ದಿ ನ್ಯೂ ಮರಡೋನಾ’ ಎಂಬೊಂದು ಹಣೆಪಟ್ಟಿ ಚಿಕ್ಕಪ್ರಾಯದಲ್ಲೇ ಲಯೊನೆಲ್ ಮೆಸ್ಸಿಗೆ ಅಂಟಿಕೊಂಡಿತ್ತು. ಅಷ್ಟು ಭಾರದ ನೊಗ ಹೊತ್ತು ಫುಟ್‌ಬಾಲ್‌ನಲ್ಲಿ ಅರ್ಜೆಂಟೀನಾ ತಂಡದಲ್ಲಿ ಏಗುವುದು ಸಲೀಸಲ್ಲ. 1986ರಲ್ಲಿ ವಿಶ್ವಕಪ್ ಫುಟ್‌ಬಾಲ್‌ನಲ್ಲಿ ಚಾಂಪಿಯನ್ ಎನಿಸಿಕೊಂಡ ಮೇಲೆ ಅರ್ಜೆಂಟೀನಾಗೆ ಅದೇ ರೀತಿಯ ಸುಸಂದರ್ಭ ಬಂದೇ ಇರಲಿಲ್ಲ. 2014ರಲ್ಲಿ ಕೊನೆಯವರೆಗೆ ಬಂದರೂ ಅದೃಷ್ಟ ಒಲಿದಿರಲಿಲ್ಲ. ಸೌದಿ ಅರೇಬಿಯಾ ಎದುರು ಮೊದಲ ಪಂದ್ಯದಲ್ಲೇ 1-2 ಗೋಲುಗಳಿಂದ ಸೋತಮೇಲೂ ಈ ‘ನ್ಯೂ ಮರಡೋನಾ’ ಭಾನುವಾರ ಅರ್ಜೆಂಟೀನಾ ಚಾಂಪಿಯನ್ ಆಗುವಂತೆ ಮಾಡಿದ ರೋಚಕತೆ ಕಣ್ಣೆದುರಲ್ಲಿದೆ.

2007ರ ಏಪ್ರಿಲ್. ಗೆಟಾಫೆ ಎದುರಿನ ‘ಕೋಪಾ ಡೆಲ್ ರೇ’ ಪಂದ್ಯ. ಅರ್ಧದಷ್ಟು ಮೈದಾನದಲ್ಲಿ ಚೆಂಡನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಕಾಲ್ಚಳಕ ತೋರುತ್ತಾ ಮೆಸ್ಸಿ ಒಬ್ಬರೇ ಸಾಗಿದ್ದರು. ಆರು ಎದುರಾಳಿ ಆಟಗಾರರನ್ನು ತಪ್ಪಿಸಿ, ಇಕ್ಕಟ್ಟಿನ ಸನ್ನಿವೇಶವೊಂದರ ನಡುವೆಯೇ ಅವರು ಚೆಂಡನ್ನು ಗೋಲು ಸೇರಿಸಿದ್ದರು. 1986ರ ಕ್ವಾರ್ಟರ್‌ಫೈನಲ್‌ನಲ್ಲಿ ಡಿಯಾಗೊ ಮರಡೋನಾ ಕೂಡ ಅಂಥದ್ದೇ ಗೋಲು ಹೊಡೆದು ಖ್ಯಾತರಾದದ್ದು. ಅದನ್ನು ಫುಟ್‌ಬಾಲ್ ಪರಿಣತರ ಪರಿಭಾಷೆಯಲ್ಲಿ ‘ಇನ್‌ಫೇಮಸ್ ಗೋಲ್’ ಅಂತಲೂ ಕರೆಯುತ್ತಾರೆ. ಚೆಂಡನ್ನು ಪಾಸ್ ಮಾಡದೆ, ಒಬ್ಬನೇ ಆಟಗಾರ ಪರಾಕ್ರಮ ಮೆರೆಯುವುದು ಈ ಸಾಂಘಿಕ ಆಟದಲ್ಲಿ ಒಪ್ಪಿತವಲ್ಲ. ಈ ಸಲದ ಫೈನಲ್‌ನಲ್ಲಿ ಫ್ರಾನ್ಸ್ ಎದುರು ಮೆಸ್ಸಿ ಇಂತಹ ಧಾರ್ಷ್ಟ್ಯವನ್ನು ಯಾವ ಹಂತದಲ್ಲೂ ತೋರಲಿಲ್ಲ. ಎದುರಾಳಿ ತಂಡದ ಎಂಬಾಪೆಗಿಂತ ವಯಸ್ಸಿನಲ್ಲಿ ಹನ್ನೊಂದು ವರ್ಷ ಮೆಸ್ಸಿ ದೊಡ್ಡವರು. ಆ ಮಾಗಿದ ಅನುಭವದ ಛಾಪು ಅವರ ಆಟದ ವೈಖರಿಯಲ್ಲಿ ಎದ್ದುಕಂಡಿತು.

ಲಯೊನೆಲ್ ಮೆಸ್ಸಿ ಬಾಲ್ಯವೇ ಆಸಕ್ತಿಕರ. ತಂದೆ ಜಾರ್ಜ್ ಹೊರಾಸಿಯೊ ಮೆಸ್ಸಿ ಅರ್ಜೆಂಟೀನಾದ ರೊಸಾರಿಯೊ ನಿವಾಸಿ. ಉಕ್ಕಿನ ಕಾರ್ಖಾನೆಯಲ್ಲಿ ವ್ಯವಸ್ಥಾಪಕರಾಗಿದ್ದರು. ತಾಯಿ ಸೆಲಿಯಾ ಕ್ಯುಸಿಟಿನಿ, ಮ್ಯಾಗ್ನೆಟ್ ಉತ್ಪಾದನಾ ಘಟಕದಲ್ಲಿ ಕ್ಲೀನರ್. ಅಪ್ಪನಿಗೂ ಫುಟ್‌ಬಾಲ್ ಪ್ರೀತಿ. ಅದನ್ನೇ ಮಗನಿಗೆ ಗುರುವಾಗಿ ದಾಟಿಸಿದರು. ಮೆಸ್ಸಿ ಚೆಂಡನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಲೀಲಾಜಾಲವಾಗಿ ಒದೆಯತೊಡಗಿದಾಗ ಇನ್ನೂ ಐದು ವರ್ಷದ ಹುಡುಗ. ಅಣ್ಣಂದಿರಾದ ರಾಡ್ರಿಗೊ, ಮಾರ್ಷಿಯಸ್ ಅಲ್ಲದೆ ಸೋದರ ಸಂಬಂಧಿಗಳಾದ ಮ್ಯಾಕ್ಸಿಮಿಲಾನೊ ಹಾಗೂ ಎಮಾನ್ಯುಲ್ ಜತೆಗೂ ಆಡುತ್ತಿದ್ದರು. ಮ್ಯಾಕ್ಸಿಮಿಲಾನೊ, ಎಮಾನ್ಯುಲ್ ಇಬ್ಬರೂ ವೃತ್ತಿಪರ ಫುಟ್‌ಬಾಲ್ ಆಟಗಾರರಾದವರೇ.

ಸ್ಥಳೀಯ ಕ್ಲಬ್ ಗ್ರ್ಯಾಂಡೊಲಿಗೆ ಮೆಸ್ಸಿ ಅಧಿಕೃತವಾಗಿ ಸೇರಿದಾಗ ಇನ್ನೂ ನಾಲ್ಕರ ಬಾಲಕ. ಅಜ್ಜಿಯೇ (ಅಮ್ಮನ ತಾಯಿ) ಸ್ಫೂರ್ತಿ. ಆಟದ ಅಭ್ಯಾಸಕ್ಕೆ ತಪ್ಪಿಸದಂತೆ ತಾಕೀತು ಮಾಡುತ್ತಿದ್ದ ಪ್ರೀತಿಯ ಆ ಅಜ್ಜಿ ತೀರಿಕೊಂಡಾಗ ಮೆಸ್ಸಿ ಮನಸ್ಸು ಕದಡಿತ್ತು. ತಮ್ಮ ಹನ್ನೊಂದನೇ ಹುಟ್ಟುಹಬ್ಬಕ್ಕೆ ಕೆಲವೇ ದಿನಗಳ ಮುಂಚೆ ಅಗಲಿದ್ದ ಅಜ್ಜಿಯ ನೆನಪನ್ನು ಮೆಸ್ಸಿ ಮೈದಾನದಲ್ಲಿ ಗೋಲು ಹೊಡೆದಾಗಲೆಲ್ಲ ಕಾಣಿಸುತ್ತಲೇ ಬಂದಿದ್ದಾರೆ. ಆಕಾಶದ ಕಡೆಗೆ ಒಮ್ಮೆ ನೋಡಿ, ಅತ್ತ ಬೆರಳು ತೋರುವುದು ಅವರ ಸಹಜ ಪ್ರತಿಕ್ರಿಯೆ. ಹಾಗೆ ಗೋಲನ್ನು ಅವರು ಅರ್ಪಿಸುವುದು ‘ಮೇಲೆ ಇರಬಹುದಾದ’ (ಕ್ಯಾಥೊಲಿಕ್ ಕ್ರಿಶ್ಚಿಯನ್ನರಲ್ಲಿ ಇಂತಹ ನಂಬುಗೆ ಇದೆ) ತಮ್ಮ ಅಜ್ಜಿಗೆ.

ರೊಸಾರಿಯೊದ ‘ನ್ಯೂವೆಲ್ಸ್ ಓಲ್ಡ್ ಬಾಯ್ಸ್’ ಎಂಬ ಕ್ಲಬ್‌ಗೆ ಮೆಸ್ಸಿ ಸೇರಿಕೊಂಡಾಗ ವಯಸ್ಸಿನ್ನೂ ಆರು. 1987ರಲ್ಲಿ ಹುಟ್ಟಿದ ಆಟಗಾರರನ್ನೆಲ್ಲ ಸೇರಿಸಿ, ‘ದಿ ಮಷಿನ್ ಆಫ್ 87’ ಎಂಬ ತಂಡ ರಚಿಸಲಾಗಿತ್ತು. ಆರು ವರ್ಷಗಳ ಅವಧಿಯಲ್ಲಿ ಮೆಸ್ಸಿ 500ಕ್ಕೂ ಹೆಚ್ಚು ಗೋಲುಗಳನ್ನು ಆ ತಂಡದ ಪರವಾಗಿ ಗಳಿಸಿದ್ದು ಶ್ರೇಷ್ಠತೆಯ ಮುನ್ನುಡಿಯಂತಿತ್ತು. ದೈಹಿಕ ಬೆಳವಣಿಗೆಗೆ ಪೂರಕವಾದ ಹಾರ್ಮೋನ್ ನಿಗದಿತ ಪ್ರಮಾಣದಲ್ಲಿ ಉತ್ಪಾದನೆಯಾಗದೇ ಇರುವ ಆರೋಗ್ಯ ಸಮಸ್ಯೆ ಹನ್ನೊಂದನೇ ವಯಸ್ಸಿನಲ್ಲೇ ಕಾಡತೊಡಗಿತು. ಇದರ ಚಿಕಿತ್ಸೆ ದುಬಾರಿ. ‘ರಿವರ್ ಪ್ಲೇಟ್’ ಎಂಬ ಸ್ಥಳೀಯ ಕ್ಲಬ್ ಇದರ ಖರ್ಚನ್ನು ಭರಿಸಲು ಸಿದ್ಧವಿರಲಿಲ್ಲ. ಲಯೊನೆಲ್ ಮೆಸ್ಸಿಯ ಅಪ್ಪ-ಅಮ್ಮನಿಗೂ ದಿಕ್ಕು ತೋಚದಂತಾಗಿತ್ತು. ಆಗ ಬಾರ್ಸೆಲೋನಾದ ಕೋಚ್ ಕಾರ್ಲ್ಸ್ ರೆಕ್ಸಾಚ್ ಈ ಪ್ರತಿಭಾವಂತನ ಆಟದ ವೈಖರಿ ಕಂಡು, ಚಿಕಿತ್ಸೆಗೆ ಹಣದ ವ್ಯವಸ್ಥೆ ಮಾಡಲು ಮುಂದಾದರು. ಅದು ಆಗದೇಹೋಗಿದ್ದಿದ್ದರೆ, ಈ ಶ್ರೇಷ್ಠ ಆಟಗಾರನನ್ನು ಜಗತ್ತು ನೋಡಲು ಸಾಧ್ಯವೇ ಇರುತ್ತಿರಲಿಲ್ಲ. ಸ್ಪೇನ್‌ಗೆ ಹೋದರೂ ವಿಶ್ವಕಪ್‌ನಲ್ಲಿ ತನ್ನದೇ ಅರ್ಜೆಂಟೀನಾ ಪರವಾಗಿಯೇ ಆಡಲು ನಿರ್ಧರಿಸಿದ್ದು ಈ ಆಟಗಾರನ ಮಣ್ಣಿನ ಪ್ರೀತಿಗೆ ಸಾಕ್ಷಿ.

2004-05ರಲ್ಲಿ ಬಾರ್ಸೆಲೋನಾ ಪರವಾಗಿ ಲೀಗ್‌ನಲ್ಲಿ ಮೊದಲ ಗೋಲು ಗಳಿಸಿದ ಅತಿ ಚಿಕ್ಕಪ್ರಾಯದವ ಎನಿಸಿಕೊಂಡದ್ದು, ಮರುವರ್ಷವೇ ಲಾ ಲೀಗಾ ಹಾಗೂ ಚಾಂಪಿಯನ್ಸ್ ಲೀಗ್‌ನಲ್ಲಿ ಗೆದ್ದ ತಂಡದ ಭಾಗವಾಗಿದ್ದು, 2012ರಲ್ಲಿ 91 ಗೋಲುಗಳನ್ನು ಹೊಡೆದು ಒಂದೇ ಕ್ಯಾಲೆಂಡರ್ ವರ್ಷದಲ್ಲಿ ಅತಿ ಹೆಚ್ಚು ಗೋಲು ಹೊಡೆದ ವಿಶ್ವ ದಾಖಲೆ ಬರೆದದ್ದು (ಜರ್ಮನಿಯ ಗರ್ಡ್ ಮುಲ್ಲರ್ 85 ಗೋಲು ಗಳಿಸಿದ ದಾಖಲೆಯನ್ನು 40 ವರ್ಷಗಳಾದ ಮೇಲೆ ಅಳಿಸಿದ್ದು), 2006ರಲ್ಲಿ ಅರ್ಜೆಂಟೀನಾ ಪರವಾಗಿ ವಿಶ್ವಕಪ್‌ನಲ್ಲಿ ಆಡಿದ ಕಿರಿಯ ಆಟಗಾರ ಎನಿಸಿಕೊಂಡಿದ್ದು, 2010ರ ವಿಶ್ವಕಪ್‌ನಲ್ಲಿ ಚೆನ್ನಾಗಿ ಆಡಿ ತಂಡ ಕ್ವಾರ್ಟರ್‌ಫೈನಲ್ ಪ್ರವೇಶಿಸಲು ಕಾರಣರಾದರೂ ಗೋಲು ಗಳಿಸಲು ಪರದಾಡಿದ್ದು ಹಾಗೂ ಅದೇ ವರ್ಷ ವಿಶ್ವಕಪ್ ಫೈನಲ್‌ನಲ್ಲಿ ಆಡಲೇಬೇಕು ಎಂದು ಕನಸು ಕಂಡಿದ್ದು, ಒಲಿಂಪಿಕ್ ಚಿನ್ನ ತಂದಿತ್ತದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಒಟ್ಟು 98 ಗೋಲುಗಳನ್ನು ದಾಖಲಿಸಿ ವಿಶ್ವದಲ್ಲೇ ಮೂರನೇ ಸ್ಥಾನಕ್ಕೇರಿದ್ದು... ಇವೆಲ್ಲವೂ ಚಕಚಕನೆ ತೆರೆದುಕೊಳ್ಳುವ ಮೆಸ್ಸಿ ವೃತ್ತಿಬದುಕಿನ ಪುಟಗಳು.

ಈ ಸಲ ಮೆಸ್ಸಿ ವಿಶ್ವಕಪ್‌ನಲ್ಲಿ ಏಳು ಗೋಲುಗಳ ಸರದಾರ. 2006ರಿಂದ ಇದುವರೆಗಿನ ವಿಶ್ವಕಪ್‌ಗಳಲ್ಲಿ ಗಳಿಸಿರುವ ಒಟ್ಟು ಗೋಲುಗಳು ಹದಿಮೂರು. ಒಂದು ಕೈಯಲ್ಲಿ ಟ್ರೋಫಿ, ಇನ್ನೊಂದು ಕೈಲಿ ಗೋಲ್ಡನ್ ಬಾಲ್... ಅವರನ್ನೀಗ ‘ಬಂಗಾರದ ಮನುಷ್ಯ’ ಎನ್ನಲು ಇನ್ನೇನು ಬೇಕು.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಬೆಳಗಾವಿಯಲ್ಲಿ ಆರಂಭವಾಗಿರುವ ಚಳಿಗಾಲದ ಅಧಿವೇಶನ ಅರ್ಥಪೂರ್ಣ ಚರ್ಚೆಗೆ ವೇದಿಕೆ ಆಗಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 100%

ಕಸದಲ್ಲಿ ಆಹಾರ ಹುಡುಕುತ್ತಿರುವ ಹಿಮಾಲಯದ ಕಂದು ಕರಡಿಗಳು

ಕರಡಿ ಆಹಾರದಲ್ಲಿ ಪ್ಲಾಸ್ಟಿಕ್ ಪಾಲೇ ಹೆಚ್ಚು

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದಲ್ಲಿ ಕಂಡುಬರುವ ಕಂದು ಕರಡಿಗಳ ಆಹಾರದಲ್ಲಿ ಶೇ 75ರಷ್ಟು ಪ್ಲಾಸ್ಟಿಕ್, ಚಾಕೊಲೇಟ್, ಬಿರಿಯಾನಿ ಮೊದಲಾದ ಅಂಶಗಳೇ ತುಂಬಿವೆ ಎಂದು ಅಧ್ಯಯನವೊಂದು ತಿಳಿಸಿದೆ. ಇವುಗಳ ಬಹುಪಾಲು ತಿನಿಸು, ಆಹಾರ ತ್ಯಾಜ್ಯವನ್ನು ಆಶ್ರಯಿಸಿದ್ದು, ಕರಡಿಗಳು ಇದಕ್ಕೆ ಒಗ್ಗಿಕೊಂಡಿವೆ.

ಜಮ್ಮು ಕಾಶ್ಮೀರ ವನ್ಯಜೀವಿ ರಕ್ಷಣಾ ಇಲಾಖೆಯ ಆಶ್ರಯದ ಅಡಿಯಲ್ಲಿ ವೈಲ್ಡ್‌ಲೈಫ್ ಎಸ್‌ಒಎಸ್ ಸಂಸ್ಥೆಯು 2021ರ ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳ ಅವಧಿಯಲ್ಲಿ ಈ ಅಧ್ಯಯನ ನಡೆಸಿದೆ. ಹಿಮಾಲಯ ಕಂದು ಕರಡಿಗಳ ಆಹಾರ ಮಾದರಿಗಳ ಕುರಿತು ವಿಸ್ತೃತ ಮಾಹಿತಿ ಸಂಗ್ರಹಿಸಲಾಗಿದೆ.

ಒತ್ತುವರಿ, ಪ್ರವಾಸೋದ್ಯಮ, ಜಾನುವಾರು ಮೇಯಿಸುವ ಪ್ರವೃತ್ತಿ ಮೊದಲಾದ ಮನುಷ್ಯ ನಿರ್ಮಿತ ಒತ್ತಡಗಳಿಂದಾಗಿ ಹಿಮಾಲಯದ ಕಂದು ಕರಡಿಗಳ ಸಂಖ್ಯೆ ಕಳೆದ ಒಂದು ಶತಮಾನದಲ್ಲಿ ಕುಸಿದಿದೆ. ಈಗ 500ರಿಂದ 750 ಕಂದು ಕರಡಿಗಳು ಇರಬಹುದು ಎಂಬ ಅಂದಾಜು ಇದೆ. ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್‌ನ (ಐಯುಸಿಎ) ಕೆಂಪು ಪಟ್ಟಿಯ (ತೀವ್ರವಾಗಿ ಅಳಿವಿನಂಚಿನಲ್ಲಿರುವ) ಪ್ರಾಣಿಗಳ ವರ್ಗಕ್ಕೆ ಹಿಮಾಲಯದ ಕಂದು ಕರಡಿಗಳನ್ನು ಸೇರಿಸಲಾಗಿದೆ.

‘ಬಳಸಿ ಎಸೆದ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಹಾಲಿನಪುಡಿ, ಚಾಕೊಲೇಟ್ ಕವರ್‌ಗಳು ಕಂದು ಕರಡಿಗಳ ಹೊಟ್ಟೆ ಸೇರುತ್ತಿವೆ. ಹಿಮಾಲಯದ ಆಲ್ಪೈನ್ ಹುಲ್ಲುಗಾವಲಿಗೆ ಮಾತ್ರ ಸೀಮಿತವಾಗಿರುವ ಹಿಮಾಲಯದ ಕಂದು ಕರಡಿಗಳ ಕುರಿತು ಸೂಕ್ತ ಸಂಶೋಧನೆಯೇ ನಡೆದಿಲ್ಲ’ ಎಂದು ವರದಿ ಹೇಳಿದೆ.

ಕಾಶ್ಮೀರದ ಅಪರೂಪದ ಕರಡಿ ಪ್ರಭೇದದ ಸಂರಕ್ಷಣೆಗೆ ನೆರವಾಗುವ ನಿಟ್ಟಿನಲ್ಲಿ ವೈಲ್ಡ್‌ಲೈಫ್ ಎಸ್‌ಒಎಸ್ ಅಧ್ಯಯನ ಕೈಗೊಂಡಿತ್ತು. ಕಂದು ಕರಡಿಗಳ ಆವಾಸಸ್ಥಾನ ಎಂದು ಕರೆಯಲಾಗುವ ಥಜೀವಾಸ್ ವನ್ಯಜೀವಿ ಅಭಯಾರಣ್ಯ, ಸೋನ್‌ಮಾರ್ಗ್, ಲಕ್ಷಪಥರಿ, ನೀಲಗ್ರಥ ಮತ್ತು ಸರ್ಬಾಲ್ ಗ್ರಾಮಗಳ ವ್ಯಾಪ್ತಿಯಲ್ಲಿ ಅಧ್ಯಯನ ನಡೆಸಲಾಗಿದೆ.

408 ಕರಡಿಗಳ ಪೈಕಿ 86 ಕರಡಿಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಇನ್ನೂ ಕೆಲವು ಕರಡಿಗಳಲ್ಲಿ ಗಾಜಿನ ಅಂಶ ಪತ್ತೆಯಾಗಿದೆ. ‘ಎತ್ತರದ ಭೂಪ್ರದೇಶಗಳಲ್ಲಿ ವಾಸಿಸುತ್ತಿದ್ದ ಇವು ಎರಡು ದಶಕಗಳಿಂದ ಅಷ್ಟಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಆಹಾರ ಅರಸಿ ಕೆಳಗಿನ ಪ್ರದೇಶಕ್ಕೆ ಬರುತ್ತಿರುವುದು ಕಂಡುಬಂದಿದೆ’ ಎಂದು ಸಂಸ್ಥೆಯ ಯೋಜನಾ ವಿಭಾಗದ ವ್ಯವಸ್ಥಾಪಕಿ ಹಾಗೂ ಶಿಕ್ಷಣ ಅಧಿಕಾರಿ ಆಲಿಯಾ ಮಿರ್ ಹೇಳುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

2016ರ ನವೆಂಬರ್ 8ರಂದು ಕೇಂದ್ರ ಸರ್ಕಾರವು ₹500 ಹಾಗೂ ₹1,000 ಮುಖಬೆಲೆಯ ನೋಟುಗಳನ್ನು ರದ್ದುಪಡಿಸಿ, ಚಲಾವಣೆಯಿಂದ ಹಿಂದಕ್ಕೆ ಪಡೆದಿತ್ತು. ಇದಾದ ಬಳಿಕ, ₹2,000 ಮುಖಬೆಲೆಯ ನೋಟುಗಳನ್ನು ಹೊಸದಾಗಿ ಪರಿಚಯಿಸಿತ್ತು. ₹1,000 ಮುಖಬೆಲೆಯ ನೋಟುಗಳು 2023ರ ಜನವರಿ 1ರಿಂದ ಮತ್ತೆ ಚಲಾವಣೆಗೆ ಬರಲಿವೆ ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಚಲಾವಣೆ ಕಡಿಮೆಯಾಗಿರುವ ₹2,000 ಮುಖಬೆಲೆಯ ನೋಟುಗಳನ್ನು ಬ್ಯಾಂಕ್‌ಗಳು ವಾಪಸ್ ಪಡೆಯಲಿವೆ ಎಂಬ ಸುದ್ದಿಯೂ ಚರ್ಚೆಯಲ್ಲಿದೆ. ಆದರೆ ಈ ಸುದ್ದಿ ಸುಳ್ಳು.

ಸಾವಿರ ರೂಪಾಯಿ ಮುಖಬೆಲೆಯ ನೋಟುಗಳನ್ನು ಮತ್ತೆ ಪರಿಚಯಿಸುವ ಉದ್ದೇಶ ಕೇಂದ್ರ ಸರ್ಕಾರದ ಮುಂದೆ ಇಲ್ಲ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ವೇದಿಕೆ ಸ್ಪಷ್ಟಪಡಿಸಿದೆ. ಆದರೆ, ₹2,000 ಮುಖಬೆಲೆಯ ನೋಟನ್ನು ರದ್ದುಪಡಿಸುವ ಉದ್ದೇಶವೂ ಇಲ್ಲ ಎಂದು ಪಿಐಬಿ ತಿಳಿಸಿದೆ. ₹2,000 ಮುಖಬೆಲೆಯ ನೋಟುಗಳ ಮುದ್ರಣವು ಮೂರು ವರ್ಷಗಳಿಂದ ಸ್ಥಗಿತವಾಗಿದೆ ಎಂದು ಆರ್‌ಟಿಐನಡಿ ಮಾಹಿತಿ ದೊರಕಿತ್ತು. 2018-19ರ ಬಳಿಕ ₹2,000ದ ನೋಟುಗಳ ಮುದ್ರಣಕ್ಕೆ ಬೇಡಿಕೆ ಸಲ್ಲಿಕೆಯಾಗಿಲ್ಲ ಎಂದು ಕೇಂದ್ರ ಸರ್ಕಾರವು ಸದನಕ್ಕೆ ಮಾಹಿತಿ ನೀಡಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತಾಳ್ಮೆಯೇ ಪಕ್ವತೆ

ಕಾಳನುದಯದಿ ಬಿತ್ತೆ ಸಂಜೆಗದು ಪೈರಹುದೆ? |
ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ ||
ವೇಳೆಗಡು ಮರೆತಾತುರದಿನ್ ಅಡುಗೆ ಪಕ್ಕಹುದೆ? |
ತಾಳುಮೆಯೆ ಪರಿಪಾಕ-ಮಂಕುತಿಮ್ಮ || 781 ||

ಪದ-ಅರ್ಥ: ಕಾಳನುದಯದಿ = ಕಾಳನು + ಉದಯದಿ, ಬಿತ್ತೆ = ಬಿತ್ತಿದರೆ, ಪಾಲುಂಟು = ಪಾಲು + ಉಂಟು, ಕಾಲಂಗೆ = ಕಾಲನಿಗೆ, ವೇಳೆಗಡು = ವೇಳೆಯ ಮಿತಿ, ಮರೆತಾತುರದಿನ್ = ಮರೆತು + ಆತುರದಿನ್(ಆತುರತೆಯಿಂದ), ಪಕ್ಕಹುದೆ = ಪಕ್ಕು-(ಪಕ್ವ) + ಅಹುದೆ, ತಾಳುಮೆಯೆ = ತಾಳ್ಮೆಯೇ

ವಾಚ್ಯಾರ್ಥ: ಬೆಳಿಗ್ಗೆ ಕಾಳನ್ನು ಬಿತ್ತಿ ಸಂಜೆಗೆ ಪೈರನ್ನು ಪಡೆಯಬಹುದೆ? ಕೃಷಿಯಲ್ಲಿ ಕಾಲನಿಗೆ ಪಾಲಿದೆ. ಸಮಯದ ಮಿತಿಯನ್ನು ಮರೆತು ಆತುರಪಟ್ಟರೆ ಅಡುಗೆ ಪಕ್ವವಾದೀತೇ? ತಾಳ್ಮೆಯೇ ಪಕ್ವತೆಯ ಗುರುತು.

ವಿವರಣೆ: ತಾಳ್ಮೆ ಎನ್ನುವುದು ಮನಸ್ಸಿನ ಸ್ಥಿತಿ. ಜೀವನದಲ್ಲಿ ಎಲ್ಲವೂ ನಾವು ಎಣಿಸಿದಂತೆಯೇ ನಡೆಯುವುದಿಲ್ಲ. ನಾವು ಎಂದೆಂದೂ ಕಲ್ಪಿಸಿಕೊಳ್ಳದ ಘಟನೆಗಳು ನಡೆದುಬಿಡುತ್ತವೆ. ಯಾವ ಘಟನೆಗಳು ಖಂಡಿತವಾಗಿಯೂ ನಡೆದೇ ತೀರುತ್ತವೆಂದು ತಿಳಿದಿದ್ದ ಘಟನೆಗಳು ನಡೆಯುವುದೇ ಇಲ್ಲ. ಹಾಗೆ ಅನಿರೀಕ್ಷಿತವಾಗಿ ನಡೆದ ಘಟನೆಗಳನ್ನು ನಾವು ಹೇಗೆ ಕಾಣುತ್ತೇವೆ ಎನ್ನುವುದು ಮುಖ್ಯ. ಕಷ್ಟ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ಸಮಾನವಾಗಿ ಅವುಗಳನ್ನು ಸ್ವೀಕರಿಸಬೇಕಾದರೆ ಸ್ಥಿತಪ್ರಜ್ಞತೆ ಬೇಕು. ಈ ಸ್ಥಿತಪ್ರಜ್ಞತೆಯ ಮೂಲವೇ ತಾಳ್ಮೆ. ನಾವು ಜಾನಪದ ಕಥೆಯಲ್ಲಿ ಕೇಳಿದ್ದೇವೆ. ತಾಯಿ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ನೀರು ತರಲುಹೋಗುತ್ತಾಳೆ. ಮಗುವಿನ ಜವಾಬ್ದಾರಿಯನ್ನು ತನ್ನ ಪ್ರೀತಿಯ ಮುಂಗುಸಿಗೆ ಒಪ್ಪಿಸಿದ್ದಾಳೆ. ಆಗ ನಾಗರಹಾವೊಂದು ತೊಟ್ಟಿಲಿನ ಬಳಿಗೆ ಬಂದಾಗ ಮುಂಗುಸಿ ಸೆಣಸಾಡಿ ಹಾವನ್ನು ಕೊಂದು, ಹೆಮ್ಮೆಯಿಂದ ತೋರಲು ಬಾಗಿಲಿಗೆ ಬರುತ್ತದೆ. ಅದರ ಬಾಯಿಯ ರಕ್ತವನ್ನು ಕಂಡು, ಮಂಗುಸಿಯೇ ತನ್ನ ಮಗುವನ್ನು ಕಚ್ಚಿರಬೇಕೆಂದು ಆತುರದಿಂದ ತಾನು ತಂದ ತುಂಬಿದ ನೀರಿನ ಕೊಡವನ್ನು ಅದರ ಮೇಲೆ ಹಾಕಿ ಕೊಂದುಬಿಡುತ್ತಾಳೆ. ನಂತರ ಸತ್ಯ ತಿಳಿದು ಗೋಳಾಡುತ್ತಾಳೆ. ಯಾವಾಗ ತಾಳ್ಮೆ ಕಳೆದುಕೊಳ್ಳುತ್ತೇವೆಯೋ ಗೋಳಾಟವೇ ಗತಿ. ಈ ತಾಳ್ಮೆಯ ಅವಶ್ಯಕತೆಯನ್ನು ಕಗ್ಗ ತಿಳಿಸುತ್ತದೆ. ಅದಕ್ಕೆ ಕೆಲವು ಉದಾಹರಣೆಗಳನ್ನು ನೀಡುತ್ತದೆ. ನೆಲದಲ್ಲಿ ಕಾಳು ಊರಿದ ದಿನವೇ ಸಂಜೆಗೆ ಪೈರು ಬಂದು ಬಿಡುತ್ತದೆಯೇ? ಕಾಳು ಸಸಿಯಾಗಿ, ಬೆಳೆದು ಹೂವು-ತಳೆದು, ಹಣ್ಣಾಗುವುದಕ್ಕೆ ನಿರ್ದಿಷ್ಟ ಸಮಯ ಬೇಕು. ಹೀಗೆ ಕೃಷಿಯಲ್ಲಿ ಸಮಯಕ್ಕೆ ಒಂದು ದೊಡ್ಡ ಪಾಲಿದೆ. ಅದೇ ರೀತಿ ಅಡುಗೆ ಮಾಡುವಾಗ ಅವಸರ ತರವಲ್ಲ. ಆಹಾರ ಬೇಯಬೇಕಾದರೆ ಒಂದಷ್ಟು ಸಮಯ ಬೇಕು. ಅವಸರ ಮಾಡಿದರೆ, ಅಡುಗೆ ಬೇಯದೆ, ಅರೆಬೆಂದು ತಿನ್ನಲು ಅನರ್ಹವಾಗುತ್ತದೆ. ಹಾಗಾದರೆ, ಇದಕ್ಕೆಲ್ಲ ಒಂದೇ ಪರಿಹಾರ. ಅದು ತಾಳ್ಮೆಯನ್ನು ಹೊಂದುವುದು. ಅದೇ ಬದುಕಿನ ಪರಿಪಾಕ. ಅದಕ್ಕೇ ತಾಳಿದವನು ಬಾಳಿಯಾನು ಎಂಬ ಮಾತು ಬಂದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಡಿಸೆಂಬರ್ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ದ್ವಾದಶಿ ಗಂ. 24-46 ನಕ್ಷತ್ರ: ಸ್ವಾತಿ ಗಂ. 09-55 ಯೋಗ: ಸುಕರ್ಮ ಗಂ. 24-40 ಕರಣ: ಕೌಲವ ಗಂ. 13-45, ಧನುರ್ ಮಾಸದ 04 ನೇ ದಿನ.
ರಾಹುಕಾಲ: ಮಧ್ಯಾಹ್ನ 03-00 -04-30
ಸೂರ್ಯೋದಯ: 06-52 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ: 25 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ: 1, 9

ಮೇಷ: ಕೋರ್ಟು ವ್ಯವಹಾರಗಳಲ್ಲಿ ಹಿನ್ನಡೆ ಅಥವಾ ನಿರೀಕ್ಷಿಸಿದ ಯಾವುದೇ ತೀರ್ಮಾನ ಸಿಗದಂತಾಗುತ್ತದೆ. ಮಗನ ಕ್ಷೇಮಕ್ಕಾಗಿ ಧಾರ್ಮಿಕ ಕಾರ್ಯ ಅಥವಾ ವ್ರತಾಚರಣೆ ಮಾಡುವುದು ಉತ್ತಮ. ಸಾಲವನ್ನು ತೀರಿಸಿದ ಸಂತೃಪ್ತಿ ಸಿಗಲಿದೆ.

ವೃಷಭ: ವಿವಾಹಕ್ಕೆ ಸೋದರಿಕೆಯಲ್ಲಿ ಸಂಬಂಧ ಪ್ರಸ್ತಾಪ ನಡೆಸಬಹುದು. ಅನಗತ್ಯ ಖರ್ಚುವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಉಳಿತಾಯ ಮಾಡಬಹುದು. ಕೆಂಪು ಬಣ್ಣದ ಉಡುಪು ಧರಿಸುವುದರಿಂದ ಅನುಕೂಲ.

ಮಿಥುನ: ವೈಯಕ್ತಿಕ ವಿಚಾರಗಳ ಬಗ್ಗೆ ಗಮನಹರಿಸಿ. ಜನರೊಂದಿಗಿನ ಹೆಚ್ಚಿನ ಸಂಪರ್ಕದಿಂದ ಸುಲಭವಾಗಿ ಎದುರಿಸಬಹುದು. ಗಣಿತದ ವಿಷಯದಲ್ಲಿ ಉನ್ನತ ವ್ಯಾಸಂಗದ ಕನಸಿಗೆ ಪುಷ್ಟಿ ಸಿಗಲಿದೆ.

ಕರ್ಕಾಟಕ: ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳಿಸಿಕೊಂಡ ಸಂತೃಪ್ತಿ ಇಂದು ತುಂಬಿರುತ್ತದೆ. ಆದ್ದರಿಂದ ಪ್ರೀತಿ ಮತ್ತು ಆನಂದ ತುಂಬಿದ ಹರ್ಷದಾಯಕ ದಿನ ಇದಾಗಿದೆ. ಪಾಲುದಾರಿಕೆ ಒಪ್ಪಂದ ಏರ್ಪಡುವುದು.

ಸಿಂಹ: ನಿಮ್ಮಲ್ಲಿರುವ ಸಹಾಯ ಮನೋಭಾವ ಮಿಕ್ಕವರೆಲ್ಲರಿಗಿಂತ ವಿಭಿನ್ನ ಸ್ಥಾನದಲ್ಲಿ ನಿಲ್ಲಿಸಲಿದೆ. ಸ್ನೇಹಿತರು ಇನ್ನಷ್ಟು ಹತ್ತಿರವಾಗುವರು. ಮಗನ ಜವಾಬ್ದಾರಿಯುತ ನಡವಳಿಕೆ ಹೆಮ್ಮೆ ಎನಿಸುವುದು.

ಕನ್ಯಾ: ನಿಮ್ಮ ಸ್ವಂತ ಕೆಲಸ ಕಾರ್ಯಗಳನ್ನು ಮನೆಯವರ ಸಹಾಯದಿಂದ ಪೂರ್ತಿಗೊಳಿಸುವಿರಿ. ವ್ಯಾಪಾರ ಕ್ಷೇತ್ರದಲ್ಲಿನ ಪ್ರತಿಸ್ಪರ್ಧಿಗಳಿಗೆ ಬಹಳ ಹಿನ್ನಡೆಯ ದಿನವಾಗಲಿದೆ. ವಿವಾಹದ ಬಗ್ಗೆ ಯೋಚನೆ ಬರಲಿದೆ.

ತುಲಾ: ವಿಶಾಲ ಮನೋಭಾವದ ಗುಣದಿಂದಾಗಿ ದೇವರ ರಕ್ಷಣೆ ಪ್ರಾಪ್ತಿಯಾಗುವುದು. ವೃತ್ತಿಯಲ್ಲಿನ ಬಹು ಮುಖ್ಯ ನಿರ್ಧಾರವನ್ನು ಮಾಡಬೇಕಾಗುವುದು. ಆಸ್ತಿ ಸಂಬಂಧ ಮಾತುಕತೆ ನಡೆಯುವುದು.

ವೃಶ್ಚಿಕ: ಸಿಬ್ಬಂದಿಯಲ್ಲಿ ಉತ್ಸಾಹ ತುಂಬಿ ನಾಯಕತ್ವದ ಸ್ಥಾನದಲ್ಲಿ ಕೆಲಸ ಕಾರ್ಯಗಳನ್ನು ಪೂರ್ತಿಗೊಳಿಸುವಲ್ಲಿ ಯಶಸ್ವಿಯಾಗುವಿರಿ. ದಿಟ್ಟತನ ಸಾಧಿಸಲೇಬೇಕೆಂಬ ಛಲದಿಂದಾಗಿ ಕಾರ್ಯ ಕೈಗೂಡುವುದು. ಗಣೇಶನನ್ನು ಆರಾಧಿಸಿ.

ಧನು: ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ ದೊರಕಲಿದೆ. ಹಣ ಸಂಪಾದನೆಗಾಗಿ ಯಾವುದೇ ಅಡ್ಡ ಮಾರ್ಗ ಅರಿಸಿಕೊಳ್ಳುವುದು ಸರಿಯಲ್ಲ. ವಿದ್ಯಾರ್ಥಿಗಳಿಗೆ ಸಾಧನೆಗೆ ಬೇಕಾದ ವಾತಾವರಣ ಮತ್ತು ಪ್ರೋತ್ಸಾಹ ಲಭಿಸಲಿದೆ.

ಮಕರ: ಪಿತ್ತ ಉಷ್ಣ ಪ್ರಕೋಪದಿಂದಾಗಿ ಆರೋಗ್ಯ ಸೂಕ್ಷ್ಮವಾಗುವುದು. ಆಲೋಚನೆಗಳಿಗೆ ಅಣ್ಣತಮ್ಮಂದಿರ ಬೆಂಬಲ ದೊರಕುವುದು. ಮಂಗಳ ಕಾರ್ಯ ನಡೆಸಲು ಸಿದ್ಧತೆ ಮಾಡಿಕೊಳ್ಳ ಬೇಕಾಗಬಹುದು.

ಕುಂಭ: ನಿಮ್ಮ ಕೆಲಸ ಕಾರ್ಯಗಳು ಈಡೇರಿದರೂ ಅದಕ್ಕಾಗಿ ಬಹಳ ಹಣ ವ್ಯಯಿಸಬೇಕಾಗಬಹುದು. ಸಾಲ ಮಾಡುವ ಯೋಚನೆ ಕೈ ಬಿಡುವುದು ಉತ್ತಮ. ಕುಟುಂಬ ಸದಸ್ಯರ ಆರೋಗ್ಯದ ಕಾಳಜಿ ಇರಲಿ.

ಮೀನ: ವೃತ್ತಿಪರವಾಗಿ ಸ್ಥಳ ಬದಲಾವಣೆಯಾದರೆ ಕಷ್ಟವಾಗಬಹುದು ಎಂಬ ಶಂಕೆ ಬೇಡ, ಅಲ್ಲಿಯೂ ಬದುಕು ಹಸನಾಗಲಿದೆ. ಗೊಂದಲ ತಿಳಿಯಾಗುತ್ತದೆ. ಮನೆಯವರ ಸಲಹೆಯಂತೆ ಪ್ರಯಾಣ ಕೈಗೊಳ್ಳಬೇಕಾಗುವುದು.

ಪದಬಂಧ 5174

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಗುಪ್ತ ದ್ರೋಹವಿದು (4)
3. ಕ್ಷೋಭೆ ಇಲ್ಲಿ ಕಾಣುತ್ತಿದೆ (3)
5. ಸೇನಾನಾಯಕನೊಡನೆ ಗಂಡನಿದ್ದಾನೆ (4)
7. ಪಾರಾಯಣ ಮಾಡುವ ಹತ್ತಿರವಿರಿಸಿದ ಗರಳ (3)
8. ಕೈ ಮುಂದು ಮಾಡಿ ತಟ್ಟಿದ ಚಪ್ಪಾಳೆ (5)
11. ಬುಡಕಟ್ಟಿನವನಿಂದಾದ ಬೋರು! (3)
12. ಈತ ಲೆಕ್ಕ ಬರೆಯುವವನು (4)
14. ಧಣಿಗೆ ಆಗಿರುವ ಆಯಾಸ (3)
15. ಮನೆಯನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1. ಅಂತರಂಗದ ಮಾತಿದು (4)
2. ತಾಪದ ಹೊತ್ತಿನಲ್ಲಿ ತೋಡಿಕೊಂಡಿರುವ ದುಃಖ (3)
4. ನೀರಿನ ಅಧಿದೇವತೆ (3)
6. ಕತ್ತಲು ಇಲ್ಲಿ ಆವರಿಸಿದೆ (3)
7. ವನ ಕೊನೆಯಲ್ಲಿದ್ದರೆ ಇದು ಪವಿತ್ರ (3)
8. ಸುಲಭವಾಗಿ ಬಿಡಿಸಲಾಗದ ಗಂಟು (3)
9. ನಮ್ಮ ಭಾಷೆಯಿಲ್ಲಿ ಉಲ್ಟಾ ಕಾಣುತ್ತಿದೆ (3)
10. ಕೂಡುವ ಲೆಕ್ಕವಿದು (4)
11. ನೀರ ಮೇಲಿನ ಗುಳ್ಳೆ (3)
13. ರಸದಲ್ಲಿರುವ ವೇಗ (3)



5173 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2. ಕಾರಂಜಿ 4. ತಿಲಕ
5. ಜಾಯಮಾನ
6. ತಾರಾಗಣ 7. ಯತಿ
9. ನವ 13. ಸಮರ್ಪಕ
14. ಆರಾಧಕ 15. ರಕುತ
16. ಶರಣ

ಮೇಲಿಂದ ಕೆಳಕ್ಕೆ:
1. ಪ್ರತಿಪಾದನೆ 2. ಕಾಕತಾಳೀಯ
3. ಪ್ರಮಾದ 5. ಜಾಣತನ
8. ತಿನ್ನಾಸಕ 10. ವಶೀಕರಣ
11. ನರಪೇತಲ 12. ಪುರಾವೆ

ಸುಡೊಕು 5560

	7			3		1		6
4		9						
	1		7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5559 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಷೇರುಪೇಟೆ ವಹಿವಾಟು 402



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18269
ಇಂದಿನ ಅಂತ್ಯ	18420
▲	151
ದಿನದ ಕನಿಷ್ಠ	18431

ವಿನಿಮಯ ದರ

$ ಡಾಲರ್	82.62
£ ಪೌಂಡ್	100.75
€ ಯುರೊ	87.84
¥ ಯೆನ್ (100ಕ್ಕೆ)	60.05

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560(1560)
ಸೋಯಾ (ರಿಫೈನ್ಡ್)	₹1260(1235)
ಸೂರ್ಯಕಾಂತಿ (ರಿಫೈನ್ಡ್)	₹1330(1320)
ಪಾಮೋಲಿನ್	₹947(935)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2200
ಮಧ್ಯಮ	₹1000-1800
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹136
ಆರ್‌ಎಸ್‌ಎಸ್-5	₹128
ಗುಡ್ ಲಾಟ್	₹122

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

In Loving Memory of
VISHWANATH V.

4th Jan. 1957 to 18th Dec. 2022
Cremation on 20.12.22
at Kalpalli Crematorium
Time: 11:00am
Deeply mourned by:
Ushashree - Wife, Anusha V Reddy
& Disha V Reddy - Daughters

For Online Classified Booking
Name Change / Education / Property / Job / Services & many more
Log on to :
dhclassifieds.com

10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಸಿ. ಸಂಪತ್ ಕುಮಾರ್
(ಮರಣ: 20ನೇ ಡಿಸೆಂಬರ್ 2012)
ದುಃಖತಪ್ತರು: ಸಂಧ್ಯಾ ಸುಧೀರ್, ಶಿಲ್ಪ, ಸಂಜನಾ ಶರತ್, ಯದುನಂದನ ಮತ್ತು ಚಯನ

ನಿಧನ

ಶ್ರೀಮತಿ ಕೋಮಲ ಚಂದ್ರಶೇಖರ್
01.02.1969 – 19.12.2022
ಇವರು ದಿನಾಂಕ: 19.12.2022ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.
ದುಃಖತಪ್ತ:
ಶ್ರೀ ವಿ. ಲಕ್ಷ್ಮೀನಾರಾಯಣ್, ಸಂಸ್ಥಾಪಕರು, ನಿರ್ಮಾಣ್ ಸಮೂಹ ಸಂಸ್ಥೆಗಳು ಹಾಗೂ ಸಹೋದರಿಯರಾದ ಶ್ರೀಮತಿ ಪ್ರೇಮ, ಶ್ರೀಮತಿ ಸುಜಾತ ಕೃಷ್ಣ, ಪತಿ–ಶ್ರೀ ಪಿ.ವಿ. ಚಂದ್ರಶೇಖರ್, ಅತ್ತೆ–ಶ್ರೀಮತಿ ಗಿರಿಜಾಂಬ ಮತ್ತು ಕುಟುಂಬ ವರ್ಗ

ಗೂಗಲ್ ಕಂಪನಿಯ ಸಿಇಒ ಸುಂದರ್ ಪಿಚೈ ಹೇಳಿಕೆ

100 ಭಾಷೆಗಳಲ್ಲಿ ಶೋಧ ಸೇವೆ

ನವದೆಹಲಿ (ಪಿಟಿಐ): ಗೂಗಲ್ ಕಂಪನಿಯು ಭಾರತದ ನೂರಕ್ಕೂ ಹೆಚ್ಚು ಭಾಷೆಗಳಲ್ಲಿ ಧ್ವನಿ ಹಾಗೂ ಪಠ್ಯ ಆಧಾರಿತ ಶೋಧ ಸೇವೆಗಳನ್ನು ನೀಡಲು ಸಿದ್ಧತೆ ನಡೆಸಿದೆ. ದೇಶದಲ್ಲಿ ಮಹಿಳೆಯರ ನೇತೃತ್ವದಲ್ಲಿನ ನವೋದ್ಯಮಗಳಿಗೆ ಉತ್ತೇಜನ ನೀಡಲು ₹ 620 ಕೋಟಿ ವೆಚ್ಚ ಮಾಡಲಿದೆ ಎಂದು ಕಂಪನಿಯ ಸಿಇಒ ಸುಂದರ್ ಪಿಚೈ ತಿಳಿಸಿದ್ದಾರೆ.

ಪಿಚೈ ಅವರು ಭಾರತಕ್ಕೆ ಭೇಟಿ ನೀಡಿದ್ದಾರೆ. ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಭೇಟಿ ಮಾಡಿದ್ದಾರೆ.

'ಭಾರತಕ್ಕಾಗಿ ಗೂಗಲ್ 2022' ಕಾರ್ಯಕ್ರಮದಲ್ಲಿ ಮಾತನಾಡಿದ ಪಿಚೈ ಅವರು, 'ಇಂಡಿಯಾ ಡಿಜಿಟೈಸೇಷನ್ ಫಂಡ್‌ನ ಒಂದಿಷ್ಟು ಮೊತ್ತವನ್ನು ದೇಶದ ನವೋದ್ಯಮಗಳಲ್ಲಿ ಹೂಡಿಕೆಗೆ ಬಳಸಿಕೊಳ್ಳಲಾಗುವುದು' ಎಂದಿದ್ದಾರೆ.

ಪಿಚೈ ಅವರು ಸರಿಸುಮಾರು ಮೂರೂವರೆ ವರ್ಷಗಳ ನಂತರದಲ್ಲಿ ಭಾರತಕ್ಕೆ ಬಂದಿದ್ದಾರೆ. ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನೂ ಭೇಟಿ ಮಾಡಿದ್ದಾರೆ. ದೇಶದ ನವೋದ್ಯಮ ವ್ಯವಸ್ಥೆಯು ಸುಧಾರಣೆ ಕಾಣುತ್ತಿರುವುದನ್ನು ತಾವು ಪ್ರತಿ ಬಾರಿ ಭಾರತಕ್ಕೆ ಬಂದಾಗಲೂ ಗಮನಿಸುತ್ತಿರುವುದಾಗಿ ಪಿಚೈ ಹೇಳಿದ್ದಾರೆ.

'ನವೋದ್ಯಮ ಆರಂಭಿಸಲು ಈಗಿನ ಸಂದರ್ಭಕ್ಕಿಂತ ಉತ್ತಮವಾದುದು ಇನ್ನೊಂದಿಲ್ಲ' ಎಂದು ಹೇಳಿದ್ದಾರೆ.

ಭಾಷಾಂತರ ಹಾಗೂ ಶೋಧ ತಂತ್ರಜ್ಞಾನವನ್ನು ಉತ್ತಮಪಡಿಸಲು ಗೂಗಲ್ ಕಂಪನಿಯು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರ ಅಡಿಯಲ್ಲಿ ದೇಶದ 773 ಜಿಲ್ಲೆಗಳಿಂದ ಮಾತುಗಳ ದತ್ತಾಂಶವನ್ನು ಸಂಗ್ರಹಿಸಲಾಗುತ್ತದೆ.

ದೇಶದ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳು ಅಸಾಮಾನ್ಯ. ಗೂಗಲ್ ಕಂಪನಿಯು ಸಣ್ಣ ಉದ್ದಿಮೆಗಳು ಹಾಗೂ ನವೋದ್ಯಮಗಳಿಗೆ ಒತ್ತಾಸೆಯಾಗಿ ನಿಂತಿದೆ. ಸೈಬರ್ ಭದ್ರತೆ, ಶಿಕ್ಷಣ ಮತ್ತು ಕೌಶಲ ತರಬೇತಿ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುತ್ತಿದೆ ಎಂದು ಪಿಚೈ ತಿಳಿಸಿದ್ದಾರೆ.

ಗೂಗಲ್ ಕಂಪನಿಯು ಇಂಡಿಯಾ ಡಿಜಿಟೈಸೇಷನ್ ಫಂಡ್ ಮೂಲಕ ಜಿಯೊ ಕಂಪನಿಯ ಶೇ 7.73ರಷ್ಟು ಷೇರುಗಳನ್ನು ಖರೀದಿಸಿದೆ. ಅಲ್ಲದೆ, ಭಾರ್ತಿ ಏರ್‌ಟೆಲ್ ಕಂಪನಿಯಲ್ಲಿ ಶೇ 1.2ರಷ್ಟು ಷೇರುಗಳನ್ನು ಖರೀದಿಸಿದೆ.

ಆ್ಯಂಡ್ರಾಯ್ಡ್‌ನಲ್ಲಿ ಡಿಜಿಲಾಕರ್

ಗೂಗಲ್ ಕಂಪನಿಯು ರಾಷ್ಟ್ರೀಯ ಇ–ಆಡಳಿತ ವಿಭಾಗದ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಸಾರ್ವಜನಿಕರಿಗೆ ತಮ್ಮ ಡಿಜಿಟಲ್ ಕಡತಗಳನ್ನು 'ಫೈಲ್ಸ್' ಆ್ಯಪ್ ಮೂಲಕ ಪಡೆದುಕೊಳ್ಳಲು ಸಾಧ್ಯವಾಗಲಿದೆ. 'ಫೈಲ್ಸ್' ಆ್ಯಪ್, ಗೂಗಲ್ ಕಂಪನಿಯು ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಗಾಗಿ ಅಭಿವೃದ್ಧಿಪಡಿಸಿರುವ ಆ್ಯಪ್. 'ಡಿಜಿಲಾಕರ್ ಆ್ಯಪ್ ಬಹಳ ಶೀಘ್ರದಲ್ಲಿ ಆ್ಯಂಡ್ರಾಯ್ಡ್ ವ್ಯವಸ್ಥೆಯ ಭಾಗವಾಗಲಿದೆ. ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಹೊಂದಿರುವ ಸ್ಮಾರ್ಟ್‌ಫೋನ್‌ಗಳಲ್ಲಿ ಡಿಜಿಲಾಕರ್ ಅಳವಡಿಕೆ ಆಗಲಿದೆ' ಎಂದು ಇ–ಆಡಳಿತ ವಿಭಾಗದ ಅಧ್ಯಕ್ಷ ಅಭಿಷೇಕ್ ಸಿಂಗ್ ಹೇಳಿದ್ದಾರೆ.

ಡುಕಾಟಿ ಬೈಕ್ ಬೆಲೆ ಏರಿಕೆ

ಮುಂಬೈ (ಪಿಟಿಐ): ಇಟಲಿಯ ಸೂಪರ್‌ಬೈಕ್ ಕಂಪನಿ ಡುಕಾಟಿ ತನ್ನ ದ್ವಿಚಕ್ರ ವಾಹನಗಳ ಬೆಲೆಯನ್ನು ಜನವರಿ 1ರಿಂದ ಹೆಚ್ಚಿಸಲಿದೆ.

ಆದರೆ ಬೆಲೆ ಹೆಚ್ಚಳದ ಪ್ರಮಾಣ ಎಷ್ಟಿರುತ್ತದೆ ಎಂಬುದನ್ನು ಕಂಪನಿ ತಿಳಿಸಿಲ್ಲ.

ಕಚ್ಚಾ ವಸ್ತುಗಳು, ಉತ್ಪಾದನೆ ಹಾಗೂ ಸಾಗಣೆ ವೆಚ್ಚ ಹೆಚ್ಚಾಗಿರುವ ಕಾರಣ ದ್ವಿಚಕ್ರ ವಾಹನಗಳ ಬೆಲೆ ಪರಿಷ್ಕರಣೆ ಅನಿವಾರ್ಯ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

19–12-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	11550-11600
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570(1570)
ಒಂದು ವಾರದ ಡೆಲಿವರಿ	1565(1565)
ಸೋಯಾ ಕಚ್ಚಾ	1162(1155)
ಪಾಮ್ ವಾರದ ಡೆಲಿವರಿ	945(933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (--)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53900(53950)
ಬೆಳ್ಳಿ ಕೆ.ಜಿ 66850(66450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೂನ್‌ಲೈಟಿಂಗ್‌ಗೆ ಅವಕಾಶವಿಲ್ಲ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ನೌಕರರು ತಮಗೆ ನೌಕರಿ ನೀಡಿದವರ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಯಾವುದೇ ಕೆಲಸ ಮಾಡಲು ಅವಕಾಶ ಇಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಅದರೆ, ಮೂನ್‌ಲೈಟಿಂಗ್‌ನಲ್ಲಿ ಯಾರು ತೊಡಗಿದ್ದಾರೆ ಎಂಬ ಬಗ್ಗೆ ತಾನು ಪರಿಶೀಲನೆ ನಡೆಸುತ್ತಿಲ್ಲ ಎಂದೂ ಅದು ಸ್ಪಷ್ಟಪಡಿಸಿದೆ.

'ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯ್ದೆ 1946ರ ಅನ್ವಯ, ನೌಕರನು ತಾನು ಕೆಲಸ ಮಾಡುವ ಕಂಪನಿಯ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುವಂತಿಲ್ಲ ಮತ್ತು ಕಂಪನಿಯಲ್ಲಿ ತಾನು ಹೊಂದಿರುವ ಉದ್ಯೋಗಕ್ಕೆ ಹೆಚ್ಚುವರಿಯಾಗಿ, ಆ ಕಂಪನಿಯ ಹಿತಾಸಕ್ತಿಗಳ ಮೇಲೆ ಕೆಟ್ಟ ಪರಿಣಾಮ ಬೀರಬಲ್ಲ ಇನ್ನೊಂದು ಉದ್ಯೋಗ ಮಾಡುವಂತಿಲ್ಲ' ಎಂದು ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವ ರಾಮೇಶ್ವರ ತೆಲಿ ಲೋಕಸಭೆಯಲ್ಲಿ ಹೇಳಿದ್ದಾರೆ.

'ನಂದಿನಿ' ಉತ್ಪನ್ನ: ಶೇ 20ರಷ್ಟು ರಿಯಾಯಿತಿ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳವು ಹೊಸ ವರ್ಷ, ಕ್ರಿಸ್ಮಸ್ ಹಾಗೂ ಸಂಕ್ರಾಂತಿ ಹಬ್ಬ ಪ್ರಯುಕ್ತ 'ನಂದಿನಿ' ಸಿಹಿ ಉತ್ಪನ್ನಗಳ ಮೇಲೆ ಶೇ 20ರಷ್ಟು ರಿಯಾಯಿತಿ ಪ್ರಕಟಿಸಿದೆ.

ಕೊಡುಗೆಯು ಡಿಸೆಂಬರ್ 19ರಿಂದ ಒಂದು ತಿಂಗಳ ಕಾಲ ರಾಜ್ಯದ ಎಲ್ಲೆಡೆ ಲಭ್ಯವಿರಲಿದೆ ಎಂದು ಪ್ರಕಟಣೆ ತಿಳಿಸಿದೆ. 'ನಂದಿನಿ' ಸಿಹಿ ಉತ್ಪನ್ನಗಳಾದ ಮೈಸೂರ್ ಪಾಕ್, ಪೇಡಾ, ಧಾರವಾಡ ಪೇಡ, ಕೇಸರ್ ಪೇಡ, ಏಲಕ್ಕಿ ಪೇಡ, ವಿವಿಧ ಬರ್ಫಿಗಳು, ಕುಂದಾ, ಜಾಮೂನ್, ರಸಗುಲ್ಲಾ, ಸಿರಿಧಾನ್ಯ ಲಾಡು, ಸಿರಿಧಾನ್ಯ ಹಾಲಿನ ಪುಡಿ, ಚಿಕ್ಕಿ ಲಾಡು, ಕುಕೀಸ್ ಮತ್ತು ಇತರ ಎಲ್ಲ ಸಿಹಿ ಉತ್ಪನ್ನಗಳ ಮಾರಾಟ ದರದ ಮೇಲೆ ಶೇ 20ರಷ್ಟು ರಿಯಾಯಿತಿ ಸಿಗಲಿದೆ.

ಹೊಸದಾಗಿ ಬಿಡುಗಡೆ ಮಾಡಿರುವ ಖೋವಾ ಬಾದಾಮ್ ರೋಲ್, ಖೋವಾ ಚಾಕೋನಟ್ಟಿ ರೋಲ್, ಗೋಡಂಬಿ ರೋಲ್, ಬೆಲ್ಲದ ಬರ್ಫಿ, ಕಲಾಕಂದ್, ಖೋವಾ ಲಾಡು, ಕರದಂಟು, ಅಕ್ಕಿ ಪಾಯಸ ಮಿಶ್ರಣ, ಗುಡ್ ಲೈಫ್ ಚಾಕೊಲೇಟ್ ಗಿಫ್ಟ್ ಬಾಕ್ಸ್ ಉತ್ಪನ್ನಗಳಿಗೂ ಶೇ 20ರಷ್ಟು ರಿಯಾಯಿತಿ ಇರಲಿದೆ.

ಸೆನ್ಸೆಕ್ಸ್, ನಿಫ್ಟಿ ಶೇ1ರಷ್ಟು ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ತೈಲ ಮತ್ತು ಎಫ್‌ಎಂಸಿಜಿ ವಲಯದ ಷೇರುಗಳ ಖರೀದಿಗೆ ಹೂಡಿಕೆದಾರರು ಹೆಚ್ಚು ಗಮನ ನೀಡಿದ ಪರಿಣಾಮವಾಗಿ, ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸೋಮವಾರ ಸರಿಸುಮಾರು ಶೇ 1ರಷ್ಟು ಏರಿಕೆ ಕಂಡವು.

ಸೆನ್ಸೆಕ್ಸ್ 468 ಅಂಶ, ನಿಫ್ಟಿ 151 ಅಂಶ ಏರಿಕೆ ಕಂಡಿತು. ಐ.ಟಿ. ವಲಯದ ಷೇರುಗಳಲ್ಲಿ ಸೋಮವಾರ ಏರಿಕೆ ಇರಲಿಲ್ಲ. ಅಮೆರಿಕದ ಐ.ಟಿ. ವಲಯದ ಬೆಳವಣಿಗೆ ಮುನ್ನೋಟವು ಏರಿಕೆಯನ್ನು ಸೂಚಿಸುತ್ತಿಲ್ಲದಿರುವ ಕಾರಣದಿಂದಾಗಿ ಹೀಗಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆ ಸೂಚ್ಯಂಕಗಳು ನಕಾರಾತ್ಮಕವಾಗಿ ಅಂತ್ಯ ಕಂಡಿವೆ. ಬ್ರೆಂಟ್ ಕಚ್ಚಾ ತೈಲದ ದರವು ಶೇ 1.15ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 79.95 ಅಮೆರಿಕನ್ ಡಾಲರ್‌ಗೆ ತಲುಪಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹120-683
ದ್ವಿತಳಿ (ಬಿ.ವಿ)
₹333-832

ಎಸ್‌ಡಿಎಂ: 'ಮಂಜುಶ್ರೀ' ಕೇಶ ತೈಲ

ಬೆಂಗಳೂರು: ಉಡುಪಿಯ ಎಸ್‌ಡಿಎಮ್ ಫಾರ್ಮಸಿ, ಕೂದಲುಗಳ ಆರೋಗ್ಯಕ್ಕೆ ಸಾಂಪ್ರದಾಯಿಕ ಆರೋಗ್ಯ ಸೂತ್ರಗಳನ್ನು ಆಧರಿಸಿದ 'ಮಂಜುಶ್ರೀ ಹೇರ್ ಆಯಿಲ್' ಅಭಿವೃದ್ಧಿಪಡಿಸಿದೆ.

ಇದು ಕೂದಲಿಗೆ ರಕ್ಷಣೆ ನೀಡುತ್ತದೆ. ಕೂದಲಿಗೆ ಪೋಷಕಾಂಶವನ್ನು ನೀಡುತ್ತದೆ. ತಲೆ ಹೊಟ್ಟಿನ ಸಮಸ್ಯೆ ನಿವಾರಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಮಂಜುಶ್ರೀ' ಕೇಶ ತೈಲವು ವಿವಿಧ ಗಿಡಮೂಲಿಕೆಗಳನ್ನು ಒಳಗೊಂಡಿದೆ. ಕೂದಲಿನ ಬುಡಕ್ಕೆ ಬೆರಳ ತುದಿಗಳಿಂದ ಕೆಲವು ನಿಮಿಷ ಮಸಾಜ್ ಮಾಡುವುದರಿಂದ ಕೂದಲಿನ ಬುಡಗಳು ಬಲಗೊಳ್ಳುತ್ತವೆ ಎಂದು ಫಾರ್ಮಸಿಯ ಮುಖ್ಯ ಪ್ರಬಂಧಕ ಡಾ. ಮುರಳೀಧರ ಆರ್. ಬಲ್ಲಾಳ್ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು	- 490
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-38,000
ಹಳತು	48,000-54,500
ಚಿತ್ರದುರ್ಗ	
ಆಪಿ	43,839-44,269
ಬೆಟ್ಟೆ	32,419-32,889
ಕೆಂಪುಗೋಟು	28,209-28,610
ರಾಶಿ	43,329-43,779
ಕಾರ್ಕಳ	
ಹೊಸತು	30,000-37,500
ಹಳತು	40,000-54,500
ಕುಮಟಾ	
ಚಿಪ್ಪು	25,089-31,119
ಕೋಕ	16,500-28,089
ಫ್ಯಾಕ್ಟರಿ	10,169-17,929
ಹಳೆಚಾಲಿ	36,200-39,599
ಹೊಸಚಾಲಿ	30,009-33,599
ಕುಂದಾಪುರ	
ಹಳೆಚಾಲಿ	53,000-55,000
ಹೊಸಚಾಲಿ	40,000-47,500
ಸಾಗರ	
ಬಿಳಿಗೋಟು	19,110-30,100
ಚಾಲಿ	26,909-37,299
ಕೋಕ	13,250-31,199
ಕೆಂಪುಗೋಟು	28,899-33,599
ರಾಶಿ	39,099-44,010
ಸಿಪ್ಪೆಗೋಟು	10,699-20,199
ಶಿವಮೊಗ್ಗ	
ಬೆಟ್ಟೆ	45,019-51,000
ಗೊರಬಲು	17,000-32,699
ರಾಶಿ	40,669-43,969
ಸರಕು	57,899-78,996
ಸಿದ್ದಾಪುರ	
ಬಿಳಿಗೋಟು	28,901-32,859
ಚಾಲಿ	36,309-38,699
ಕೋಕ	27,019-30,219
ರಾಶಿ	41,699-43,209
ತಟ್ಟಿಬೆಟ್ಟೆ	33,699-41,899
ಶಿರಸಿ	
ಬೆಟ್ಟೆ	34,699-39,701
ಬಿಳಿಗೋಟು	17,676-39,699
ಚಾಲಿ	32,119-40,699
ರಾಶಿ	41,500-43,789
ಯಲ್ಲಾಪುರ	
ಬಿಳಿಗೋಟು	26,099-32,369
ಚಾಲಿ	35,801-39,999
ಕೋಕ	17,109-27,201
ಕೆಂಪುಗೋಟು	25,276-32,099
ರಾಶಿ	41,119-48,399
ತಟ್ಟಿಬೆಟ್ಟೆ	36,819-40,190

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,100	13100	13200	168.15 ಸೆಂಟ್ಸ್
ಎಸಿ	6,440	6700	6200	
ಆರ್‌ಪಿ	8,000	8500	8500	ಲಂಡನ್
ಆರ್‌ಸಿ	4,450	4200	4200	1915 ಡಾಲರ್ಸ್

ಭಾರತದ ಅಭಿವೃದ್ಧಿಯು ಜನರ ದೃಷ್ಟಿ, ಆಕಾಂಕ್ಷೆ ಆಧರಿಸಿದೆ: ಭಾಗವತ್

ಮುಂಬೈ: 'ಭಾರತದ ಅಭಿವೃದ್ಧಿಯು ಇಲ್ಲಿನ ಜನರ ದೃಷ್ಟಿಕೋನ ಮತ್ತು ಅವರ ಆಕಾಂಕ್ಷೆಗಳ ಮೇಲೆ ಅವಲಂಬಿತವಾಗಿದೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಮುಂಬೈನಲ್ಲಿ ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಭಾರತವು ಅಮೆರಿಕ ಅಥವಾ ಚೀನಾವನ್ನು ನೋಡಿ ಅಭಿವೃದ್ಧಿಯಾಗಬೇಕು ಎನ್ನುವುದು ಅಭಿವೃದ್ಧಿಯಲ್ಲ. ಹಾಗೆ ಅಭಿವೃದ್ಧಿ ಹೊಂದಿದರೆ ಭಾರತವು, ಚೀನಾ ಮತ್ತು ಅಮೆರಿಕದಂತೆ ಆಗುತ್ತದೆ. ಭಾರತದ ಅಭಿವೃದ್ಧಿಯು ಇಲ್ಲಿನ ಜನರ ಪರಿಸ್ಥಿತಿ ಮತ್ತು ಆಕಾಂಕ್ಷೆಗಳ ಮೇಲೆ ಅವಲಂಬಿತವಾಗಿದ್ದು, ನಮ್ಮ ಸಂಸ್ಕೃತಿ ಮತ್ತು ಪ್ರಪಂಚದ ಕಡೆಗೆ ನಮ್ಮ ದೃಷ್ಟಿಕೋನವನ್ನೂ ಆಧರಿಸಿದೆ' ಎಂದರು.

'ಮನುಷ್ಯನನ್ನು ಸಮೃದ್ಧಿಯನ್ನಾಗಿಸುವ, ಆದರೆ ಪ್ರಕೃತಿಯನ್ನು ನಾಶ ಮಾಡುವ ಧರ್ಮವು ಧರ್ಮವಲ್ಲ. ಭಾರತವು ಬಲಶಾಲಿಯಾದರೆ ನಾವು ಚೀನಾ ಅಥವಾ ಅಮೆರಿಕದಂತೆ 'ದಂಡ' ಪ್ರಯೋಗಿಸುವುದಿಲ್ಲ. ಭಾರತದ ಅಭಿವೃದ್ಧಿಯ ಮಾದರಿಯು ತನ್ನನ್ನು ತಾನು ಅಭಿವೃದ್ಧಿಪಡಿಸಿಕೊಳ್ಳುವುದಾಗಿದೆ ಹಾಗೂ ಇತರ ದೇಶಗಳು ಪರಸ್ಪರ ಹೋರಾಟ ಮಾಡಲು ಅವಕಾಶ ನೀಡುವುದಿಲ್ಲ. ಭಾರತದ ಪ್ರಗತಿ ಎಂದರೆ ಇಡೀ ಜಗತ್ತಿನ ಪ್ರಗತಿ' ಎಂದೂ ಹೇಳಿದ್ದಾರೆ.

'ಈಗ ನಮಗೆ ಜಿ–20 ಅಧ್ಯಕ್ಷ ಸ್ಥಾನದ ಆತಿಥ್ಯ ವಹಿಸಿಕೊಳ್ಳುವಂತೆ ಕೇಳಲಾಗಿದೆ. ನಾವು ರಷ್ಯಾಕ್ಕೆ ಉಕ್ರೇನ್‌ನೊಂದಿಗೆ ಯುದ್ಧ ಮುಂದುವರಿಸಬೇಡಿ ಎಂದು ಹೇಳುತ್ತಿದ್ದೇವೆ. ಅದೀಗ ಭಾರತವು ಉತ್ತಮ ದೇಶವೆಂದು ಹೇಳುತ್ತಿದೆ. ಇದೇ ಮಾತನ್ನು ನಾವು ಈ ಹಿಂದೆ ಹೇಳಿದ್ದರೆ, ರಷ್ಯಾ ನಮ್ಮ ಬಾಯಿ ಮುಚ್ಚಿಸುತ್ತಿತ್ತು. ಇದು ಭಾರತವು ಬೆಳೆಯುತ್ತಿದೆ ಹಾಗೂ ಭಾರತೀಯರ ಖ್ಯಾತಿಯು ಬೆಳೆಯುತ್ತಿರುವುದನ್ನು ತೋರಿಸುತ್ತದೆ' ಎಂದರು.

'ಕೋಳಿ ಫಾರಂಗಳಿಂದ ಪರಿಸರ ಸಮಸ್ಯೆ ಸಾಧ್ಯತೆ'

ನವದೆಹಲಿ (ಪಿಟಿಐ): ಕೋಳಿ ಫಾರಂಗಳಿಂದ ಪರಿಸರ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ ಎಂದು ಹೇಳಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ಇದೇ 16ರಂದು ತಾನು ನೀಡಿದ್ದ ಆದೇಶ ಮರುಪರಿಷ್ಕರಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸೋಮವಾರ ವಜಾಗೊಳಿಸಿದೆ.

'5 ಸಾವಿರಕ್ಕಿಂತಲೂ ಹೆಚ್ಚು ಕೋಳಿಗಳನ್ನು ಹೊಂದಿರುವ ಫಾರಂಗಳು ಪರಿಸರ ಹಾಗೂ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ಕಾರಣವಾಗಬಲ್ಲವು. ಹೀಗಾಗಿ ಇಂತಹ ಫಾರಂಗಳು ಸ್ಥಳೀಯ ಆಡಳಿತಗಳಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು' ಎಂದು ಎನ್‌ಜಿಟಿ ತನ್ನ ಆದೇಶದಲ್ಲಿ ತಿಳಿಸಿತ್ತು.

ಈ ಆದೇಶ ಪರಿಷ್ಕರಿಸುವಂತೆ ಕೋರಿ ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ (ಎನ್‌ಇಸಿಸಿ) ಹಾಗೂ ಪೌಲ್ಟ್ರಿ ಫಾರ್ಮರ್ಸ್ ಆ್ಯಂಡ್ ಬ್ರೀಡರ್ಸ್ ಅಸೋಸಿಯೇಷನ್ ಅರ್ಜಿ ಸಲ್ಲಿಸಿದ್ದವು.

'ಟ್ವಿಟರ್ ಸಿಇಒ ಸ್ಥಾನಕ್ಕೆ ಮಸ್ಕ್ ಬೇಡ'

ನ್ಯೂಯಾರ್ಕ್ (ರಾಯಿಟರ್ಸ್/ಪಿಟಿಐ): ಟ್ವಿಟರ್ ಸಂಸ್ಥೆಯ ಸಿಇಒ ಸ್ಥಾನದಿಂದ ಇಲಾನ್ ಮಸ್ಕ್ ಕೆಳಗಿಳಿಯುವುದು ಸೂಕ್ತವೆಂದು ಹೆಚ್ಚಿನ ಬಳಕೆದಾರರು ಸಮೀಕ್ಷೆಯಲ್ಲಿ ಮತ ಚಲಾಯಿಸಿದ್ದಾರೆ.

ಟ್ವಿಟರ್‌ನ ಮಾಲೀಕತ್ವ ಪಡೆದ 2 ತಿಂಗಳಲ್ಲೇ ಶತಕೋಟ್ಯಧಿಪತಿ ಮಸ್ಕ್ ಅವರಿಗೆ ಇದೊಂದು ಭಾರಿ ಹಿನ್ನಡೆ ಎನ್ನಲಾಗುತ್ತಿದೆ. ಭಾನುವಾರ ಸಂಜೆ ಆರಂಭವಾದ ಈ ಸಮೀಕ್ಷೆಯಲ್ಲಿ 1.75 ಕೋಟಿ ಬಳಕೆದಾರರು ಮತ ಚಲಾಯಿಸಿದರು. ಸಿಇಒ ಸ್ಥಾನ ತೊರೆಯಲು ಶೇ57.5 ಬಳಕೆದಾರರು ಮತ ಚಲಾಯಿಸಿದರೆ, ಶೇ 42.5 ಬಳಕೆದಾರರು ಸಿಇಒ ಸ್ಥಾನ ತೊರೆಯಬಾರದೆಂದು ಮತ ಚಲಾಯಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

TOYOTA, ಬ್ರಿಟಾನಿಯಾ, ಟಾಟಾಮೋಟಾರ್ಸ್, ಬಿಗ್‌ಬಜಾರ್‌ಗಳಿಗೆ 5th,10th,PUC, Degree, ITI, Diplomaದವರು ನೇರನೇಮಕಾತಿಯಿದೆ. 18,000 -56,000/-. ವಸತಿಯೂಟವಿದೆ. 9902869769

ಬೇಕಾಗಿದ್ದಾರೆ: ELECTRICAL Diploma ಆಗಿರುವ 6 ರಿಂದ 8 ವರ್ಷಗಳ ಅನುಭವವಿರುವ ಯುವಕರು ಸೋಲಾರ್ ಇನ್ಸ್ಟಾಲೇಷನ್, ಡಿಸೈನ್ ಎಷ್ಟಿಮೇಷನ್ ಮತ್ತು DRC CONGO ಸೂಪರ್ವಿಷನ್ ಕೆಲಸಕ್ಕೆ 2 ವರ್ಷಗಳ ಒಪ್ಪಂದದ ಮೇರೆಗೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಹಾಗೂ ಭತ್ಯೆ ಇರುತ್ತದೆ... Send resume to ssel3415@gmail.com

ಮಂಗಳೂರಿನ ಪ್ರತಿಷ್ಠಿತ ಗಾಲ್ಫ್ ಕ್ಲಬ್ ಗೆ ಬೇಕಾಗಿದ್ದಾರೆ. ಹೋಟೆಲ್ ಮ್ಯಾನೇಜರ್ / ಕ್ಲಬ್ ಮ್ಯಾನೇಜರ್. ಸಂಪರ್ಕಿಸಿರಿ : +918779020770.

ಆಯುರ್ವೇದ ಕಂಪನಿಗೆ ಉದ್ಯೋಗಿ /ನಿರುದ್ಯೋಗಿ, ಪುರುಷ /ಮಹಿಳೆ ಅಗತ್ಯವಿದೆ, 25000/- ರಿಂದ 30000/- ಪ್ರತಿ ತಿಂಗಳು ಗಳಿಸಿ, ಸಂಪರ್ಕಿಸಿ. 9040578922

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611224833/ 9611225344

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜೀವವೈವಿಧ್ಯ ಸಂರಕ್ಷಣೆಗೆ ಆರ್ಥಿಕ ನೆರವು ಹೆಚ್ಚಳ

ಮಾಂಟ್ರಿಯಲ್, ಕೆನಡಾ (ಎಪಿ): ಜಗತ್ತಿನ ಜೀವವೈವಿಧ್ಯ ಸಂರಕ್ಷಿಸಲು ಶ್ರೀಮಂತ ದೇಶಗಳು ಅಭಿವೃದ್ಧಿಶೀಲ ದೇಶಗಳಿಗೆ ನೀಡುವ ಹಣಕಾಸು ನೆರವಿನ ಮೊತ್ತ ಹೆಚ್ಚಿಸುವ ಐತಿಹಾಸಿಕ ನಿರ್ಣಯಗಳನ್ನು ವಿಶ್ವಸಂಸ್ಥೆ ಜೀವವೈವಿಧ್ಯ ಸಮ್ಮೇಳನದಲ್ಲಿ (ಸಿಒಪಿ 15) ತೆಗೆದುಕೊಳ್ಳಲಾಗಿದೆ.

ವಿಶ್ವದಾದ್ಯಂತ ಭೂಮಿ ಮತ್ತು ಸಾಗರಗಳನ್ನು ರಕ್ಷಿಸುವ ಉದ್ದೇಶಕ್ಕೆ ಆರ್ಥಿಕ ನೆರವನ್ನು 2025ರ ಒಳಗೆ ವಾರ್ಷಿಕ 1.6 ಲಕ್ಷ ಕೋಟಿಗೆ ಮತ್ತು 2030ರ ವೇಳೆಗೆ ₹2.4 ಲಕ್ಷ ಕೋಟಿಗೆ ಹೆಚ್ಚಿಸುವ ಮಹತ್ವದ ಒಪ್ಪಂದಕ್ಕೆ ಬರುವಲ್ಲಿ ಪ್ರಮುಖ ರಾಷ್ಟ್ರಗಳ ಪ್ರತಿನಿಧಿಗಳು ಸೋಮವಾರ ಯಶಸ್ವಿಯಾದರು.

ಸದ್ಯ ಶೇ 17ರಷ್ಟು ಭೂಪ್ರದೇಶ ಮತ್ತು ಶೇ 10ರಷ್ಟು ಕರಾವಳಿ ಪ್ರದೇಶ ಸಂರಕ್ಷಿಸಲಾಗಿದೆ. 2030ರ ವೇಳೆಗೆ ಜೀವವೈವಿಧ್ಯದ ರಕ್ಷಣೆಗಾಗಿ ಶೇ 30ರಷ್ಟು ನೆಲ, ಜಲ ಸಂರಕ್ಷಣೆಗೆ ಆದ್ಯತೆ ನೀಡುವುದು ಈ ಒಪ್ಪಂದದ ಮುಖ್ಯಾಂಶಗಳಲ್ಲಿ ಒಂದಾಗಿದೆ.

ಈ ಬಾರಿಯ ಸಮ್ಮೇಳನದ ಅಧ್ಯಕ್ಷತೆ ವಹಿಸಿರುವ ಚೀನಾ, ಜೀವವೈವಿಧ್ಯ ಸಂರಕ್ಷಣೆಗೆ ಸಂಬಂಧಿಸಿ ಕರಡು ಬಿಡುಗಡೆ ಮಾಡಿತು. ಆದರೆ ಈ ಕರಡು ಅನುಷ್ಠಾನಕ್ಕೆ ಬರಲು 196 ಸದಸ್ಯ ರಾಷ್ಟ್ರಗಳು ಒಪ್ಪಿಗೆ ನೀಡಬೇಕಿದೆ.

'ಜೀವವೈವಿಧ್ಯ ಸಂರಕ್ಷಣೆಗೆ ಇಷ್ಟೊಂದು ದೊಡ್ಡ ಮಟ್ಟದ ಗುರಿಯನ್ನು ಈವರೆಗೂ ಹೊಂದಿರಲಿಲ್ಲ' ಎಂದು ದಿ ಕನ್ಸರ್ವೇಷನ್ ಗ್ರೂಪ್ ಕ್ಯಾಂಪೇನಿಂಗ್ ಫಾರ್ ನೇಚರ್ ಸಂಸ್ಥೆಯ ನಿರ್ದೇಶಕ ಬ್ರಿಯಾನ್ ಒ ಡೊನೆಲ್ ಹೇಳಿದ್ದಾರೆ.

ಮೋದಿಗೆ ಸಿಐಎ ಮುಖ್ಯಸ್ಥ ಪ್ರಶಂಸೆ



ವಾಷಿಂಗ್ಟನ್ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್ ಯುದ್ಧದಲ್ಲಿ ಅಣ್ವಸ್ತ್ರ ಬಳಕೆ ಸಾಧ್ಯತೆ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದು ರಷ್ಯಾದ ಮೇಲೆ ಪ್ರಭಾವ ಬೀರಿದೆ. ಇದರಿಂದ ಜಾಗತಿಕ ಅಣು ಸಂಘರ್ಷದ ದುರಂತ ತಪ್ಪಿದೆ ಎಂದು ಅಮೆರಿಕದ ಕೇಂದ್ರ ಗುಪ್ತಚರ ಏಜೆನ್ಸಿ (ಸಿಐಎ) ಮುಖ್ಯಸ್ಥ ವಿಲಿಯಂ ಬರ್ನ್ಸ್ ಪ್ರಶಂಸಿಸಿದ್ದಾರೆ.

ಭಾರತದ ಪ್ರಧಾನಿ ಮೋದಿ ಅವರ ಜತೆಗೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಕೂಡ ಅಣ್ವಸ್ತ್ರಗಳ ಬಳಕೆಯ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದ್ದು ಉಪಯುಕ್ತವಾಯಿತು. ಅದು ರಷ್ಯನ್ನರ ಮೇಲೆ ಪರಿಣಾಮ ಬೀರಿರುವುದಾಗಿ ಭಾವಿಸಿರುವೆ ಎಂದು ಬರ್ನ್ಸ್ ಅವರು ಅಮೆರಿಕದ ಸಾರ್ವಜನಿಕ ಪ್ರಸಾರ ಸೇವೆಗೆ ತಿಳಿಸಿದರು.

'ನನ್ನ ಪ್ರಕಾರ, ಅತ್ಯಂತ ಅಪಾಯಕಾರಿ ಅಣ್ವಸ್ತ್ರ ಬಳಕೆ ಬೆದರಿಕೆ ಸೃಷ್ಟಿಸಿದವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಅವರ ಸುತ್ತಲಿನವರು. ಅಣ್ವಸ್ತ್ರ ಬೆದರಿಕೆಯ ಗಂಭೀರ ಅಪಾಯಗಳೇನೆಂಬುದನ್ನು ಅಮೆರಿಕವು ರಷ್ಯನ್ನರಿಗೆ ಸ್ಪಷ್ಟವಾಗಿ ಮನದಟ್ಟು ಮಾಡಿಸಿದೆ. ಯುದ್ಧತಂತ್ರದ ಅಣ್ವಸ್ತ್ರಗಳನ್ನು ಬಳಸುವ ಯೋಜನೆಗಳ ಬಗ್ಗೆ ಇಂದು ನಮಗೆ ಯಾವುದೇ ಸ್ಪಷ್ಟ ಪುರಾವೆಗಳು ಕಾಣುತ್ತಿಲ್ಲ' ಎಂದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ಕೀವ್ ಮೇಲೆ ಮತ್ತೆ ಡ್ರೋನ್ ಆರ್ಭಟ

ಕೀವ್/ಮಾಸ್ಕೊ (ಎಪಿ/ಎಎಫ್‌ಪಿ): ಉಕ್ರೇನ್ ಮೇಲಿನ ಆಕ್ರಮಣಕ್ಕೆ ಭೂಮಿಕೆ ಒದಗಿಸಿದ ತನ್ನ ಮಿತ್ರ ರಾಷ್ಟ್ರ ಬೆಲರೂಸ್ ಭೇಟಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸಿದ್ಧತೆಯಲ್ಲಿರುವಾಗಲೇ ಉಕ್ರೇನ್ ರಾಜಧಾನಿ ಕೀವ್ ನಗರದಲ್ಲಿ ರಷ್ಯಾದ ಡ್ರೋನ್‌ಗಳು ಘಾತಕ ದಾಳಿ ನಡೆಸಿವೆ.

ಇಡೀ ಕೀವ್ ನಗರವು ಭಾನುವಾರ ರಾತ್ರಿ ವೇಳೆ ಸ್ತಬ್ಧವಾಗಿದ್ದಾಗ ರಷ್ಯಾ ಸೇನೆಯ ಸ್ವಯಂ ಸ್ಫೋಟಿಸುವ ಡ್ರೋನ್‌ಗಳ ದಾಳಿ ನಡೆಸಿದೆ.

ಅಜೋವ್ ಸಮುದ್ರದ ಪೂರ್ವ ಭಾಗದಿಂದ ರಷ್ಯಾ ಹಾರಿಸಿದ ಸುಮಾರು 35 ಸ್ವಯಂ ಸ್ಫೋಟದ ಡ್ರೋನ್‌ಗಳಲ್ಲಿ 30 ಡ್ರೋನ್‌ಗಳನ್ನು ನಾಶಪಡಿಸಲಾಗಿದೆ ಎಂದು ಉಕ್ರೇನ್ ವಾಯು ಪಡೆಯು ಟೆಲಿಗ್ರಾಮ್‌ನಲ್ಲಿ ತಿಳಿಸಿದೆ.

ಮುಳುಗಿದ ಯುದ್ಧನೌಕೆ, 31 ಜನರಿಗಾಗಿ ಶೋಧ

ಬ್ಯಾಂಕಾಕ್ (ಎಪಿ): ಥಾಯ್ಲೆಂಡ್‌ನ ಎಚ್‌ಟಿಎಂಎಸ್ ಸುಖೋಥಾಯ್ ಹೆಸರಿನ ಯುದ್ಧ ನೌಕೆಯು ಭಾನುವಾರ ಮಧ್ಯರಾತ್ರಿ ಇಲ್ಲಿಯ ಬಾಂಗ್ ಸಫನ್ ಪಿಯೆರ್ ಕರಾವಳಿಯಲ್ಲಿ ಮುಳುಗಿದ್ದು, ಅದರಲ್ಲಿದ್ದ 75 ಜನರನ್ನು ಸೋಮವಾರ ಮಧ್ಯಾಹ್ನದ ವೇಳೆಗೆ ರಕ್ಷಿಸಲಾಗಿದೆ. ಇನ್ನೂ 31 ಜನರು ಕಾಣೆಯಾಗಿದ್ದು, ರಕ್ಷಣಾ ಕಾರ್ಯಾಚರಣೆ ಜಾರಿಯಲ್ಲಿದೆ ಎಂದು ನೌಕಾಪಡೆ ತಿಳಿಸಿದೆ.

ಅಲೆಗಳು ರಭಸದಿಂದ ಅಪ್ಪಳಿಸಿದ್ದೇ ನೌಕೆ ಮುಳುಗಲು ಕಾರಣ ಎಂದು ಹೇಳಲಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

ಮಹಾ ಮೇಳಾವ್‌ಗೆ ತಡೆ

ಒಂದನೇ ಪುಟದಿಂದ

ಪೊಲೀಸರ ಸರ್ಪಗಾವಲು ಭೇದಿಸಿ ನುಗ್ಗಲು ಯತ್ನಿಸಿದಾಗ ಲಘು ಲಾಠಿಚಾರ್ಜ್ ಮಾಡಿದರು.

ಎನ್‌ಸಿಪಿ ಮುಖಂಡ, ಶಾಸಕ ಹಸನ್ ಮುಶ್ರಿಫ್, ಶಿವಸೇನೆ (ಯು) ಕೊಲ್ಹಾಪುರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ್ ದೇವಣೆ, ಪ್ರತಾಪ್ ಮಾನೆ, ಸುನೀಲ ಮಾಳಿ, ಸಚಿನ ಚವ್ಹಾಣ ಸೇರಿ 200ಕ್ಕೂ ಹೆಚ್ಚು ಕಾರ್ಯಕರ್ತರನ್ನು ಮಹಾರಾಷ್ಟ್ರದ ಪೊಲೀಸರೇ ವಶಕ್ಕೆ ಪಡೆದುಕೊಂಡರು.

ಮತ್ತೊಂದೆಡೆ, ಮಹಾರಾಷ್ಟ್ರದ ಚಂದಗಡ ತಾಲ್ಲೂಕಿನ ಶಿನೋಳಿಯಿಂದ ಬೆಳಗಾವಿಗೆ ಬರಲು ಮಹಾ ವಿಕಾಸ್ ಅಘಾಡಿ ನಾಯಕರು ಯತ್ನಿಸಿದರು. ಗಡಿಯಂಚಿನ ಬಾಚಿ ಬಳಿ ಅವರನ್ನು ತಡೆದು ವಾಪಸ್ ಕಳುಹಿಸಲಾಯಿತು.

ಗಡಿ ಬಿಕ್ಕಟ್ಟು: ಭಾರತ– ಜಪಾನ್ ಸಮ್ಮೇಳನದಲ್ಲಿ ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಸ್ಪಷ್ಟನೆ

ಯಥಾಸ್ಥಿತಿ ಬದಲಿಸುವ ಚೀನಾ ಯತ್ನಕ್ಕೆ ಕಡಿವಾಣ

ನವದೆಹಲಿ (ಪಿಟಿಐ): 'ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಕಾಯ್ದುಕೊಂಡಿರುವ ಯಥಾಸ್ಥಿತಿಯನ್ನು ಬದಲಿಸುವ ಚೀನಾದ ಏಕಪಕ್ಷೀಯ ಪ್ರಯತ್ನಕ್ಕೆ ಭಾರತೀಯ ಸೇನೆ ಕಡಿವಾಣ ಹಾಕಲಿದೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಸ್ಪಷ್ಟಪಡಿಸಿದ್ದಾರೆ.

'ಇಂಡಿಯಾ ಟುಡೆ' ಹಮ್ಮಿಕೊಂಡಿದ್ದ ಭಾರತ–ಜಪಾನ್ ಸಮ್ಮೇಳನದಲ್ಲಿ ಸೋಮವಾರ ಮಾತನಾಡಿದ ಅವರು, 'ಗಡಿಯಲ್ಲಿ ಚೀನಾ ಹೆಚ್ಚಿನ ಸಂಖ್ಯೆಯ ಸೈನಿಕರನ್ನು ನಿಯೋಜಿಸಿದೆ. ಆ ದೇಶಕ್ಕೆ ಪ್ರತ್ಯುತ್ತರ ನೀಡುವ ಉದ್ದೇಶದಿಂದಲೇ ಚೀನಾ ಗಡಿಯಲ್ಲಿ ನಾವೂ ಕೂಡ ಸೇನಾಪಡೆ ನಿಯೋಜಿಸಿದ್ದೇವೆ' ಎಂದು ಹೇಳಿದ್ದಾರೆ.

ಚೀನಾವು ಭಾರತದ ಭೂ ಪ್ರದೇಶವನ್ನು ಆಕ್ರಮಿಸಿಕೊಂಡಿದೆ. ಈ ವಿಚಾರವನ್ನು ಕೇಂದ್ರ ಸರ್ಕಾರ ಮುಚ್ಚಿಡುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದರು.

ಎಸ್‌.ಜೈಶಂಕರ್

ಇದಕ್ಕೆ ಪ್ರತಿಕ್ರಿಯಿಸಿರುವ ಜೈಶಂಕರ್, 'ಚೀನಾದ ಪ್ರಯತ್ನಗಳನ್ನು ನಾವು ಕಡೆಗಣಿಸಿಲ್ಲ. ಹಾಗೊಮ್ಮೆ ನಿರ್ಲಕ್ಷಿಸಿದ್ದರೆ ನಮ್ಮ ಸೇನಾ ಪಡೆ ಅಲ್ಲೇಕೆ ಹೋಗುತ್ತಿತ್ತು. ರಾಹುಲ್ ಗಾಂಧಿ ಟೀಕಿಸಿದ್ದಾರೆ ಎಂಬ ಕಾರಣಕ್ಕೆ ಗಡಿಯಲ್ಲಿ ಸೇನಾ ಪಡೆ ನಿಯೋಜಿಸಿಲ್ಲ. ಪ್ರಧಾನಿ ಮೋದಿ ಅವರ ಆದೇಶದ ಅನುಸಾರ ಈ ನಿರ್ಧಾರ ಕೈಗೊಂಡಿದ್ದೇವೆ' ಎಂದು ಹೇಳಿದ್ದಾರೆ.

'ಜನ ಏನು ಬೇಕಾದರೂ ಹೇಳುತ್ತಾರೆ. ಅವು ನಂಬಲು ಅರ್ಹವಾಗಿಲ್ಲದಿರಬಹುದು. ಚೀನಾ ಸೇರಿದಂತೆ ಯಾವ ರಾಷ್ಟ್ರವೂ ಎಲ್‌ಎಸಿ ಬಳಿಯ ಯಥಾಸ್ಥಿತಿಗೆ ಭಂಗ ಉಂಟುಮಾಡುವುದಕ್ಕೆ ಅವಕಾಶ ನೀಡುವುದಿಲ್ಲ. ಇದು ದೇಶದ ಬಾಧ್ಯತೆ. ನಮ್ಮ ಸೇನಾ ಪಡೆಯ ಕರ್ತವ್ಯ ಹಾಗೂ ಬದ್ಧತೆಯಾಗಿದೆ' ಎಂದು ಅವರು ತಿಳಿಸಿದ್ದಾರೆ.

> ಬಿಜೆಪಿ ಸರ್ಕಾರ ದೇಶದ ಹೊರಗೆ ತನ್ನನ್ನು ಸಿಂಹವೆಂದು ಬಿಂಬಿಸಿಕೊಳ್ಳುತ್ತದೆ. ಕ್ರಿಯೆಯ ವಿಚಾರದಲ್ಲಿ ಅದು ಇಲಿಯಂತೆ. ಚೀನಾಕ್ಕೆ ಪ್ರತ್ಯುತ್ತರ ನೀಡಲು ಅದಕ್ಕೆ ಆಗುತ್ತಿಲ್ಲ
> **ಮಲ್ಲಿಕಾರ್ಜುನ ಖರ್ಗೆ**, ಕಾಂಗ್ರೆಸ್ ಅಧ್ಯಕ್ಷ

ಗಡಿ ಬಿಕ್ಕಟ್ಟಿನ ಹೊರತಾಗಿಯೂ ಭಾರತವು ಚೀನಾ ಜೊತೆಗಿನ ವ್ಯಾಪಾರ ವೃದ್ಧಿಸಿಕೊಂಡಿರುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಟೀಕಿಸಿದ್ದರು. ಈ ಕುರಿತು ಪ್ರತಿಕ್ರಿಯಿಸಿರುವ ಅವರು, 'ಭಾರತವು ಚೀನಾದಿಂದ ಹಲವು ಉತ್ಪನ್ನಗಳನ್ನು ನಿರಂತರವಾಗಿ ಆಮದು ಮಾಡಿಕೊಳ್ಳುತ್ತಿದೆ. ಇದು 30 ವರ್ಷಗಳ ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ' ಎಂದು ಹೇಳಿದ್ದಾರೆ.

'ಪಾಕ್‌ನಿಂದ ದೊಡ್ಡ ಮಟ್ಟದ ನಿರೀಕ್ಷೆ ಇಲ್ಲ'

'ಪಾಕಿಸ್ತಾನದಿಂದ ಭಾರತವು ದೊಡ್ಡ ಮಟ್ಟದ ನಿರೀಕ್ಷೆಯನ್ನೇನೂ ಇಟ್ಟುಕೊಂಡಿಲ್ಲ' ಎಂದು ಜೈಶಂಕರ್ ಅವರು ಹೇಳಿದ್ದಾರೆ.

ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವೈಯಕ್ತಿಕ ನೆಲೆಗಟ್ಟಿನಲ್ಲಿ ವಾಗ್ದಾಳಿ ನಡೆಸಿದ್ದರ ಕುರಿತು ಪ್ರತಿಕ್ರಿಯಿಸಿರುವ ಅವರು, 'ಜರ್ದಾರಿ ಹೇಳಿಕೆ ಅನಾಗರಿಕವಾದುದ್ದು ಎಂದು ನನ್ನ ಸಚಿವಾಲಯ ಸ್ಪಷ್ಟವಾಗಿ ಹೇಳಿದೆ. ಜರ್ದಾರಿ ಅವರನ್ನು ನಾವು ಹೇಗೆ ಕಾಣುತ್ತೇವೆ ಎಂಬುದಕ್ಕೆ ಇದೇ ಸಾಕ್ಷಿ' ಎಂದು ತಿಳಿಸಿದ್ದಾರೆ.

ರಾಹುಲ್ ಗಾಂಧಿ ಪದ ಪ್ರಯೋಗಕ್ಕೆ ಆಕ್ಷೇಪ

ತವಾಂಗ್‌ನಲ್ಲಿ ನಡೆದಿದ್ದ ಭಾರತ–ಚೀನಾ ಸೇನಾ ಸಂಘರ್ಷದ ಕುರಿತು ಮಾತನಾಡಿದ್ದ ರಾಹುಲ್ ಗಾಂಧಿ ಅವರು ಚೀನಾ ಯೋಧರು ನಮ್ಮ ಸೈನಿಕರನ್ನು ಹಿಡಿದು ಹೊಡೆದಿದ್ದಾರೆ ಎಂದು ಆರೋಪಿಸಿದ್ದರು. ರಾಹುಲ್ 'ಹೊಡೆದಿದ್ದರು' ಎಂಬ ಪದ ಪ್ರಯೋಗಿಸಿರುವುದಕ್ಕೆ ಜೈಶಂಕರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಸಂಘರ್ಷದ ವೇಳೆ ನಮ್ಮ ಯೋಧರು ಚೀನಾ ಸೈನಿಕರಿಗೆ ದಿಟ್ಟ ಉತ್ತರ ನೀಡಿದ್ದಾರೆ. ಅದನ್ನು ನಾವು ಪ್ರಶಂಸಿಸಬೇಕು. ಸರ್ಕಾರದ ನಿಲುವುಗಳನ್ನು ಟೀಕಿಸುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ದೇಶ ಕಾಯುವ ಯೋಧರ ಬಗ್ಗೆ ನೇರ ಅಥವಾ ಪರೋಕ್ಷ ಟೀಕೆ ತರವಲ್ಲ' ಎಂದಿದ್ದಾರೆ.

ಸಶಸ್ತ್ರ ಪಡೆಗಳ ನೈತಿಕ ಬಲ ಕುಗ್ಗಿಸುತ್ತಿರುವ ಕಾಂಗ್ರೆಸ್: ಆರೋಪ

ನವದೆಹಲಿ (ಪಿಟಿಐ): ಗಡಿಭಾಗದಲ್ಲಿ ಚೀನಾದ ಅತಿಕ್ರಮಣ ಕುರಿತು ಚರ್ಚೆಗೆ ಸಭಾಪತಿ ಜಗದೀಪ್ ಧನಕರ್ ಅವರು ಅನುಮತಿ ನೀಡದ ಕಾರಣ, ರಾಜ್ಯಸಭೆಯ ಕಲಾಪದಿಂದ ಸೋಮವಾರ ಕಾಂಗ್ರೆಸ್, ಎಡ, ಡಿಎಂಕೆ ಸೇರಿದಂತೆ ಇತರ ವಿರೋಧಪಕ್ಷಗಳು ಹೊರನಡೆದವು.

ನಿಯಮ 267ರ ಅಡಿಯಲ್ಲಿ ಎಲ್ಲಾ ಒಂಬತ್ತು ನೋಟಿಸ್‌ಗಳು ಕ್ರಮಬದ್ಧವಾಗಿಲ್ಲ ಎನ್ನುವ ಕಾರಣ ನೀಡಿ ಧನಕರ್ ಅವರು ಚರ್ಚೆಗೆ ಅವಕಾಶ ನಿರಾಕರಿಸಿದರು.

'ರಾಷ್ಟ್ರೀಯ ಭದ್ರತೆಯಂಥ ಸೂಕ್ಷ್ಮ ವಿಷಯಗಳನ್ನು ರಾಜಕೀಯಗೊಳಿಸಬಾರದು' ಎಂದು ಬಿಜೆಪಿ ಹೇಳಿತು.

ರಾಜ್ಯಸಭೆಯ ನಾಯಕ ಹಾಗೂ ಬಿಜೆಪಿಯ ಹಿರಿಯ ಮುಖಂಡ ಪೀಯೂಷ್ ಗೋಯಲ್ ಅವರು, '2004 ಮತ್ತು 2014ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಆಡಳಿತವಿದ್ದಾಗ ಸಂಸತ್ತಿನಲ್ಲಿ ಸೂಕ್ಷ್ಮ ವಿಷಯಗಳ ಬಗ್ಗೆ ಚರ್ಚೆಗೆ ಅನುಮತಿ ನೀಡದಿರುವ ಹಾಗೂ ಈ ಕುರಿತು ಸ್ಪಷ್ಟೀಕರಣಕ್ಕೆ ಹಲವು ಬೇಡಿಕೆಗಳನ್ನು ಮಂಡಿಸಿದ ನಿದರ್ಶನವಿದೆ' ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಗೋಯಲ್, 'ಸಂಸತ್ತಿನ ನಿಯಮಗಳು ಮತ್ತು ನಿಬಂಧನೆಗಳನ್ನು ಗೌರವಿಸುವುದು ಹಾಗೂ ಸಭಾಪತಿಯ ನಿರ್ಣಯಗಳಿಗೆ ಸ್ವಲ್ಪವೂ ಗಮನ ಕೊಡದಂಥ ಹತಾಶೆಯ ಸ್ಥಿತಿಗೆ ವಿಪಕ್ಷಗಳು ತಲುಪಿರುವುದು ದುರದೃಷ್ಟಕರ' ಎಂದು ಹೇಳಿದರು.

ಕೇಂದ್ರೀಯ ವಿದ್ಯಾಲಯ: ರಾಜ್ಯದಲ್ಲಿ ಸಾವಿರಕ್ಕೂ ಅಧಿಕ ಹುದ್ದೆಗಳು ಖಾಲಿ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ 1,053 ಹುದ್ದೆಗಳು ಸೇರಿ ದೇಶದಾದ್ಯಂತ ಕೇಂದ್ರೀಯ ವಿದ್ಯಾಲಯಗಳಲ್ಲಿ 14 ಸಾವಿರಕ್ಕೂ ಅಧಿಕ ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಖಾಲಿ ಇವೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಈ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಕೇಂದ್ರ ಶಿಕ್ಷಣ ಖಾತೆಯ ರಾಜ್ಯ ಸಚಿವೆ ಅನ್ನಪೂರ್ಣ ದೇವಿ, 'ಖಾಲಿ ಹುದ್ದೆಗಳ ಭರ್ತಿಗೆ ಚಾಲನೆ ನೀಡಲಾಗಿದೆ. ಈ ಸಂಬಂಧ ಜಾಹೀರಾತು ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಬೆಟ್ಟ ಕುರುಬರಿಗೆ ಎಸ್‌ಟಿ ಸ್ಥಾನಮಾನ: ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ಕಾಡು ಕುರುಬರ ಜೊತೆಗೆ ಬೆಟ್ಟ ಕುರುಬರನ್ನೂ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರ್ಪಡೆ ಮಾಡುವ ಕುರಿತ ಮಸೂದೆಯನ್ನು ಲೋಕಸಭೆ ಸೋಮವಾರ ಅಂಗೀಕರಿಸಿದೆ.

'ಕರ್ನಾಟಕದಲ್ಲಿ ನೆಲೆಸಿರುವ ಬೆಟ್ಟ ಕುರುಬರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ 2022ರ ದಿ ಕಾನ್ಸ್‌ಟಿಟ್ಯೂಷನ್ (ಶೆಡ್ಯೂಲ್ ಟ್ರೈಬ್) ಆರ್ಡರ್ (4ನೇ ತಿದ್ದುಪಡಿ) ಮಸೂದೆ ಅಂಗೀಕರಿಸಲಾಗಿದೆ.

ಈ ಸಮುದಾಯದವರನ್ನು ಎಸ್‌ಟಿಗೆ ಸೇರ್ಪಡೆ ಮಾಡುವಂತೆ ಕರ್ನಾಟಕ ಸರ್ಕಾರ ಮನವಿ ಮಾಡಿಕೊಂಡಿತ್ತು' ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರು ತಿಳಿಸಿದ್ದಾರೆ.

ಕಿಸಾನ್ ಗರ್ಜನಾ ರ್‍ಯಾಲಿ

ನವದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ಸೋಮವಾರ ಆರ್‌ಎಸ್‌ಎಸ್ ಸಂಯೋಜಿತ ರೈತ ಸಂಘಟನೆ ಭಾರತ ಕಿಸಾನ್ ಸಂಘ (ಬಿಕೆಎಸ್) ಆಯೋಜಿಸಿದ್ದ 'ಕಿಸಾನ್ ಗರ್ಜನಾ' ರ್‍ಯಾಲಿಯಲ್ಲಿ ವಿವಿಧ ರಾಜ್ಯಗಳ ರೈತರು ಪಾಲ್ಗೊಂಡಿದ್ದರು. ಕೃಷಿ ಚಟುವಟಿಕೆಗಳಿಗೆ ವಿಧಿಸಿರುವ ಜಿಎಸ್‌ಟಿ ಹಿಂಪಡೆಯಬೇಕು ಎಂಬುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದರೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

'ಭ್ರಷ್ಟಾಚಾರ, ಹದಗೆಟ್ಟ ರಸ್ತೆಗಳು ಭಾರತದ ವಾಸ್ತವ'

ವಿಜಯನಗರಮ್ (ಆಂಧ್ರಪ್ರದೇಶ): 'ಭ್ರಷ್ಟಾಚಾರ, ಹದಗೆಟ್ಟ ರಸ್ತೆಗಳು ಮತ್ತು ಮಾಲಿನ್ಯವು ಭಾರತದ ವಾಸ್ತವವಾದರೆ, ಸ್ವಚ್ಛ ರಸ್ತೆ ಮತ್ತು ಮಾಲಿನ್ಯ ಇಲ್ಲದೇ ಇರುವುದು ಸಿಂಗಪುರದ ವಾಸ್ತವ' ಎಂದು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಹೇಳಿದ್ದಾರೆ.

ಆಂಧ್ರಪ್ರದೇಶದ ವಿಜಯನಗರಮ್ ಜಿಲ್ಲೆಯ ರಾಜಮ್‌ನಲ್ಲಿರುವ 'ಜಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಜಿಎಂಆರ್‌ಐಟಿ)ಯ ರಜತ ಮಹೋತ್ಸವದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಿಮ್ಮನ್ನು ನೀವು ನಾಯಕರನ್ನಾಗಿ ಕಲ್ಪಿಸಿಕೊಳ್ಳಿ. ಆ ಅವಕಾಶವನ್ನು ಬೇರೆಯವರು ಪಡೆದುಕೊಳ್ಳುವವರೆಗೆ ಕಾಯಬೇಡಿ' ಎಂದು ನಾರಾಯಣ ಮೂರ್ತಿ ಅವರು ಅಭಿಪ್ರಾಯಪಟ್ಟಿರುವುದಾಗಿ ಜಿಎಂಆರ್ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

ಸಮಿತಿಗೆ ಕಾಂಗ್ರೆಸ್‌ನ 11 ನಾಯಕರು

ನವದೆಹಲಿ (ಪಿಟಿಐ): ಕರ್ನಾಟಕ ಪ್ರದೇಶ ಚುನಾವಣಾ ಸಮಿತಿಗೆ ಕಾಂಗ್ರೆಸ್‌ನ 11 ಹೊಸ ನಾಯಕರ ಹೆಸರನ್ನು ಸೋಮವಾರ ಪ್ರಕಟಿಸಲಾಗಿದೆ.

'ಹೆಚ್ಚುವರಿ ಹೆಸರುಗಳನ್ನು ಸೇರಿಸುವುದಕ್ಕೆ ಕಾಂಗ್ರೆಸ್ ಅಧ್ಯಕ್ಷರು ಅನುಮೋದಿಸಿದ್ದು, ತಕ್ಷಣದಿಂದಲೇ ಇದು ಜಾರಿಗೆ ಬರಲಿದೆ' ಎಂದು ಪಕ್ಷದ ಮೂಲ ತಿಳಿಸಿದೆ.

ಪ್ರದೇಶ ಚುನಾವಣಾ ಸಮಿತಿಯಲ್ಲಿ ಬಿ.ಎಲ್.ಶಂಕರ್, ಪರಮೇಶ್ವರ್ ನಾಯ್ಕ, ಉಮಾಶ್ರೀ, ರಮೇಶ್ ಕುಮಾರ್, ರಮಾನಾಥ್ ರೈ, ಎಚ್.ಎಂ. ರೇವಣ್ಣ, ಎಎಂ ಹಿಂಡಸಗೇರಿ ಹೆಸರು ಜತೆಗೆ ರಾಜ್ಯ ಕಾಂಗ್ರೆಸ್ ಮುಖಂಡರಾದ ಜಮೀರ್ ಅಹಮದ್, ಶಿವಾನಂದ ಪಾಟೀಲ, ಶರಣಬಸಪ್ಪಗೌಡ ದರ್ಶನಾಪುರ, ಶರಣಪ್ರಕಾಶ್ ಪಾಟೀಲ ಅವರನ್ನೂ ಸಮಿತಿಗೆ ಸೇರಿಸಲಾಗಿದೆ.

ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): ಉನ್ನಾವ್ ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಉಚ್ಚಾಟಿತ ಬಿಜೆಪಿ ಶಾಸಕ ಕುಲದೀಪ್ ಸೆಂಗರ್ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಯ ವಿಚಾರಣೆಯಿಂದ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ತಲ್ವಂತ್ ಸಿಂಗ್ ಸೋಮವಾರ ಹಿಂದೆ ಸರಿದಿದ್ದಾರೆ.

ಈ ಅರ್ಜಿಯನ್ನು ಡಿಸೆಂಬರ್ 22ರಂದು ವಿಚಾರಣೆ ನಡೆಸಲು, ನ್ಯಾಯ ಮೂರ್ತಿಗಳಾದ ಸಿದ್ಧಾರ್ಥ್ ಮೃದುಲ್ ಮತ್ತು ತಲ್ವಂತ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು ಇನ್ನೊಂದು ನ್ಯಾಯಪೀಠಕ್ಕೆ ನಿರ್ದೇಶನ ನೀಡಿದೆ.

ಭಾರತ–ಪಾಕ್ ಯುದ್ಧದಲ್ಲಿ ಹೋರಾಡಿದ್ದ ನಿವೃತ್ತ ಯೋಧ ನಿಧನ

ಜೋಧ್‌ಪುರ/ನವದೆಹಲಿ (ಪಿಟಿಐ): 1971ರಲ್ಲಿ ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಕೆಚ್ಚೆದೆಯ ಹೋರಾಟ ನಡೆಸಿದ್ದ ವೀರ ಸೇನಾನಿ, ಲ್ಯಾನ್ಸ್ ನಾಯಕ್ ಭೈರೋನ್ ಸಿಂಗ್ ರಾಥೋರ್ (81) ಅವರು ಅನಾರೋಗ್ಯದಿಂದಾಗಿ ಸೋಮವಾರ ಜೋಧ್‌ಪುರದಲ್ಲಿ ನಿಧನರಾದರು.

'ವೀರ ಸೇನಾನಿ ಇಂದು ಜೋಧ್‌ಪುರದ ಎಐಐಎಂಎಸ್‌ನಲ್ಲಿ ತನ್ನ ಕೊನೆ ಉಸಿಯುಸಿರೆಳೆದರು' ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಟ್ವಿಟರ್‌ನಲ್ಲಿ ತಿಳಿಸಿದೆ.

1987ರಲ್ಲಿ ಸೇನೆಯಿಂದ ನಿವೃತ್ತಿ ಹೊಂದಿದ ರಾಥೋರ್ ಅವರು ಜೋಧ್‌ಪುರದಿಂದ ಸುಮಾರು 120 ಕಿ.ಮೀ. ದೂರದ ಸೋಲಂಕಿಯಾಟಲಾ ಗ್ರಾಮದಲ್ಲಿ ನೆಲೆಸಿದ್ದರು.

ಥಾರ್ ಮರುಭೂಮಿಯ ಲೊಂಗೆವಾಲಾ ಸೇನಾ ಠಾಣೆ ವ್ಯಾಪ್ತಿಯಲ್ಲಿ ಕರ್ತವ್ಯದಲ್ಲಿದ್ದ ರಾಥೋರ್ ಅವರು ಶತ್ರು ಸೈನಿಕರನ್ನು ಸದೆಬಡಿಯಲು ತೋರಿದ ಸಾಹಸ, ಶೌರ್ಯವನ್ನು ಬಿಂಬಿಸುವ, ನಟ ಸುನೀಲ್ ಶೆಟ್ಟಿ ಅಭಿನಯದ ಬಾಲಿವುಡ್ 'ಬಾರ್ಡರ್' ಚಿತ್ರ ಯಶಸ್ಸು ಪಡೆದಿತ್ತು.

ಪಂಜಾಬ್ ರೆಜಿಮೆಂಟ್‌ಗೆ ಸೇರಿದ ರಾಥೋರ್, ಲೊಂಗೆವಾಲಾದಲ್ಲಿ ನಿಯೋಜನೆಗೊಂಡಿದ್ದ 23 ಸೈನಿಕರ ಬಿಎಸ್‌ಎಫ್‌ನ ಸಣ್ಣ ಘಟಕದಲ್ಲಿ ಒಬ್ಬರಾಗಿದ್ದರು. 1971ರ ಡಿಸೆಂಬರ್ 5ರಂದು ಪಾಕ್ ಸೈನಿಕರಿಂದ ತಮ್ಮ ತುಕಡಿಯ ಒಬ್ಬ ಯೋಧ ಕೊಲ್ಲಲ್ಪಟ್ಟಾಗ ರಾಥೋರ್ ಅವರು ಲೈಟ್ ಮೆಷಿನ್ ಗನ್‌ನಿಂದ ಶತ್ರು ಸೈನಿಕರ ಮೇಲೆ ಗುಂಡಿನ ಮಳೆಗರೆದು, ಪಾಕ್ ಸೇನೆಗೆ ಅಪಾರ ಸಾವು– ನೋವು ಉಂಟು ಮಾಡಿದ್ದರು. ಅವರ ಈ ಶೌರ್ಯಕ್ಕೆ ಸೇನಾ ಪದಕ ನೀಡಿ ಸೇನೆ ಗೌರವಿಸಿದೆ.

ಭೈರೋನ್ ಸಿಂಗ್ ರಾಥೋರ್

ರಾಥೋರ್ ಅವರ ಪುತ್ರ ಸವಾಯಿ ಸಿಂಗ್ ಅವರು ಕಳೆದ ಶನಿವಾರ 'ತಮ್ಮ ತಂದೆಯವರನ್ನು ಡಿ.14ರಂದು ಜೋಧ್‌ಪುರದ ಏಮ್ಸ್‌ಗೆ ದಾಖಲಿಸಲಾಗಿದೆ. ಪಾಕ್ ವಿರುದ್ಧದ ಯುದ್ಧದ 51ನೇ ವಾರ್ಷಿಕೋತ್ಸವಕ್ಕೆ ಎರಡು ದಿನಗಳ ಮೊದಲು, ಅವರ ಆರೋಗ್ಯ ತೀವ್ರ ಹದಗೆಟ್ಟಿತು. ತಂದೆಯವರಿಗೆ ಮಿದುಳಿನ ಪಾರ್ಶ್ವವಾಯು ಆಗಿರುವುದಾಗಿ ವೈದ್ಯರು ಹೇಳಿದ್ದರು. ಕಳೆದ ಕೆಲವು ದಿನಗಳಿಂದ ಅವರು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು' ಎಂದು ತಿಳಿಸಿದ್ದರು.

'ಶಾ ಸಭೆಯ ನಿರ್ಧಾರ ಉಲ್ಲಂಘಿಸಿದ ಕರ್ನಾಟಕ'

ಬೆಳಗಾವಿ ಗಡಿಯಲ್ಲಿ ಮಾನೆಗೆ ತಡೆ • ಮಹಾರಾಷ್ಟ್ರ ವಿಧಾನಸಭೆಯಲ್ಲಿ ಚರ್ಚೆ

ನಾಗ್ಪುರ (ಪಿಟಿಐ): ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಮತ್ತು ಕರ್ನಾಟಕ ಸರ್ಕಾರಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಧ್ಯಸ್ಥಿಕೆಯಲ್ಲಿ ತೆಗೆದುಕೊಂಡಿದ್ದ ನಿಲುವನ್ನು ಕರ್ನಾಟಕವು ಉಲ್ಲಂಘಿಸಿದೆ ಎಂಬ ಅಭಿಪ್ರಾಯ ಮಹಾರಾಷ್ಟ್ರ ವಿಧಾನಸಭೆಯಲ್ಲಿ ವ್ಯಕ್ತವಾಗಿದೆ. ಗೃಹಸಚಿವರ ಸಭೆಯಲ್ಲಿ ಒಪ್ಪಿಕೊಂಡಿದ್ದ ವಿಚಾರವನ್ನು ಕರ್ನಾಟಕವು ಉಲ್ಲಂಘಿಸಿದ್ದರ ಬಗ್ಗೆ ಅಲ್ಲಿನ ಮುಖ್ಯಮಂತ್ರಿ ಜತೆಗೆ ಚರ್ಚಿಸುತ್ತೇವೆ ಎಂದು ಮಹಾರಾಷ್ಟ್ರ ಸರ್ಕಾರವು ಹೇಳಿದೆ.

ಬೆಳಗಾವಿಗೆ ಭೇಟಿ ನೀಡಲು ಮುಂದಾಗಿದ್ದ ಶಿವಸೇನಾ (ಶಿಂದೆ ಬಣ) ಸಂಸದ ಧೈರ್ಯಶೀಲ್ ಮಾನೆ ಅವರನ್ನು ಕರ್ನಾಟಕದ ಅಧಿಕಾರಿಗಳು ಗಡಿಯಲ್ಲೇ ತಡೆದ ವಿಚಾರವು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಚರ್ಚೆಗೆ ಬಂದಿತು.

ಮಾನೆ ಅವರನ್ನು ತಡೆದ ವಿಚಾರವನ್ನು ಮಹಾರಾಷ್ಟ್ರ ವಿಧಾನಸಭಾ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಅವರು ಪ್ರಸ್ತಾಪಿಸಿದರು. ಕೇಂದ್ರ ಗೃಹ ಸಚಿವರ ಮಧ್ಯಸ್ಥಿಕೆಯ ಸಭೆಯ ಪ್ರಕಾರ ಯಾರ ಓಡಾಟಕ್ಕೂ ಅಡ್ಡಿ ಪಡಿಸಬಾರದು. ಆದರೆ, ಇಂದು ಮಹಾರಾಷ್ಟ್ರದ ಚುನಾಯಿತ ಪ್ರತಿನಿಧಿಯನ್ನು ಗಡಿಯಲ್ಲೇ ತಡೆಯಲಾಗಿದೆ. ಈ ಮೂಲಕ ಸಭೆಯ ನಿರ್ಧಾರಗಳನ್ನು ಕರ್ನಾಟಕ ಉಲ್ಲಂಘಿಸಿದೆ ಎಂದು ಅಜಿತ್ ಪವಾರ್ ಆರೋಪಿಸಿದರು.

> ಯಾರನ್ನೂ ತಡೆಯಬಾರದು ಎಂಬುದು ಅಮಿತ್ ಶಾ ಮಧ್ಯಸ್ಥಿಕೆಯಲ್ಲಿ ನಿರ್ಧಾರವಾಗಿತ್ತು. ಆದರೂ ಸಂಸದರೊಬ್ಬರನ್ನು ಕರ್ನಾಟಕದ ಜಿಲ್ಲಾಧಿಕಾರಿ ತಡೆದದ್ದು ಹೇಗೆ?
> **ಅಜಿತ್ ಪವಾರ್,** ಮಹಾರಾಷ್ಟ್ರ ವಿಧಾನಸಭಾ ವಿರೋಧ ಪಕ್ಷದ ನಾಯಕ

> ಅಧಿವೇಶನ ಮುಗಿದ ನಂತರ ನಾನು, ಚಂದ್ರಕಾಂತ್ ಪಾಟೀಲ್, ಮಾನೆ ಕರ್ನಾಟಕ ಗಡಿ ಭಾಗಕ್ಕೆ ಭೇಟಿ ನೀಡಿ, ಮರಾಠಿ ಜನರ ಜತೆ ಮಾತನಾಡುತ್ತೇವೆ
> **ಶಂಭುರಾಜ್ ದೇಸಾಯಿ,** ಮಹಾರಾಷ್ಟ್ರ ಸಚಿವ

> ಕರ್ನಾಟಕ, ತೆಲಂಗಾಣ ಸೇರುತ್ತೇವೆ ಎಂದು ನಿರ್ಣಯ ತೆಗೆದುಕೊಂಡ ಗ್ರಾಮಗಳಲ್ಲಿ ಇರುವ ಒಂದು ರಾಜಕೀಯ ಪಕ್ಷದವರು ಇದರ ಹಿಂದಿದ್ದಾರೆ ಎಂಬುದು ಗೊತ್ತಾಗಿದೆ
> **ದೇವೇಂದ್ರ ಫಡಣವೀಸ್**, ಮಹಾರಾಷ್ಟ್ರ ಉಪಮುಖ್ಯಮಂತ್ರಿ

'ಯಾರಿಗೂ ತಡೆ ಒಡ್ಡುವುದಿಲ್ಲ ಎಂಬುದಕ್ಕೆ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಪ್ಪಿಗೆ ಸೂಚಿಸಿದ್ದರು. ಆದರೆ, ಕರ್ನಾಟಕದ ಒಬ್ಬ ಜಿಲ್ಲಾಧಿಕಾರಿ ಮಹಾರಾಷ್ಟ್ರದ ಜನಪ್ರತಿನಿಧಿ ಮತ್ತು ಜನರನ್ನು ತಡೆದಿದ್ದಾರೆ. ಬೊಮ್ಮಾಯಿ ಹೇಳಿದ್ದನ್ನು, ಒಬ್ಬ ಜಿಲ್ಲಾಧಿಕಾರಿ ಕೇಳುವುದಿಲ್ಲವೇ? ನಮ್ಮ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಈ ವಿಚಾರದಲ್ಲಿ ಗಟ್ಟಿ ನಿಲುವು ತೆಗೆದುಕೊಳ್ಳಬೇಕು' ಎಂದು ಅಜಿತ್ ಪವಾರ್ ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಏಕನಾಥ ಶಿಂದೆ, 'ಪವಾರ್ ಅವರು ಎತ್ತಿದ ವಿಚಾರವು ಅತ್ಯಂತ ಪ್ರಮುಖವಾದುದು ಎಂಬುದು ಸತ್ಯ. ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವರೊಬ್ಬರು ಮಧ್ಯಪ್ರವೇಶಿಸಿದ್ದು ಇದೇ ಮೊದಲು. ಅವರು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಗಡಿ ಭಾಗದಲ್ಲಿನ ಜನರ ಜತೆಗೆ ನಾವು ನಿಲ್ಲಬೇಕು, ಅವರ ಕಷ್ಟಗಳಿಗೆ ನಾವು ಜತೆಯಾಗಬೇಕು. ಅವರಿಗೆ ತೊಂದರೆಯಾಗುವ ರೀತಿಯಲ್ಲಿ ವರ್ತಿಸಬಾರದು' ಎಂದು ಹೇಳಿದರು.

'ಮಹಾರಾಷ್ಟ್ರದ ವಾಹನಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಇದು ಪ್ರಜಾಪ್ರಭುತ್ವ ಮತ್ತು ಕಾನೂನಿಗೆ ವಿರುದ್ಧವಾದುದು. ಇಂತಹ ಘಟನೆಗಳು ನಡೆಯಬಾರದು. ಏಕೆಂದರೆ ಇಂತಹ ಕ್ರಿಯೆಗಳಿಗೆ ತಕ್ಕ ಪ್ರತಿಕ್ರಿಯೆಗಳು ವ್ಯಕ್ತವಾಗಬಹುದು' ಎಂದು ಅವರು ಹೇಳಿದ್ದಾರೆ.

₹500ಕ್ಕೆ ಅಡುಗೆ ಅನಿಲ ಸಿಲಿಂಡರ್: ಗೆಹಲೋತ್

ಜೈಪುರ (ಪಿಟಿಐ): ಗೃಹಬಳಕೆಯ ಅಡುಗೆ ಅನಿಲ ಸಿಲಿಂಡರ್ ಅನ್ನು ₹ 500ಕ್ಕೆ ನೀಡುವುದಾಗಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಜನತೆಗೆ ಭರವಸೆ ನೀಡಿದ್ದಾರೆ.

ಅಲ್ವಾರ್‌ನಲ್ಲಿ ಭಾರತ್ ಜೋಡೊ ಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ವರ್ಷಕ್ಕೆ ಇಂತಹ 12 ಸಿಲಿಂಡರ್‌ಗಳನ್ನು ನೀಡಲಾಗುವುದು ಎಂದರು.

₹ 1050ಕ್ಕೆ ದೊರೆಯುವ ಗ್ಯಾಸ್ ಸಿಲಿಂಡರ್ ಅನ್ನು ಕೇವಲ ₹500ಕ್ಕೆ ನೀಡಲಿದ್ದೇವೆ. ಈ ಯೋಜನೆ ಏಪ್ರಿಲ್ ತಿಂಗಳಿಂದ ಜಾರಿಗೆ ಬರಲಿದೆ ಎಂದು ಹೇಳಿದರು.

ಮುಂದಿನ ತಿಂಗಳು ಮಂಡಿಸುವ ಬಜೆಟ್‌ನಲ್ಲಿ ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಕಿಚನ್ ಕಿಟ್ ವಿತರಿಸುವ ಯೋಜನೆಯನ್ನು ಘೋಷಣೆ ಮಾಡಿ, ಏಪ್ರಿಲ್‌ನಿಂದ ಜಾರಿಗೆ ತರಲಾಗುವುದು ಎಂದರು.

ಪ್ರೀತಿಯ ಅಂಗಡಿ ತೆರೆಯುತ್ತಿದ್ದೇನೆ – ರಾಹುಲ್: 'ಭಾರತ ಜೋಡೊ ಯಾತ್ರೆ ಮೂಲಕ ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯುತ್ತಿದ್ದೇನೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಹೇಳಿದರು.

ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ಬಿಜೆಪಿಗರಲ್ಲಿ ಕೆಲವರು ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಯಾತ್ರೆ ಹೊರಟಿರುವುದೇಕೆ ಎಂದು ಕೇಳುತ್ತಾರೆ. ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯುತ್ತಿದ್ದೇನೆ ಎಂಬುದೇ ನನ್ನ ಉತ್ತರ' ಎಂದು ಹೇಳಿದರು.

ಮಕ್ಕಳ ಆಹಾರಕ್ಕಾಗಿ ₹500 ನೆರವು ಕೇಳಿದ್ದ ಮಹಿಳೆ ಖಾತೆಗೆ ₹51 ಲಕ್ಷ ಜಮೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಮಕ್ಕಳಿಗೆ ಆಹಾರ ತಂದುಕೊಡಲು ಹಣವಿಲ್ಲದೆ ಅಸಹಾಯಕತೆಯಿಂದ ತನ್ನ ಮೂರನೇ ಮಗ ಓದುತ್ತಿದ್ದ ಶಾಲೆಯ ಶಿಕ್ಷಕಿ ಬಳಿಯೇ ₹500ಕ್ಕೆ ಅಂಗಲಾಚಿದ್ದ ಮಹಿಳೆಗೆ ನೆರವಿನ ಮಹಾಪೂರವೇ ಹರಿದುಬಂದಿದೆ. 48 ಗಂಟೆಗಳಲ್ಲಿ ಅವರ ಬ್ಯಾಂಕ್ ಖಾತೆಗೆ ₹51 ಲಕ್ಷ ಜಮೆಯಾಗಿದೆ.

ಪಾಲಕ್ಕಾಡ್ ಜಿಲ್ಲೆಯ ಕೂಟ್ಟನಾಡ್ ನಿವಾಸಿಯಾಗಿರುವ ಸುಭದ್ರ (46) ಅವರಿಗೆ ಮೂವರು ಮಕ್ಕಳು. ಕೂಲಿ ಕೆಲಸ ಮಾಡುತ್ತಿದ್ದ ಪತಿ ರಾಜನ್ ಆಗಸ್ಟ್‌ನಲ್ಲಿ ನಿಧನರಾಗಿದ್ದರು. ಹೀಗಾಗಿ ಕುಟುಂಬದ ಜವಾಬ್ದಾರಿ ಸುಭದ್ರ ಅವರ ಹೆಗಲೇರಿತ್ತು. ಸೆರೆಬ್ರಲ್ ಪಾಲ್ಸಿ ಕಾಯಿಲೆಯಿಂದ ಬಳಲುತ್ತಿದ್ದ ಎರಡನೇ ಮಗ ಅತುಲ್ ರಾಜ್ ಹಾಸಿಗೆ ಹಿಡಿದಿದ್ದ. ಆತನ ಆರೈಕೆಗಾಗಿ ಮನೆಯಲ್ಲೇ ಇರುವುದು ಅನಿವಾರ್ಯವಾಗಿತ್ತು. ಹೀಗಾಗಿ ಕೂಲಿ ಮಾಡಿ ಮಕ್ಕಳನ್ನು ಸಲಹುವುದೂ ಕಷ್ಟವೆನಿಸಿತ್ತು.

ತನ್ನ ಕೊನೆಯ ಮಗ ಅಭಿಷೇಕ್ ರಾಜ್ ಸರ್ಕಾರಿ ಶಾಲೆಯೊಂದರಲ್ಲಿ 8ನೇ ತರಗತಿ ಓದುತ್ತಿದ್ದ. ಆತನ ಶಾಲಾ ಶಿಕ್ಷಕಿ ಗಿರಿಜಾ ಹರಿಕುಮಾರ್ ಎಂಬುವರಿಗೆ ಹೋದ ವಾರ ಕರೆ ಮಾಡಿದ್ದ ಸುಭದ್ರ ₹500 ನೀಡುವಂತೆ ಕೇಳಿದ್ದರು. ಅವರ ಮನೆಯ ಪರಿಸ್ಥಿತಿ ಆಲಿಸಿದ್ದ ಗಿರಿಜಾ ಅವರು ₹1,000 ನೆರವು ಒದಗಿಸಿದ್ದರು. ಈ ಸಂಬಂಧ ಅವರು ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದರು. ಅದನ್ನು ನೋಡಿದ್ದ ಹಲವರು ಸುಭದ್ರ ಅವರಿಗೆ ಸಹಾಯ ಹಸ್ತ ಚಾಚಿದ್ದಾರೆ.

ಎರಡನೇ ಟೆಸ್ಟ್‌ಗೂ ರೋಹಿತ್ ಅಲಭ್ಯ?

ರೋಹಿತ್

ಢಾಕಾ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಬಾಂಗ್ಲಾದೇಶ ತಂಡದ ಎದುರಿನ ಎರಡನೇ ಟೆಸ್ಟ್ ಪಂದ್ಯಕ್ಕೂ ಲಭ್ಯರಾಗುವ ಸಾಧ್ಯತೆಯಿಲ್ಲ.

ಗುರುವಾರದಿಂದ ಇಲ್ಲಿ ಪಂದ್ಯ ನಡೆಯಲಿದೆ. ರೋಹಿತ್ ಅವರು ಎಡಗೈ ಹೆಬ್ಬೆರಳು ಗಾಯದಿಂದ ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ.

ಡಿಸೆಂಬರ್ 7ರಂದು ನಡೆದ ಬಾಂಗ್ಲಾದೇಶ ಎದುರಿನ ಎರಡನೇ ಏಕದಿನ ಪಂದ್ಯದ ವೇಳೆ ಅವರಿಗೆ ಗಾಯವಾಗಿತ್ತು.

ಏಕದಿನ ಸರಣಿಯನ್ನು ಭಾರತ 2–3ರಿಂದ ಕಳೆದುಕೊಂಡಿತ್ತು.

ಛತ್ತೋಗ್ರಾಮ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ 188 ರನ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿತ್ತು. ಆ ಟೆಸ್ಟ್‌ನಲ್ಲಿ ರೋಹಿತ್ ಆಡಿರಲಿಲ್ಲ.

ಪದವಿಪೂರ್ವ ಕಾಲೇಜುಗಳ ರಾಜ್ಯ ಅಥ್ಲೆಟಿಕ್ ಕೂಟ

ಉಡುಪಿ, ದಕ್ಷಿಣ ಕನ್ನಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಗಳೂರು: ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕ್ರೀಡಾಪಟುಗಳು ಪಿಯು ಕಾಲೇಜುಗಳ ರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು. ಉಡುಪಿ ಬಾಲಕರು 13 ಪದಕ ಗೆದ್ದುಕೊಂಡರೆ, ದಕ್ಷಿಣ ಕನ್ನಡದ ಬಾಲಕಿಯರು 19 ಪದಕಗಳನ್ನು ಕೊರಳಿಗೇರಿಸಿಕೊಂಡರು.

ನಗರದ ರಥಬೀದಿ ಪಿಯು ಕಾಲೇಜು ಆಶ್ರಯದಲ್ಲಿ ಮಂಗಳ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯಗೊಂಡ ಕೂಟದ ಬಾಲಕರ ವಿಭಾಗದಲ್ಲಿ ಉಡುಪಿ 57 ಪಾಯಿಂಟ್, ಬಾಲಕಿಯರಲ್ಲಿ ದಕ್ಷಿಣ ಕನ್ನಡ 62 ಪಾಯಿಂಟ್ ಗಳಿಸಿದರು.

ಉಡುಪಿ ಜಿಲ್ಲೆಯನ್ನು ಪ್ರತಿನಿಧಿಸಿದ ಎಂಜಿಎಂ ಕಾಲೇಜಿನ ಸ್ಪ್ರಿಂಟ್ ತಾರೆ ಧ್ರುವ ಬಲ್ಲಾಳ್ ವೈಯಕ್ತಿಕ ಚಾಂಪಿಯನ್ ಎನಿಸಿಕೊಂಡರು. ಬಾಲಕಿಯರ ವಿಭಾಗದ ವೈಯಕ್ತಿಕ ಚಾಂಪಿಯನ್‌ಷಿಪ್ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಂಜಲಿ ಎ, ಪ್ರತಿಭಾ ಮತ್ತು ಬೆಂಗಳೂರು ಉತ್ತರ ಜಿಲ್ಲೆಯ ಪಾವನ ಹಂಚಿಕೊಂಡರು.

ಬಾಲಕಿಯರ ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಬೆಂಗಳೂರು ದಕ್ಷಿಣ ಜಿಲ್ಲೆಯ ಪಾವನ ಅವರ ಜಿಗಿತದ ಭಂಗಿ –ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ಅಂತಿಮ ದಿನದ ಫಲಿತಾಂಶಗಳು: ಬಾಲಕರ 400 ಮೀಟರ್ಸ್ ಓಟ: ಧ್ರುವ ಬಲ್ಲಾಳ್ (ಉಡುಪಿ)-1. ಕಾಲ: 50.2, ರಮೇಶ್ (ಕೊಡಗು)-2, ಭುವನ್ ಪೂಜಾರಿ (ಬೆಳಗಾವಿ)-3; ಕ್ರಾಸ್ ಕಂಟ್ರಿ: ರೋಷನ್ ಬೇಕಲ್ (ಬೆಂ. ಉತ್ತರ)-1. ಕಾಲ: 18 ನಿಮಿಷ 57.6 ಸೆ, ಗಣಪತಿ ಯೆಲ್ಲಪ್ಪ ಮಲಿಕ್ (ದಕ್ಷಿಣ ಕನ್ನಡ)-2, ವಿಠಲ ಭರಮಪ್ಪ ಕಗ್ಗಣ್ಣವರ (ಚಿಕ್ಕೋಡಿ)-3; ಲಾಂಗ್‌ಜಂಪ್: ಸುನಾಲ್ ಸುವರ್ಣ (ಉಡುಪಿ)-1. ಅಂತರ: 6.97ಮೀ, ಎಂ.ಡಿ.ಆದಿಲ (ವಿಜಯಪುರ)-2, ಸುಶಾಂತ್ ಸುವರ್ಣ (ದ.ಕ)-3; ಡಿಸ್ಕಸ್ ಥ್ರೋ: ಸುಶಾಂತ್ (ಉಡುಪಿ)-1. ದೂರ: 42.58 ಮೀ, ಎಂ.ಎಸ್.ಶ್ರೀಕಾಂತ್ (ದ.ಕ)-2, ಚಂದನ ಪೂಜಾರಿ (ಬೆಳಗಾವಿ)-3; 4x100 ಮೀ ರಿಲೆ: ಉಡುಪಿ-1 (ಕಾಲ:43.9ಸೆ), ಬೆಂಗಳೂರು ಉತ್ತರ-2, ದ. ಕ.-3.

ಬಾಲಕಿಯರ 400 ಮೀ ಓಟ: ಎಂ.ಸಿ. ಮಾನಸ (ಕೊಡಗು)-1. ಕಾಲ: 57.9ಸೆ, ಗೀತಾ ಚೌಕಾಶಿ (ದ.ಕ)-2, ದಿಶಾ ಅಳಿಗೆ (ಬೆಂ. ದಕ್ಷಿಣ)-3; ಕ್ರಾಸ್ ಕಂಟ್ರಿ: ಪ್ರತಿಭಾ (ದ.ಕ)-1. ಕಾಲ: 18 ನಿ 57.6ಸೆ, ನಂದಿನಿ (ಉಡುಪಿ)-2, ಮಹಾಲಕ್ಷ್ಮಿ ಬಸಕಳಿ (ಬಾಗಲಕೋಟೆ)-3; ಲಾಂಗ್‌ಜಂಪ್: ಪಾವನ್ ಎನ್ (ಬೆಂ. ಉತ್ತರ)-1. ಅಂತರ: 5.57 ಮೀ, ದಿಶಾ ಗಣಪತಿ (ಮೈಸೂರು)-2, ಭೂಮಿಕಾ (ಕೊಡಗು)-3; ಶಾಟ್‌ಪಟ್: ಪ್ರಾಂಜಲಿ (ದ.ಕ)-1. ದೂರ: 12.61 ಮೀ, ರೇಯಾ ಎಸ್.ಕೆ (ಮೈಸೂರು)-2, ಮಾಧುರ್ಯ (ಉಡುಪಿ)-3; 4x100 ಮೀ ರಿಲೆ: ಬೆಂ. ಉತ್ತರ-1 (50.4 ಸೆ), ದ.ಕ-2.

ಆರೋಪಿಗಳಿಗೆ ಕಿರುಕುಳ ಸಾಧನವಾಗಿ ಕಾನೂನು ಬಳಕೆ ಸಲ್ಲದು: 'ಸುಪ್ರೀಂ'

ನವದೆಹಲಿ (ಪಿಟಿಐ): ಕಾನೂನನ್ನು ಯಾವುದೇ ಕಾರಣಕ್ಕೂ ಆರೋಪಿಗಳಿಗೆ ಕಿರುಕುಳ ನೀಡುವ ಸಾಧನವಾಗಿ ಬಳಸಬಾರದು ಮತ್ತು ಕ್ಷುಲ್ಲಕ ಪ್ರಕರಣಗಳು ಕಾನೂನಿನ ಪವಿತ್ರ ಸ್ವರೂಪಕ್ಕೆ ಚ್ಯುತಿ ತರುತ್ತಿಲ್ಲವೆಂಬುದನ್ನು ನ್ಯಾಯಾಲಯಗಳು ಯಾವಾಗಲೂ ಖಾತ್ರಿಪಡಿಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಎಚ್ಚರಿಸಿದೆ.

ಇಬ್ಬರು ವ್ಯಕ್ತಿಗಳ ವಿರುದ್ಧ ಚೆನ್ನೈ ನ್ಯಾಯಾಲಯದಲ್ಲಿ ಬಾಕಿ ಇರುವ ಕ್ರಿಮಿನಲ್ ಮೊಕದ್ದಮೆಗಳನ್ನು ವಜಾಗೊಳಿಸಿದ ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಎಸ್.ಆರ್. ಭಟ್ ಅವರಿದ್ದ ಪೀಠವು, ಕಾನೂನು ಅಸ್ತಿತ್ವದಲ್ಲಿರುವುದು ಮುಗ್ಧರನ್ನು ಬೆದರಿಸಲು ಖಡ್ಗವಾಗಿ ಬಳಸುವುದಕ್ಕಿಂತ ಹೆಚ್ಚಾಗಿ ರಕ್ಷಿಸುವ ಗುರಾಣಿಯಂತೆ ಪ್ರಯೋಗಿಸಲು ಎಂದು ಹೇಳಿದೆ.

ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಕಾಯ್ದೆ 1940ರ ಉಲ್ಲಂಘನೆಯಡಿ ದಾಖಲಾಗಿದ್ದ ಕ್ರಿಮಿನಲ್ ದೂರು ಕೈಬಿಡುವಂತೆ ಕೋರಿದ್ದ ಅರ್ಜಿಯನ್ನು ಕಳೆದ ವರ್ಷದ ಆಗಸ್ಟ್‌ನಲ್ಲಿ ಮದ್ರಾಸ್ ಹೈಕೋರ್ಟ್ ವಜಾಗೊಳಿಸಿ ತೀರ್ಪು ನೀಡಿತ್ತು. ಈ ತೀರ್ಪಿನ ವಿರುದ್ಧ ಇಬ್ಬರು ವ್ಯಕ್ತಿಗಳು ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠವು ಇತ್ತೀಚೆಗೆ ಆಲಿಸಿತು.

ಮದ್ರಾಸ್ ಹೈಕೋರ್ಟ್ ತೀರ್ಪು ತಳ್ಳಿಹಾಕಿದ ಸುಪ್ರೀಂ ಕೋರ್ಟ್, ಪ್ರಕರಣದ ಸನ್ನಿವೇಶ ಮತ್ತು ಸಂದರ್ಭಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಲ್ಲಿ ಅಧೀನ ನ್ಯಾಯಾಲಯ ವಿಫಲವಾಗಿದೆ. ದೂರು ಸಲ್ಲಿಕೆ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಪ್ರಾರಂಭಿಸುವ ಪ್ರಕ್ರಿಯೆ ಯಾವಾಗಲೂ ನ್ಯಾಯದ ಉದ್ದೇಶವನ್ನು ಎತ್ತಿ ಹಿಡಿಯುವಂತಿರಬೇಕು ಎಂದೂ ಅದು ಹೇಳಿದೆ.

ದೂರು ದಾಖಲಾದ ಮತ್ತು ಪ್ರಾಥಮಿಕ ತನಿಖೆ ಆರಂಭಿಸಿದ ಅವಧಿಯ ಅಂತರ ನಾಲ್ಕು ವರ್ಷ ಗಳಿಗೂ ಹೆಚ್ಚು ಇದ್ದಿದ್ದನ್ನು ಗಮನಿಸಿದ ಪೀಠ, ತೀರ್ಪು ವಜಾಕ್ಕೆ ವಿಳಂಬ ಒಂದು ಕಾರಣವಾಗಿ ಪರಿಗಣನೆಯಾಗದಿದ್ದರೂ ಇಷ್ಟೊಂದು ವಿಳಂಬಕ್ಕೆ ಸೂಕ್ತ ಕಾರಣಗಳನ್ನೂ ವಿವರಿಸಿಲ್ಲದಿರುವುದು ಮತ್ತು ದೂರು ಸಾಬೀತುಪಡಿಸಲು ಪೂರಕ ಸಾಕ್ಷ್ಯಗಳನ್ನೂ ಒದಗಿಸಿಲ್ಲದಿರುವುದಕ್ಕೆ ವಜಾಗೊಳಿಸಿದ್ದಾಗಿ ಡಿ.16ರಂದು ನೀಡಿದ ತೀರ್ಪಿನಲ್ಲಿ ಹೇಳಿದೆ.

ಡ್ರಗ್ ಮತ್ತು ಕಾಸ್ಮೆಟಿಕ್ಸ್ ಕಾಯ್ದೆ ಉಲ್ಲಂಘಿಸಿ ಪಿರಿಡಾಕ್ಸಲ್ -5-ಫಾಸ್ಫೇಟ್ ಸಗಟು ಖರೀದಿಸಿದ ಆರೋಪದ ಮೇಲೆ ಮೇಯರ್ಸ್ ಕೆಮ್ ಫಾರ್ಮಾ ಪ್ರವರ್ತಕ, ಆಹಾರ, ಪೂರಕ ಆಹಾರ ಹಾಗೂ ಔಷಧ ತಯಾರಿಕೆಗಳಲ್ಲಿ ಬಳಸುವ ಕಚ್ಚಾ ವಸ್ತು ರಾಸಾಯನಿಕಗಳ ವ್ಯಾಪಾರಿ ಹಸ್ಮುಖ್‌ಲಾಲ್ ಡಿ. ವೊರಾ ಮತ್ತು ಇನ್ನೊಬ್ಬ ವ್ಯಕ್ತಿ ವಿರುದ್ಧ ಚೆನ್ನೈ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದ್ದವು. ಇವುಗಳ ಸಿಂಧುತ್ವವನ್ನು ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ಇವರ ವಿರುದ್ಧ ದೂರು ದಾಖಲಿಸಿದ್ದ ಡ್ರಗ್ ಇನ್‌ಸ್ಪೆಕ್ಟರ್ ದೂರು ಸಾಬೀತಿಗೆ ಸೂಕ್ತ ಸಾಕ್ಷ್ಯಗಳನ್ನು ಒದಗಿಸಿಲ್ಲ. ಔಷಧ ಖರೀದಿಗೆ ನಿರ್ದಿಷ್ಟ ಪರವಾನಗಿ ಅಗತ್ಯವಿದೆ ಎಂಬ ವಾದ ಸಮರ್ಥಿಸಿಕೊಳ್ಳಲು ಯಾವುದೇ ಪುರಾವೆ ಒದಗಿಸಿಲ್ಲ ಎಂದೂ ಪೀಠ ಹೇಳಿದೆ.

ಆದಿತ್ಯ ಮಿಂಚು: ರಾಜ್ಯಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಆದಿತ್ಯ ನಾಯರ್ ಮಿಂಚಿನ ಬೌಲಿಂಗ್ ದಾಳಿ (34ಕ್ಕೆ 5) ಮತ್ತು ಪ್ರಖರ್ ಚತುರ್ವೇದಿ (65) ಅವರ ಅರ್ಧಶತಕದ ನೆರವಿನಿಂದ ಕರ್ನಾಟಕ ತಂಡ ಸೌರಾಷ್ಟ್ರ ವಿರುದ್ಧ ಗೆಲುವಿಗಾಗಿ ಹೋರಾಟ ನಡೆಸಿದೆ.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಚ್ ಬೆಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ, ಸೋಮವಾರ ಸೌರಾಷ್ಟ್ರ ಮೊದಲ ಇನ್ನಿಂಗ್ಸ್‌ನಲ್ಲಿ 211 ರನ್‌ಗಳಿಗೆ ಆಲೌಟಾಯಿತು.


ಆದಿತ್ಯ ನಾಯರ್

72 ರನ್‌ಗಳ ಮುನ್ನಡೆಯೊಂದಿಗೆ 2ನೇ ಇನಿಂಗ್ಸ್ ಆರಂಭಿಸಿದ ಕೆಎಸ್‌ಸಿಎ ತಂಡವು ಆರಂಭಿಕ ಆಘಾತ ಅನುಭವಿಸಿತು. ಧ್ರುವ್ ಪ್ರಭಾಕರ್ (25) ಅವರೊಂದಿಗೆ ಇನ್ನಿಂಗ್ಸ್ ಕಟ್ಟಿದ ಪ್ರಖರ್ (65) ತಂಡದ ನೆರವಿಗೆ ನಿಂತರು.

ಸೌರಾಷ್ಟ್ರದ ಮೌರ್ಯ ಘೋಗ್ರಿ (39ಕ್ಕೆ 4) ರಾಜ್ಯದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ದಿನದಾಟದ ಅಂತ್ಯಕ್ಕೆ ರಾಜ್ಯ ತಂಡವು 86.1 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿದ್ದು, ಒಟ್ಟಾರೆ 224 ರನ್ ಮುನ್ನಡೆ ಸಾಧಿಸಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ ಮೊದಲ ಇನ್ನಿಂಗ್ಸ್: 112.1 ಓವರ್‌ಗಳಲ್ಲಿ 273. ಸೌರಾಷ್ಟ್ರ ಮೊದಲ ಇನ್ನಿಂಗ್ಸ್ 69.4 ಓವರ್‌ಗಳಲ್ಲಿ 211 (ಮಾನವ್ ಚೋತಾನಿ 80, ಆದಿತ್ಯ ನಾಯರ್ 34ಕ್ಕೆ 5). ಕರ್ನಾಟಕ 2ನೇ ಇನ್ನಿಂಗ್ಸ್ 86.1 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 162 (ಪ್ರಖರ್ ಚತುರ್ವೇದಿ 65, ಮೌರ್ಯ ಘೋಗ್ರಿ 39ಕ್ಕೆ 4).

ಕ್ರಿಕೆಟ್: ಜಯದ ಹೊಸ್ತಿಲಲ್ಲಿ ಇಂಗ್ಲೆಂಡ್

ಕರಾಚಿ (ಎಎಫ್‌ಪಿ): ಲೆಗ್ ಸ್ಪಿನ್ನರ್ ರೆಹಾನ್ ಅಹ್ಮದ್ (48ಕ್ಕೆ 5) ಅವರ ಕೈಚಳಕದ ನೆರವಿನಿಂದ ಇಂಗ್ಲೆಂಡ್ ತಂಡ ಪಾಕಿಸ್ತಾನ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಗೆಲುವಿನ ಹಾದಿಯಲ್ಲಿದೆ.

ಕರಾಚಿಯಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗೆಲುವಿಗೆ 167 ರನ್‌ಗಳ ಗುರಿ ಪಡೆದಿರುವ ಇಂಗ್ಲೆಂಡ್, ಮೂರನೇ ದಿನವಾದ ಸೋಮವಾರದ ಆಟದ ಅಂತ್ಯಕ್ಕೆ 17 ಓವರ್‌ಗಳಲ್ಲಿ 2 ವಿಕೆಟ್‌ಗೆ 112 ರನ್ ಗಳಿಸಿದೆ. ಸರಣಿಯಲ್ಲಿ 'ಕ್ಲೀನ್‌ಸ್ವೀಪ್' ಸಾಧನೆ ಮಾಡಲು ಇಂಗ್ಲೆಂಡ್‌ಗೆ 55 ರನ್‌ಗಳು ಬೇಕು.

ಪಾಕ್ ತಂಡ ಎರಡನೇ ಇನಿಂಗ್ಸ್‌ನಲ್ಲಿ 216 ರನ್‌ಗಳಿಗೆ ಆಲೌಟಾಯಿತು. 18 ವರ್ಷ ರೆಹಾನ್ ಅವರು ಚೊಚ್ಚಲ ಪಂದ್ಯದ ಇನಿಂಗ್ಸ್‌ವೊಂದರಲ್ಲಿ ಐದು ವಿಕೆಟ್ ಪಡೆದ ಅತಿಕಿರಿಯ ಆಟಗಾರ ಎನಿಸಿಕೊಂಡರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 304. ಇಂಗ್ಲೆಂಡ್ 354. ಎರಡನೇ ಇನಿಂಗ್ಸ್: ಪಾಕಿಸ್ತಾನ 74.5 ಓವರ್‌ಗಳಲ್ಲಿ 216 (ಬಾಬರ್ ಅಜಂ 54, ಸವೂದ್ ಶಕೀಲ್ 53, ರೆಹಾನ್ ಅಹ್ಮದ್ 48ಕ್ಕೆ5, ಜಾಕ್ ಲೀಚ್ 72ಕ್ಕೆ 3) ಇಂಗ್ಲೆಂಡ್ 17 ಓವರ್‌ಗಳಲ್ಲಿ 2 ವಿಕೆಟ್‌ಗೆ 112 (ಜಾಕ್ ಕ್ರಾಲಿ 41, ಬೆನ್ ಡಕೆಟ್ ಬ್ಯಾಟಿಂಗ್ 50, ರೆಹಾನ್ ಅಹ್ಮದ್ 10, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 10, ಅಬ್ರಾರ್ ಅಹ್ಮದ್ 43ಕ್ಕೆ 2)

ಹಾಕಿ: ರವಿಶಂಕರ್ ಮಿಂಚು

ಬೆಂಗಳೂರು: ರವಿಶಂಕರ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಆದ್ಯ ಮಾನ್ ಇಂಜಿನಿಯರಿಂಗ್ ಕಾಲೇಜು ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿತು. ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ 3–1ರಿಂದ ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ 'ಎ' ತಂಡದ ವಿರುದ್ಧ ಗೆದ್ದಿತು. ರವಿಶಂಕರ್ 16 ಮತ್ತು 46ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಇನ್ನೊಂದು ಗೋಲನ್ನು ಪಿ.ವಿಜಯದೇವ (19ನೇ ನಿ.) ಗಳಿಸಿದರು. ಐಡಿಯಲ್ ತಂಡಕ್ಕಾಗಿ ಸುಂದರೇಶನ್ (8ನೇ ನಿ.) ಗೋಲು ಹೊಡೆದರು.

ಎಲ್ಲೆಡೆ ಲಯೊನೆಲ್ ಮೆಸ್ಸಿ ಗುಣಗಾನ; ವಿಶ್ವಕಪ್ ಗೆದ್ದ ಆಟಗಾರರಿಗೆ ಅದ್ದೂರಿ ಸ್ವಾಗತಕ್ಕೆ ಸಿದ್ಧತೆ

ಸಂಕಷ್ಟ ಮರೆತು ಸಂಭ್ರಮಿಸಿದ ಅರ್ಜೆಂಟೀನಾ

ಅರ್ಜೆಂಟಿನಾ ತನ್ನ ಮೂರನೆಯ ಫಿಫಾ ವಿಶ್ವಕಪ್ ವಿಜೇತವಾಗಿದೆ!

ಬ್ಯೂನಸ್ ಐರಿಸ್ (ಎಪಿ): ದೋಹಾದ ಲುಸೈಲ್ ಕ್ರೀಡಾಂಗಣದಲ್ಲಿ ಲಯೊನೆಲ್ ಮೆಸ್ಸಿ ಬಳಗ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯನ್ನು ಗೆದ್ದು ಟ್ರೋಫಿ ಎತ್ತಿಹಿಡಿದಾಗ, ಅತ್ತ ಅರ್ಜೆಂಟೀನಾದಲ್ಲಿ ಜನರು ಸಂಕಷ್ಟ ಮರೆತು ಸಂಭ್ರಮಿಸಿದ್ದಾರೆ.

ದಕ್ಷಿಣ ಅಮೆರಿಕದ ಈ ದೇಶ ಕಳೆದ ಕೆಲವು ವರ್ಷಗಳಿಂದ ಆರ್ಥಿಕ ಹಿಂಜರಿತಕ್ಕೆ ಸಿಲುಕಿದೆ. ಅರ್ಜೆಂಟೀನಾದ ಪ್ರತಿ 10 ಮಂದಿಯಲ್ಲಿ ನಾಲ್ವರು ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಸಂಕಷ್ಟಕ್ಕೆ ಸಿಲುಕಿದ್ದ ದೇಶದ ಜನರಲ್ಲಿ ಒಗ್ಗಟ್ಟು ಉಂಟುಮಾಡುವ ಕೆಲಸವನ್ನು ಮೆಸ್ಸಿ ಬಳಗ ಮಾಡಿದೆ.

1986ರ ಬಳಿಕ ಮೊದಲ ಬಾರಿ ತಮ್ಮ ದೇಶ ವಿಶ್ವಕಪ್ ಜಯಿಸಿದ ಐತಿಹಾಸಿಕ ಸಾಧನೆಯನ್ನು ಇಲ್ಲಿನ ಜನರು ರಾತ್ರಿಯಿಡೀ ಆಚರಿಸಿದ್ದಾರೆ. ಬ್ಯೂನಸ್ ಐರಿಸ್ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಲಕ್ಷಕ್ಕೂ ಅಧಿಕ ಮಂದಿ ರಸ್ತೆಗಳಲ್ಲಿ ಹಾಡು, ನೃತ್ಯದ ಮೂಲಕ ಸಂಭ್ರಮದಲ್ಲಿ ಮಿಂದೆದ್ದರು. ಸ್ಟಾರ್ ಆಟಗಾರ ಮೆಸ್ಸಿ ಗುಣಗಾನ ಮಾಡಿದರು.

ವಿಶ್ವಕಪ್ ಗೆದ್ದ ಹೀರೋಗಳಿಗೆ ಭರ್ಜರಿ ಸ್ವಾಗತ ನೀಡಲು ಬ್ಯೂನಸ್ ಐರಿಸ್‌ನ ಜನರು ಸಿದ್ಧತೆ ನಡೆಸಿದ್ದಾರೆ. ತೆರೆದ ವಾಹನದಲ್ಲಿ ಅದ್ದೂರಿ ಮೆರವಣಿಗೆ ನಡೆಸಲು ತೀರ್ಮಾನಿಸಲಾಗಿದೆ.

‘ನೀವು ಹಲವು ವರ್ಷಗಳಿಂದ ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾಗ ಇಂತಹ ಕ್ಷಣಗಳು ಮನಸ್ಸಿಗೆ ನೀಡುವ ಸಮಾಧಾನ ಅಪಾರ’ ಎಂದು ಇಲ್ಲಿನ ಫ್ಯಾಬಿಯೊ ವಿಲಾನಿ ಹೇಳಿದರು.

‘ಈ ಕ್ಷಣಕ್ಕಾಗಿ ನಾವೆಲ್ಲರೂ ಕಾಯುತ್ತಿದ್ದೆವು’ ಎಂದು ಸಂತಸದಿಂದ ಬೀಗುತ್ತಿದ್ದ ವೆರೊನಿಕಾ ಸಿಲ್ವಾ ಪ್ರತಿಕ್ರಿಯಿಸಿದರು.

ಮೆಸ್ಸಿ ಬಳಗ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆದ್ದ ಸಂಭ್ರಮ ಆಚರಿಸಲು ಅರ್ಜೆಂಟೀನಾದ ಬ್ಯೂನಸ್ ಐರಿಸ್‌ನಲ್ಲಿ ಸೇರಿದ್ದ ಜನಸ್ತೋಮ –ಎಎಫ್‌ಪಿ ಚಿತ್ರ

ಲುಸೈಲ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ರೋಚಕ ಫೈನಲ್‌ನ ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾ 4–2 ಗೋಲುಗಳಿಂದ ಫ್ರಾನ್ಸ್ ತಂಡವನ್ನು ಮಣಿಸಿ ಮೂರನೇ ಕಿರೀಟ ಮುಡಿಗೇರಿಸಿಕೊಂಡಿತ್ತು.

ಪ್ರಬಲ ಪೈಪೋಟಿ ನಡೆದ ಫೈನಲ್‌ನ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2 ರಲ್ಲಿ ಹಾಗೂ ಹೆಚ್ಚುವರಿ ಅವಧಿಯ ಬಳಿಕ 3–3 ಗೋಲುಗಳಿಂದ ಸಮಬಲ ಸಾಧಿಸಿದ್ದವು. ಅರ್ಜೆಂಟೀನಾ ಪರ ಮೆಸ್ಸಿ ಎರಡು ಹಾಗೂ ಏಂಜೆಲ್ ಡಿ ಮರಿಯಾ ಒಂದು ಗೋಲು ಗಳಿಸಿದ್ದರು. ಫ್ರಾನ್ಸ್ ತಂಡದ ಮೂರೂ ಗೋಲುಗಳನ್ನು ಕಿಲಿಯನ್ ಎಂಬಾಪೆ ತಂದಿತ್ತಿದ್ದರು. ಬಳಿಕ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ ಅದೃಷ್ಟ ಅರ್ಜೆಂಟೀನಾಕ್ಕೆ ಒಲಿದಿತ್ತು.

‘ಫುಟ್‌ಬಾಲ್ ಕ್ರೇಜ್’ ದೇಶ ಅರ್ಜೆಂಟೀನಾ, 36 ವರ್ಷಗಳ ಬಿಡುವಿನ ಬಳಿಕ ವಿಶ್ವಕಪ್ ಜಯಿಸಿದೆ. ಈ ತಂಡ 1978 ರಲ್ಲಿ ಚೊಚ್ಚಲ ಕಿರೀಟ ಮುಡಿಗೇರಿಸಿಕೊಂಡಿತ್ತು. 1930, 1990 ಮತ್ತು 2014 ರಲ್ಲಿ ರನ್ನರ್ಸ್ ಅಪ್ ಆಗಿತ್ತು.

ರೊಸಾರಿಯೊದಲ್ಲಿ ಸಂಭ್ರಮ: ಮೆಸ್ಸಿ ಹುಟ್ಟೂರು ರೊಸಾರಿಯೊದಲ್ಲೂ ಸಾವಿರಾರು ಮಂದಿ ಬೀದಿಗಿಳಿದು ಸಂಭ್ರಮಿಸಿದರು. ದೋಹಾದಲ್ಲಿ ಫೈನಲ್ ಪಂದ್ಯಕ್ಕೆ ತೆರೆಬೀಳುವಾಗ ಇಲ್ಲಿ ಸಂಜೆ ಆಗಿತ್ತು. ಮೆಸ್ಸಿ ಅಭಿಮಾನಿಗಳು ತಡರಾತ್ರಿಯವರೆಗೂ ಸಂಭ್ರಮದಲ್ಲಿ ಭಾಗಿಯಾದರು.



2022ರ ವಿಶ್ವಕಪ್‌ನ ಪ್ರಮುಖ ಅಂಶಗಳು

ಗರಿಷ್ಠ ಗೋಲು

ಆಟಗಾರ	ದೇಶ	ಗೋಲು
ಕಿಲಿಯನ್ ಎಂಬಾಪೆ	ಫ್ರಾನ್ಸ್	8
ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ	7
ಜೂಲಿಯನ್ ಅಲ್ವರೆಜ್	ಅರ್ಜೆಂಟೀನಾ	4
ಒಲಿವಿಯರ್ ಜಿರೋಡ್	ಫ್ರಾನ್ಸ್	4
ರಿಚಾರ್ಲಿಸನ್	ಬ್ರೆಜಿಲ್	3
ಎನ್ನೆರ್ ವೆಲೆನ್ಸಿಯಾ	ಈಕ್ವೆಡಾರ್	3
ಮಾರ್ಕಸ್ ರ್‍ಯಾಶ್‌ಫೋರ್ಡ್	ಇಂಗ್ಲೆಂಡ್	3
ಬುಕಾಯೊ ಸಾಕಾ	ಇಂಗ್ಲೆಂಡ್	3
ಕೋಡಿ ಗಾಕ್ಪೊ	ನೆದರ್ಲೆಂಡ್ಸ್	3
ಗೊನ್ಸಾಲೊ ರಾಮೊಸ್	ಪೋರ್ಚುಗಲ್	3
ಅಲ್ವೆರೊ ಮೊರಾಟ	ಸ್ಪೇನ್	3

ತಂಡವೊಂದರ ಗರಿಷ್ಠ ಗೋಲು

ಫ್ರಾನ್ಸ್	16
ಹೆಚ್ಚು ಗೋಲು ಬಿಟ್ಟುಕೊಟ್ಟ ತಂಡ	
ಕೋಸ್ಟರಿಕಾ	11
ಪಂದ್ಯವೊಂದರಲ್ಲಿ ಅತಿ ಹೆಚ್ಚು ಗೋಲು	
ಸ್ಪೇನ್	7
ಪಂದ್ಯದಲ್ಲಿ ಅತಿ ಹೆಚ್ಚು ಗೋಲು (ಎರಡೂ ತಂಡ ಸೇರಿ)	
ಇಂಗ್ಲೆಂಡ್–ಇರಾನ್	6-2 (8)

ಗೋಲು ಗಳಿಸಿದ ಹಿರಿಯ ಆಟಗಾರ

ಪೆಪೆ	ಪೋರ್ಚುಗಲ್	39 ವರ್ಷ

ಗೋಲು ಗಳಿಸಿದ ಕಿರಿಯ ಆಟಗಾರ

ಗಾವಿ	ಸ್ಪೇನ್	18 ವರ್ಷ

ಅತಿ ಹೆಚ್ಚು ಬಾರಿ ಪಂದ್ಯಶ್ರೇಷ್ಠ

ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ	5
ಕಿಲಿಯನ್ ಎಂಬಾಪೆ	ಫ್ರಾನ್ಸ್	5

ಗರಿಷ್ಠ ಪಂದ್ಯಗಳ ಗೆಲುವು

ಫ್ರಾನ್ಸ್	5

ಹ್ಯಾಟ್ರಿಕ್ 2

ಕಿಲಿಯನ್ ಎಂಬಾಪೆ	ಫ್ರಾನ್ಸ್
ಗೊನ್ಸಾಲೊ ರಾಮೊಸ್	ಪೋರ್ಚುಗಲ್

‘ಗೋಲ್ಡನ್ ಶೂ’ ಪ್ರಶಸ್ತಿಯೊಂದಿಗೆ ಫ್ರಾನ್ಸ್ ತಂಡದ ಆಟಗಾರ ಕಿಲಿಯನ್ ಎಂಬಾಪೆ

ಮೆಸ್ಸಿಗೆ ಇನ್ನಷ್ಟು ಆಡುವ ಬಯಕೆ

ದೋಹಾ (ಎಪಿ): ಲಯೊನೆಲ್ ಮೆಸ್ಸಿ ಅವರು ಅರ್ಜೆಂಟೀನಾ ರಾಷ್ಟ್ರೀಯ ತಂಡವನ್ನು ಶೀಘ್ರದಲ್ಲೇ ತೊರೆಯಲು ಸಿದ್ಧರಿಲ್ಲ. ವಿಶ್ವ ಚಾಂಪಿಯನ್ ಆಗಿದ್ದುಕೊಂಡು ಇನ್ನಷ್ಟು ಪಂದ್ಯಗಳನ್ನು ಆಡುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

35 ವರ್ಷದ ಮೆಸ್ಸಿ ಇನ್ನೊಂದು ವಿಶ್ವಕಪ್ ಆಡುವ ಸಾಧ್ಯತೆ ಕಡಿಮೆ. ಆದರೆ ಒಂದೆರಡು ವರ್ಷ ರಾಷ್ಟ್ರೀಯ ತಂಡಕ್ಕೆ ಆಡುವುದು ಅವರ ಬಯಕೆ.

‘ವಿಶ್ವಕಪ್ ಟ್ರೋಫಿಯೊಂದಿಗೆ ನನ್ನ ವೃತ್ತಿಜೀವನ ಪೂರ್ಣಗೊಳಿಸಲು ಬಯಸಿದ್ದೆ. ಅದಕ್ಕಿಂತ ಹೆಚ್ಚಿನದ್ದೇನೂ ನಿರೀಕ್ಷಿಸಿರಲಿಲ್ಲ’ ಎಂದು ಅವರು ಭಾನುವಾರ ನಡೆದ ಫೈನಲ್ ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದಾರೆ.

‘ಕೊಪಾ ಅಮೆರಿಕ ಟ್ರೋಫಿ ಗೆದ್ದಿದ್ದೇನೆ. ಇದೀಗ ವಿಶ್ವಕಪ್ ಕೂಡಾ ಕೈಸೇರಿದೆ. ಫುಟ್‌ಬಾಲ್‌ಅನ್ನು ಪ್ರೀತಿಸುತ್ತೇನೆ. ರಾಷ್ಟ್ರೀಯ ತಂಡದ ಭಾಗವಾಗಿರುವುದನ್ನು ಆನಂದಿಸುತ್ತೇನೆ. ವಿಶ್ವ ಚಾಂಪಿಯನ್ ತಂಡದ ಪರ ಒಂದಷ್ಟು ಪಂದ್ಯಗಳನ್ನು ಆಡುವುದು ನನ್ನ ಗುರಿ’ ಎಂದಿದ್ದಾರೆ.

ಮೆಸ್ಸಿ ಅವರು ಶ್ರೇಷ್ಠ ಆಟಗಾರನಿಗೆ ನೀಡುವ ‘ಬ್ಯಾಲನ್ ಡಿ ಓರ್’ ಪ್ರಶಸ್ತಿಯನ್ನು ಏಳು ಸಲ ಗೆದ್ದಿದ್ದಾರೆ. ಬಾರ್ಸಿಲೋನಾ ಕ್ಲಬ್ ಪರ ಚಾಂಪಿಯನ್ಸ್ ಲೀಗ್ ಟ್ರೋಫಿಯನ್ನು ನಾಲ್ಕು ಸಲ ಜಯಿಸಿದ್ದಾರೆ. ಆದರೆ ವಿಶ್ವಕಪ್ ಅವರಿಗೆ ದಕ್ಕಿರಲಿಲ್ಲ. ದೋಹಾದ ಲುಸೈಲ್ ಕ್ರೀಡಾಂಗಣದಲ್ಲಿ ಭಾನುವಾರ ಆ ಕೊರತೆಯೂ ನೀಗಿತು.

ಪತ್ನಿ ಹಾಗೂ ಮಕ್ಕಳೊಂದಿಗೆ ಲಯೊನೆಲ್ ಮೆಸ್ಸಿ –ಎಎಫ್‌ಪಿ ಚಿತ್ರ

ತೀರ್ಮಾನ ಮೆಸ್ಸಿಗೆ ಬಿಟ್ಟದ್ದು– ಸ್ಕಾಲೊನಿ: ‘ಮುಂದಿನ ವಿಶ್ವಕಪ್ ಆಡಬೇಕೇ, ಬೇಡವೇ ಎಂಬುದನ್ನು ಮೆಸ್ಸಿ ಅವರೇ ನಿರ್ಧರಿಸಲಿದ್ದಾರೆ’ ಎಂದು ಅರ್ಜೆಂಟೀನಾ ತಂಡದ ಕೋಚ್ ಲಯೊನೆಲ್ ಸ್ಕಾಲೊನಿ ಹೇಳಿದ್ದಾರೆ.

ಪಂದ್ಯದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುವಾಗ ಸ್ಕಾಲೊನಿ ಭಾವುಕರಾದರು.

ಮೆಸ್ಸಿ ಅವರ ಭವಿಷ್ಯದ ಕುರಿತು ಕೇಳಲಾದ ಪ್ರಶ್ನೆಗೆ, ‘ಅವರು ಎಲ್ಲಿಯವರೆಗೆ ಆಡಲು ಬಯಸುವರೋ, ಅಲ್ಲಿಯವರೆಗೂ ನಮ್ಮ ಜತೆ ಇರುತ್ತಾರೆ. ಅರ್ಜೆಂಟೀನಾ ಪರ ಇನ್ನೆಷ್ಟು ದಿನ ಆಡಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರ ಅವರಿಗೇ ನೀಡಲಾಗಿದೆ’ ಎಂದರು.

ಮುಂದಿನ ಟೂರ್ನಿಗೆ 48 ತಂಡಗಳು

ದೋಹಾ (ಎಎಫ್‌ಪಿ): ನಲವತ್ತೆಂಟು ತಂಡಗಳು, ಮೂರು ದೇಶಗಳ ಅತಿಥ್ಯ, ನೂರಕ್ಕೂ ಅಧಿಕ ಪಂದ್ಯಗಳು...

ಕತಾರ್ ವಿಶ್ವಕಪ್ ಟೂರ್ನಿಯನ್ನು ಯಶಸ್ವಿಯಾಗಿ ಆಯೋಜಿಸಿರುವ ಫಿಫಾ, ಮುಂದಿನ ವಿಶ್ವಕಪ್ ಟೂರ್ನಿಯನ್ನು ಇನ್ನಷ್ಟು ದೊಡ್ಡದಾಗಿ ಆಯೋಜಿಸಲು ತೀರ್ಮಾನಿಸಿದೆ. 2026ರ ಟೂರ್ನಿಯು ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ದೇಶಗಳ ಆತಿಥ್ಯದಲ್ಲಿ ನಡೆಯಲಿದೆ. ಮೂರು ದೇಶಗಳು ಜಂಟಿ ಆತಿಥ್ಯ ವಹಿಸಲಿರುವುದು ಫಿಫಾ ಇತಿಹಾಸದಲ್ಲಿ ಇದೇ ಮೊದಲು.

ತಂಡಗಳ ಸಂಖ್ಯೆಯನ್ನು ಈಗಿನ 32 ರಿಂದ 48ಕ್ಕೆ ಹೆಚ್ಚಿಸಲು ಫಿಫಾ ಚಿಂತನೆ ನಡೆಸಿದೆ.

48 ತಂಡಗಳನ್ನು ಒಳಗೊಂಡಿರುವ ಟೂರ್ನಿಯಲ್ಲಿ ಪಂದ್ಯಗಳನ್ನು ಯಾವ ಮಾದರಿಯಲ್ಲಿ ನಡೆಸಬೇಕು ಎಂಬುದನ್ನು ಫಿಫಾ ಇನ್ನೂ ಅಂತಿಮಗೊಳಿಸಿಲ್ಲ. ಲೀಗ್ ಹಂತದಲ್ಲಿ ತಲಾ 12 ತಂಡಗಳ ನಾಲ್ಕು ಗುಂಪುಗಳನ್ನು ಮಾಡಿ ಆಡಿಸುವ ಸಾಧ್ಯತೆಯೇ ಅಧಿಕ.

ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಮತ್ತು ಬಳಿಕದ ಅತ್ಯುತ್ತಮ ಸಾಧನೆ ಮಾಡಿದ ಇತರ 8 ತಂಡಗಳು ನಾಕೌಟ್ ಪ್ರವೇಶಿಸಲಿವೆ. ಹಾಗಾದಲ್ಲಿ ಟೂರ್ನಿಯಲ್ಲಿ ಒಟ್ಟು 104 ಪಂದ್ಯಗಳು ನಡೆಯಲಿವೆ.

ವಿಶ್ವಕಪ್: ಗೋಲು ಗಳಿಕೆಯಲ್ಲಿ ದಾಖಲೆ

ಲುಸೈಲ್, ದೋಹಾ (ಎಎಫ್‌ಪಿ): ಅರ್ಜೆಂಟೀನಾ ಮತ್ತು ಫ್ರಾನ್ಸ್ ತಂಡಗಳ ನಡುವಣ ಫೈನಲ್ ಪಂದ್ಯದಲ್ಲಿ ಆರು ಗೋಲುಗಳು ದಾಖಲಾಗುವುದರೊಂದಿಗೆ ಈ ವಿಶ್ವಕಪ್ ಟೂರ್ನಿಯು ಅತಿ ಹೆಚ್ಚು ಅಂದರೆ 172 ಗೋಲುಗಳ ದಾಖಲೆ ಬರೆಯಿತು.

32 ತಂಡಗಳ 64 ಪಂದ್ಯಗಳ ಮಾದರಿಯ ಆವೃತ್ತಿಯು ಮೊದಲ ಬಾರಿ ಆರಂಭವಾಗಿದ್ದು 1998ರಲ್ಲಿ. ಆ ವರ್ಷ ಮತ್ತು 2014ರ ಆವೃತ್ತಿಗಳಲ್ಲಿ 171 ಗೋಲುಗಳು ಗಳಿಕೆಯಾಗಿದ್ದು, ಇದುವರೆಗಿನ ದಾಖಲೆಯಾಗಿತ್ತು.

ಮುಂಬರುವ 2026ರ ಟೂರ್ನಿಯಲ್ಲಿ 48 ತಂಡಗಳು ಆಡುವುದರಿಂದ ಈಗಿನ ದಾಖಲೆ ಅಳಿಸಿಹೋಗಬಹುದು. 2018ರಲ್ಲಿ ರಷ್ಯಾದಲ್ಲಿ ನಡೆದ ಟೂರ್ನಿಯಲ್ಲಿ ಫ್ರಾನ್ಸ್ ಮತ್ತು ಕ್ರೊವೇಷ್ಯಾ ನಡುವಣ ಫೈನಲ್ ಪಂದ್ಯದಲ್ಲೂ ಆರು ಗೋಲುಗಳು ದಾಖಲಾಗಿದ್ದವು. ಫ್ರಾನ್ಸ್ 4–2ರಿಂದ ಗೆದ್ದಿತ್ತು.

ಕ್ರೀಡಾಂಗಣಗಳಲ್ಲಿ ಪಂದ್ಯ ವೀಕ್ಷಿಸಿದ್ದು 34 ಲಕ್ಷ ಜನ

ಕತಾರ್‌ನಲ್ಲಿ ನಡೆದ ಈ ಬಾರಿಯ ವಿಶ್ವಕಪ್ ಟೂರ್ನಿಯನ್ನು ಕ್ರೀಡಾಂಗಣಗಳಲ್ಲಿ 34 ಲಕ್ಷಕ್ಕಿಂತ ಹೆಚ್ಚು ಜನ ವೀಕ್ಷಿಸಿದ್ದಾರೆ. ಅತಿ ಹೆಚ್ಚು ಜನ ವೀಕ್ಷಿಸಿದ ಆವೃತ್ತಿಗಳಲ್ಲಿ ಇದೂ ಒಂದೆನಿಸಿಕೊಂಡಿದೆ.

‘ಲುಸೈಲ್‌ನಲ್ಲಿ ನಡೆದ ಫೈನಲ್ ಪಂದ್ಯಕ್ಕೆ 88,966 ಜನ ಸಾಕ್ಷಿಯಾಗಿದ್ದರು. ಒಟ್ಟು 34 ಲಕ್ಷ ಜನ ಟೂರ್ನಿಯನ್ನು ವೀಕ್ಷಿಸಿದ್ದು, ಕ್ರೀಡಾಂಗಣಗಳ ಆಸನ ಸಾಮರ್ಥ್ಯದ ಶೇಕಡ 96.3 ಆಗಿದೆ’ ಎಂದು ಫಿಫಾ ತಿಳಿಸಿದೆ.

1994ರಲ್ಲಿ ಅಮೆರಿಕದಲ್ಲಿ ನಡೆದ ಟೂರ್ನಿಗೆ 35 ಲಕ್ಷಕ್ಕಿಂತ ಅಧಿಕ ಮಂದಿ ಸಾಕ್ಷಿಯಾಗಿದ್ದು, ಇದುವರೆಗಿನ ದಾಖಲೆಯಾಗಿದೆ. 2014ರಲ್ಲಿ ಬ್ರೆಜಿಲ್‌ನಲ್ಲಿ ನಡೆದ ಆವೃತ್ತಿಯಲ್ಲೂ 34 ಲಕ್ಷಕ್ಕಿಂತ ಹೆಚ್ಚು ಜನ ಸೇರಿದ್ದರು.

ಕರೀಂ ಬೆಂಜೆಮಾ ವಿದಾಯ

ಕರೀಂ ಬೆಂಜೆಮಾ

ಪ್ಯಾರಿಸ್ (ರಾಯಿಟರ್ಸ್): ಫ್ರಾನ್ಸ್ ತಂಡದ ಸ್ಟ್ರೈಕರ್ ಕರೀಂ ಬೆಂಜೆಮಾ ಅಂತರರಾಷ್ಟ್ರೀಯ ಫುಟ್ ಬಾಲ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ.

ಫ್ರಾನ್ಸ್ ಪರ 97 ಪಂದ್ಯಗಳಿಂದ 37 ಗೋಲು ಗಳಿಸಿರುವ ಅವರು ಸೋಮವಾರ ಟ್ವಿಟರ್ ಮೂಲಕ ತಮ್ಮ ನಿರ್ಧಾರ ತಿಳಿಸಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ಬೆಂಜೆಮಾ ಅವರು ತಂಡದ ಪ್ರಧಾನ ಶಕ್ತಿಯಾಗಲಿದ್ದಾರೆ ಎಂದು ಭಾವಿಸಲಾಗಿತ್ತು. ಆದರೆ ಟೂರ್ನಿ ಆರಂಭಕ್ಕೆ ಕೆಲವೇ ದಿನಗಳಿರುವಾಗ ಅಭ್ಯಾಸದ ವೇಳೆ ಗಾಯಗೊಂಡು ವಿಶ್ವಕಪ್‌ನಿಂದ ಹೊರಬಿದ್ದಿದ್ದರು.ಬೆಂಜೆಮಾ, 2007ರಲ್ಲಿ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಪದಾರ್ಪಣೆ ಮಾಡಿದ್ದರು.

ಸ್ಕೇಟಿಂಗ್: ಧನುಷ್‌ಗೆ ನಾಲ್ಕನೇ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಧನುಷ್ ಬಾಬು ಅವರು ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ಚಿನ್ನ ಪದಕ ಗೆದ್ದರು.

ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ ಆಶ್ರಯದಲ್ಲಿ ತ್ಯಾಗರಾಜನಗರದಲ್ಲಿರುವ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಸ್ಕೇಟಿಂಗ್ ರಿಂಕ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪುರುಷರ ರೋಡ್ ರೇಸ್ 4ರಲ್ಲಿ ಧನುಷ್ ಬಾಬು ಅವರು ಸೋಮವಾರ ಅಗ್ರಸ್ಥಾನ ಗಳಿಸಿದರು.

ವಿವಿಧ ವಿಭಾಗಗಳಲ್ಲಿ ರಾಜ್ಯದ ಧೀಮಂತ್, ಸುವರ್ಣಿಕಾ ರಾಧಾಕೃಷ್ಣನ್, ರಿಯಾ ಅಚ್ಚಯ್ಯ ಚಿನ್ನ ಗೆದ್ದರೆ, ತೇಜಸ್ ರಮೇಶ್, ಮುಹಮ್ಮದ್ ಶಮೈಲ್, ಜಯಮಂಗಲ ಬೆಳ್ಳಿ ಪದಕ ಗೆದ್ದರು.

ರಣಜಿ ಟ್ರೋಫಿ ಕ್ರಿಕೆಟ್: ಕರ್ನಾಟಕ–ಪುದುಚೇರಿ ಹಣಾಹಣಿ ಇಂದಿನಿಂದ

ಮಯಂಕ್ ಬಳಗಕ್ಕೆ ಜಯದ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವಾರ ಉದ್ಯಾನನಗರಿಯಲ್ಲಿ ಮಳೆ ಸುರಿಯುವ ಮುನ್ಸೂಚನೆಗಳಿಲ್ಲ. ಆಕಾಶ ಶುಭ್ರವಾಗಿದೆ. ಬಿಸಿಲು ಕೂಡ ಚುರುಕಾಗಿದೆ.

ಇಂತಹ ಉತ್ತಮ ವಾತಾವರಣದಲ್ಲಿ ಕರ್ನಾಟಕ ತಂಡವು ಈ ರಣಜಿ ಟ್ರೋಫಿ ಕ್ರಿಕೆಟ್ ಋತುವಿನ ಎರಡನೇ ಪಂದ್ಯವನ್ನು ಆಡಲಿದೆ. ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪುದುಚೇರಿ ತಂಡವನ್ನು ಎದುರಿಸಲಿದೆ.

ಹೋದ ವಾರ ಇಲ್ಲಿ ಸರ್ವಿಸಸ್ ವಿರುದ್ಧ ನಡೆದಿದ್ದ ಮೊದಲ ಪಂದ್ಯದ ಬಹಳಷ್ಟು ಸಮಯವು ಮಳೆಗೆ ಹಾಗೂ ಮಂದಬೆಳಕಿಗೆ ಆಹುತಿಯಾಗಿತ್ತು. ಆದರೆ ಪುದುಚೇರಿ ವಿರುದ್ಧ ಆ ರೀತಿಯಾಗದಿರುವ ನಿರೀಕ್ಷೆ ಇದೆ. ಮೊದಲ ಪಂದ್ಯದಲ್ಲಿ ಡ್ರಾ ಮಾಡಿಕೊಂಡು ಮೂರು ಅಂಕ ಗಳಿಸಿರುವ ಮಯಂಕ್ ಅಗರವಾಲ್ ಬಳಗವು ಪ್ರಥಮ ಜಯಕ್ಕಾಗಿ ಎದುರು ನೋಡುತ್ತಿದೆ.

ಛತ್ತೀಸಗಢ ತಂಡದ ಎದುರು ಸೋಲನುಭವಿಸಿರುವ ಪುದುಚೇರಿ ತಂಡದ ಎದುರು ಕರ್ನಾಟಕವೇ ಗೆಲ್ಲುವ ನೆಚ್ಚಿನ ತಂಡ ಎನ್ನುವುದರಲ್ಲಿ ಸಂಶಯವಿಲ್ಲ. ಪುದುಚೇರಿ ಮೊದಲ ಇನಿಂಗ್ಸ್‌ನಲ್ಲಿ ಕೇವಲ 37 ರನ್ ಗಳಿಸಿ ಆಲೌಟ್ ಆಗಿತ್ತು.

ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಮತ್ತು ಸಹ ಆಟಗಾರರು

ಸರ್ವಿಸಸ್ ಎದುರು ಶತಕ ಬಾರಿಸಿದ್ದ ಆರ್. ಸಮರ್ಥ್, ಅರ್ಧಶತಕ ಗಳಿಸಿದ್ದ ನಿಕಿನ್ ಜೋಸ್, ಬಿ.ಆರ್. ಶರತ್ ಮತ್ತು ಮಯಂಕ್ ತಮ್ಮ ಲಯವನ್ನು ಮುಂದುವರಿಸಿದರೆ ಪುದುಚೇರಿ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗಲಿದೆ. ಪಾರಸ್ ಡೋಗ್ರಾ ನಾಯಕತ್ವದ ತಂಡದ ಬ್ಯಾಟಿಂಗ್ ಪಡೆಯ ಎದುರು ತಮ್ಮ ಕೌಶಲ ಮೆರೆಯಲು ಆತಿಥೇಯ ತಂಡದ ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಅವರಿಗೆ ಒಳ್ಳೆಯ ಅವಕಾಶ ಇದೆ.

ಅನುಭವಿಗಳಾದ ರೋನಿತ್ ಮೋರೆ, ಸ್ಪಿನ್ನರ್ ಕೆ. ಗೌತಮ್ ಮತ್ತು ಶ್ರೇಯಸ್ ಗೋಪಾಲ್ ಅವರು ಕಣಕ್ಕಿಳಿಯುವುದು ಬಹುತೇಕ ಖಚಿತ.

ಬೌಲಿಂಗ್ ದಾಳಿಯಲ್ಲಿ ಬಿಗಿತನ ಮತ್ತು ಚುರುಕಾದ ಫೀಲ್ಡಿಂಗ್ ಕೊರತೆಯನ್ನು ನೀಗಿಸುವ ಸವಾಲು ಮಯಂಕ್ ಅಗರವಾಲ್ ಬಳಗಕ್ಕೆ ಇದೆ. ಕಳೆದ ಪಂದ್ಯದಲ್ಲಿ ಪ್ರಮುಖ ಹಂತದಲ್ಲಿ ಕ್ಯಾಚ್‌ಗಳನ್ನು ಫೀಲ್ಡರ್‌ಗಳು ಕೈಚೆಲ್ಲಿದ್ದರು.

ರಣಜಿ ಟೂರ್ನಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾಗುತ್ತಿರುವುದು ಇದು ಎರಡನೇ ಬಾರಿ. ಹೋದ ಸಲ ಕರ್ನಾಟಕ ತಂಡವು ಜಯ ಸಾಧಿಸಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 9.30

ಬೆಳ್ಳಿ ಪದಕದೊಂದಿಗೆ ಕರ್ನಾಟಕ ಬಾಲಕಿಯರ ತಂಡ

ನೆಟ್‌ಬಾಲ್: ರಾಜ್ಯದ ತಂಡಗಳಿಗೆ ಬೆಳ್ಳಿ

ಬೆಂಗಳೂರು: ಕರ್ನಾಟಕ ಬಾಲಕ ಮತ್ತು ಬಾಲಕಿಯರ ತಂಡಗಳು ಹರಿಯಾಣದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಸಬ್‌ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿವೆ.

ಫೈನಲ್ ಪಂದ್ಯದಲ್ಲಿ ಕರ್ನಾಟಕದ ಬಾಲಕಿಯರು 21–31ರಿಂದ ಆತಿಥೇಯ ಹರಿಯಾಣ ತಂಡಕ್ಕೆ ಸೋತರು. ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಬಾಲಕರ ತಂಡವು 32-35ರಿಂದ ಹರಿಯಾಣ ಎದುರು ಎಡವಿತು.

ಸೆಮಿಫೈನಲ್‌ನಲ್ಲಿ ರಾಜ್ಯದ ಬಾಲಕರ ತಂಡ 42-32ರಿಂದ ತೆಲಂಗಾಣ ತಂಡವನ್ನು ಸೋಲಿಸಿತ್ತು.

ಕ್ರಿಕೆಟ್: ಭಾರತಕ್ಕೆ ಜಯದ ವಿಶ್ವಾಸ

ಮುಂಬೈ (ಪಿಟಿಐ): ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ಎದುರಿನ ಟಿ20 ಕ್ರಿಕೆಟ್ ಸರಣಿಯ ಐದನೇ ಮತ್ತು ಕೊನೆಯ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದು ಸಮಾಧಾನದ ಜಯಕ್ಕಾಗಿ ಪ್ರಯತ್ನಿಸಲಿದೆ.

ಸರಣಿಯಲ್ಲಿ ಆಸ್ಟ್ರೇಲಿಯಾ ಈಗಾಗಲೇ 3–1ರಿಂದ ಮುನ್ನಡೆಯಲ್ಲಿದೆ. ಮಂಗಳವಾರ ನಡೆಯುವ ಪಂದ್ಯದಲ್ಲಿ ಈ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಆಡುವ ವಿಶ್ವಾಸದಲ್ಲಿ ಭಾರತ ತಂಡ ಇದೆ.ದಕ್ಷಿಣ ಆಫ್ರಿಕಾದಲ್ಲಿ ಫೆಬ್ರುವರಿಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಪೂರ್ವಸಿದ್ಧತೆಗೆ ಆಸ್ಟ್ರೇಲಿಯಾ ಎದುರಿನ ಸರಣಿಯು ಭಾರತಕ್ಕೆ ಮಹತ್ವದ್ದೆನಿಸಿದೆ.

ಭಾರತದ ಬ್ಯಾಟರ್‌ಗಳಾದ ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್ ಲಯ ಕಂಡುಕೊಳ್ಳಬೇಕಿದೆ. ವಿಕೆಟ್‌ಕೀಪರ್ ರಿಚಾ ಘೋಷ್ ಮಿಂಚುತ್ತಿದ್ದು, ಮಧ್ಯಮಕ್ರಮಾಂಕದಲ್ಲಿ ಅವರಿಗೆ ನಾಯಕಿ ಹರ್ಮನ್‌ಪ್ರೀತ್ ಕೌರ್ ನೆರವು ನೀಡಬೇಕಿದೆ.

ಬೌಲಿಂಗ್ ವಿಭಾಗದಲ್ಲಿ ದೀಪ್ತಿ ಶರ್ಮಾ ಮಾತ್ರ ಸ್ಥಿರ ಆಟವಾಡುತ್ತಿದ್ದಾರೆ. ಉಳಿದವರು ಬೆಂಬಲ ನೀಡಬೇಕಿದೆ.

ಆಸ್ಟ್ರೇಲಿಯಾ ತಂಡದಲ್ಲಿ ಬೆಥ್ ಮೂನಿ, ಎಲಿಸ್ ಪೆರಿ ಬ್ಯಾಟಿಂಗ್‌ನಲ್ಲಿ ಉತ್ತಮ ಲಯದಲ್ಲಿದ್ದಾರೆ. ಉಭಯ ತಂಡಗಳ ನಡುವೆ ಜಿದ್ದಾಜಿದ್ದಿ ಪೈಪೋಟಿ ನಿರೀಕ್ಷಿಸಬಹುದು.

ಪಂದ್ಯ ಆರಂಭ: ರಾತ್ರಿ 7

ನನ್ನ ಹೆಸರು ಜಾವೇದ್, ವಯಸ್ಸು 38 ವರ್ಷ, ಹರಿಯಾಣದ ಪಲವಾಲ್ ಜಿಲ್ಲೆ ನಿವಾಸಿ. ಕಳೆದ ಹಲವಾರು ದಿನಗಳಿಂದ ಹೊಟ್ಟೆಯಲ್ಲಿ ವಾಯು, ಮಲಬದ್ಧತೆ ಮತ್ತು ಆಮ್ಲೀಯತೆ ಸಮಸ್ಯೆಯಿಂದ ಬಳಲುತ್ತಿದ್ದೆ. ಹಲವಾರು ಡಾಕ್ಟರ್‌ಗಳ ಬಳಿ ಪರೀಕ್ಷೆ ಮಾಡಿಕೊಂಡೆ ಆದರೆ ಸಮಸ್ಯೆ ಮಾತ್ರ ನಿವಾರಣೆಗೊಳ್ಳಲಿಲ್ಲ. ನಂತರ ಒಂದು ದಿನ, ನನ್ನ ಪರಿಚಯದವರು ಒಬ್ಬರು ಪೇಟ್ ಸಫಾ ಆಯುರ್ವೇದಿಕ ಹರಳುಗಳು ಮತ್ತು ಮಾತ್ರೆಗಳ ಬಗ್ಗೆ ತಿಳಿಸಿದರು. ಮೊದಲ ಬಾರಿಗೆ ಟ್ಯಾಬ್ಲೆಟ್ ಸೇವಿಸಿದಾಗಲೇ ಅದರ ಫಲಿತಾಂಶ ಸ್ಪಷ್ಟವಾಗಿ ಗೋಚರಿಸಿತು. ಮತ್ತೆ ಹೊಟ್ಟೆಯಲ್ಲಿ ಸಮಸ್ಯೆ ಉಂಟಾದಾಗ ಪುನಃ ಪೇಟ್ ಸಫಾ ಸೇವಿಸತೊಡಗಿದೆ. ಇದನ್ನು ನಿರಂತರವಾಗಿ ಬಳಸಿದ ನಂತರವೂ ನನಗೆ ಇದರ ವ್ಯಸನ ಉಂಟಾಗಲಿಲ್ಲ. ನಿಜವಾಗ್ಯೂ ಇದು ಉಪಯುಕ್ತವಾಗಿದೆ. ನನ್ನಂತೆ ಬೇರೆ ಯಾರಿಗೆ ಸಮಸ್ಯೆ ಇದ್ದಲ್ಲಿ, ಅಂತಹವರು ಇದನ್ನು ಖಂಡಿತ ಒಂದು ಸಲ ಬಳಸಿ ನೋಡಿ.

ಕೃಪಾಶಂಕರ್ ದುಬೆ, ವಯಸ್ಸು 67, ಅಂಬೇಡ್ಕರ್ ನಗರ ಜಿಲ್ಲೆ, ಉತ್ತರಪ್ರದೇಶ. ನಾನು ಗ್ಯಾಸ್, ಅಸಿಡಿಟಿ ಮತ್ತು ಕಾನ್‌ಸ್ಟಿಪೇಶನ್ ಸಮಸ್ಯೆಯಿಂದ ಬಳಲುತ್ತಿದ್ದೆ. ಹಲವಾರು ರೀತಿಯ ಔಷಧಗಳನ್ನು ಪಡೆದರೂ ಯಾವುದೇ ಪರಿಹಾರ ಸಿಗಲಿಲ್ಲ; ಹಣ ಮತ್ತು ಸಮಯ ವ್ಯರ್ಥವಾಯಿತು. ನಂತರ ಒಂದು ದಿನ ಗ್ಯಾಸ್, ಅಸಿಡಿಟಿ ಮತ್ತು ಕಾನ್‌ಸ್ಟಿಪೇಶನ್ ನಿವಾರಣೆಗೆ ಉಪಯುಕ್ತವಾದ ಪೇಟ್ ಸಫಾ ಆಯುರ್ವೇದಿಕ ಗ್ರಾನ್ಯೂಲ್ಸ್ ಮತ್ತು ಟ್ಯಾಬ್ಲೆಟ್ಸ್ ಜಾಹೀರಾತನ್ನು ನೋಡಿದೆ. ಒಂದೂ ಅರ್ಧ ಚಮ್ಮಚ ಪೇಟ್ ಸಫಾ ಹರಳುಗಳನ್ನು ತುಸು ಬಿಸಿ ನೀರಿನೊಂದಿಗೆ ಸೇವಿಸಿದೆನಷ್ಟೆ, ಕಾನ್‌ಸ್ಟಿಪೇಶನ್ ಸಮಸ್ಯೆ ನಿವಾರಣೆಗೊಂಡಿತು. ಹೀಗೆ ಹೊಟ್ಟೆ ಸಮಸ್ಯೆಯಿಂದ ಬಳಲುತ್ತಿರುವ ಯಾರು ಬೇಕಾದರೂ ಇದನ್ನು ಸೇವಿಸಿ ಮತ್ತು ಪರಿಣಾಮಕಾರಿ ಫಲಿತಾಂಶ ಪಡೆಯಿರಿ ಎಂದು ಹೇಳಬಯಸುತ್ತೇನೆ.

ನನ್ನ ಹೆಸರು ಸುಖದೇವ್ ಪಾಲ್, ವಯಸ್ಸು 33 ವರ್ಷ, ಶಹಜಹಾನಪುರ ಉತ್ತರ ಪ್ರದೇಶ ನಿವಾಸಿ. ನಾನು ಗ್ಯಾಸ್ಟ್ರಿಟಿಸ್, ಕಾನ್‌ಸ್ಟಿಪೇಶನ್ ಮತ್ತು ಅಸಿಡಿಟಿ ಸಮಸ್ಯೆಯಿಂದ ಬಳಲುತ್ತಿದ್ದೆ. ಇದರಿಂದಾಗಿ ನನಗೆ ತುಂಬಾ ಸಮಸ್ಯೆ ಉಂಟಾಗಿತ್ತು. ನಂತರ ಒಂದು ದಿನ ಗ್ಯಾಸ್ಟ್ರಿಟಿಸ್, ಕಾನ್‌ಸ್ಟಿಪೇಶನ್ ಮತ್ತು ಅಸಿಡಿಟಿ ಸಮಸ್ಯೆ ನಿವಾರಣೆಗೆ ಉಪಯುಕ್ತವಾದ ಪೇಟ್ ಸಫಾ ಜಾಹೀರಾತನ್ನು ನೋಡಿದೆ. ಮರುದಿನವೇ, ನಾನು ಪೇಟ್ ಸಫಾ ಸೇವಿಸಲು ಪ್ರಾರಂಭಿಸಿದೆ. ಬಳಿಕ ನನಗೆ ತುಂಬಾ ಸಂತೋಷವೆನಿಸಿತು. ನನ್ನ ಹೊಟ್ಟೆಗೆ ಸಂಬಂಧಿತ ಎಲ್ಲಾ ಸಮಸ್ಯೆಗಳಿಂದ ನಾನು ಮುಕ್ತನಾಗಿದ್ದೆ. “ಪೇಟ್ ಸಫಾ ಇದ್ದಲ್ಲಿ ಯಾವ ರೋಗವೂ ಇಲ್ಲವಪ್ಪಾ" ಎಂಬುದು ಸತ್ಯವಾಗಿದೆ. ಪೇಟ್ ಸಫಾಗೆ ಹೃತ್ಪೂರ್ವಕ ಧನ್ಯವಾದಗಳು.

petsaffa.com | 24x7 Helpline: 91197 88888 | Available at all medical & general stores